ಶನಿವಾರ, ಅಕ್ಟೋಬರ್ 21, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ಮುಂಬೈನಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟಿ ಚಿತ್ರಾಂಗದಾ ಸಿಂಗ್

5% INSTANT DISCOUNT# SBI card
#Min. Trxn.: ₹3,999; Max. Discount: ₹500 per card. Valid only on one Trxn. per card. Validity: 17 Oct - 19 Nov 2023. T&C Apply.

TRENDS MAN
TRENDS WOMAN
TRENDS junior
TRENDS FOOTWEAR

ಹಿಜಾಬ್ ತಪಾಸಣೆಗೆ 1ಗಂಟೆ ನಿಗದಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ನಿಗಮ, ಮಂಡಳಿಗಳ ನೇಮಕಾತಿಗೆ ಅ.28 ಹಾಗೂ 29ರಂದು ನಡೆಯುವ ಪರೀಕ್ಷೆಗೆ ಹಿಜಾಬ್ ಧರಿಸಿದವರು ಒಂದು ಗಂಟೆ ಮುಂಚಿತವಾಗಿ ಕೇಂದ್ರಕ್ಕೆ ಹಾಜರಾಗಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೂಚಿಸಿದೆ.

ಶಾಲೆ-ಕಾಲೇಜುಗಳ ಒಳಗೆ ಹಿಜಾಬ್ ಧರಿಸುವುದನ್ನು ಹಿಂದಿನ ಬಿಜೆಪಿ ಸರ್ಕಾರ ನಿಷೇಧಿಸಿತ್ತು. ಈಗ ಪರೀಕ್ಷೆಗೆ ಹಿಜಾಬ್ ಧರಿಸಿ ಬರಲು ಪ್ರಾಧಿಕಾರ ಅವಕಾಶ ನೀಡಿದ್ದರೂ, ತಪಾಸಣೆಗಾಗಿ ಪರೀಕ್ಷಾ ಕೇಂದ್ರಕ್ಕೆ ಒಂದು ಗಂಟೆ ಮುಂಚಿತವಾಗಿ ಬರಬೇಕು ಎನ್ನುವ ಷರತ್ತು ವಿಧಿಸಿದೆ.

ಮಹಿಳಾ ಅಭ್ಯರ್ಥಿಗಳು ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್, ಬಟನ್‌ಗಳನ್ನು ಹೊಂದಿರುವ ಬಟ್ಟೆ, ಪೂರ್ಣ ತೋಳಿನ ವಸ್ತ್ರ, ಜೀನ್ಸ್ ಪ್ಯಾಂಟ್, ಆಭರಣ ಧರಿಸುವುದನ್ನು, ಪುರುಷರು ಕಿವಿಯೋಲೆ, ಉಂಗುರ, ಕಡಗ, ಕುರ್ತಾ, ಪೈಜಾಮ, ಜೀನ್ಸ್ ಧರಿಸುವುದನ್ನು ನಿಷೇಧಿಸಿದೆ.

ತಲೆಮೇಲೆ ಟೋಪಿ, ಬಾಯಿ, ಕಿವಿ, ತಲೆ ಮುಚ್ಚುವ ವಸ್ತ್ರ ಧರಿಸುವಂತಿಲ್ಲ. ಎಲೆಕ್ಟ್ರಾನಿಕ್ಸ್ ವಸ್ತುಗಳು, ಪೆನ್ಸಿಲ್, ಕಾಗದದ ಹಾಳೆಗಳನ್ನು ತೆಗೆದುಕೊಂಡು ಹೋಗುವಂತಿಲ್ಲ. ಪ್ರವೇಶ ಪತ್ರ, ಭಾವಚಿತ್ರ, ಪಾರದರ್ಶಕ ಕುಡಿಯುವ ನೀರಿನ ಬಾಟಲ್ ತೆಗೆದುಕೊಂಡು ಹೋಗಲು ಅನುಮತಿಸಿದೆ.

‘ರಾಹುಲ್‌ಗಾಗಿ ಕಲೆಕ್ಷನ್‌ಗೆ ಪೈಪೋಟಿ’

ಪ್ರಜಾವಾಣಿ ವಾರ್ತೆ



ಬಿಜೆಪಿ ಬಿಡುಗಡೆ ಮಾಡಿದ ಕಲೆಕ್ಷನ್ ವಂಶಾವಳಿ ಪೋಸ್ಟರ್

ಬೆಂಗಳೂರು: ‘ಕರ್ನಾಟಕದಿಂದ ಹಣದ ಕಲೆಕ್ಷನ್‌ಗೆ ದೆಹಲಿಯೇ ಕೇಂದ್ರ ಬಿಂದು. ರಾಹುಲ್‌ಗಾಂಧಿ ಇದರ ಪೂರ್ಣ ಜವಾಬ್ದಾರಿ ಹೊತ್ತಿದ್ದಾರೆ. ಕಲೆಕ್ಷನ್ ಮಾಡಿದ್ದನ್ನು ರಾಹುಲ್‌ಗೆ ಒಪ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಧ್ಯೆ ಪೈಪೋಟಿ ಏರ್ಪಟ್ಟಿದೆ’ ಎಂದು ಸಂಸದ ಡಿ.ವಿ.ಸದಾನಂದಗೌಡ ಆರೋಪಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮುಖ್ಯಮಂತ್ರಿ ತಮ್ಮ ಕುರ್ಚಿ ಉಳಿಸಿಕೊಳ್ಳಲು ಡಿಸಿಎಂಗಿಂತ ಹೆಚ್ಚು ಕಲೆಕ್ಷನ್‌ಗೆ ಇಳಿದಿದ್ದಾರೆ. ಸಿಎಂ ಕುರ್ಚಿ ಕಸಿದುಕೊಳ್ಳಲು ಡಿಸಿಎಂ ಹೆಚ್ಚು ಹಣ ಸಂಗ್ರಹಕ್ಕೆ ಮುಂದಾಗಿದ್ದಾರೆ. ಇದು ಗಂಭೀರ ಮತ್ತು ಶೋಚನೀಯ ವಿಚಾರ’ ಎಂದು ಹರಿಹಾಯ್ದರು.

‘ಸಿದ್ದರಾಮಯ್ಯ ಸರ್ಕಾರದ ಕಲೆಕ್ಷನ್ ವಂಶವೃಕ್ಷವನ್ನು ಅನಾವರಣ ಮಾಡಿದ್ದೇವೆ. ಕಾಂಗ್ರೆಸ್‌ನ ಕಲೆಕ್ಷನ್ ನೇತೃತ್ವವನ್ನು ಸುರ್ಜೇವಾಲಾ, ವೇಣುಗೋಪಾಲ್ ವಹಿಸಿದ್ದಾರೆ. ಲೂಟಿ ಹೊಡೆಯುವ ಕಾರ್ಯ ಯೋಜನೆ ಅಚ್ಚರಿ ತರುವಂತಿದೆ. ಸಿದ್ದರಾಮಯ್ಯ ಪರ ಅವರ ಮಗ ಯತೀಂದ್ರ ಮತ್ತು ಅವರ ಸಮುದಾಯದವರೇ ಆದ ಸಚಿವ ಬೈರತಿ ಸುರೇಶ್ ಮೂಲಕ ಕಲೆಕ್ಷನ್ ನಡೆಯುತ್ತಿದೆ’ ಎಂದು ಆರೋಪಿಸಿದರು.

‘ಗುತ್ತಿಗೆದಾರರಲ್ಲೂ ಎರಡು ಗುಂಪುಗಳಾಗಿವೆ. ಅಧ್ಯಕ್ಷ ಕೆಂಪಣ್ಣ ಅವರು ಸಿದ್ದರಾಮಯ್ಯ ಗುಂಪು. ಮತ್ತೊಂದು ಗುಂಪು ಉಪಾಧ್ಯಕ್ಷ ಅಂಬಿಕಾಪತಿ ಅವರದು. ಅವರ ಮನೆಯಲ್ಲೇ ಹಣ ಸಿಕ್ಕಿದೆ. ಪ್ರದೀಪ್, ಪ್ರಹ್ಲಾದ್ ಮತ್ತು ಪ್ರಮೋದ್ ನೇತೃತ್ವದಲ್ಲಿ ಹಣ ಸಂಗ್ರಹ ನಡೆದಿದೆ. ಇದೆಲ್ಲ ನೇರವಾಗಿ ರಾಹುಲ್ ಗಾಂಧಿಗೆ ಹೋಗುತ್ತದೆ’ ಎಂದೂ ಆರೋಪಿಸಿದರು.

‘ಐಟಿ ಇಲಾಖೆಯಿಂದ ಮಾತ್ರ ಇದರ ತನಿಖೆ ನಡೆದರೆ ಸಾಲದು. ಇದರ ಬೇರು ಆಳವಾಗಿದೆ. ಕ್ರಿಮಿನಲ್ ಉದ್ದೇಶವನ್ನು ಬಯಲಿಗೆಳೆಯಲು ಸಿಬಿಐ ತನಿಖೆ ಅನಿವಾರ್ಯ. ಇದು ಖಜಾನೆ ಲೂಟಿಯ ವ್ಯವಸ್ಥೆಯಾಗಿದ್ದು, ಇದನ್ನು ಸಿದ್ದರಾಮಯ್ಯ ಅವರು ಸಿಬಿಐ ತನಿಖೆಗೆ ಒಪ್ಪಿಸಬೇಕು’ ಎಂದೂ ಸದಾನಂದಗೌಡ ಒತ್ತಾಯಿಸಿದರು.

‘ರಾಜ್ಯದಲ್ಲಿ ಒಳ್ಳೆಯ ಗುತ್ತಿಗೆದಾರರಿಗೆ ಅವಕಾಶವಿಲ್ಲ. ನಯಾಪೈಸೆಯೂ ಅಭಿವೃದ್ಧಿಗೆ ಹೋಗುವ ಸಾಧ್ಯತೆ ಇಲ್ಲ. ಇದನ್ನು ಸಾಮಾನ್ಯ ಜನರಿಗೆ ತಿಳಿಸುವ ಕೆಲಸ ಮಾಡಲಿದ್ದೇವೆ. ಬಿಲ್ ಕೊಡದೇ ಹಾವೇರಿ ಮತ್ತಿತರ ಕಡೆ ಇಂದಿರಾ ಕ್ಯಾಂಟೀನ್ ಬಂದ್ ಆಗಿದೆ. ಹಣ ಬಿಡುಗಡೆಗೆ ಕಮಿಷನ್ ಕೇಳುತ್ತಾರೆ ಎಂಬ ಆರೋಪ ಬಂದಿದೆ. ಕಲಾವಿದರ ಕೈಯಿಂದಲೂ ಕಮಿಷನ್ ಕೇಳುವುದಕ್ಕಿಂತಲೂ ಕೆಟ್ಟ ಕೆಲಸ ಇನ್ನೇನಿದೆ’ ಎಂದೂ ಸದಾನಂದಗೌಡ ಪ್ರಶ್ನಿಸಿದರು.

ರಾಜ್ಯದ ಎಲ್ಲ ಕಡೆಗಳಲ್ಲಿ ಕಾಂಗ್ರೆಸ್ ಭ್ರಷ್ಟಾಚಾರ ಪರಿಚಯಿಸುವ ಪೋಸ್ಟರ್ ಅಂಟಿಸುವ ಕಾರ್ಯ ನಡೆಯಲಿದೆ. ಇದು ಟ್ರೈಲರ್ ಅಷ್ಟೇ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಶಾಸಕ ರವಿಸುಬ್ರಹ್ಮಣ್ಯ, ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಇದ್ದರು.

‘ಕೋಮು ಕುಂಡ ಸಿದ್ಧಪಡಿಸಿದ ಕಾಂಗ್ರೆಸ್’

ಬೆಂಗಳೂರು: ರಾಜ್ಯವನ್ನು ತುಷ್ಟೀಕರಣದ ಬಿಸಿ ತುಪ್ಪದಲ್ಲಿ ಬೇಯಿಸಲು ಕಾಂಗ್ರೆಸ್ ಪಕ್ಷ ‘ಟೂಲ್‌ಕಿಟ್’ ಕಾರ್ಯಾಗಾರದಲ್ಲಿ ‘ಕೋಮು ಕುಂಡ’ ಸಿದ್ಧಪಡಿಸಿದೆ. ಶಿವಮೊಗ್ಗದಲ್ಲಿ ನಡೆದಿದ್ದು ಅದರ ಮಾದರಿಯಷ್ಟೆ. ಅದನ್ನು ರಾಜ್ಯವ್ಯಾಪಿ ವಿಸ್ತರಿಸಲು ಹುನ್ನಾರ ನಡೆಸಿದೆ ಎಂದು ಜೆಡಿಎಸ್ ಆರೋಪಿಸಿದೆ.

ಈ ಕುರಿತು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಹೇಳಿಕೆ ಪ್ರಕಟಿಸಿದ್ದು, ‘ಹಲವು ಪ್ರಾದೇಶಿಕ ಪಕ್ಷಗಳನ್ನು ಆಪೋಶನ ತೆಗೆದುಕೊಂಡಿರುವ ಕಾಂಗ್ರೆಸ್, ಪರಕೀಯ ವಿಚಾರಧಾರೆ ಮೂಲಕ ಈಗಲೂ ಬ್ರಿಟಿಷ್ ಗುಲಾಮಿ ಮನೋಸ್ಥಿತಿಯಲ್ಲಿದೆ. ಜಿನ್ನಾ ಜೀನ್ಸ್‌ನ ಕಾಂಗ್ರೆಸ್‌ಗೆ ಜೆಡಿಎಸ್-ಬಿಜೆಪಿ ಫೋಬಿಯಾ ಶುರುವಾಗಿದೆ. ಮುಸ್ಲಿಮರು ಧರಿಸುವ ಟೋಪಿಗೂ ಕಾಂಗ್ರೆಸ್ ಅಪಮಾನ ಮಾಡಿದೆ’ ಎಂದು ಟೀಕಿಸಲಾಗಿದೆ.

‘ಆಡಳಿತ ಪಕ್ಷಕ್ಕೆ ಆಕ್ರೋಶ, ಆತಂಕ, ಅನುಕಂಪ ಇರಬೇಕು. ಆದರೆ, ಹೊಟ್ಟೆಯಲ್ಲಿರುವ ಅಸಹ್ಯವನ್ನೆಲ್ಲ ಕಾರಿಕೊಳ್ಳುವ ವಿಕೃತಿ ಇರಬಾರದು. ನಾಮ ಹಾಕುವುದರಲ್ಲಿ ಕಾಂಗ್ರೆಸ್ ನಾಯಕರು ಪರಮ ನಿಸ್ಸೀಮರು. ಕಾಂಗ್ರೆಸ್ ಕೊಳಕುಮಂಡಲ ಇದ್ದಂತೆ. ಅದನ್ನು ಕೊಳಕುಗ್ರೆಸ್ ಎನ್ನಬಹುದು. ಅದು ವಕ್ರರೇಖೆಗಳ ಹೊಲಸುಗುಚ್ಛ, ಅಷ್ಟವಕ್ರನ ಅಪರಾವತಾರಿ. ಪಂಗನಾಮ ಅದರ ಆಜನ್ಮ ಆಸ್ತಿ’ ಎಂದು ಹೇಳಿದೆ.

ಆದಾಯ ತೆರಿಗೆ ಇಲಾಖೆಗೆ ಎಸ್‌ಎಸ್‌ಟಿ, ವೈಎಸ್‌ಟಿ ಹಣ ಸಿಕ್ಕಿದೆ. ಸಿಎಂ, ಡಿಸಿಎಂ ಪಟಾಲಂ ಬಾಚಿದ್ದ ಹಣ ಕೈತಪ್ಪಿದೆ. ಜತೆಗೆ, ಬೆಳಗಾವಿ ಜ್ವಾಲೆ ಭುಗಿಲೆದ್ದಿದೆ. ಅಂತಃಪುರದ ಕಲಹ ಹಾದಿಬೀದಿಯಲ್ಲಿ ಮೂರು ಕಾಸಿಗೆ ಬಿಕರಿಯಾಗುತ್ತಿದೆ. ಹತ್ತಾರು ಬಣ ಸಷ್ಟಿಯಾಗಿವೆ. ಬುಡವೇ ಬಿದ್ದುಹೋಗುವ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ ಎಂದು ಹೇಳಿದೆ.

ಕೇಂದ್ರ ಸಚಿವರಾಗಿದ್ದಾಗ ಯಾರ ಮನೆ ಉದ್ಧಾರವಾಗಿತ್ತು?



ಹಾಸನ: ‘ಎಚ್.ಡಿ.ದೇವೇಗೌಡರು ಪ್ರಧಾನಿಯಾಗಿದ್ದಾಗ, ತಮ್ಮ ಸಂಪುಟದಲ್ಲಿ ಸಿ.ಎಂ. ಇಬ್ರಾಹಿಂ ಅವರನ್ನು ವಿಮಾನಯಾನ ಸಚಿವರನ್ನಾಗಿ ನೇಮಿಸಿದ್ದರು. ಆಗ ಯಾರ ಮನೆ ಉದ್ಧಾರವಾಗಿತ್ತು’ ಎಂದು ಶಾಸಕ ಎ.ಮಂಜು ಪ್ರಶ್ನಿಸಿದರು.

‘ಮಗನನ್ನು ಬೆಳೆಸಲು ದೇವೇಗೌಡರು ನನ್ನ ಮನೆ ಹಾಳು ಮಾಡಿದರು’ ಎಂಬ ಇಬ್ರಾಹಿಂ ಅವರ ಆರೋಪಕ್ಕೆ ಅವರು ನಗರದಲ್ಲಿ ಶುಕ್ರವಾರ ಸುದ್ದಿಗಾರರಿಗೆ ಈ ರೀತಿ ಪ್ರತಿಕ್ರಿಯಿಸಿದರು.

‘ರಾಜಕೀಯದಲ್ಲಿ ಯಾರೂ ಶತ್ರುವಲ್ಲ, ಮಿತ್ರರೂ ಅಲ್ಲ. ಹೊಂದಾಣಿಕೆ ರಾಜಕೀಯ ಇಂದು ನಿನ್ನೆಯದಲ್ಲ. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗಿನಿಂದಲೂ ಜೆಡಿಎಸ್ ಹೊಂದಾಣಿಕೆ ರಾಜಕೀಯ ಮಾಡಿಕೊಂಡು ಬರುತ್ತಿದೆ. ದೇಶದ ಹಿತದೃಷ್ಟಿಯಿಂದ ಜೆಡಿಎಸ್, ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದೆ’ ಎಂದರು.

‘ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡ ಕಾರಣಕ್ಕೆ ಜೆಡಿಎಸ್ ತನ್ನ ತತ್ವ, ಸಿದ್ಧಾಂತಕ್ಕೆ ವಿರುದ್ಧವಾಗಿ ವರ್ತಿಸುವುದಿಲ್ಲ. ಪಕ್ಷದ ಸಂಘಟನೆ ಹಾಗೂ ಶಕ್ತಿ ಹೆಚ್ಚಿಸಲೆಂದೇ ಅಧ್ಯಕ್ಷರನ್ನು ಬದಲಾಯಿಸಲಾಗಿದೆ’ ಎಂದರು.

‘ಮೈತ್ರಿ ಸಂಬಂಧ ನಡೆದಿರುವ ಮೂರು ಸಭೆಗಳಲ್ಲೂ ಇಬ್ರಾಹಿಂ ಭಾಷಣವನ್ನೂ ಮಾಡಿದ್ದರು. ಬಳಿಕ ಕುಳಿತು ಮಾತನಾಡುವ ಬದಲು, ಪಕ್ಷ ವಿರೋಧಿಯಾಗಿ ಹೇಳಿಕೆ ನೀಡುತ್ತಿರುವುದು ಸರಿಯಲ್ಲ’ ಎಂದು ಟೀಕಿಸಿದರು.

‘ಸುಳ್ಳುಗಳ ಮೇಲೆ ಬಿಜೆಪಿ ರಾಜಕಾರಣ’

ಬೆಂಗಳೂರು: ‘ಸುಳ್ಳು ಬಿಜೆಪಿಯ ಮನೆದೇವರು. ಅಧಿಕಾರ ಇದ್ದಾಗಲೂ, ಇಲ್ಲದಿದ್ದಾಗಲೂ ಸುಳ್ಳುಗಳ ಮೇಲೆ ರಾಜಕಾರಣ ಮಾಡುತ್ತಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಹಾಗೂ ಹಿರಿಯೂರು ಕ್ಷೇತ್ರದ 750 ಕ್ಕೂ ಹೆಚ್ಚು ಬಿಜೆಪಿ ಮುಖಂಡರನ್ನು ಕಾಂಗ್ರೆಸ್‌ಗೆ ಬರಮಾಡಿಕೊಂಡ ನಂತರ ಅವರು ಮಾತನಾಡಿದರು.

ಸುಳ್ಳುಗಳ ಮೂಲಕ ಜನರನ್ನು ಯಾಮಾರಿಸುವುದೇ ಬಿಜೆಪಿ ನಾಯಕರ ಕೆಲಸ. ಜನರ ನಂಬಿಕೆ ದುರುಪಯೋಗಪಡಿಸಿಕೊಂಡು ಸದಾ ಯಾಮಾರಿಸುತ್ತಾರೆ ಎಂದರು.

ಪೂರ್ಣಿಮಾ, ತಂದೆ ಎ.ಕೃಷ್ಣಪ್ಪ ಹಾಗೂ ಅವರ ಪತಿ ಶ್ರೀನಿವಾಸ್ ಸಾಮಾಜಿಕ ನ್ಯಾಯದ ಪರವಾಗಿ ಕೆಲಸ ಮಾಡಿದ್ದಾರೆ. ಬಿಜೆಪಿ ಸಾಮಾಜಿಕ ನ್ಯಾಯದ ಪರವಿಲ್ಲ ಎನ್ನುವುದು ಅವರಿಗೆ ಮನವರಿಕೆಯಾಗಿದೆ. ಕಾಂಗ್ರೆಸ್ ಕೂಡ ಸಂವಿಧಾನ ಮತ್ತು ಸಾಮಾಜಿಕ ನ್ಯಾಯದ ಮೌಲ್ಯಗಳ ಪರವಾಗಿರುವ ಪಕ್ಷ. ಇಷ್ಟು ದಿನ ಒಲ್ಲದ ಮನಸ್ಸಿನಿಂದ ಬಿಜೆಪಿಯಲ್ಲಿದ್ದರು. ಈಗ ಕಾಂಗ್ರೆಸ್‌ಗೆ ಬಂದಿದ್ದಾರೆ. ಅವರಿಗೆ ರಾಜಕೀಯವಾಗಿ ಅನ್ಯಾಯ ಆಗಲು ಬಿಡುವುದಿಲ್ಲ ಎಂದು ಭರವಸೆ ನೀಡಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ಕರ್ನಾಟಕ ರಾಜ್ಯ ಗೊಲ್ಲ ಯಾದವ ಸಂಘ ಸೇರಿದಂತೆ ಹಲವು ಸಂಘಟನೆಗಳ ಸುಮಾರು ಸಾವಿರ ಕಾರ್ಯಕರ್ತರು ಪಕ್ಷ ಸೇರುತ್ತಿದ್ದಾರೆ. ಕಾಂಗ್ರೆಸ್ ಸೇರುವವರ ದೊಡ್ಡ ಪಟ್ಟಿಯೇ ಇದೆ. ಈಗ ಅದನ್ನು ಬಹಿರಂಗಪಡಿಸುವುದಿಲ್ಲ ಎಂದರು.



ಬೆಳಗಾವಿ ಜಿಲ್ಲಾ ಕಾಂಗ್ರೆಸ್‌ನಲ್ಲಿ ಮೂಡಿದ ಸಮುದಾಯ ಪ್ರತಿಷ್ಠೆ; ಒಂದಾಗುತ್ತಿರುವ ಶಾಸಕರು

ಲಿಂಗಾಯತರ ‘ಕೈ’ಗೆ ನಾಯಕತ್ವ: ತೆರೆಮರೆ ಯತ್ನ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಬೆಳಗಾವಿಯಲ್ಲಿ ಕಾಂಗ್ರೆಸ್ ನಾಯಕತ್ವವನ್ನು ಲಿಂಗಾಯತ ಸಮುದಾಯದವರ ಕೈಗೆ ತರಬೇಕು ಎಂಬ ಯತ್ನ ತೆರೆಮರೆಯಲ್ಲಿ ಜೋರಾಗಿ ನಡೆದಿದೆ. ಸಚಿವರಾದ ಸತೀಶ ಜಾರಕಿಹೊಳಿ, ಲಕ್ಷ್ಮಿ ಹೆಬ್ಬಾಳಕರ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರ ನಡುವೆ ಮುಸುಕಿನ ಗುದ್ದಾಟ ನಡೆಯಲು ಇದು ಕೂಡ ಕಾರಣ ಎನ್ನುತ್ತವೆ ಕಾಂಗ್ರೆಸ್ ಮೂಲಗಳು.

‘ಜಿಲ್ಲೆಯಲ್ಲಿ ಲಿಂಗಾಯತರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬೆಳಗಾವಿ, ಚಿಕ್ಕೋಡಿ ಕ್ಷೇತ್ರಗಳಲ್ಲಿ ಲಿಂಗಾಯತ ಮತಗಳೇ ನಿರ್ಣಾಯಕ. ಹೀಗಾಗಿ, ಇದೇ ಸಮುದಾಯದ ನಾಯಕರ ಕೈಯಲ್ಲಿ ಕಾಂಗ್ರೆಸ್ ಹಿಡಿತ ಇರಬೇಕು’ ಎಂಬುದು ಕೆಲ ಮುಖಂಡರ ಒತ್ತಾಸೆ.

ಸಂಘಟನಾ ಚತುರರೂ ಆದ ಲಕ್ಷ್ಮಣ ಸವದಿ ಕಾಂಗ್ರೆಸ್‌ಗೆ ಬಂದ ಬಳಿಕ ಜಿಲ್ಲೆಯಲ್ಲಿ ಬಲ ಹೆಚ್ಚಿದೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ನೀಡಿ ಅವರನ್ನೂ, ಲಿಂಗಾಯತ ಸಮುದಾಯವನ್ನೂ ‘ಸಮಾಧಾನ’ ಮಾಡಬೇಕು ಎಂಬುದು ರಾಜ್ಯ ಕಾಂಗ್ರೆಸ್ ನಾಯಕರ ಲೆಕ್ಕಾಚಾರ.

‘ಸವದಿ ಅವರನ್ನು ಕಾಂಗ್ರೆಸ್‌ಗೆ ಕರೆತಂದ ಲಕ್ಷ್ಮಿ ಹೆಬ್ಬಾಳಕರ ಸೇರಿ ಜಿಲ್ಲೆಯ ಲಿಂಗಾಯತ ಸಮುದಾಯದ ಎಲ್ಲ ನಾಯಕರೂ ಇದಕ್ಕೆ ಸಮ್ಮತಿ ಸೂಚಿಸಿದ್ದಾರೆ’ ಎನ್ನುತ್ತವೆ ಮೂಲಗಳು.

ಸಮುದಾಯ ಪ್ರತಿಷ್ಠೆ: ‘ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಜಾರಕಿಹೊಳಿ ಸಹೋದರರೇ ‘ಪವರ್ ಸ್ಟೇರಿಂಗ್’ ಹಿಡಿದಿದ್ದಾರೆ. ಲಿಂಗಾಯತ ನಾಯಕರು ಹಿಂದಿನ ಸಾಲಿನಲ್ಲಿ ನಿಲ್ಲುವುದು ಒಳ್ಳೆಯ ಬೆಳವಣಿಗೆ ಅಲ್ಲ’ ಎಂಬ ಬೇಸರವೂ ಕೆಲವರಲ್ಲಿದೆ.

ಈ ರೀತಿಯ ಚರ್ಚೆಯಿಂದ ಸಿಡಿಮಿಡಿಗೊಂಡಿರುವ ಸತೀಶ ಜಾರಕಿಹೊಳಿ ಅವರು ಲೋಕಸಭೆ ಚುನಾವಣೆ ಆಗುವವರೆಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ಬದಲಾಯಿಸದಂತೆ ಪಟ್ಟು ಹಿಡಿದಿದ್ದಾರೆ. ಎರಡೂವರೆ ವರ್ಷಗಳಿಂದ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಸತೀಶ ಅವರು, ಪರಿಶಿಷ್ಟರ ಮತಗಳನ್ನು ಕಾಂಗ್ರೆಸ್‌ನಲ್ಲಿ ಉಳಿಸಿಕೊಂಡಿದ್ದಾರೆ. ಜಿಲ್ಲೆಯಲ್ಲಿ 11 ಶಾಸಕರ ಗೆಲುವಿಗೆ ದುಡಿದಿದ್ದಾರೆ. ಕಾರ್ಯಾಧ್ಯಕ್ಷ ಸ್ಥಾನ ಬದಲಾದರೆ, ತಮ್ಮ ಶ್ರಮದ ಪ್ರತಿಫಲ ಇನ್ನೊಬ್ಬರ ಪಾಲಾಗುತ್ತದೆ ಎಂಬುದು ಸತೀಶ ಅವರ ಬೆಂಬಲಿಗರ ತಕರಾರು.

ಇಬ್ಬರಲ್ಲಿ ಒಬ್ಬರು ಲೋಕಸಭೆಗೆ?

ಲಕ್ಷ್ಮಣ ಸವದಿ

ಸತೀಶ ಜಾರಕಿಹೊಳಿ

ಲಕ್ಷ್ಮಿ ಹೆಬ್ಬಾಳಕರ

‘ಸಚಿವರಾದ ಸತೀಶ ಜಾರಕಿಹೊಳಿ ಮತ್ತು ಲಕ್ಷ್ಮಿ ಹೆಬ್ಬಾಳಕರ ಜೊತೆ ಚರ್ಚಿಸಿರುವ ಕಾಂಗ್ರೆಸ್ ನಾಯಕರು, ಇಬ್ಬರಲ್ಲಿ ಒಬ್ಬರು ಲೋಕಸಭೆಗೆ ಸ್ಪರ್ಧಿಸುವಂತೆ ಕೇಳಿದ್ದಾರೆ. ಇಬ್ಬರೂ ತಿರಸ್ಕರಿಸಿದ್ದಾರೆ. ಲಕ್ಷ್ಮೀ ಅವರು ತಮ್ಮ ಪುತ್ರನಿಗೆ, ಸತೀಶ ಅವರು ತಮ್ಮ ಪುತ್ರಿಗೆ ಟಿಕೆಟ್ ಕೇಳಿದ್ದಾರೆ’ ಎಂಬ ಮಾತು ಪಕ್ಷದ ವಲಯದಲ್ಲಿ ಕೇಳಿ ಬರುತ್ತಿದೆ.

‘2014ರಲ್ಲಿ ಸಿದ್ದರಾಮಯ್ಯ ಸರ್ಕಾರದಲ್ಲಿ ಸತೀಶ ಜಾರಕಿಹೊಳಿ ಮತ್ತು ಪ್ರಕಾಶ ಹುಕ್ಕೇರಿ ಸಚಿವರಾಗಿದ್ದರು. ಮಧ್ಯದಲ್ಲೇ ಪ್ರಕಾಶ ಹುಕ್ಕೇರಿ ಅವರಿಗೆ ಲೋಕಸಭೆಗೆ ಟಿಕೆಟ್ ಕೊಟ್ಟು ಆಯ್ಕೆ ಮಾಡಿ, ಕೇಂದ್ರಕ್ಕೆ ಕಳುಹಿಸಲಾಯಿತು. ಆಗ ಇಡೀ ಜಿಲ್ಲೆಯ ಹಿಡಿತ ಸತೀಶ ಜಾರಕಿಹೊಳಿ ಅವರ ಕೈಗೆ ಬಂತು. ಈಗಲೂ ಅದೇ ತಂತ್ರಗಾರಿಕೆ ಸತೀಶ ಹೆಣೆದಿದ್ದಾರೆ. ಸಚಿವೆ ಹೆಬ್ಬಾಳಕರ ಅವರನ್ನು ಲೋಕಸಭೆಗೆ ಕಣಕ್ಕಿಳಿಸುವ ಚರ್ಚೆಗಳು ನಡೆದಿವೆ’ ಎನ್ನುತ್ತಾರೆ ಮುಖಂಡರು.

‘ಪ್ರವಾಸಕ್ಕೆ ಬೇರೆ ಅರ್ಥ ಬೇಡ’


ಭರಮಗೌಡ (ರಾಜು) ಕಾಗೆ

ಬೆಳಗಾವಿ: ‘ನಾನು ಹುಟ್ಟಿದಾಗಿನಿಂದ ಮೈಸೂರು ದಸರಾ ನೋಡಿರಲಿಲ್ಲ. ಅದಕ್ಕೆ ನಾನೂ ಸೇರಿ ನಾಲ್ವರು ಶಾಸಕರು ಹೋಗಿ ಬಂದಿದ್ದೇವೆ. ನಮ್ಮೊಂದಿಗೆ ಸಚಿವ ಸತೀಶ ಜಾರಕಿಹೊಳಿ ಇರಲಿಲ್ಲ. ಇದಕ್ಕೆ ಬೇರೆ ಅರ್ಥ ಕಲ್ಪಿಸಬೇಕಿಲ್ಲ’ ಎಂದು ಶಾಸಕ ಭರಮಗೌಡ (ರಾಜು) ಕಾಗೆ ಹೇಳಿದರು.

‘ಸರ್ಕಾರ ನಮ್ಮನ್ನು ಮನೆಯ ಮಕ್ಕಳಂತೆ ನೋಡಿಕೊಳ್ಳುತ್ತಿದೆ. ಒಂದು ಮನೆ ಎಂದರೆ ಕೆಮ್ಮು-ನೆಗಡಿ ಇರುತ್ತದೆ. ಅದು ಎಲ್ಲವನ್ನೂ ನಾವು ಸರಿ ಪಡಿಸಿಕೊಳ್ಳುತ್ತೇವೆ. ಜಿಲ್ಲೆಯಲ್ಲಿ ನಾಯಕರ ಮಧ್ಯೆ ಯಾವುದೇ ಮುಸುಕಿನ ಗುದ್ದಾಟ ಇಲ್ಲ’ ಎಂದರು.

₹9.90 ಕೋಟಿ ವೆಚ್ಚದಲ್ಲಿ ಸಚಿವರಿಗೆ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ 33 ಸಚಿವರಿಗೆ ಹೊಸ ಇನ್ನೋವಾ ಕ್ರಿಸ್ಟಾ ಹೈಬ್ರಿಡ್ ಕಾರು ಖರೀದಿಸಲಾಗಿದೆ.

ರಾಜ್ಯದ 216 ತಾಲ್ಲೂಕುಗಳನ್ನು ಬರಪೀಡಿತ ಎಂದು ಸರ್ಕಾರವೇ ಘೋಷಿಸಿರುವ ಈ ಸಮಯದಲ್ಲಿ ಸಚಿವರಿಗೆ ಐಷಾರಾಮಿ ಕಾರುಗಳನ್ನು ಖರೀದಿಸಲು ₹ 9.90 ಕೋಟಿ ವೆಚ್ಚ ಮಾಡಿರುವುದಕ್ಕೆ ಆಕ್ಷೇಪಗಳು ವ್ಯಕ್ತವಾಗಿವೆ.

ಗ್ಯಾರಂಟಿ ಯೋಜನೆಗಳಿಗೆ ಸರ್ಕಾರ ಸಾಕಷ್ಟು ಹಣ ವೆಚ್ಚ ಮಾಡುತ್ತಿದೆ. ಇತರೆ ಅಭಿವೃದ್ಧಿ ಕಾರ್ಯಗಳಿಗೆ ಹಣದ ಕೊರತೆ ಎದುರಾಗಿದೆ. ಮತ್ತೊಂದೆಡೆ ರಾಜ್ಯ ಬರ ಪರಿಸ್ಥಿತಿಯತ್ತ ಸಾಗಿದೆ. ರೈತರು ಸಂಕಷ್ಟದಲ್ಲಿದ್ದಾರೆ. ಇಂತಹ ಸಮಯದಲ್ಲಿ ಸಚಿವರ ಐಷಾರಾಮಿ ಕಾರು ಖರೀದಿಗೆ ತಲಾ ₹30 ಲಕ್ಷ ವೆಚ್ಚ ಮಾಡುವ ಅಗತ್ಯವಿತ್ತೇ ಎಂದು ಹಲವರು ಪ್ರಶ್ನಿಸಿದ್ದಾರೆ.

ಬಿಸಿಯೂಟ: ₹ 216 ಕೋಟಿ ಅನುದಾನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬಿಸಿಯೂಟ: 4 ತಿಂಗಳಿನಿಂದ ಶಾಲೆಗಳಿಗೆ ಅನುದಾನ ಇಲ್ಲ

ಅ.7 ರ ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿದ್ದ ವರದಿ

ವರದಿ ಪರಿಣಾಮ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ರಾಜ್ಯದಲ್ಲಿನ ಸರ್ಕಾರಿ ಶಾಲೆಗಳ ಮಧ್ಯಾಹ್ನದ ಬಿಸಿಯೂಟ ಯೋಜನೆ ನಿರ್ವಹಣೆಗೆ ಶಾಲಾ ಶಿಕ್ಷಣ ಇಲಾಖೆಯು ₹216 ಕೋಟಿ ಅನುದಾನ ಬಿಡುಗಡೆಗೊಳಿಸಿ ಆದೇಶಿಸಿದೆ.

ಪ್ರಸಕ್ತ ಶೈಕ್ಷಣಿಕ ವರ್ಷ ಪ್ರಾರಂಭವಾದಾಗಿನಿಂದ ಶಾಲೆಗಳಿಗೆ ಆಹಾರ ಧಾನ್ಯಗಳು ಮಾತ್ರ ಪೂರೈಕೆಯಾಗಿದ್ದವು. ತರಕಾರಿ, ಮಸಾಲೆ, ಉಪ್ಪು, ಮೊಟ್ಟೆ ಖರೀದಿಗೆ ನಾಲ್ಕು ತಿಂಗಳಿಂದ ಹಣ ಬಿಡುಗಡೆಯಾಗಿರಲಿಲ್ಲ. ಆಯಾ ಶಾಲೆಗಳ ಶಿಕ್ಷಕರು ತಮ್ಮ ಜೇಬಿನಿಂದ ಹಣ ಖರ್ಚು ಮಾಡಿ ಯೋಜನೆ ನಿರ್ವಹಿಸುತ್ತಿದ್ದರು. ತರಕಾರಿ, ಮೊಟ್ಟೆ ಖರೀದಿಗೆ ಹಣ ಹೊಂದಿಸಲು ಕೆಲ ಶಿಕ್ಷಕರು ಪರದಾಡುತ್ತಿದ್ದರು.

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು 2023-24ನೇ ಸಾಲಿನ ಮೊದಲನೇ ತ್ರೈಮಾಸಿಕ ಅವಧಿಗೆ ಪಿಎಂ ಪೋಷಣ್ ಮಧ್ಯಾಹ್ನ ಉಪಾಹಾರ ಯೋಜನೆಗೆ ಅನುದಾನ ಬಿಡುಗಡೆಗೊಳಿಸಿ ಆದೇಶಿಸಿದ್ದಾರೆ. ಕೇಂದ್ರದ ಪಾಲಿನ ಅನುದಾನ ₹135 ಕೋಟಿ ರಾಜ್ಯದ ಪಾಲಿನ ಅನುದಾನ ₹81 ಕೋಟಿ ಸೇರಿ ಒಟ್ಟಾರೆ ₹216 ಕೋಟಿ ಅನುದಾನ ಬಿಡುಗಡೆ ಮಾಡಿರುವುದಾಗಿ ಆದೇಶದಲ್ಲಿ ತಿಳಿಸಿದ್ದಾರೆ.

‘ಹೂವಿನಹಡಗಲಿ ತಾಲ್ಲೂಕಿನ 179 ಶಾಲೆಗಳ ಮಧ್ಯಾಹ್ನದ ಬಿಸಿಯೂಟ ಯೋಜನೆಯ ನಿರ್ವಹಣೆಗೆ ₹1.18 ಕೋಟಿ ಬಿಡುಗಡೆಯಾಗಿದೆ. ಎಲ್ಲ ಶಾಲೆಗಳ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡುತ್ತಿದ್ದೇವೆ’ ಎಂದು ಅಕ್ಷರ ದಾಸೋಹ ಬಿಸಿಯೂಟ ಯೋಜನೆಯ ಸಹಾಯಕ ನಿರ್ದೇಶಕ ಹನುಮಂತಪ್ಪ ಹೇಳಿದರು.

4 ತಿಂಗಳಿನಿಂದ ಅನುದಾನ ಬಿಡುಗಡೆಯಾಗಿಲ್ಲ ಎಂಬ ವರದಿಯು ಅ.7ರ ‘ಪ್ರಜಾವಾಣಿ’ ಸಂಚಿಕೆಯಲ್ಲಿ ಪ್ರಕಟವಾಗಿತ್ತು.



‘ಪ್ರಜಾವಾಣಿ’ ವರದಿಗೆ ಸಿಎಂ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಮುಖ್ಯಮಂತ್ರಿ ತಮ್ಮ ಎಕ್ಸ್ ಖಾತೆಯಲ್ಲಿ ಪ್ರಜಾವಾಣಿ ವರದಿ ಹಂಚಿಕೊಂಡಿರುವುದು

ಮಂಗಳೂರು: ಇಲ್ಲಿಯ ಮಂಗಳಾದೇವಿ ದೇವಸ್ಥಾನದ ನವರಾತ್ರಿ ಉತ್ಸವದಲ್ಲಿ ‘ಧರ್ಮ ಕಲಹ’ಕ್ಕೆ ಗ್ರಾಹಕರು ಸೊಪ್ಪುಹಾಕದೇ ಸೌಹಾರ್ದ ಮೆರೆಯುತ್ತಿ ರುವ ಬಗ್ಗೆ ‘ಪ್ರಜಾವಾಣಿ’ ಅ.20ರ ಸಂಚಿಕೆಯಲ್ಲಿ ಪ್ರಕಟಿಸಿದ ‘ಜಾತ್ರೆ ವ್ಯಾಪಾರ: ‘ಧರ್ಮ’ಕ್ಕೆ ಸೊಪ್ಪುಹಾಕದ ಗ್ರಾಹಕರು’ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

‘ಸೌಹಾರ್ದತೆಯ ನೆಲದಲ್ಲಿ ದ್ವೇಷದ ಬೆಂಕಿ ಬಹುಕಾಲ ಬಾಳದು. ಕರುನಾಡಿನಲ್ಲಿ ಒಡೆಯುವ ಮನಸುಗಳಿಗಿಂತ ಕೂಡಿಬಾಳುವ ಮನಸುಗಳೇ ಹೆಚ್ಚಿವೆ ಎಂದು ಮತ್ತೆ ಮತ್ತೆ ಸಾಬೀತಾಗುತ್ತಿದೆ. ಕೋಮುವಾದದ ಪ್ರಯೋಗಶಾಲೆ ಎಂದು ಹೇಳಲಾಗುವ ಕರಾವಳಿ ಸೌಹಾರ್ದತೆಯ ಪಾಠಶಾಲೆಯಾಗಲಿ, ಇದಕ್ಕಾಗಿ ಕರಾವಳಿಯ ಎಲ್ಲ ಸೌಹಾರ್ದ ಮನಸುಗಳು ಒಂದಾಗಲಿ ಎಂದು ಆಶಿಸುತ್ತೇನೆ’ ಎಂದು ಅವರು ಬರೆದುಕೊಂಡಿದ್ದಾರೆ.

ಹರಾಜಿನಲ್ಲಿ ಮಳಿಗೆ ಪಡೆದ ಮುಸ್ಲಿಂ ವರ್ತಕರ ಬಳಿ ಹಿಂದೂಗಳು ವ್ಯಾಪಾರ ನಡೆಸುವುದನ್ನು ತಡೆಯಲು ವಿಶ್ವ ಹಿಂದೂ ಪರಿಷತ್‌ನವರು ಹಿಂದೂಗಳ ಮಳಿಗೆಗಳಲ್ಲಿ ಭಗವಾಧ್ವಜ ಕಟ್ಟಿ, ಈ ಧ್ವಜವಿರುವ ಮಳಿಗೆಗಳಲ್ಲಿ ಮಾತ್ರ ಖರೀದಿ ಮಾಡುವಂತೆ ಹಿಂದೂಗಳಿಗೆ ಸಂದೇಶ ರವಾನಿಸಿದ್ದರು. ಆದರೆ, ಇದಕ್ಕೆ ಗ್ರಾಹಕರು ಸೊಪ್ಪು ಹಾಕಿಲ್ಲ. ಹಿಂದೂಗಳ ಮಳಿಗೆಗಳಲ್ಲಿ ಮುಸ್ಲಿಮರು ಹಾಗೂ ಮುಸ್ಲಿಮರ ಮಳಿಗೆಗಳಲ್ಲಿ ಹಿಂದೂಗಳು ವ್ಯಾಪಾರ ನಡೆಸುತ್ತಿರುವ ಬಗ್ಗೆ ‘ಪ್ರಜಾವಾಣಿ’ ವರದಿ ಪ್ರಕಟಿಸಿತ್ತು.

ಬೆಂಗಳೂರಿನ ಗಾಂಧಿನಗರದ ಲೋಕಮಾನ್ಯ ತಿಲಕ್ ಉದ್ಯಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ದಸರಾ ಕಾರ್ಯಕ್ರಮದಲ್ಲಿ ನೃತ್ಯ ಮಾಡಲು ನವದುರ್ಗಿಯರ ವೇಷ ಧರಿಸಿದ್ದ ಮಹಿಳೆಯರಿಗೆ ಮುಸ್ಲಿಂ ಮಹಿಳೆಯೊಬ್ಬರು ಅಲಂಕಾರ ಮಾಡಿದರು
–ಪ್ರಜಾವಾಣಿ ಚಿತ್ರ: ಬಿ.ಎಚ್. ಶಿವಕುಮಾರ್

ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಸುರೇಶ ಜಂಗಮಶೆಟ್ಟಿ ಹೇಳಿಕೆ

ಕೌಶಲಾಧಾರಿತ ಕೋರ್ಸ್ ಆರಂಭಕ್ಕೆ ಚಿಂತನೆ

ಪ್ರಜಾವಾಣಿ ವಾರ್ತೆ

ಹಾವೇರಿ: ‘ನೂತನವಾಗಿ ಸ್ಥಾಪನೆಯಾಗಿರುವ ರಾಜ್ಯದ ಏಳು ವಿಶ್ವವಿದ್ಯಾಲಯಗಳಲ್ಲಿ ಸಾಂಪ್ರದಾಯಿಕ ಪದವಿ, ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಜತೆಗೆ ಡಿಜಿಟಲ್ ತಂತ್ರಜ್ಞಾನ ಮತ್ತು ಉದ್ಯೋಗ ಕೇಂದ್ರಿತ ಕೌಶಲಾಧಾರಿತ ಮಾನವೀಯ ಮೌಲ್ಯಗಳ ಪಠ್ಯಕ್ರಮಗಳನ್ನು ಅಳವಡಿಸಿ, ಹೊಸ ಕೋರ್ಸ್‌ಗಳನ್ನು ಆರಂಭಿಸಲು ಚಿಂತನೆ ನಡೆಸಲಾಗಿದೆ’ ಎಂದು ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಸುರೇಶ ಜಂಗಮಶೆಟ್ಟಿ ತಿಳಿಸಿದರು.

ಕೆರಿಮತ್ತಿಹಳ್ಳಿಯಲ್ಲಿರುವ ಹಾವೇರಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಶುಕ್ರವಾರ ನೂತನ ಏಳು ವಿಶ್ವವಿದ್ಯಾಲಯಗಳ ಕುಲಪತಿಗಳು ಜಂಟಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು.

‘ಹಾವೇರಿ, ಬಾಗಲಕೋಟೆ, ಹಾಸನ, ಕೊಡಗು, ಕೊಪ್ಪಳ, ಬೀದರ್, ಚಾಮರಾಜನಗರ ವಿಶ್ವವಿದ್ಯಾಲಯದ ಕುಲಪತಿಗಳು ಹಾವೇರಿಯಲ್ಲಿ ಸಮಾವೇಶಗೊಂಡು ವಿಶ್ವವಿದ್ಯಾಲಯಗಳ ಬೆಳವಣಿಗೆ, ಆರ್ಥಿಕ ಸ್ವಾವಲಂಬನೆ, ನೂತನ ಪಠ್ಯಕ್ರಮ ಅಳವಡಿಕೆ ಕುರಿತಂತೆ ಚರ್ಚಿಸಲಿದ್ದೇವೆ. ಈ ಸಭೆಯಲ್ಲಿ ನೂತನ ಏಳು ವಿಶ್ವವಿದ್ಯಾಲಯಗಳ ಕುಲಪತಿಗಳ ಜೊತೆಗೆ ದಾವಣಗೆರೆ ಹಾಗೂ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳೂ ಭಾಗವಹಿಸುವರು’ ಎಂದರು.

2ಎಫ್ ಮಾನ್ಯತೆ ಸಿಕ್ಕಿದೆ: ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಅಶೋಕ ಆಲೂರು ಮಾತನಾಡಿ, ರಾಜ್ಯದ ನೂತನ 7 ವಿಶ್ವವಿದ್ಯಾಲಯಗಳು ಮಾತೃ ವಿಶ್ವವಿದ್ಯಾಲಯಗಳಿಂದ ಪ್ರತ್ಯೇಕಗೊಳ್ಳುವ ಪ್ರಕ್ರಿಯೆ ಪೂರ್ಣಗೊಂಡಿದೆ. ಯುಜಿಸಿಯಿಂದ ‘2ಎಫ್’ ಮಾನ್ಯತೆ ಸಿಕ್ಕಿದೆ. ‘12ಬಿ’ ಮಾನ್ಯತೆ ಪಡೆಯುವ ಪ್ರಕ್ರಿಯೆ ಆರಂಭಗೊಂಡಿದೆ. ಬೋಧಕರಿಗೆ ಕೌಶಲ ತರಬೇತಿ ನೀಡಲು ಖಾಸಗಿ ಸಂಶೋಧನಾ ಸಂಸ್ಥೆಗಳ ಜೊತೆ ಒಡಂಬಡಿಕೆ ನಡೆಯುತ್ತಿದೆ ಎಂದರು.

ಕಲಿಕೆಯಿಂದ ಗಳಿಕೆ: ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಪತಿ ಆನಂದ ದೇಶಪಾಂಡೆ ಮಾತನಾಡಿ, ನೂತನ ವಿಶ್ವವಿದ್ಯಾಲಯಗಳಲ್ಲಿ ಜ್ಞಾನ, ಕೌಶಲ, ಮಾನವೀಯತೆ ಅಂಶಗಳಿಗೆ ಒತ್ತು ನೀಡಲಾಗುವುದು. ಕಲಿಕೆಯಿಂದ ಗಳಿಕೆಯಾಗಬೇಕು ಎಂಬ ದೃಷ್ಟಿಯಿಂದ ಹಲವು ಪ್ರಯೋಗಗಳು ನಡೆಯುತ್ತಿವೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ಮತ್ತು ಸಮಾಜಕ್ಕೆ ಕೊಡುಗೆ ನೀಡಲು ಅನುಕೂಲವಾಗುವಂತೆ ತರಬೇತಿಯನ್ನು ನೀಡಲಿದ್ದೇವೆ ಎಂದರು.

ಪಿಎಚ್.ಡಿಗೆ ಅವಕಾಶ: ಚಾಮರಾಜನಗರ ವಿಶ್ವವಿದ್ಯಾಲಯದ ಕುಲಪತಿ ಎಂ.ಆರ್.ಗಂಗಾಧರ, ಹಾಸನ ವಿಶ್ವವಿದ್ಯಾಲಯದ ಕುಲಪತಿ ಟಿ.ಸಿ. ತಾರಾನಾಥ ಮಾತನಾಡಿ, ನೂತನ ವಿ.ವಿ.ಗಳ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳು ಆಯಾ ವಿ.ವಿ.ಗಳಲ್ಲೇ ಸಂಯೋಜನೆ ಹೊಂದಬೇಕಾಗಿದೆ. ಈ ದಿಸೆಯಲ್ಲಿನ ಕಾರ್ಯ ಪೂರ್ಣಗೊಂಡಿದೆ. ವಿ.ವಿ ಸಂಯೋಜಿತ ಸ್ವತಂತ್ರ ಕಾಲೇಜುಗಳನ್ನು ಶೀಘ್ರವೇ ಗುರುತಿಸಲಾಗುವುದು. ನೂತನ ವಿ.ವಿ.ಗಳಲ್ಲೇ ಪಿಎಚ್.ಡಿ ವಿಭಾಗಕ್ಕೆ ಪ್ರವೇಶ ಪಡೆಯಲು ಅಧಿಸೂಚನೆ ಹೊರಡಿಸಲಾಗಿದೆ ಎಂದರು.

‘ಮೂಲಸೌಕರ್ಯದ ಕೊರತೆಯಿಲ್ಲ’

‘ಮಾತೃ ವಿಶ್ವವಿದ್ಯಾಲಯದಲ್ಲಿ ಸರ್ಕಾರದಿಂದ ಅನುಮೋದನೆಗೊಂಡ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹೊಸ ವಿಶ್ವವಿದ್ಯಾಲಯಗಳಿಗೆ ಹಸ್ತಾಂತರವಾಗಿದ್ದಾರೆ. ಖಾಲಿ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುತ್ತೇವೆ. ಈಗಾಗಲೇ ಪಿಜಿ ಸೆಂಟರ್, ಹಾಸ್ಟೆಲ್ ಮುಂತಾದ ಮೂಲಸೌಕರ್ಯಗಳು ಇರುವುದರಿಂದ ಸದ್ಯಕ್ಕೆ ಹೊಸದಾಗಿ ಕಟ್ಟಡ ನಿರ್ಮಿಸುವ ತುರ್ತು ಕಂಡು ಬಂದಿಲ್ಲ. ಹೊಸ ಕೋರ್ಸ್‌ಗಳು ಆರಂಭವಾದ ನಂತರ ಹಂತ–ಹಂತವಾಗಿ ಹೊಸ ನೇಮಕಾತಿ ಮತ್ತು ಹೊಸ ಕಟ್ಟಡಗಳ ಕಾಮಗಾರಿ ನಡೆಯಲಿದೆ’ ಎಂದು ಕುಲಪತಿಗಳು ತಿಳಿಸಿದರು.

ಶನಿವಾರ, ಅಕ್ಟೋಬರ್ 21, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 292 | ಪುಟ 32

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನವರಾತ್ರಿ ಸಂಭ್ರಮ

ರಾಜಸ್ಥಾನದ ಜೈಪುರದಲ್ಲಿ ನವರಾತ್ರಿ ಅಂಗವಾಗಿ ಹಮ್ಮಿಕೊಂಡಿದ್ದ ನೃತ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕಲಾವಿದೆ



ನಿಠಾರಿ ಕೊಲೆ ಪ್ರಕರಣ: ಉದ್ಯಮಿ ಪಂಧೇರ್ ಬಿಡುಗಡೆ 9

ಕೂಲಿ ಕೇಳಿದ ಎಸ್‌ಸಿ ಕಾರ್ಮಿಕನಿಗೆ ಹಲ್ಲೆ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,397 ▼	19,542 ▲	₹62,400 (ಬೆಂಗಳೂರು) ▲	₹73,500 (ಬೆಂಗಳೂರು) ▲	83.12 ▲

ಸಂಧಿಲಿನ್
ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!
ಶೀಘ್ರ ಪರಿಣಾಮಕಾರಿ
ತಯಾರಕರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
SDM ISO / GMP CERTIFIED
ಕುತ್ಪಾಡಿ, ಉಡುಪಿ, ಕರ್ನಾಟಕ. M: 8970977513

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ. ಸಂ

ಒಳ ಪುಟಗಳು

'ಗಾಜಾ ಮೇಲೆ ನಿಯಂತ್ರಣ ಸಾಧಿಸಲ್ಲ' 8

'ಅರಿಸಿನಕ್ಕೆ ₹15 ಸಾವಿರ ಬೆಂಬಲ ಬೆಲೆ' 8

ಪ್ರಜಾವಾಣಿ ನವವರ್ಣ
9ಬಿ ಮತ್ತು 9ಡಿ ಪುಟಗಳನ್ನು ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಚಿವ ಸ್ಥಾನಕ್ಕೆ 25–30 ಆಕಾಂಕ್ಷಿಗಳು: ಅಶೋಕ್ ಪಟ್ಟಣ, ಹ್ಯಾರಿಸ್ ಹೇಳಿಕೆ

30 ತಿಂಗಳಿಗೆ ಸಂಪುಟ ಬದಲು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸ್ಥಾನ ಮತ್ತು ನಿಗಮ–ಮಂಡಳಿಗಳ ಅಧ್ಯಕ್ಷ ಸ್ಥಾನಗಳ ಮೇಲೆ ಕಟ್ಟಿರುವ ಶಾಸಕರ ಅಸಮಾಧಾನ ಹೆಚ್ಚುತ್ತಿರುವ ಬೆನ್ನಲ್ಲೇ, 'ಎರಡೂವರೆ ವರ್ಷಗಳ ನಂತರ ರಾಜ್ಯ ಸಚಿವ ಸಂಪುಟದಲ್ಲಿ ಬದಲಾವಣೆ ಆಗುವುದು ಖಚಿತ' ಎಂದು ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ ಅವರು ನೀಡಿರುವ ಹೇಳಿಕೆ ಕಾಂಗ್ರೆಸ್ ವಲಯದಲ್ಲಿ ಸಂಚಲನಕ್ಕೆ ಕಾರಣವಾಗಿದೆ.

ಸರ್ಕಾರಕ್ಕೆ ಆರು ತಿಂಗಳು ತುಂಬುವ ಮೊದಲೇ ಸಚಿವ ಸ್ಥಾನದ ಆಕಾಂಕ್ಷಿಗಳು ಒಬ್ಬೊಬ್ಬರೇ ತಮ್ಮ ಬಯಕೆ ತೋಡಿ-ಕೊಳ್ಳಲಾರಂಭಿಸಿದ್ದಾರೆ. ಹಲವು ಬಾರಿ ಗೆದ್ದಿರುವ ಮತ್ತು ಹಿರಿತನ ಆಧಾರದಲ್ಲಿ ಸುಮಾರು 25 ರಿಂದ 30 ಶಾಸಕರು ಸಚಿವ ಸ್ಥಾನಕ್ಕಾಗಿ ಒತ್ತಡ ಹೇರಲಾರಂಭಿಸಿದ್ದಾರೆ. ಅಶೋಕ ಪಟ್ಟಣ ಅವರ ಹೇಳಿಕೆ ಬೆನ್ನಲ್ಲೇ ಎನ್.ಎ.ಹ್ಯಾರಿಸ್ ಕೂಡ ತಮಗೂ ಸಚಿವ ಸ್ಥಾನ ನೀಡಬೇಕು ಎಂಬುದಾಗಿ ಒತ್ತಾಯಿಸಿದ್ದಾರೆ.

ಹಿರಿಯ ಶಾಸಕ ಬಿ.ಆರ್.ಪಾಟೀಲ ಅವರು ಇತ್ತೀಚೆಗೆ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸ್ಥಾನವನ್ನು ತಿರಸ್ಕರಿಸಿದ್ದರು. ಇವರೂ ಸಚಿವ ಸ್ಥಾನದ ಆಕಾಂಕ್ಷಿ. ಬಸವರಾಜ ರಾಯರಡ್ಡಿ, ಅಪ್ಪಾಜಿ ನಾಡಗೌಡ ಸೇರಿದಂತೆ ಹಲವರು ಸಮಯ ಸಿಕ್ಕಾಗಲೆಲ್ಲ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

'ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ಎರಡೂವರೆ ವರ್ಷದಲ್ಲಿ ಸಂಪುಟ ಬದಲಾಗಲಿದೆ ಎಂಬ ಭರವಸೆ ನೀಡಿದ್ದಾರೆ' ಎಂಬ ಅಶೋಕ ಪಟ್ಟಣ ಹೇಳಿಕೆ ಹಲವರಲ್ಲಿ ಸಚಿವ ಸ್ಥಾನದ ಆಕಾಂಕ್ಷೆಯನ್ನು ಮತ್ತೆ ಚಿಗುರಿಸಿದೆ.

ಸಾಕಷ್ಟು ಹಿರಿಯರಿಗೆ ಸಚಿವ ಸ್ಥಾನ ನೀಡದಿರುವ ಬಗ್ಗೆ ಬೇಸರ ಇರುವುದು ನಿಜ. ಆದರೆ, ಅವರೆಲ್ಲ ಬಹಿರಂಗವಾಗಿ ಹೇಳಿಕೊಳ್ಳಲು ಹಿಂಜರಿಯುತ್ತಿದ್ದಾರೆ. ಅಲ್ಲದೇ, ಸಂಪುಟದಲ್ಲಿನ ಕೆಲವು ಸಚಿವರು ತಮಗೆ ನೀಡಿರುವ ಖಾತೆ ಮತ್ತು ಅದರಲ್ಲಿ ನಡೆಯುತ್ತಿರುವ ಹಸ್ತಕ್ಷೇಪದ ಬಗ್ಗೆ ತೀವ್ರ ಅಸಮಾಧಾನಗೊಂಡಿದ್ದಾರೆ. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಅಸಮಾಧಾನದ ನಡೆಗೆ ಇದೂ ಪ್ರಮುಖ ಕಾರಣ. ಅವರು ಸಿದ್ದರಾಮಯ್ಯ ಅವರಿಂದಲೂ ಅಂತರ ಕಾದುಕೊಂಡಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

> **ಮುಖ್ಯಮಂತ್ರಿ ಬದಲಾವಣೆ ಕುರಿತು ಸ್ಪಷ್ಟತೆ ಇಲ್ಲ. ಅದೆಲ್ಲ ಹೈಕಮಾಂಡ್‌ಗೆ ಬಿಟ್ಟ ವಿಚಾರ**
> **ಅಶೋಕ್ ಪಟ್ಟಣ,** ಮುಖ್ಯ ಸಚೇತಕ

ಅಶೋಕ ಪಟ್ಟಣ ಹೇಳಿದ್ದೇನು?



'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಜಾತಿವಾರು ಲೆಕ್ಕಾಚಾರದಲ್ಲಿ ಸಚಿವ ಸ್ಥಾನಗಳ ಹಂಚಿಕೆ ಮಾಡಿದೆ. ಹಾಗಾಗಿ, ನಮ್ಮಂತಹ ಅನುಭವಿಗಳಿಗೆ ಸ್ಥಾನ ಸಿಗಲಿಲ್ಲ. ಪಕ್ಷಕ್ಕೆ ದುಡಿದ ಶಾಸಕರಿಗೆ ಅವಕಾಶ ಸಿಗಬೇಕು ಎನ್ನುವುದು ನಮ್ಮ ಬೇಡಿಕೆ' ಎಂದು ಅಶೋಕ ಪಟ್ಟಣ ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗಾರರಿಗೆ ಹೇಳಿದರು. 'ಜಾತಿ, ಉಪಜಾತಿ ಆಧಾರದಲ್ಲಿ ಮಂತ್ರಿ ಸ್ಥಾನ ನೀಡುತ್ತಾ ಹೋದರೆ, ಅನುಭವಿಗಳು, ಹಿರಿಯರಿಗೆ ಅವಕಾಶ ಯಾವಾಗ ಸಿಗುತ್ತದೆ? ಪ್ರಭಾವಿ ನಾಯಕರು ತಮಗೆ ಬೇಕಾದವರನ್ನು ಮಂತ್ರಿ ಮಾಡಿದ್ದಾರೆ. ಉಳಿದವರು ಏನು ಮಾಡಬೇಕು' ಎಂದು ಅವರು ಪ್ರಶ್ನಿಸಿದರು.

'ಎಲ್ಲ ಶಾಸಕರಿಗೂ ಸಚಿವ ಸ್ಥಾನ ನೀಡಲು ಸಾಧ್ಯವಿಲ್ಲ ಎಂಬುದು ನಿಜ. ಈಗಿನ ಸಂಪುಟಕ್ಕೆ ಎರಡೂವರೆ ವರ್ಷ ಆದ ತಕ್ಷಣ ಬೇರೆಯವರಿಗೆ ಅವಕಾಶ ಮಾಡಿಕೊಡುವುದಾಗಿ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಅವರು ನಮಗೆ ಭರವಸೆ ನೀಡಿದ್ದಾರೆ' ಎಂದರು.

'ಅದೃಷ್ಟವಿದ್ದವರು ಸಚಿವರಾಗುತ್ತಾರೆ. ಇಲ್ಲದವರು ಮಾತನಾಡುತ್ತೇವೆ. ನಮ್ಮ ತಂದೆ, ತಾಯಿ ಇಬ್ಬರೂ ಶಾಸಕರಾಗಿದ್ದರು. ಎಲ್ಲ ಇದ್ದರೂ, ಅದೃಷ್ಟ ಇಲ್ಲ. ನನ್ನ ನಕ್ಷತ್ರ ಸರಿಯಿಲ್ಲ ಎಂದು ಕಾಣುತ್ತದೆ. ಮುಂದೆ ಪೂಜೆ- ಪುನಸ್ಕಾರ ಮಾಡಬೇಕು. ಆದರೆ ನಾವು ಪಕ್ಷಕ್ಕೆ ನಿಷ್ಠರಾಗಿರುತ್ತೇವೆ' ಎಂದು ಹೇಳಿದರು.

ಸಿ.ಎಂ ಸ್ಥಾನಕ್ಕೆ ಶಿವಕುಮಾರ್ ಅರ್ಹ

ಶಾಂತಿನಗರ ಶಾಸಕ ಹ್ಯಾರಿಸ್ ಸಹ ಸಂಪುಟ ಬದಲಾವಣೆಯ ಹೇಳಿಕೆ ನೀಡಿದ್ದು, 'ಸರ್ಕಾರ ಒಳ್ಳೆಯ ಆಡಳಿತ ನೀಡುತ್ತಿದೆ. ಆದರೂ ಸಂಪುಟ ಪುನರ್‌ರಚನೆ ಆಗಬೇಕಿದೆ. ನಾವು ಪಕ್ಷಕ್ಕಾಗಿ ದುಡಿದಿದ್ದೇವೆ. ಅವಕಾಶ ನೀಡುವ ಭರವಸೆ ದೊರೆತಿದೆ' ಎಂದು ಹೇಳಿದರು. ಎರಡೂವರೆ ವರ್ಷಗಳ ನಂತರ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಸಿಗುತ್ತದೆಯೇ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, 'ಮುಖ್ಯಮಂತ್ರಿ ಬದಲಾವಣೆ ಹೈಕಮಾಂಡ್ ನಿರ್ಧಾರ. ಶಿವಕುಮಾರ್ ಆ ಸ್ಥಾನಕ್ಕೆ ಅರ್ಹರಿದ್ದಾರೆ' ಎಂದರು.

ಊರಿನತ್ತ... ದಸರಾ ಪ್ರಯುಕ್ತ ಜನರು ತಮ್ಮ ಊರುಗಳತ್ತ ಹೊರಡಲು ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಶುಕ್ರವಾರ ಕಿಕ್ಕಿರಿದು ತುಂಬಿದ್ದರು

–ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಗಗನಯಾನ: ಮೊದಲ ಪರೀಕ್ಷಾ ಉಡಾವಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವ ಸಹಿತ ಗಗನಯಾನಕ್ಕೆ ಪೂರ್ವಭಾವಿಯಾಗಿ ನಡೆಯುವ ಸರಣಿ ಪರೀಕ್ಷೆಗಳ ಪೈಕಿ ಮೊದಲ ಪರೀಕ್ಷಾ ಉಡಾವಣೆ ಶನಿವಾರ ಬೆಳಿಗ್ಗೆ ಶ್ರೀಹರಿಕೋಟದಿಂದ ನಡೆಯಲಿದೆ.

ಒಟ್ಟು ಪರೀಕ್ಷೆಯ ಅವಧಿ ಕೇವಲ 9 ನಿಮಿಷಗಳು. ರಾಕೆಟ್ ಉಡಾವಣೆಗೊಂಡು 9 ನಿಮಿಷಗಳಲ್ಲಿ 17 ಕಿ.ಮೀ ಎತ್ತರಕ್ಕೆ ತಲುಪಿ 'ಕ್ರೂ ಮಾಡ್ಯೂಲ್' (ಗಗನಯಾನಿಗಳ ಪಯಣಿಸುವ ಕೋಶ) ಪ್ರತ್ಯೇಕಗೊಂಡು ಬಂಗಾಳ ಕೊಲ್ಲಿಗೆ ಬಂದು ಇಳಿಯಲಿದೆ ಎಂದು ಇಸ್ರೊ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಈ ಪರೀಕ್ಷೆ ಯಾವ ಕಾರಣಕ್ಕೆ?: ಗಗನಯಾನದ ರಾಕೆಟ್ ಬಾಹ್ಯಾಕಾಶಕ್ಕೆ ಯಾನ ಮಾಡುವ ಸಂದರ್ಭದಲ್ಲಿ ಅವಘಡಕ್ಕೆ ತುತ್ತಾದರೆ, ಗಗನಯಾನಿಗಳು ಅಲ್ಲಿಂದ ಪಾರಾಗುವುದು ಹೇಗೆ ಎಂಬ ಪ್ರಾತ್ಯಕ್ಷಿಕೆ ಪರೀಕ್ಷೆ ನಡೆಯುತ್ತದೆ.

ರಾಕೆಟ್ ಉಡಾವಣೆಗೊಂಡು ಬಾಹ್ಯಾಕಾಶದಲ್ಲಿ ಸಾಗುವಾಗ ರಾಕೆಟ್‌ನಲ್ಲಿ ದೋಷ ಉಂಟಾಗಿ ಸ್ಫೋಟ ಆಗುವ ಸಾಧ್ಯತೆ ಇರುತ್ತದೆ. ಆಗ 'ಕ್ರೂ ಮಾಡ್ಯೂಲ್' ಅನ್ನು ಮೂಲ ರಾಕೆಟ್‌ನಿಂದ ಸೆಳೆದು ದೂರಕ್ಕೆ ಒಯ್ದು ಪಾರು ಮಾಡಲು ಮತ್ತೊಂದು ರಾಕೆಟ್ ಅಳವಡಿಸಲಾಗಿರುತ್ತದೆ. ಆ ರಾಕೆಟ್ ಕ್ರೂ ಮಾಡ್ಯೂಲ್ ಅನ್ನು ಸೆಳೆದು ಸಾಕಷ್ಟು ಮೇಲಕ್ಕೆ ಒಯ್ಯುತ್ತದೆ ಎಂದು ಇಸ್ರೊ ವಿಜ್ಞಾನಿಯೊಬ್ಬರು ತಿಳಿಸಿದರು.

ಗಗನಯಾನ ಪರೀಕ್ಷಾ ಉಡಾವಣೆಗೆ ಸಿದ್ಧವಾಗಿರುವ ಪಿಎಸ್‌ಎಲ್‌ವಿ ರಾಕೆಟ್

ಪ್ರಮುಖ ಪರೀಕ್ಷೆಗಳು

- ಪಿಎಸ್‌ಎಲ್‌ವಿ ರಾಕೆಟ್ ಕ್ರೂ ಮಾಡ್ಯೂಲ್ ಮತ್ತು ಅಪಾಯದ ಸಂದರ್ಭದಲ್ಲಿ ಅದನ್ನು ಸೆಳೆದೊಯ್ಯುವ ಪುಟ್ಟ ರಾಕೆಟ್‌ನ ಪರೀಕ್ಷೆ ಇದೇ ಮೊದಲ ಬಾರಿ ನಡೆಯುತ್ತಿದೆ. ಈ ಪುಟ್ಟ ರಾಕೆಟ್ ಅನ್ನು ಇಸ್ರೊ ಅಭಿವೃದ್ಧಿಪಡಿಸಿದೆ.
- ಕ್ರೂ ಮಾಡ್ಯೂಲ್ ಪಿಎಸ್‌ಎಲ್‌ವಿ-ಯಿಂದ ಬೇರ್ಪಡಿಸುವುದು
- ಪುಟ್ಟ ರಾಕೆಟ್‌ನಿಂದ ಬೇರ್ಪಟ್ಟ ಬಳಿಕ ಕ್ರೂ ಮಾಡ್ಯೂಲ್ ಅನ್ನು ಪ್ಯಾರಾಚೂಟ್‌ಗಳ ಮೂಲಕ ಸುರಕ್ಷಿತವಾಗಿ ಸಮುದ್ರಕ್ಕೆ ಇಳಿಸುವುದು.

4ನೇ ಪುಟ ನೋಡಿ

ವಿಸ್ತರಿತ ಮಾರ್ಗ ಉದ್ಘಾಟನೆ ವೇಳೆ ಪ್ರಧಾನಿ ಘೋಷಣೆ

ಮೈಸೂರು ಸೇರಿ ರಾಜ್ಯದ ಇತರ ನಗರಗಳಲ್ಲೂ ಮೆಟ್ರೊ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು (ಪಿಟಿಐ): 'ಬೆಂಗಳೂರಿನಲ್ಲಿ ಇರುವಂತೆಯೇ 'ನಮ್ಮ ಮೆಟ್ರೊ' ರೈಲು ಸೇವೆಯನ್ನು ಭವಿಷ್ಯದಲ್ಲಿ ಮೈಸೂರು ಸೇರಿದಂತೆ ಕರ್ನಾಟಕದ ಇತರೆ ಪ್ರಮುಖ ನಗರಗಳಲ್ಲೂ ಆರಂಭಿಸಲಾಗುವುದು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಉತ್ತರ ಪ್ರದೇಶದ ಸಾಹಿಬಾಬಾದ್‌ನಿಂದ ವರ್ಚುವಲ್ ಮೂಲಕ ಶುಕ್ರವಾರ ಬೈಯಪ್ಪನಹಳ್ಳಿ- ಕೃಷ್ಣರಾಜಪುರ ಹಾಗೂ ಕೆಂಗೇರಿ-ಚಲ್ಲಘಟ್ಟ ವಿಸ್ತರಿತ ಮಾರ್ಗವನ್ನು ಅಧಿಕೃತವಾಗಿ ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರಿನಲ್ಲಿ 'ನಮ್ಮ ಮೆಟ್ರೊ' ರೈಲಿನಲ್ಲಿ ನಿತ್ಯ 8 ಲಕ್ಷ ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ನೂತನ ವಿಸ್ತರಿತ ಮಾರ್ಗಗಳು ಬೆಂಗಳೂರಿನ ಪೂರ್ವ ಹಾಗೂ ಪಶ್ಚಿಮದ ಕಾರಿಡಾರ್‌ಗಳನ್ನು ಸಂಪರ್ಕಿಸುತ್ತಿವೆ. ಇದಕ್ಕಾಗಿ ಕರ್ನಾಟಕದ ಜನರಿಗೆ ಅಭಿನಂದನೆಗಳು ಎಂದು ಪ್ರಧಾನಿ ಮೋದಿ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, '2031ರ ವೇಳೆಗೆ 317 ಕಿ.ಮೀ ಮೆಟ್ರೊ ಮಾರ್ಗವನ್ನು ನಿರ್ಮಿಸಲು ಸಮಗ್ರ ಸಂಚಾರ ಯೋಜನೆ (ಸಿಎಂಪಿ) ಅನುಮೋದಿಸಿದೆ. ಸದ್ಯ 257 ಕಿ.ಮೀ. ಮಾರ್ಗವು ಕಾರ್ಯಾಚರಣೆ, ನಿರ್ಮಾಣ ಮತ್ತು ಯೋಜನೆ ಹಂತದಲ್ಲಿದೆ. ಉಳಿದಂತೆ 60 ಕಿ.ಮೀ ಮೆಟ್ರೊ ಮಾರ್ಗಗಳ ಕಾರ್ಯಸಾಧ್ಯತೆ ಸಮೀಕ್ಷೆಯನ್ನು ಸದ್ಯದಲ್ಲಿಯೇ ಕೈಗೊಳ್ಳಲಾಗುವುದು' ಎಂದರು.

'ಮೋದಿಗಾಗಿ ಇಂಗ್ಲಿಷ್‌ನಲ್ಲಿ ಭಾಷಣ ಮಾಡಲ್ಲ'

ಬೆಂಗಳೂರು: 'ನಮ್ಮ ಮೆಟ್ರೊ' ವಿಸ್ತರಿತ ಮಾರ್ಗದ ಉದ್ಘಾಟನಾ ಸಮಾರಂಭದಲ್ಲಿ ವರ್ಚುವಲ್‌ನಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕನ್ನಡದಲ್ಲೇ ಭಾಷಣ ಮಾಡಿದರು. ಅಲ್ಲೇ ಇದ್ದವರೊಬ್ಬರು, 'ಯಾವ ಭಾಷೆಯಲ್ಲಿ ಮಾತನಾಡುತ್ತೀರಿ' ಎಂದಾಗ, 'ನಾನು ಕನ್ನಡದಲ್ಲೇ ಮಾತನಾಡುತ್ತೇನೆ. ಕರ್ನಾಟಕದಲ್ಲಿ ನಾನು ಭಾಷಣ ಮಾಡುತ್ತಿರುವುದು. ಅವರಿಗೋಸ್ಕರ(ಮೋದಿ) ಇಂಗ್ಲಿಷ್‌ನಲ್ಲಿ ಭಾಷಣ ಮಾಡುವುದಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

ಕೆಪಿಎಸ್‌ಸಿಗೆ ಶೀಘ್ರ ಪ್ರಸ್ತಾವ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಗೆಜೆಟೆಡ್ ಪ್ರೊಬೇಷನರಿ (ಕೆಎಎಸ್) ಗ್ರೂಪ್ 'ಎ' ಮತ್ತು 'ಬಿ' ವೃಂದದ 300ಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯ ಸರ್ಕಾರ ಪ್ರಕ್ರಿಯೆ ತ್ವರಿತಗೊಳಿಸಿದೆ. 4

ಮಗಳಿಂದ ಮದುಮಗಳವರೆಗೆ, ಚಿನ್ನದ ರೂಪಾಂತರ.
ತಂಗಮೆ ತಂಗಂ
ಮದುವೆ ಆಭರಣ ಸಂಗ್ರಹ, ಪ್ರೀತಿಯಿಂದ ಸಂಗ್ರಹಿಸಲಾಗಿದೆ.
ಪ್ರತಿ ಗ್ರಾಂಗೆ ₹50* ಅಧಿಕ ಪಡೆಯಿರಿ. ನಿಮ್ಮ ಹಳೆಯ ಚಿನ್ನವನ್ನು ಹೊಸ HUID ಹಾಲ್‌ಮಾರ್ಕ್ ಚಿನ್ನದ ಆಭರಣಗಳೊಂದಿಗೆ ಎಕ್ಸ್‌ಚೇಂಜ್ ಮಾಡಿಕೊಳ್ಳಿ
ಫ್ಲಾಟ್ ₹150* ಕಡಿತ ಚಿನ್ನಾಭರಣ ಖರೀದಿಯ ಮೇಲೆ ಪ್ರತಿ ಗ್ರಾಂಗೆ
ಫ್ಲಾಟ್ ₹10000* ಕಡಿಮೆ ನ್ಯಾಚುರಲ್ ವಜ್ರಾಭರಣಗಳ ಮೇಲೆ ಪ್ರತಿ ಕ್ಯಾರೆಟ್‌ಗೆ
PRINCE JEWELLERY
BENGALURU: 11th Main Road, Near Cosmopolitan Club, 3rd Block, Jayanagar. Ph: 080-4264 9999
www.princejewellery.com. Open on Sundays.
*Terms and conditions apply.
Certified diamonds | BIS 100% Hallmarked Jewellery

ಮಿನುಗುವ ಆಫರ್‌ಗಳು
ಪ್ರತಿ ಕ್ಯಾರೆಟ್ ವಜ್ರದ ಮೇಲೆ 25 ಗ್ರಾಂ ಬೆಳ್ಳಿ ಪಡೆಯಿರಿ ಉಚಿತವಾಗಿ*
ಬೆಳ್ಳಿ ಸಾಮಾಗ್ರಿಗಳ ಮೇಕಿಂಗ್ ಚಾರ್ಜ್‌ನ ಮೇಲೆ 25% ರಿಯಾಯಿತಿ* (ವಿಶೇಷ ಸಾಮಾಗ್ರಿಗಳನ್ನು ಹೊರತುಪಡಿಸಿ)
ಬೆಳ್ಳಿ ಆಭರಣಗಳು ಮತ್ತು ಗಿಫ್ಟ್ ವಸ್ತುಗಳ MRP ಮೇಲೆ 10% ರಿಯಾಯಿತಿ*
*ಚಿನ್ನದ ನಾಣ್ಯಗಳು / ಗಟ್ಟಿಗಳ ಖರೀದಿಗೆ ಈ ಕೊಡುಗೆ ಅನ್ವಯಿಸುವುದಿಲ್ಲ. ಬೆಳ್ಳಿಯ ಸಾಮಗ್ರಿಗಳಿಗೆ VA ಮತ್ತು MC ಅನ್ವಯಿಸುತ್ತವೆ. ಸೀಮಿತ ಅವಧಿಯ ಕೊಡುಗೆ. ಷರತ್ತುಗಳು ಅನ್ವಯಿಸುತ್ತವೆ.
HDFC BANK | FESTIVE TREATS | UPTO ₹5000 CASHBACK# on HDFC Bank Credit Cards.
Offer: 2% Cashback #Min. transaction: ₹50,000
Validity: 20.10.2023 to 05.11.2023. T&C apply.
Attractive offer on online purchase also
AVAIL ATTRACTIVE GIFTS ON UPI PAYMENTS.
Karnataka | Andhra Pradesh | Telangana | Tamil Nadu | Puducherry || Singapore
STORE LOCATOR
Shop online at: www.grtjewels.com | GRT LIVE VIDEO SHOPPING Shop from the comfort of your home

12 ಪಬ್, ಬಾರ್‌ಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸುರಕ್ಷತಾ ನಿಯಮಗಳನ್ನು ಪಾಲಿಸದ 12 ಪಬ್, ಬಾರ್, ರೆಸ್ಟೋರೆಂಟ್‌ಗಳನ್ನು ಬಿಬಿಎಂಪಿ ಮುಚ್ಚಿಸಿದೆ.

ಎಂಟೂ ವಲಯಗಳಲ್ಲಿ ಆರೋಗ್ಯಾಧಿಕಾರಿಗಳು ಶುಕ್ರವಾರ ತಪಾಸಣೆ ನಡೆಸಿದರು. ಪೂರ್ವ ವಲಯದಲ್ಲಿ ಏಳು, ಮಹದೇಪುರದಲ್ಲಿ ಮೂರು, ಬೊಮ್ಮನಹಳ್ಳಿ ವಲಯದಲ್ಲಿ ಎರಡು ಪಬ್‌- ಬಾರ್‌ಗಳಿಗೆ ಬೀಗ ಹಾಕಲಾಗಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 1,118 ಉದ್ದಿಮೆಗಳಿಗೆ ಪರವಾನಗಿ ನೀಡಲಾಗಿದ್ದು, ಈ ಪೈಕಿ ಇಂದು 232 ಉದ್ದಿಮೆಗಳನ್ನು ಪರಿಶೀಲಿಸಲಾಗಿದೆ. ಅದರಲ್ಲಿ 86 ಉದ್ದಿಮೆಗಳಿಗೆ ನೋಟಿಸ್ ಜಾರಿಗೊಳಿಸಿದ್ದು, 12 ಉದ್ದಿಮೆಗಳನ್ನು ಮುಚ್ಚಲಾಗಿದೆ ಎಂದು ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ತಿಳಿಸಿದ್ದಾರೆ.

ನಗರದ ಪಬ್, ಬಾರ್, ರೆಸ್ಟೋರೆಂಟ್‌ಗಳಲ್ಲಿ ಬಿಬಿಎಂಪಿ ಆರೋಗ್ಯಾಧಿಕಾರಿಗಳು ಶುಕ್ರವಾರ ಪರಿಶೀಲನೆ ನಡೆಸಿದರು

ದಸರಾ ಮಹೋತ್ಸವ • ಪ್ರವಾಸ, ಊರು, ಧಾರ್ಮಿಕ ಸ್ಥಳಗಳತ್ತ ಜನ

ಸರಣಿ ರಜೆ: ಪ್ರಯಾಣ ದರ ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ ಮಹೋತ್ಸವ, ಸಾಲು ಸಾಲು ಸರ್ಕಾರಿ ರಜೆಗಳು ಹಾಗೂ ಶಾಲೆಗಳಿಗೆ ದಸರಾ ರಜೆ ಇರುವುದರಿಂದ ಪ್ರವಾಸ, ಧಾರ್ಮಿಕ ಸ್ಥಳ ಹಾಗೂ ಊರಿಗೆ ತೆರಳುವರ ಸಂಖ್ಯೆ ಹೆಚ್ಚಾಗಿದ್ದು, ಶುಕ್ರವಾರ ನಗರದ ಬಸ್ ನಿಲ್ದಾಣಗಳೆಲ್ಲ ಪ್ರಯಾಣಿಕರಿಂದ ಭರ್ತಿಯಾಗಿದ್ದವು.

ನಗರದಿಂದ ಹೊರಟ ಎಲ್ಲ ಬಸ್‌ಗಳು ಪ್ರಯಾಣಿಕರಿಂದ ತುಂಬಿದ್ದವು. ಗುರುವಾರ ರಾತ್ರಿಯಿಂದಲೇ ಜನರು ಊರಿನತ್ತ ತೆರಳಿದ್ದು ಕಂಡುಬಂತು. ನಗರದ ಕೆಂಪೇಗೌಡ ಬಸ್ ನಿಲ್ದಾಣ, ಯಶವಂತಪುರ, ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ, ಕಂಟೋನ್ಮೆಂಟ್ ಹಾಗೂ ಬೈಯಪ್ಪನಹಳ್ಳಿ ನಿಲ್ದಾಣದಲ್ಲೂ ಪ್ರಯಾಣಿಕರ ದಟ್ಟಣೆಯಿತ್ತು.

ಖಾಸಗಿ ಬಸ್‌ಗಳಲ್ಲಿ ಪ್ರಯಾಣ ದರವು ದುಬಾರಿಯಾಗಿತ್ತು. ಕೊನೆಯ ಕ್ಷಣದಲ್ಲಿ ಬಂದ ಪ್ರಯಾಣಿಕರಿಗೆ ಸೀಟು ಲಭ್ಯ ಇಲ್ಲ ಎಂಬ ಉತ್ತರ ದೊರೆಯಿತು. ಇದರಿಂದ ಊರಿಗೆ ತೆರಳಲು ಬಂದ ಪ್ರಯಾಣಿಕರು ನಿರಾಸೆಗೆ ಒಳಗಾದರು.

ಧಾರ್ಮಿಕ ಸ್ಥಳದತ್ತ ಜನರು: ನಗರದಿಂದ ಧರ್ಮಸ್ಥಳ, ಉಡುಪಿ, ಮಂಗಳೂರು, ಹೊರನಾಡು, ಶೃಂಗೇರಿಯತ್ತ ಹೆಚ್ಚಿನ ಮಂದಿ ಶುಕ್ರವಾರ ರಾತ್ರಿಯಿಂದಲೇ ಪ್ರಯಾಣಿಸಿದರು. ಶನಿವಾರ ಇನ್ನೂ ಹೆಚ್ಚಿನ ಮಂದಿ ತೆರಳಲಿದ್ದಾರೆ ಎಂದು ಚಾಲಕರು ತಿಳಿಸಿದರು. ಮೈಸೂರು ದಸರಾ ವೀಕ್ಷಣೆಗೆ ತೆರಳುವವರ ಸಂಖ್ಯೆಯೂ ಈ ಬಾರಿ ಏರಿಕೆಯಾಗಿದೆ. ಮಡಿಕೇರಿಯಲ್ಲೂ ದಸರಾ ನಡೆಯುತ್ತಿದ್ದು, ಮಂಜಿನ ನಗರಿಯತ್ತ ಯುವಜನತೆ ಪ್ರಯಾಣಿಸಿದರು.

ಕೆಎಸ್‌ಆರ್‌ಟಿಸಿ 2,000ಕ್ಕೂ ಅಧಿಕ ವಿಶೇಷ ಬಸ್‌ಗಳನ್ನು ವ್ಯವಸ್ಥೆ ಮಾಡಿದೆ. ಕರ್ನಾಟಕ ಸಾರಿಗೆ (ವೇಗದೂತ), ರಾಜಹಂಸ, ಸ್ಲೀಪರ್, ಐರಾವತ, ಐರಾವತ ಕ್ಲಬ್ ಕ್ಲಾಸ್ (ಮಲ್ಟಿ ಆಕ್ಸಲ್) ಇ.ವಿ ಪವರ್ ಪ್ಲಸ್, ಅಂಬಾರಿ ಕ್ಲಬ್ ಕ್ಲಾಸ್, ಅಂಬಾರಿ ಉತ್ಸವ್ ಹಾಗೂ ಪಲ್ಲಕ್ಕಿ ಬಸ್‌ಗಳಲ್ಲಿ ಜನರು ವಿವಿಧ ನಗರಕ್ಕೆ ತೆರಳಿದವು.

ರಾಷ್ಟ್ರೀಯ ಹೆದ್ದಾರಿಯಲ್ಲಿ ದಟ್ಟಣೆ: ತುಮಕೂರು ರಸ್ತೆ, ಮೈಸೂರು ರಸ್ತೆ, ಬಳ್ಳಾರಿ ರಸ್ತೆಯಲ್ಲಿ ಗುರುವಾರ ರಾತ್ರಿಯಿಂದಲೇ ವಾಹನ ದಟ್ಟಣೆ ಕಂಡುಬಂತು. ಜಂಕ್ಷನ್‌ಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಇದರಿಂದ ಚಾಲಕರು ಪರದಾಡಿದರು.

ಆರ್‌ಟಿಒ ಪರಿಶೀಲನೆ: ಹೆಚ್ಚಿನ ದರ ವಸೂಲಿ ಮಾಡಿ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ಬಸ್‌ಗಳ ಮೇಲೆ ಆರ್‌ಟಿಒ ಅಧಿಕಾರಿಗಳು ದಾಳಿ ಪರಿಶೀಲನೆ ನಡೆಸಿದರು.

ಕೆಲವು ಖಾಸಗಿ ಬಸ್‌ಗಳಲ್ಲಿ ಮಿತಿಗಿಂತ ಹೆಚ್ಚಿನ ಪ್ರಯಾಣಿಕರನ್ನು ಕರೆದೊಯ್ಯುತ್ತಿರುವುದು ತಪಾಸಣೆ ವೇಳೆ ಕಂಡುಬಂದಿದೆ. ಚಾಲಕರು ಹಾಗೂ ನಿರ್ವಾಹಕರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮೈಸೂರು ಹಾಗೂ ಮಡಿಕೇರಿಯತ್ತ ಹೆಚ್ಚಿನ ಪ್ರಯಾಣಿಕರು ಪ್ರಯಾಣಿಸಿದ್ದರಿಂದ ಬೆಂಗಳೂರಿನ ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಮುಂಭಾಗ ಶುಕ್ರವಾರ ಸಂಜೆ ವಾಹನ ದಟ್ಟಣೆ ಉಂಟಾಗಿತ್ತು. –ಪ್ರಜಾವಾಣಿ ಚಿತ್ರ

ಖಾಸಗಿ ಬಸ್‌ನಲ್ಲಿ ಹೆಚ್ಚಾದ ಪ್ರಯಾಣ ದರ

ನಗರ	ಕನಿಷ್ಠ	ಗರಿಷ್ಠ
ಮಡಿಕೇರಿ	₹650	₹1,499
ಹುಬ್ಬಳ್ಳಿ	₹1,449	₹4,000
ಬೆಳಗಾವಿ	₹1,800	₹4,444
ಮಂಗಳೂರು	₹1,000	₹3,500
ಕಲಬುರ್ಗಿ	₹1,899	₹3,500
ಶಿವಮೊಗ್ಗ	₹750	₹1,999
ಉಡುಪಿ	₹1,499	₹3,500

GOLDEN PALM CANTEEN (BRV), BANGALORE AND ITS EXTENSION CANTEENS (KARNATAKA)
JOB VACANCY

1. Applications are invited for the following posts :-

Name of Post	GPC (BRV) and its Extension Canteens, Bangalore	GPEC Virajpet	GPEC Mysore	GPC Madikeri	GPEC KGF	GPEC Hassan
Accountant Type 'A'	01	-	-	-	-	-
Accountant Type 'C'	02	-	01	02	-	-
Asst Mgr-Cum-Sr Storekeeper	05	01	-	01	-	-
Storekeeper	04	01	-	01	01	-
Billing Clerks-cum-Salesperson	22	03	01	05	02	02
Despatch Rider/ Messenger	01	-	-	-	-	-
Watchman	-	01	-	01	-	-
Total	**35**	**06**	**02**	**10**	**03**	**02**

2. Employment will be for 11 (eleven) months on contract basis. Interested candidates (ESM/Widows/Dependents of ESM) may visit GPC website **www.goldenpalmsc.co.in** for details of eligibility criteria, format for submitting applications and other details. Eligible Wards/ Dependents of ESM will attach necessary birth certificate supported by Board of Secondary School Examination Certificate alongwith copies of Pension Pay Order(PPO) and extract of Discharge Book containing Family Details.

3. Applications to be forwarded to Canteen Officer, Golden Palm Canteen Cell, C/o HQ K&K Sub Area, Cubbon Road, Bangalore-01 with full Bio Data, Resume & Mobile No through registered post or Mail ID : **gpccellkksa@gmail.com** by **10 Nov 2023**. Applications received after **10 Nov 2023** will not be considered.

Sd/- **Colonel**
Canteen Officer
Golden Palm Canteen
Cubbon Road Bangalore - 560001

ಸಾಹಿತ್ಯ ಪರೀಕ್ಷೆ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 2023–24ನೇ ಸಾಲಿನ 'ಕನ್ನಡ ಪ್ರವೇಶ', 'ಕಾವ', 'ಜಾಣ' ಹಾಗೂ 'ರತ್ನ' ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ 31ರವರೆಗೆ ವಿಸ್ತರಿಸಿದೆ.

2023ರ ಡಿಸೆಂಬರ್ ಕೊನೆ ವಾರದಲ್ಲಿ ಪರೀಕ್ಷೆ ನಡೆಯಲಿವೆ. ₹50 ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಪರಿಷತ್ತಿನ ಮಾರಾಟ ಮಳಿಗೆಯಲ್ಲಿ ₹ 25 ಪಾವತಿಸಿ, ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿ ನಮೂನೆ ಪಡೆಯಬಹುದು.

ಪರೀಕ್ಷಾ ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕವೂ ಪಡೆದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 080 26623584 ಅಥವಾ 26612991

ಉದ್ಘಾಟನೆಗೊಂಡ ಅಜ್ಜಿ ಮನೆಯಲ್ಲಿ ಮಹಿಳೆಯೊಬ್ಬರ ಆರೋಗ್ಯವನ್ನು ಲಕ್ಷ್ಮೀ ಹೆಬ್ಬಾಳ್ಕರ್ ವಿಚಾರಿಸಿದರು. ಎಂ.ಪಿ. ಅಹ್ಮದ್, ಅಶರ್ ಓ, ತನಲ್ ದಯಾ ಪುನರ್ವಸತಿ ಟ್ರಸ್ಟ್ ಅಧ್ಯಕ್ಷ ಇದ್ರೀಸ್ ಹಾಗೂ ಮಲಬಾರ್ ಗ್ರೂಪ್‌ನ ಪ್ರತಿನಿಧಿಗಳು ಇದ್ದಾರೆ –ಪ್ರಜಾವಾಣಿ ಚಿತ್ರ

'ನಿರ್ಗತಿಕರ ಆರೈಕೆ ದೇವರ ಸೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿರ್ಗತಿಕರು, ಕುಟುಂಬದಿಂದ ತಿರಸ್ಕರಿಸಲ್ಪಟ್ಟವರಿಗೆ ಪಂಚತಾರಾ ಸೌಲಭ್ಯ ಒದಗಿಸುವುದು ದೇವರಸೇವೆ ಮಾಡಿದಂತೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು.

ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ ಸಂಸ್ಥೆಯಾಗಿರುವ ಮಲಬಾರ್ ಚಾರಿಟಬಲ್ ಟ್ರಸ್ಟ್ ಬನಶಂಕರಿಯ ಹೊಸಕೆರೆಹಳ್ಳಿಯಲ್ಲಿ ನಿರ್ಮಿಸಿರುವ ಅಜ್ಜಿ ಮನೆಯನ್ನು (ಗ್ರ್ಯಾಂಡ್ ಮಾ ಹೋಮ್) ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

'ನಿರ್ಗತಿಕ ಮಹಿಳೆಯರಿಗೆ ವಸತಿ, ವೈದ್ಯಕೀಯ ಸೌಲಭ್ಯ ಕಲ್ಪಿಸುವ ಮೂಲಕ ಸರ್ಕಾರ ಮಾಡಬೇಕಾದ ಕೆಲಸವನ್ನು ಮಲಬಾರ್ ಗ್ರೂಪ್ ಮಾಡುತ್ತಿರುವುದು ಶ್ಲಾಘನೀಯ. ಸಿಎಸ್‌ಆರ್ ಅನುದಾನ ಇದಕ್ಕಿಂತ ಉತ್ತಮವಾಗಿ ಸದ್ಬಳಕೆಯಾಗುವುದಿಲ್ಲ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂ.ಪಿ. ಅಹ್ಮದ್, 'ಈ ಅಜ್ಜಿ ಮನೆಯು ಜೀವನವನ್ನು ಮರು ನಿರ್ಮಾಣ ಮಾಡಿಕೊಳ್ಳಲು ಸಹಕಾರಿಯಾಗುವ ಜತೆಗೆ ಹೊಸ ಭರವಸೆ ಮೂಡಿಸಲಿದೆ. ಮಹಿಳೆಯರ ಸಬಲೀಕರಣ ಮತ್ತು ದುರ್ಬಲ ವರ್ಗದವರನ್ನು ಮೇಲೆತ್ತಲು ಈ ಕ್ರಮ ಕೈಗೊಂಡಿದ್ದೇವೆ. ಹೈದರಾಬಾದ್, ಚೆನ್ನೈನಲ್ಲಿಯೂ ಈ ರೀತಿಯ ಅಜ್ಜಿ ಮನೆ ಆರಂಭಿಸುವ ಗುರಿ ಹೊಂದಿದ್ದೇವೆ. ನಮ್ಮ ಸಮೂಹವು ನಿವ್ವಳ ಲಾಭದ ಶೇ 5 ರಷ್ಟು ಹಣವನ್ನು ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ವಸತಿಯಂತಹ ಸಮಾಜಮುಖಿ ಕಾರ್ಯಗಳಿಗೆ ಬಳಸುತ್ತಿದೆ. ಈವರೆಗೆ ಮಲಬಾರ್ ₹ 212 ಕೋಟಿಯನ್ನು ಸಿಎಸ್‌ಆರ್ ಚಟುವಟಿಕೆಗೆ ವೆಚ್ಚ ಮಾಡಿದ್ದು, ಇದರಿಂದ 44.19 ಲಕ್ಷ ಜನರಿಗೆ ಅನುಕೂಲವಾಗಿದೆ' ಎಂದು ತಿಳಿಸಿದರು.

ಮಲಬಾರ್ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕ ಅಶರ್ ಓ, 'ಈ ಅಜ್ಜಿ ಮನೆಯನ್ನು 14,780 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಾಣ ಮಾಡಲಾಗಿದೆ. ಇದನ್ನು ತನಲ್ ಸ್ವಯಂ ಸೇವಾ ಸಂಸ್ಥೆ ನಿರ್ವಹಣೆ ಮಾಡುತ್ತದೆ. ಏಕಕಾಲಕ್ಕೆ 104 ಮಹಿಳೆಯರಿಗೆ ಆಶ್ರಯ ನೀಡಬಹುದಾಗಿದೆ. ಉಚಿತವಾಗಿ ಆಹಾರ, ವೈದ್ಯಕೀಯ ನೆರವು, ಮಾನಸಿಕ ಮತ್ತು ದೈಹಿಕ ಆರೈಕೆ ಸೌಲಭ್ಯ ಒದಗಿಸಲಾಗುತ್ತದೆ. ಸಿಎಸ್‌ಆರ್ ಅಡಿ 2023–24ನೇ ಸಾಲಿನಲ್ಲಿ ರಾಜ್ಯದಾದ್ಯಂತ 6 ಸಾವಿರಕ್ಕೂ ಅಧಿಕ ಹೆಣ್ಣು ಮಕ್ಕಳಿಗೆ ಒಟ್ಟು ₹ 5.13 ಕೋಟಿ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ' ಎಂದು ಮಾಹಿತಿ ನೀಡಿದರು.



ನಾಗಸಂದ್ರ–ಮಾದಾವಾರ, ಆರ್‌.ವಿ.ರಸ್ತೆ–ಬೊಮ್ಮಸಂದ್ರ ಮಾರ್ಗ ಏಪ್ರಿಲ್‌ಗೆ ಉದ್ಘಾಟನೆ

ಕಾಳೇನಅಗ್ರಹಾರ–ನಾಗವಾರ ಮಾರ್ಗ 2025ರ ಮಾರ್ಚ್‌ಗೆ ಸಂಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ದ ನೇರಳೆ ಮಾರ್ಗದಲ್ಲಿ ಕೆ.ಆರ್‌.ಪುರದಿಂದ ಬೈಯಪ್ಪನಹಳ್ಳಿವರೆಗೆ 2.10 ಕಿ.ಮೀ., ಕೆಂಗೇರಿ– ಚಲ್ಲಘಟ್ಟದವರೆ 2.5 ಕಿ.ಮೀ ವಿಸ್ತರಿತ ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ಸಾಹಿಬಾಬಾದ್‌ನಿಂದ ವರ್ಚುವಲ್ ಮೂಲಕ ಶುಕ್ರವಾರ ಅಧಿಕೃತವಾಗಿ ಉದ್ಘಾಟಿಸಿದರು.

ಬೆಂಗಳೂರಿನಿಂದ ವರ್ಚುವಲ್ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ನಮ್ಮ ಮೆಟ್ರೊ’ದ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಸಹ ಪಾಲ್ಗೊಂಡಿದ್ದರು.

ವಿಸ್ತರಿತ ಕಾಮಗಾರಿ ಮುಗಿದು ಉದ್ಘಾಟನೆಗೆ ಕಾಯಲಾಗುತ್ತಿತ್ತು. ಆದರೆ, ಮೆಟ್ರೊ ಪ್ರಯಾಣಿಕರ ಒತ್ತಡ ಹೆಚ್ಚಿದ ಮೇಲೆ ಅ.9ರಂದು ಉದ್ಘಾ-ಟನೆಯಿಲ್ಲದೇ ಈ ಮಾರ್ಗದಲ್ಲಿ ರೈಲು ಸಂಚಾರ ಆರಂಭಗೊಂಡಿತ್ತು. ಈಗ ಅಧಿಕೃತವಾಗಿ ಉದ್ಘಾಟನೆಗೊಂಡಿದೆ.

ಸಿದ್ದರಾಮಯ್ಯ ಮಾತನಾಡಿ, ‘ಬೆಂಗಳೂರು ವೇಗವಾಗಿ ಬೆಳೆಯುತ್ತಿರುವ ನಗರವಾಗಿದೆ. ‘ನಮ್ಮ ಮೆಟ್ರೊ’ ಸೇವೆ ವಿಸ್ತರಣೆ ಅಗತ್ಯವಿದೆ. ಕೇಂದ್ರ,

‘ನಮ್ಮ ಮೆಟ್ರೊ’ ವಿಸ್ತರಿತ ಮಾರ್ಗದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಇದ್ದರು. –ಪ್ರಜಾವಾಣಿ ಚಿತ್ರ

ರಾಜ್ಯ ಸರ್ಕಾರದ ಸಹಯೋಗದಲ್ಲಿ ಹಂತಹಂತವಾಗಿ ಯೋಜನೆ ವಿಸ್ತರಣೆ ಮಾಡಲಾಗುತ್ತಿದೆ’ ಎಂದು ಹೇಳಿದರು.

‘ಸದ್ಯ ಈಗ ಹಸಿರು ಹಾಗೂ ನೇರಳೆ ಮಾರ್ಗದಲ್ಲಿ ತಡೆರಹಿತ ಸಂಪರ್ಕವಿದೆ. ಮೆಟ್ರೊ ಜಾಲವು ಸದ್ಯ 74 ಕಿ.ಮೀಗೆ ವಿಸ್ತರಣೆಗೊಂಡಿದೆ. ನಿತ್ಯ 7 ಲಕ್ಷಕ್ಕೂ ಅಧಿಕ ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ಮೆಟ್ರೊ ಹಂತ–2 ಯೋಜನೆಗೆ ಸರ್ಕಾರ ₹ 11,583 ಕೋಟಿ ಬಿಡುಗಡೆ ಮಾಡಿದೆ’ ಎಂದು ಮಾಹಿತಿ ನೀಡಿದರು.

‘ನಾಗಸಂದ್ರದಿಂದ ಮಾದವಾರದ-ವರೆಗೆ ಉತ್ತರ ವಿಸ್ತರಣೆ ಮಾರ್ಗ (3.14 ಕಿ.ಮೀ) ಹಾಗೂ ಆರ್‌.ವಿ. ರಸ್ತೆಯಿಂದ ಬೊಮ್ಮಸಂದ್ರದವರೆಗೆ (19.15 ಕಿ.ಮೀ) ಹೊಸ ಮಾರ್ಗ ಏಪ್ರಿಲ್ ವೇಳೆಗೆ ಉದ್ಘಾಟನೆಗೊಳ್ಳಲಿವೆ’ ಎಂದರು.

‘ಕಾಳೇನ ಅಗ್ರಹಾರದಿಂದ ನಾಗ-ವಾರದವರೆಗೆ 21.26 ಕಿ.ಮೀ. ಉದ್ದದ ಹೊಸ ಮಾರ್ಗವನ್ನು ಮಾರ್ಚ್ 2025ರ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ’ ಎಂದು ಹೇಳಿದರು.

‘ಹಂತ–1ರ 42.3 ಕಿ.ಮೀ ಉದ್ದದ ಮಾರ್ಗಕ್ಕೆ ₹14,133 ಕೋಟಿ ವೆಚ್ಚವಾಗಿತ್ತು. ಅದು ನಮ್ಮ ಸರ್ಕಾರದ ಅವಧಿಯಲ್ಲೇ ಉದ್ಘಾಟನೆಗೊಂಡಿತ್ತು. ಆಗ ರಾಜ್ಯ ಸರ್ಕಾರ ₹ 5,630 ಕೋಟಿ ವೆಚ್ಚ ಮಾಡಿತ್ತು’ ಎಂದು ತಿಳಿಸಿದರು.

ಹೊಸ ಯೋಜನೆ ಅನುಮೋದನೆ ಪ್ರಧಾನಿಗೆ ಮನವಿ

ಮೆಟ್ರೊ ವಿಸ್ತರಣೆ ಮಾಡುವಂತೆ ಬೇಡಿಕೆ ಹೆಚ್ಚುತ್ತಿದೆ. 3ನೇ ಹಂತದಲ್ಲಿ 45 ಕಿ.ಮೀ ಮಾರ್ಗವನ್ನು ₹ 15,611 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ರಾಜ್ಯ ಸರ್ಕಾರವು ಡಿಪಿಆರ್ (ವಿಸ್ತೃತ ಯೋಜನಾ ವರದಿ) ಅನ್ನು ಕೇಂದ್ರಕ್ಕೆ ಸಲ್ಲಿಸಲಾಗಿದೆ ಎಂದು ಹೇಳಿದ ಮುಖ್ಯಮಂತ್ರಿ, ಅದಕ್ಕೆ ಶೀಘ್ರ ಅನುಮೋದನೆ ನೀಡಲು ಪ್ರಧಾನಿಯವರನ್ನು ಕೋರಿದರು.

‘ಸರ್ಜಾಪುರದಿಂದ ಹೆಬ್ಬಾಳ ದವರೆಗೆ 37 ಕಿ.ಮೀ ಉದ್ದದ ಹಂತ-3ಎ ಯೋಜನೆಗೆ ಡಿಪಿಆರ್ ತಯಾರಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಹೆಬ್ಬಾಳ ಜಂಕ್ಷನ್: 2026ಕ್ಕೆ ಪೂರ್ಣ

ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಹೆಬ್ಬಾಳ ಜಂಕ್ಷನ್ ಮೂಲಕ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (58 ಕಿ.ಮೀ) ಹಂತ 2ಎ ಮತ್ತು 2ಬಿ ಯೋಜನೆಗೆ ₹ 14,788 ಕೋಟಿ ವೆಚ್ಚವಾಗುತ್ತಿದೆ. ಈ ಕಾಮಗಾರಿಯನ್ನು 2026ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಈ ಯೋಜನೆಗೆ ರಾಜ್ಯ ಸರ್ಕಾರವೇ ಇದುವರೆಗೆ ₹ 4,775 ಕೋಟಿ ಬಿಡುಗಡೆ ಮಾಡಿದೆ. ಈ ಯೋಜನೆ ಪೂರ್ಣಗೊಂಡ ನಂತರ, ಮೆಟ್ರೊ ಜಾಲವು 176 ಕಿ.ಮೀಗೆ ವಿಸ್ತರಣೆ ಆಗಲಿದೆ. ಆಗ ಪ್ರತಿದಿನ ಸುಮಾರು 20 ಲಕ್ಷ ಪ್ರಯಾಣಿಕರು ಸಂಚರಿಸಲಿದ್ದಾರೆ’ ಎಂದು ಮಾಹಿತಿ ನೀಡಿದರು.

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad - 500028.
Corporate Identity Number (CIN) - L13100TG1958GOI001674

Corrigendum No. 8, Dated : 21-10-2023
CONTRACTS DEPARTMENT

NMDC Limited is issuing this press notification regarding the modification (as indicated in Corrigendum No.8 Dated 21-10-2023) in the **scope and eligibility/ qualification requirements** of following live tender ;

Tender Enquiry No. : HO(Contracts)/SBPTD/SP-II/Pkg-I/944, Dated : 07-08-2023.

MSTC Tender Event No. : NMDC/HO/35/23-24/ET/343

Description of work : Design, Engineering, Manufacture, Supply, Erection, Testing and Commissioning of new 7 MTPA Iron ore Screening & Beneficiation Plant - II (SP-II) at Donimalai Complex, Bellary, Karnataka on Turnkey basis.

The detailed **Corrigendum No. 8**, Tender documents and other Corrigendum of above tender can be viewed and / or downloaded from NMDC website **https://nmdcportals.nmdc.co.in/nmdctender,** Central Public Procurement portal **http://www.eprocure.gov.in/epublish/app** and MSTC portal **https://www.mstcecommerce.com/eprochome/nmdc/buyer_login.jsp** till **30-10-2023.**

Executive Director (Works)

INDUS TOWERS LIMITED

ಸಾರ್ವಜನಿಕರಿಗೆ ಎಚ್ಚರಿಕೆ/ನಿರಾಕರಣೆ ಸೂಚನೆ

ಇಂಡಸ್ ಟವರ್ಸ್ ಲಿಮಿಟೆಡ್ (ಇಂಡಸ್) ತನ್ನ ಮೊಬೈಲ್ ಟವರ್‌ಗಳ ಸ್ಥಾಪನೆ ಮತ್ತು ಕಾರ್ಯಾಚರಣೆಯ ಉದ್ದೇಶಗಳಿಗಾಗಿ ಬಾಡಿಗೆಗೆ ಭೂಮಿ/ಛಾವಣಿಯನ್ನು ಪಡೆದುಕೊಳ್ಳುತ್ತದೆ ಎಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ. ಇಂಡಸ್‌ಗೆ ಸೇರದ ಅಥವಾ ಇಂಡಸ್ ನೊಂದಿಗೆ ಯಾವುದೇ ಸಂಪರ್ಕವಿಲ್ಲದ ಕೆಲವು ನಿರ್ಲಜ್ಜ ವ್ಯಕ್ತಿಗಳು ಅಥವಾ ವ್ಯಕ್ತಿಗಳು ಅಥವಾ ಕಂಪನಿಗಳ ಗುಂಪು ಅಮಾಯಕ ಸಾರ್ವಜನಿಕರನ್ನು ಟವರ್‌ಗಳ ಸ್ಥಾಪನೆಗೆ ತಮ್ಮ ಜಮೀನು/ಮೇಲ್ಛಾವಣಿಯನ್ನು ಬಾಡಿಗೆಗೆ ತೆಗೆದುಕೊಳ್ಳುವಂತೆ ಮತ್ತು ಅತಿಯಾದ ಬಾಡಿಗೆ ಮತ್ತು ಭಾರಿ ಭದ್ರತಾ ಠೇವಣಿ ನೀಡುವ ನೆಪದಲ್ಲಿ ಅಮಾಯಕ ಸಾರ್ವಜನಿಕರನ್ನು ವಂಚಿಸುತ್ತಿದ್ದಾರೆ ಇಂಡಸ್ ಹೆಸರಿನಲ್ಲಿ ಸುಳ್ಳು ಭರವಸೆಗಳನ್ನು ನೀಡಿ ಸಾರ್ವಜನಿಕರ ತಮ್ಮ ದುಡಿಮೆಯ ಹಣವನ್ನು ಮೋಸದಿಂದ ಪಡೆದು ಸಾರ್ವಜನಿಕರನ್ನು ದಾರಿ ತಪ್ಪಿಸುತ್ತಿದ್ದಾರೆ ಎಂದು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ ಇಂಡಸ್ ಟವರ್ಸ್ ತಮ್ಮ **ಟವರ್/ ಪೋಲ್‌ಗ ಸ್ಥಾಪನೆಗೆ ಯಾರಿಂದಲೂ ಹಣ ಕೇಳುವುದಿಲ್ಲ. ಅಂತಹ ಸುಳ್ಳು ಹೇಳಿಕೆಗಳು/ಭರವಸೆಗಳನ್ನು ಮಾಡುವಂತಹ ವ್ಯಕ್ತಿಗಳೊಂದಿಗೆ ಯಾರಾದರೂ ವ್ಯವಹರಿಸಿದರೆ, ಅಂತಹ ವ್ಯವಹರಣೆಯನ್ನು ತಮ್ಮ ಸ್ವಂತ ಅಪಾಯ ಮತ್ತು ವೆಚ್ಚದಲ್ಲಿ ವ್ಯವಹರಿಸಬೇಕಾಗುತ್ತದೆ ಮತ್ತು ಇಂತಹ ವ್ಯವಹರಣೆಗೆ, ಇಂಡಸ್ ಕಂಪನಿಯು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ/ ಹೊಣೆಗಾರರಾಗಿರುವುದಿಲ್ಲ.** ಅಂತಹ ಯಾವುದೇ ಸುಳ್ಳು ಹಕ್ಕುಗಳು/ಭರವಸೆಗಳು ಇತ್ಯಾದಿಗಳನ್ನು ಗಮನಕ್ಕೆ ತರಲು ಸಾರ್ವಜನಿಕರು ಇಂಡಸ್ ಅವರನ್ನು ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಲು ವಿನಂತಿಸಲಾಗಿದೆ. ಹಾಗು ಟವರ್‌ಗಳ ಸ್ಥಾಪನೆಗಾಗಿ ತಮ್ಮ ಭೂಮಿ/ಛಾವಣಿಯನ್ನು ಗುತ್ತಿಗೆ/ಬಾಡಿಗೆಗೆ ನೀಡಲು ಆಸಕ್ತಿ ಹೊಂದಿರುವವರು ತಮ್ಮ ವಿನಂತಿಯನ್ನು ನಮ್ಮ ಅಧಿಕೃತ ವೆಬ್ಸೈಟ್ - www.Industowers.com ಗೆ ನೇರವಾಗಿ ಕಳುಹಿಸಬಹುದು.

ಇಂಡಸ್ ಟವರ್ಸ್ ಲಿಮಿಟೆಡ್
ಸಂಖ್ಯೆ 12, ಟವರ್ ಡಿ, 7 ನೇ ಮಹಡಿ,
ಸುಬ್ರಹ್ಮಣ್ಯ ಆರ್ಕೇಡ್, ಬನ್ನೇರುಘಟ್ಟ ರಸ್ತೆ,
ಬೆಂಗಳೂರು 560029
Ph: 080-40803555

ದಸರಾ ಹಬ್ಬದ ಹಾರ್ದಿಕ ಶುಭಾಷಯಗಳು

RmKV ಡಿಸೈನ್ ಸ್ಟುಡಿಯೊದಿಂದ ಮೂರು ನೈಸರ್ಗಿಕವಾಗಿ ಬಣ್ಣಬಣ್ಣದ ರೇಷ್ಮೆ ಸೀರೆಗಳು ನಕ್ಷತ್ರ ಸಂಯೋಜನೆಯು ನಿಮ್ಮನ್ನು ಪರಂಪರೆಯ ರಾಣಿಯಂತೆ ಕಾಣುವಂತೆ ಮಾಡುತ್ತದೆ. ಗೋಲ್ಡನ್ ಝರಿ ದಾರಗಳಲ್ಲಿ ಶ್ರೇಷ್ಠ ಕೊನೆ ಮಾವಿನ ಬುಟ್ಟಾದೊಂದಿಗೆ ಇಂಡಿಗೊ ಕೋನಿಯಾ ಮಾವು ರೇಷ್ಮೆ ಸೀರೆ, ದಿ ಪುನರಾವರ್ತನೆಗಳು ಪೈಥಾನಿ ರೇಷ್ಮೆ ಕಿತ್ತಳೆ ಸೀರೆ ಒಂದರಲ್ಲಿ ಮಾಡಿದ ಪೈಥಾನಿ ಮೋಟಿಫ್‌ಗಳ ಕಾಲಾತೀತ ಏಕೀಕರಣ! ಸಪ್ಪನ್ ಮರ ಮತ್ತು ಮಲ್ಬರಿ ಎಲೆಗಳನ್ನು ಬಳಸಿ ನೈಸರ್ಗಿಕವಾಗಿ ಬಣ್ಣ ಬಳಿಯಲಾದ ಕಲಾತ್ಮಕ ಸೀರೆಗಳ ಈ ಪಾಂಡಿತ್ಯಪೂರ್ಣ ಸಂಯೋಜನೆಯನ್ನು ಪರಂಪರೆಯ ಕಥೆಯನ್ನು ಹೇಳಲು ರಚಿಸಲಾಗಿದೆ. ಅವರು ಅಜ್ಞಾತ ಸಮಯದಲ್ಲಿ ಬದುಕುತ್ತಾರೆ, ಪರಂಪರೆಯ ಕಥೆಯನ್ನು ಅದರ ಧರಿಸಿದವರಿಗೆ ಪಿಸುಗುಟ್ಟುತ್ತಾರೆ.

Heritage collection

Scan Here For An AR Experience

traditions made trendy
RmKV Unique Silks
naturals
Silk sarees coloured by nature, Handcrafted by RmKV.

ಬೆಂಗಳೂರು : ಒರಾಯನ್ ಮಾಲ್, ಡಾ|| ರಾಜ್‌ಕುಮಾರ್ ರೋಡ್, ರಾಜಾಜಿ ನಗರ, ಫೋನ್ : 080 22682005
Toll Free No. : 1800 425 3105 | WhatsApp : 93429 54326 | Shop Online : www.rmkv.com

ನಿಮ್ಮ ಹತ್ತಿರದ Philips Smart light hub ಗೆ ಭೇಟಿ ನೀಡಿ

To know more: www.lighting.philips.co.in

Bengaluru: • Yatarayanapura, 9008302595 • Basavanagudi, 9448073200 • Jayanagar, 9900044811 • Sarjapur Road, 9900044811 • Koramangala, 9845037524 Chickpet, 8904704006 • Whitefield, 8431524072 • Rajajinagar, 9845535374 • Electronic City, 9886033866 • Kanakpura Main Road, 9880448537 • Sahakar Nagar, 8861814844 • Kalyan Nagar, 8861814844 • Nyanappanahalli, 9845538756 / 8884511498 / 8043753148 • Doddakallasandra, 8722204874 / 9606484234 • TC Palya Main Road, 9844944662 / 9606484234 • Infantry Road, 9731099336 / 9606484234 • Near IKEA, Nagasandra, 8861814844 **Mysore** • Panchavati Circle, Kalidasa Road-V V Mohalla, 9035515353 **Hubli:** • Shiva Ganga Complex, Ground Floor, Pendar Galli, New Hubli, Near Noorani Masjid, Bengaluru - 580020, 9886872289 **Mangalore** • Ground Floor, 2-7-439/14, 2-7-439/15, Pushpa, Bejai Kapikad, Katlerigudda Bejai, 9980185609 **Belgaum:** • Bogarves Circle,, Kirloskar Road, 9663760105

9/2023 -purplefocus

ಹೆಚ್ಚುವರಿಯಾಗಿ 15% ವರೆಗೆ ಕ್ಯಾಶ್‌ಬ್ಯಾಕ್^ — ICICI Bank CREDIT AND DEBIT CARD** | HDFC BANK CREDIT AND DEBIT CARD** | YES BANK CREDIT CARD | Bank of Baroda CREDIT CARD | FEDERAL BANK CREDIT CARD | DBS

1 EMI ಕಡಿತ — BAJAJ FINSERV EMI NETWORK | HDB FINANCIAL SERVICES

₹1500 ವರೆಗೆ ಕ್ಯಾಶ್‌ಬ್ಯಾಕ್ — IDFC FIRST Bank

*ಷರತ್ತು ಮತ್ತು ನಿಯಮಗಳು ಅನ್ವಯ. ಸೀಮಿತ ಅವಧಿಯ ಕೊಡುಗೆ, ಸ್ಟಾಕ್ ತೀರುವ ವರೆಗೆ ಇರುತ್ತದೆ. ಕೊಡುಗೆ ರಿಟೇಲ್ ಔಟ್‌ಲೆಟ್‌ಗಳಲ್ಲಿ ಆಯ್ದ ಮಾಡೆಲ್‌ಗಳಿಗೆ ಮಾತ್ರ ಅನ್ವಯಿಸುತ್ತದೆ.
^ಕ್ಯಾಶ್‌ಬ್ಯಾಕ್ ಮೌಲ್ಯವು ವಸ್ತುವಿನ ಮೌಲ್ಯದ ಆಧಾರ ಮೇಲೆ ಬದಲಾಗಬಹುದು ಮತ್ತು ಗರಿಷ್ಠ ಕ್ಯಾಶ್‌ಬ್ಯಾಕ್ ₹ 3000. ⁺ಹಣಕಾಸು ನೆರವಿನ ಷರತ್ತು ಮತ್ತು ನಿಯಮಗಳು ಅನ್ವಯಿಸುತ್ತವೆ. **ರೂ. 1000/– ವರೆಗಿನ ನಾನ್–ಇಎಮ್‌ಐ ವ್ಯವಹಾರಗಳಿಗೆ ಮಾತ್ರ.

Authorized Distributor: R S Distributor 080-41124381; **For Trade enquiries:** 9902622722/9060123451 **Available at all leading retail outlets: Jayanagar:** Arvind – 9448988092, Devi International - 9916944265; Kitchen Mart - 8861929966 **Chikpet:** Jain wire emporium - 9980037182; Paramjyothi Ele – 8310334850; Pagariya Ent – 9535378544, Shiva Elect – 9743066660, Ashok Combines – 802226659; Paras Appliances – 9739363600; **V V Puram:** Griha Vaibhav 9341259423; **Electronic City:** Baron Ele 9242204839, **KR puram:** SRM Ele- 9845445748; Pooja Electronics– 9353432376; **Hanumanthanagar:** Meenakshi Electricals – 9844798577, Pankaj Electronics – **Peenya:** Ace Comm - 9743335557; **Sunkadakatte:** Kundan Electroniks – 9448040338; **Rajaji Nagar:** R S Mart – 9900958652; Prakash Elec - 98459 49116; **Dasarahalli:** Pawan Distributors – 9980650890; **Nagarabhavi:** Crystal Inc. – 9972068924, Hot Touch Home Appl - 99002 65745; **Chandra layout:** Pavan Kitchen World – 8618028319; **Yeshwantpura:** Mbhawarlals- 74112 96609; **Malleshwaram:** Devdarshan Home Appl - 89717 17182; **Tumkur:** Darshan Home Appl – 9880360124, Jaya Ganga Home - 80507 59981; **Bilekahalli:** Shree Pooja home Appl – 8088380133; **Bommanahalli:** Atchaya Electronics – 8095585500; **HRBR layout:** Bhavani Home Appl– 9036438263; Sampurna Ent: 7022973015 **Hormavu:** Mamatha Home Appl – 8880050050; 9353432376. **Also available online:** on amazon | Flipkart | eurekaforbes.com | **Available at all leading Large Format chains** – Reliance digital | croma | Pai International | Girias | Prakash Retail Pai International | Girias | Adishwar | Unilet | Prakash retail | Lulu Hypermarket | Upcountry

ಅಧಿಸೂಚನೆ ನಿರೀಕ್ಷೆಯಲ್ಲಿ 4 ಲಕ್ಷಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು; ನವೆಂಬರ್‌ನಲ್ಲಿ ಪ್ರಕ್ರಿಯೆ ಮುಗಿಸಲು ಸಿದ್ಧತೆ

ಕೆಎಎಸ್: ಕೆಪಿಎಸ್‌ಸಿಗೆ ಶೀಘ್ರ ಪ್ರಸ್ತಾವ

• ರಾಜೇಶ್ ರೈ ಚಟ್ಲ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಗೆಜೆಟೆಡ್ ಪ್ರೊಬೇಷನರಿ (ಕೆಎಎಸ್) ಗ್ರೂಪ್ 'ಎ' ಮತ್ತು 'ಬಿ' ವೃಂದದ 300ಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯ ಸರ್ಕಾರ ಪ್ರಕ್ರಿಯೆ ತ್ವರಿತಗೊಳಿಸಿದೆ.

'ಆರ್ಥಿಕ ಇಲಾಖೆಯಿಂದ ಮಂಜೂರಾತಿ ಪಡೆದು, ಮೀಸಲಾತಿ (ರೋಸ್ಟರ್) ಅಳವಡಿಸಿ ಖಾಲಿ ಹುದ್ದೆಗಳ ಮಾಹಿತಿ ನೀಡುವಂತೆ ಎಲ್ಲ ಇಲಾಖೆಗಳಿಗೆ ಈಗಾಗಲೇ ಸೂಚಿಸಲಾಗಿದೆ. ಕೆಲವು ಇಲಾಖೆಗಳಿಂದ ಮಾಹಿತಿ ಬಂದಿದೆ. ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಆದಷ್ಟು ಶೀಘ್ರದಲ್ಲಿ ಕೆಪಿಎಸ್‌ಸಿಗೆ ಪ್ರಸ್ತಾವ ಕಳುಹಿಸಲು ಉದ್ದೇಶಿಸಲಾಗಿದೆ. ನವೆಂಬರ್ ತಿಂಗಳ ಒಳಗೆಯೇ ಈ ಪ್ರಕ್ರಿಯೆ ಮುಗಿಸಲು ಸಿದ್ಧತೆ ನಡೆದಿದೆ' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಗ್ರೂಪ್ 'ಎ' ಮತ್ತು 'ಬಿ' ವೃಂದದ 500ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ನಾಲ್ಕು ಲಕ್ಷಕ್ಕೂ ಹೆಚ್ಚು ಗೆಜೆಟೆಡ್ ಪ್ರೊಬೇಷನರಿ ಹುದ್ದೆ ಆಕಾಂಕ್ಷಿಗಳು ನೇಮಕಾತಿ ಅಧಿಸೂಚನೆಯ ನಿರೀಕ್ಷೆಯಲ್ಲಿದ್ದಾರೆ.

2017ನೇ ಸಾಲಿನಲ್ಲಿ ಕೆಎಎಸ್ ಹುದ್ದೆಗಳ ಭರ್ತಿಗೆ ಕೊನೆಯದಾಗಿ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಆ ಸಾಲಿನಲ್ಲಿ ಬಹುತೇಕ ಗ್ರೂಪ್ 'ಬಿ' ಹುದ್ದೆಗಳು ಇದ್ದವು. ಆ ಸಾಲಿನ ನೇಮಕಾತಿ ಪ್ರಕ್ರಿಯೆ ಸುದೀರ್ಘ 5 ವರ್ಷ ನಡೆದಿತ್ತು. ಅಲ್ಲದೆ, ಅರ್ಜಿ ಸಲ್ಲಿಸಿದವರಲ್ಲಿ ಶೇ 50ರಷ್ಟು ಅಭ್ಯರ್ಥಿಗಳು ಕೋವಿಡ್ ಕಾರಣದಿಂದ ಪರೀಕ್ಷೆಯಿಂದ ವಂಚಿತರಾಗಿದ್ದರು. ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಆಹಾರ ಇಲಾಖೆಯಲ್ಲಿ ಸಹಾಯಕ ನಿರ್ದೇಶಕ ಹುದ್ದೆಗಳಿಗೆ 2014ರ ಬಳಿಕ ನೇಮಕಾತಿಯೇ ನಡೆದಿಲ್ಲ.

2020–21ನೇ ಸಾಲಿನ ನೇಮಕಾತಿಗೆ ಮಾಹಿತಿ ನೀಡುವಂತೆ ಎಲ್ಲ ಇಲಾಖೆಗಳಿಗೆ 2020ರ ನ. 23, ಡಿ.30, 2021ರ ಫೆ. 17, ಸೆ. 14ರಂದು ಡಿಪಿಎಆರ್ ಸರಣಿ ಪತ್ರಗಳನ್ನು ಬರೆದಿತ್ತು. ಒಂದೆರಡು ಇಲಾಖೆ ಹೊರತುಪಡಿಸಿದರೆ, ಇತರ ಇಲಾಖೆಗಳು ಮಾಹಿತಿಯನ್ನೇ ನೀಡಿರಲಿಲ್ಲ ಎಂದು ಡಿಪಿಎಆರ್ ಮೂಲಗಳು ತಿಳಿಸಿವೆ.

ಕೆಎಎಸ್ ಖಾಲಿ ಹುದ್ದೆಗಳ ಪಟ್ಟಿಯನ್ನು ಪ್ರತಿವರ್ಷದ ಕೊನೆಯಲ್ಲಿ ಪ್ರಕಟಿಸಿ, ಅಧಿಸೂಚನೆ ಹೊರಡಿಸಿದ ಒಂದು ವರ್ಷದೊಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ನೇಮಕಾತಿ ನಿಯಮದಲ್ಲಿದೆ. ಆದರೆ, ಕಳೆದೊಂದು ದಶಕದಲ್ಲಿ ನಾಲ್ಕು ಬಾರಿ 2011 (362 ಹುದ್ದೆಗಳು), 2014 (464 ಹುದ್ದೆಗಳು), 2015 (428 ಹುದ್ದೆಗಳು), 2017 (106 ಹುದ್ದೆಗಳು) ಮಾತ್ರ ನೇಮಕಾತಿ ನಡೆದಿದೆ. ಆದರಲ್ಲೂ 2011ರ ಸಾಲಿನ ನೇಮಕಾತಿ ಹೈಕೋರ್ಟ್, ಸುಪ್ರೀಂಕೋರ್ಟ್ ಮೆಟ್ಟಿಲೇರಿ, ರಾಜ್ಯ ಸರ್ಕಾರ ವಿಶೇಷ ನೇಮಕಾತಿ ನಿಯಮ ರೂಪಿಸಿ, ಆಯ್ಕೆ ಆದವರನ್ನು 2020ರಲ್ಲಿ ನೇಮಕ ಮಾಡಿಕೊಂಡಿದೆ. ಈ ಸಾಲಿನಲ್ಲಿ ಮತ್ತು 2014, 2015ನೇ ಸಾಲಿನ ನೇಮಕಾತಿಯಲ್ಲಿ ಆಯ್ಕೆ ಆದವರಲ್ಲಿ 180ಕ್ಕೂ ಹೆಚ್ಚು ಅಭ್ಯರ್ಥಿಗಳು ಹುದ್ದೆಗೆ ಸೇರಿಲ್ಲ.

ಕೆಎಎಸ್ ಹುದ್ದೆ ಭರ್ತಿಗೆ ಸಂಬಂಧಿಸಿದಂತೆ 2023ರ ಫೆ 27ರಂದು ಡಿಪಿಎಆರ್ ಪ್ರಧಾನ ಕಾರ್ಯದರ್ಶಿಗೆ ಕೆಪಿಎಸ್‌ಸಿ ಕಾರ್ಯದರ್ಶಿಯಾಗಿದ್ದ ವಿಕಾಸ್ ಕಿಶೋರ್ ಸುರಳ್ಕರ್ ಪತ್ರ ಬರೆದಿದ್ದರು. 'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನೇಮಕಾತಿಯನ್ನು ಪ್ರತಿವರ್ಷ ನಡೆಸಲು ಸಾಧ್ಯವಾಗದೇ ಇರುವುದರಿಂದ ಕೆಪಿಎಸ್‌ಸಿ ಮಾತ್ರವಲ್ಲದೆ ಸರ್ಕಾರ ಕೂಡಾ ಅಪವಾದಕ್ಕೀಡಾಗಿದೆ. ಅದನ್ನು ತಪ್ಪಿಸಲು, ಪ್ರತಿ ವರ್ಷ ನೇಮಕಾತಿ ನಡೆಸಲು ಎಲ್ಲ ಇಲಾಖೆಗಳಲ್ಲಿ ಮುಂದಿನ 5 ವರ್ಷಗಳ ಅವಧಿಯ ಖಾಲಿ ಹುದ್ದೆ ಮಾಹಿತಿ ನೀಡಿದರೆ, ಯುಪಿಎಸ್‌ಸಿ ಮಾದರಿಯಲ್ಲಿ ಪ್ರತಿ ವರ್ಷ ಪ್ರಕ್ರಿಯೆ ನಡೆಸಲು ಕೆಪಿಎಸ್‌ಸಿ ಸಿದ್ಧವಿದೆ' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದರು. ಸುರಳ್ಕರ್ ಅವರನ್ನು ಇತ್ತೀಚೆಗೆ ವರ್ಗಾವಣೆ ಮಾಡಿ ಕೆ.ಎಸ್. ಲತಾ ಕುಮಾರಿ ಅವರನ್ನು ಕೆಪಿಎಸ್‌ಸಿ ಕಾರ್ಯದರ್ಶಿಯಾಗಿ ನಿಯೋಜಿಸಲಾಗಿದೆ.

ವಯೋಮಿತಿ ಸಡಿಲಿಸಿ ಅವಕಾಶ?

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ 2011ರ ನಂತರ ನಾಲ್ಕು ಬಾರಿ ಮಾತ್ರ ನೇಮಕಾತಿ ನಡೆದಿದೆ. 2017ರ ನಂತರ ನೇಮಕಾತಿಯೇ ಆಗಿಲ್ಲ. ಕಾಲಕಾಲಕ್ಕೆ ನೇಮಕಾತಿ ನಡೆಯದ ಕಾರಣ ಮತ್ತು ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬವಾಗುವ ಕಾರಣ ಅನೇಕ ಹುದ್ದೆ ಆಕಾಂಕ್ಷಿಗಳು ನೇಮಕಾತಿಗೆ ನಿಗದಿಪಡಿಸಿದ ವಯೋಮಿತಿ ಸಡಿಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದಾರೆ. ಮನವಿಗೆ ಸ್ಪಂದಿಸಿರುವ ಮುಖ್ಯಮಂತ್ರಿ, ವಯೋಮಿತಿ ಸಡಿಲಿಸಲು ಹಾಗೂ ಪರೀಕ್ಷೆಗೆ ಒಂದು ಹೆಚ್ಚುವರಿ ಅವಕಾಶ ನೀಡಲು ಕ್ರಮ ತೆಗೆದುಕೊಳ್ಳುವಂತೆ ಟಿಪ್ಪಣಿ ಮೂಲಕ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಹಳೆ ಮೀಸಲಾತಿ ಅನ್ವಯ

ಹಿಂದಿನ ಬಿಜೆಪಿ ಸರ್ಕಾರ ಮೀಸಲಾತಿಗೆ ಸಂಬಂಧಿಸಿದಂತೆ 2023ರ ಮಾರ್ಚ್ 27ರಂದು ಹೊರಡಿಸಿದ್ದ ಆದೇಶದ (ಮುಸ್ಲಿಮರ ಶೇ 4 ಮೀಸಲಾತಿ ರದ್ದು, ಲಿಂಗಾಯತ, ಒಕ್ಕಲಿಗರ ಮೀಸಲಾತಿ ಹೆಚ್ಚಳ) ಅನುಷ್ಠಾನ ಕುರಿತ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ಮುಂದಿನ ಆದೇಶದವರೆಗೆ ಈ ಹೊಸ ಆದೇಶವನ್ನು ಜಾರಿಗೊಳಿಸಬಾರದೆಂದು ಸುಪ್ರೀಂಕೋರ್ಟ್ ಮಧ್ಯಂತರ ಆದೇಶ ನೀಡಿರುವುದರಿಂದ, ಅಂತಿಮ ಆದೇಶಕ್ಕೆ ಒಳಪಟ್ಟು 2002ರ ಮಾರ್ಚ್ 30ರ ಆದೇಶದಂತೆ ಹಿಂದುಳಿದ ವರ್ಗಗಳಿಗೆ ನೇಮಕಾತಿಯಲ್ಲಿ ಮೀಸಲಾತಿ ಕಲ್ಪಿಸಿ ರೋಸ್ಟರ್ ವಿಧಾನ ಅನ್ವಯಿಸಿಕೊಂಡು ಕೆಎಎಸ್ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವಂತೆ ಡಿಪಿಎಆರ್‌ಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಿಳಿಸಿದೆ.

2011ರ ನಂತರದ ಕೆಎಎಸ್ ಹುದ್ದೆಗಳ ಭರ್ತಿ ಮಾಹಿತಿ

ಅಧಿಸೂಚನೆ	ಹುದ್ದೆಗಳು	ಪರೀಕ್ಷೆ	ಫಲಿತಾಂಶ ಪ್ರಕಟ
2011	362	2012	2013
2014	464	2015 ಸೆ.	2017 ಏಪ್ರಿಲ್
2015	428	2017 ಡಿ.	2019 ಡಿಸೆಂಬರ್
2017	106	2021 ಜ.	2022 ಆಗಸ್ಟ್

ಗಗನಯಾನ: ಮೊದಲ ಪರೀಕ್ಷಾ ಉಡಾವಣೆ ಇಂದು

ಒಂದನೇ ಪುಟದಿಂದ

ಶನಿವಾರ ಬೆಳಿಗ್ಗೆ ಉಡಾವಣೆಗೆ ಕಮಾಂಡ್ ನೀಡಿದ 6 ಸೆಕೆಂಡ್‌ಗಳಲ್ಲಿ ಉಡಾವಣಾ ವೇದಿಕೆಯಲ್ಲಿ ಜಿಗಿಯಲು ಸ್ಥಿರತೆ ಕಾಯ್ದುಕೊಂಡು, ನಂತರ ಮೇಲಕ್ಕೆ ಜಿಗಿಯುತ್ತದೆ. 61 ಸೆಕೆಂಡ್‌ಗಳಲ್ಲಿ 12 ಕಿ.ಮೀ ಕ್ರಮಿಸುತ್ತದೆ. ಆಗ ಕ್ರೂ ಮಾಡ್ಯೂಲ್ ಮೇಲಿರುವ ಮತ್ತೊಂದು ರಾಕೆಟ್ ಕ್ರೂ ಮಾಡ್ಯುಲ್ ಅನ್ನು ಅತ್ಯಂತ ವೇಗದಲ್ಲಿ ಮೂಲ ರಾಕೆಟ್‌ನಿಂದ (ಪಿಎಸ್‌ಎಲ್‌ವಿ) ಬೇರ್ಪಡಿಸಿ ಮೇಲಕ್ಕೆ ಸೆಳೆದು ಒಯ್ಯುತ್ತದೆ. ಅಂದರೆ 17 ನೇ ಕಿ.ಮೀ.ಗೆ ಒಯ್ಯುತದೆ. ಅಲ್ಲಿಂದ ಕ್ರೂ ಮಾಡ್ಯೂಲ್ ಬೀಳಲಾರಂಭಿಸುತ್ತದೆ. ಆಗ ಅದಕ್ಕೆ ಅಳವಡಿಸಿರುವ ಪ್ಯಾರಾಚೂಟ್‌ಗಳು ತೆರೆದುಕೊಳ್ಳುತ್ತವೆ ಎಂದು ವಿವರಿಸಿದರು.

ಪ್ಯಾರಾಚೂಟ್‌ಗಳು ಸುರಕ್ಷಿತವಾಗಿ ಕ್ರೂ ಮಾಡ್ಯೂಲ್ ಅನ್ನು ಬಂಗಾಳ ಕೊಲ್ಲಿಯ ನೀರಿನ ಮೇಲಿಳಿಸುತ್ತವೆ. ಇದೊಂದು ಮಹತ್ವದ ಪರೀಕ್ಷೆ. ಒಟ್ಟು 9 ನಿಮಿಷಗಳಲ್ಲಿ ಎಲ್ಲಾ ಪ್ರಕ್ರಿಯೆ ಮುಗಿಯುತ್ತದೆ. ಮಾನವ ಸಹಿತ ಗಗನಯಾನದಲ್ಲಿ ಗಗನಯಾನಿಗಳ ಸುರಕ್ಷತೆ ಅತ್ಯಂತ ಮುಖ್ಯ ಎಂದು ಅವರು ವಿವರಿಸಿದರು.

ಪ್ರವೇಶ ಪತ್ರದಲ್ಲಿ ಗೊಂದಲ; ಅಭ್ಯರ್ಥಿಗಳಿಗೆ ಸಂಕಷ್ಟ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ: ಎಸ್‌ಡಿಎ, ಕಿರಿಯ ಸಹಾಯಕ ಹುದ್ದೆ ನೇಮಕಾತಿಗೆ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಧಾರವಾಡ: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ವಿವಿಧ ನಿಗಮಗಳ ಕಿರಿಯ ಸಹಾಯಕ ಮತ್ತು ಎಸ್‌ಡಿಎ ಹುದ್ದೆಗಳ ನೇಮಕಾತಿಗೆ ಒಂದೇ ದಿನ ಒಂದೇ ಸಮಯಕ್ಕೆ ಪರೀಕ್ಷೆ ನಿಗದಿಪಡಿಸಿರುವುದು, ಕೆಲ ಅಭ್ಯರ್ಥಿಗಳಿಗೆ ಎರಡು ಬೇರೆ ಬೇರೆ ಜಿಲ್ಲೆಗಳಲ್ಲಿ ಪರೀಕ್ಷಾ ಕೇಂದ್ರ ನಿಗದಿಪಡಿಸಿರುವುದು ಗೊಂದಲ ಸೃಷ್ಟಿಸಿದೆ.

ಅಕ್ಟೋಬರ್ 28 ಮತ್ತು 29ಕ್ಕೆ ಪರೀಕ್ಷೆ ನಿಗದಿಯಾಗಿದೆ. ಅಭ್ಯರ್ಥಿಗಳು ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಕೆಲವರಿಗೆ ಒಂದು ಹುದ್ದೆ ಪರೀಕ್ಷೆಗೆ ಒಂದು ಜಿಲ್ಲೆ, ಮತ್ತೊಂದು ಹುದ್ದೆ ಪರೀಕ್ಷೆಗೆ ಬೇರೊಂದು ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರ ನಿಗದಿಪಡಿಸಲಾಗಿದೆ. ಇನ್ನು ಕೆಲವರಿಗೆ ಎರಡೂ ಹುದ್ದೆಗಳಿಗೆ ಒಂದೇ ಜಿಲ್ಲೆಯಲ್ಲಿ ಎರಡು ಪರೀಕ್ಷಾ ಕೇಂದ್ರ ನಿಗದಿಪಡಿಸಲಾಗಿದೆ.

'ಆಹಾರ ಇಲಾಖೆಯ (ಎಫ್‌ಸಿಎಸ್) ಕಿರಿಯ ಸಹಾಯಕ ಹುದ್ದೆ ಪರೀಕ್ಷೆಗೆ ದಾವಣಗೆರೆ ಎವಿಕೆ ಕಾಲೇಜು ಪರೀಕ್ಷಾ ಕೇಂದ್ರ ಹಾಗೂ ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ (ಸಿಡಬ್ಲ್ಯುಬಿ) ಎಸ್‌ಡಿಎ ಹುದ್ದೆಗೆ ಚಿತ್ರದುರ್ಗದ ವಿದ್ಯಾವಿಕಾಸ ಸಂಸ್ಥೆ ಪರೀಕ್ಷಾ ಕೇಂದ್ರ ಎಂದು ಪ್ರವೇಶ ಪತ್ರದಲ್ಲಿ ನಮೂದಿಸಲಾಗಿದೆ. ಎರಡೂ ಪರೀಕ್ಷೆಗಳು ಅ.29ರಂದು ಇವೆ. ಒಂದೇ ದಿನ ಒಂದೇ ಸಮಯಕ್ಕೆ ನಡೆಯಲಿರುವ ಈ ಪರೀಕ್ಷೆಗಳಿಗೆ ಒಬ್ಬ ಅಭ್ಯರ್ಥಿ ಎರಡು ಜಿಲ್ಲೆಗಳಲ್ಲಿ ಹೇಗೆ ಹಾಜರಾಗಲು ಸಾಧ್ಯ? ಈ ಗೊಂದಲವನ್ನು ಕೆಇಎ ಪರಿಹರಿಸಬೇಕು' ಎಂದು ಅಭ್ಯರ್ಥಿಯೊಬ್ಬರು ಒತ್ತಾಯಿಸಿದ್ದಾರೆ.

'ಎರಡೂ ಹುದ್ದೆಗಳಿಗೆ ಒಂದೇ ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರ ಇದೆ. ಆದರೆ, ಎರಡೂ ಹುದ್ದೆಗಳ ನೇಮಕಾತಿ ಪರೀಕ್ಷೆ ಒಂದೇ ದಿನ, ಒಂದೇ ಸಮಯಕ್ಕೆ ಇದೆ. ಹೀಗಾಗಿ, ಸಮಸ್ಯೆಯನ್ನು ಕೆಇಎ ಪರಿಹರಿಸಬೇಕು' ಎಂದು ಹೇಳಿದರು.

ಕೆಲವು ಪ್ರವೇಶ ಪತ್ರಗಳಲ್ಲಿ ಪರೀಕ್ಷಾ ಕೇಂದ್ರ ನಮೂದಾಗಿಲ್ಲ. ಕೆಲವರಿಗೆ ಬೆಳಿಗ್ಗೆ ಪತ್ರಿಕೆಗೆ ಒಂದು ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರ, ಮಧ್ಯಾಹ್ನದ ಪರೀಕ್ಷೆಗೆ ಮತ್ತೊಂದು ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರ ನಿಗದಿಪಡಿಸಲಾಗಿದೆ ಎಂಬ ದೂರುಗಳು ಇವೆ.

ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ, ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ನೇಮಕಾತಿಗೆ ಕೆಇಎ ಪರೀಕ್ಷೆ ನಡೆಸುತ್ತಿದೆ. ಪರೀಕ್ಷೆಗೆ ಇನ್ನು ವಾರವಷ್ಟೇ ಬಾಕಿ ಇದ್ದು, ಪ್ರವೇಶ ಪತ್ರಗಳಲ್ಲಿನ ಸಮಸ್ಯೆಗಳನ್ನು ಇಲಾಖೆ ಸರಿಪಡಿಸಬೇಕು ಎಂದು ಅಭ್ಯರ್ಥಿಗಳ ಒಕ್ಕೊರಲ ಒತ್ತಾಯ.

3 ಪರೀಕ್ಷೆ ಒಂದೇ ದಿನ; ಅಭ್ಯರ್ಥಿಗಳಿಗೆ ಗಲಿಬಿಲಿ

ಬಾಗಲಕೋಟೆ: ರಾಜ್ಯದಲ್ಲಿ ಒಂದೇ ದಿನ ಮೂರು ಪರೀಕ್ಷೆಗಳು ಇರುವ ಕಾರಣ ಪರೀಕ್ಷಾರ್ಥಿಗಳಲ್ಲಿ ಗೊಂದಲ ಮೂಡಿದೆ. ಬೆಂಗಳೂರಿನ ನೇಮಕಾತಿ ಮತ್ತು ತರಬೇತಿ ಕೇಂದ್ರದಿಂದ ಕಲ್ಯಾಣ ಕರ್ನಾಟಕ ಭಾಗದ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳಿಗೆ, ಕರ್ನಾಟಕ ಲೋಕಸೇವಾ ಆಯೋಗವು ಗ್ರೂಪ್ 'ಸಿ' ಹುದ್ದೆಗಳಿಗೆ ಹಾಗೂ ಬ್ಯಾಂಕ್ ಪ್ರೊಬೇಷನರ್ ಹುದ್ದೆಗಳಿಗೆ ನವೆಂಬರ್ 5ರಂದು ಪರೀಕ್ಷೆಗಳು ನಿಗದಿಯಾಗಿವೆ.

ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಹಾಗೂ ಲೆಕ್ಕಪತ್ರ ಇಲಾಖೆಯ ಲೆಕ್ಕ ಸಹಾಯಕರ ಹುದ್ದೆಗಳು ಮತ್ತು ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿನ ಸಹಕಾರ ಸಂಘಗಳ ನಿರೀಕ್ಷಕರ ಹುದ್ದೆಗಳಿಗೆ ಸಾಮಾನ್ಯ ಜ್ಞಾನ ಪರೀಕ್ಷೆಯನ್ನು ನವೆಂಬರ್ 5ರಂದು ನಡೆಸುತ್ತಿದೆ.

'ಒಂದೇ ದಿನ ಮೂರು ಪರೀಕ್ಷೆಗಳು ನಡೆಯುತ್ತಿದ್ದು, ಯಾವುದಕ್ಕೆ ಹಾಜರಾಗಬೇಕು ಎಂಬುದು ತಿಳಿಯದಾಗಿದೆ. ಒಂದೊಂದು ಹುದ್ದೆಗೆ ವರ್ಷಗಟ್ಟಲೇ ಸಿದ್ಧತೆ ನಡೆಸಿರುತ್ತೇವೆ. ಹೀಗೆ ಒಂದೇ ಬಾರಿ ಪರೀಕ್ಷೆ ನಡೆಸುವುದರಿಂದ ಅವಕಾಶದಿಂದ ವಂಚಿತರಾಗುತ್ತೇವೆ. ಸಂಬಂಧಪಟ್ಟವರು ಪರೀಕ್ಷಾ ದಿನಾಂಕಗಳನ್ನು ಬದಲಿಸಿದರೆ ಅನುಕೂಲವಾಗುವುದು' ಎಂದು ಪರೀಕ್ಷಾರ್ಥಿಯೊಬ್ಬರು ತಿಳಿಸಿದರು.

'ಒಂದೇ ಕಡೆ ಪರೀಕ್ಷೆ ಬರೆಯಿರಿ'

ಎರಡು ಬೇರೆ ಬೇರೆ ಜಿಲ್ಲೆಯ ಅಥವಾ ಒಂದಕ್ಕಿಂತ ಹೆಚ್ಚು ಪರೀಕ್ಷಾ ಕೇಂದ್ರಗಳ ಹೆಸರು ಪ್ರವೇಶ ಪತ್ರದಲ್ಲಿ ನಮೂದಾಗಿದ್ದ ಅಭ್ಯರ್ಥಿಗಳು ಯಾವುದಾದರೂ ಒಂದು ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಬಹುದು. ಎರಡೂ ಪ್ರವೇಶ ಪತ್ರಗಳನ್ನು ಕೊಠಡಿ ಮೇಲ್ವಿಚಾರಕರಿಗೆ ನೀಡಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಲಂಚ ಪಡೆದ ಬೆಳಗಾವಿ ಡಿಡಿಪಿಐ ಲೋಕಾಯುಕ್ತ ಬಲೆಗೆ

ಬೆಳಗಾವಿ: ಶಾಲೆ ಪರವಾನಗಿ ನವೀಕರಣಕ್ಕೆ ₹40 ಸಾವಿರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಬೆಳಗಾವಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ (ಡಿಡಿಪಿಐ) ಉಪನಿರ್ದೇಶಕ ಬಸವರಾಜ ನಾಲತವಾಡ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ಚನ್ನಮ್ಮನ ಕಿತ್ತೂರು ತಾಲ್ಲೂಕಿನ ತುರುಮುರಿ ಗ್ರಾಮದ ಬಸವೇಶ್ವರ ಶಿಕ್ಷಣ ಸಂಸ್ಥೆಯ ಶಾಲೆ ಪರವಾನಗಿ ನವೀಕರಣಕ್ಕೆ ಬಸವರಾಜ ನಾಲತವಾಡ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಸಂಸ್ಥೆಯ ಮುಖ್ಯಸ್ಥ ಅರ್ಜುನ ಕುರಿ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಅರ್ಜುನ ಕುರಿ ಅವರಿಂದ ಶುಕ್ರವಾರ ಲಂಚ ಪಡೆಯುತ್ತಿದ್ದ ವೇಳೆ ಕಾರ್ಯಾಚರಣೆ ನಡೆಸಲಾಯಿತು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಬೆಳಗಾವಿ ಡಿಡಿಪಿಐ ಕುರ್ಚಿಗಾಗಿ ಎ.ಬಿ.ಪುಂಡಲೀಕ ಹಾಗೂ ಬಸವರಾಜ ನಾಲತವಾಡ ಮಧ್ಯೆ ತಿಂಗಳ ಹಿಂದೆ ಜಿದ್ದಾಜಿದ್ದಿ ಇತ್ತು. ಒಂದೂವರೆ ವರ್ಷದಿಂದ ಡಿಡಿಪಿಐ ಆಗಿದ್ದ ನಾಲತವಾಡ ಅವರನ್ನು, ಹೊಸ ಸರ್ಕಾರ ಬಂದ ಮೇಲೆ ವರ್ಗಾವಣೆ ಮಾಡಲಾಗಿತ್ತು. ಆದರೆ, ಯಾವುದೇ ಹುದ್ದೆ ತೋರಿಸಿರಲಿಲ್ಲ. ಅವರ ಜಾಗಕ್ಕೆ ಎ.ಬಿ.ಪುಂಡಲೀಕ ಅವರನ್ನು ನಿಯೋಜಿಸಲಾಗಿತ್ತು. ಕೆಎಟಿ ಮೊರೆ ಹೋದ ನಾಲತವಾಡ ಅವರು ಮತ್ತೆ ಬೆಳಗಾವಿ ಡಿಡಿಪಿಐ ಕಚೇರಿಗೆ ನಿಯೋಜನೆ ಮಾಡಿಸಿಕೊಂಡು ಆದೇಶ ತಂದಿದ್ದರು.

ಸತೀಶ ಜಾರಕಿಹೊಳಿ ಅವರು ಜಿಲ್ಲಾ ಉಸ್ತುವಾರಿ ಸಚಿವರಾದ ಮೇಲೆ ಎ.ಬಿ.ಪುಂಡಲೀಕ ಅವರನ್ನು ಬೆಳಗಾವಿ ಡಿಡಿಪಿಐ ಆಗಿ ಶಿಫಾರಸು ಮಾಡಿದ್ದರು. ಬಸವರಾಜ ನಾಲತವಾಡ ವರ್ಗವಾದ ತಕ್ಷಣ ಎ.ಬಿ. ಪುಂಡಲೀಕ ಬಂದು ಅಧಿಕಾರ ವಹಿಸಿಕೊಂಡಿದ್ದರು. ಆದರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಬೆಂಬಲ ಪಡೆದ ಬಸವರಾಜ ಅವರು, ಕೆಎಟಿ ಮೂಲಕ ಮತ್ತೆ ಸ್ವಸ್ಥಾನಕ್ಕೆ ಮರಳಿದ್ದರು ಎಂದು ಮೂಲಗಳು ತಿಳಿಸಿವೆ.

ಜಿಲ್ಲಾ ಉಸ್ತುವಾರಿ ಸಚಿವರ ವಿರೋಧದ ಮಧ್ಯೆಯೂ ಡಿಡಿಪಿಐ ಆಗಿ ಮುಂದುವರಿದಿದ್ದರು. ಸಚಿವರಿಬ್ಬರ ಮುಸುಕಿನ ಗುದ್ದಾಟ ಮಧ್ಯೆಯೇ ಡಿಡಿಪಿಐ ಸಿಕ್ಕಿಬಿದ್ದಿದ್ದು, ಮತ್ತಷ್ಟು ಬಿಸಿ ಚರ್ಚೆಗೆ ಗ್ರಾಸವಾಗಿದೆ.

ಸಹಾಯಕ ಪ್ರಾಧ್ಯಾಪಕರ ನೇಮಕಕ್ಕೆ ಶೀಘ್ರ ಅಧಿಸೂಚನೆ

ಚಿಕ್ಕಬಳ್ಳಾಪುರ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ 1,242 ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರ ಶೀಘ್ರ ಗೆಜೆಟ್ ಅಧಿಸೂಚನೆ ಹೊರಡಿಸಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದ್ದಾರೆ.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೇಮಕಾತಿಗೆ ಸಂಬಂಧಿಸಿದಂತೆ ಬಾಕಿ ಪ್ರಕ್ರಿಯೆ ಶೀಘ್ರ ಪೂರ್ಣಗೊಳಿಸಲಾಗುವುದು. ನಿಗದಿತ ಸಮಯದಲ್ಲಿ ದಾಖಲಾತಿ ಪರಿಶೀಲನೆ ನಡೆಸಲಾಗುತ್ತದೆ. ಈ ಹುದ್ದೆಗಳ ನೇಮಕಕ್ಕೆ ಕಾಯುತ್ತಿರುವ ಅಭ್ಯರ್ಥಿಗಳಿಗೆ ಸರ್ಕಾರ ನ್ಯಾಯ ಒದಗಿಸಲಿದೆ ಎಂದರು.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಕೆಪಿಟಿಸಿಎಲ್ ನೇಮಕಾತಿಗೆ ಸಂಬಂಧಿಸಿದ ಗೊಂದಲ ಸಹ ಇತ್ಯರ್ಥವಾಗಿವೆ ಎಂದು ಅವರು ತಿಳಿಸಿದರು.

ಈ ಸಹಾಯಕ ಪ್ರಾಧ್ಯಾಪಕ ನೇಮಕದ ವಿಚಾರವಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ಇದ್ದವು. ಕಲ್ಯಾಣ- ಕರ್ನಾಟಕ ಮೀಸಲಾತಿ ವಿಚಾರದಲ್ಲಿ ಬಿಜೆಪಿ ಸರ್ಕಾರ ಗೊಂದಲ ಮೂಡಿಸಿತ್ತು. ಸಿಸಿಬಿಯಲ್ಲಿ ಪ್ರಕರಣ ಸಹ ಇತ್ತು. ಈ ಕಾರಣದಿಂದ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿತ್ತು ಎಂದು ಹೇಳಿದರು.

ದೌರ್ಜನ್ಯ ಪ್ರಕರಣ ದಾಖಲು; ರಜಪೂತ ಸಮುದಾಯದ ಇಬ್ಬರ ಬಂಧನ

ಕೂಲಿ ಕೇಳಿದ ಎಸ್‌ಸಿ ಕಾರ್ಮಿಕನಿಗೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ (ಕೋಲಾರ): ಎಲ್ಲರ ಎದುರು ಬಾಕಿ ಕೂಲಿ ಹಣ ಕೇಳಿದನೆಂದು ತಾಲ್ಲೂಕಿನ ದೊಡ್ಡವಲಗಮಾದಿ ಗ್ರಾಮದ ಪರಿಶಿಷ್ಟ ಜಾತಿಯ ಗಾರೆ ಕೆಲಸಗಾರನನ್ನು ಕೈಕಾಲು ಕಟ್ಟಿ ಹಾಕಿ ಮನಬಂದತೆ ಥಳಿಸಲಾಗಿದೆ.

ಗಾಯಗೊಂಡಿರುವ ಗಾರೆ ಕೆಲಸಗಾರ ಅಮರೇಶ್ (29) ಬಂಗಾರಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅ.17ರಂದು ಗ್ರಾಮದ ರಜಪೂತ ಸಮುದಾಯದ ಜಗದೀಶ್ ಸಿಂಗ್, ರವಿ ಸಿಂಗ್ ಮತ್ತು ಸತೀಶ್ ಸಿಂಗ್ ಎಂಬ ಸಹೋದರರು ತನ್ನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಅಮರೇಶ್ ಬಂಗಾರಪೇಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಹಲ್ಲೆಯಿಂದ ರಕ್ತ ಹೆಪ್ಪುಗಟ್ಟಿ ಕಪ್ಪಾಗಿರುವ ಹೊಟ್ಟೆ ಭಾಗ

ದೌರ್ಜನ್ಯ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಜಗದೀಶ್ ಸಿಂಗ್ ಮತ್ತು ಸತೀಶ್ ಸಿಂಗ್ ಎಂಬ ಸಹೋದರರನ್ನು ಬಂಧಿಸಿದ್ದಾರೆ. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ.

'ಜಗದೀಶ್ ಸಿಂಗ್ ಅವರ ಮನೆ ಕಟ್ಟಡ ನಿರ್ಮಾಣ ಕೆಲಸಕ್ಕೆ ಹೋಗುತ್ತಿದ್ದೆ. ₹3,500 ಕೂಲಿಯಲ್ಲಿ ₹2 ಸಾವಿರ ಕೊಟ್ಟಿದ್ದರು. ಮಂಗಳವಾರ (ಅ.17) ಚಹಾ ಅಂಗಡಿ ಬಳಿ ಬಂದ ಸಹೋದರರನ್ನು ಬಾಕಿ ಕೂಲಿ ಹಣ ಕೇಳಿದೆ. ದಾರಿಯಲ್ಲಿ ಕೂಲಿ ಕೇಳುತ್ತೀಯಾ ಎಂದು ಅವಾಚ್ಯ ಪದಗಳಿಂದ ಜಾತಿ ನಿಂದನೆ ಮಾಡಿ ಮೂವರೂ ನನ್ನ ಮೇಲೆ ಕೋಲಿನಿಂದ ಹಲ್ಲೆ ನಡೆಸಿದರು. ರವಿ ಸಿಂಗ್ ಬೆಲ್ಟ್‌ನಿಂದ ಬೆನ್ನಿಗೆ ಹೊಡೆದರು. ಮನೆಯ ಬಳಿ ಕರೆದುಕೊಂಡು ಹೋಗಿ ಕೈ, ಕಾಲುಗಳನ್ನು ಹಗ್ಗದಿಂದ ಕಟ್ಟಿ ಹಾಕಿದರು' ಎಂದು ಅಮರೇಶ ದೂರಿನಲ್ಲಿ ಹೇಳಿದ್ದಾರೆ.

> **ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ. ದೌರ್ಜನ್ಯ ಪ್ರಕರಣ ದಾಖಲಿಸಿ ಇಬ್ಬರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದೇವೆ. ಪ್ರಕರಣದ ತನಿಖೆ ನಡೆಯುತ್ತಿದೆ**
> **ಕೆ.ಎಂ.ಶಾಂತರಾಜು,** ಕೆಜಿಎಫ್ ಪೊಲೀಸ್ ವರಿಷ್ಠಾಧಿಕಾರಿ

ಈ ವಿಷಯ ಹರಡುತ್ತಿದ್ದಂತೆ ಗ್ರಾಮಸ್ಥರು ಸ್ಥಳಕ್ಕೆ ಹೋಗಿ ಗಾಯಾಳುವಿನ ಕೈಕಾಲುಗಳಿಗೆ ಕಟ್ಟಿದ್ದ ಹಗ್ಗ ಬಿಚ್ಚಿ ಆಸ್ಪತ್ರೆಗೆ ದಾಖಲಿಸಿದರು ಎಂಬುದು ಗೊತ್ತಾಗಿದೆ. ಗ್ರಾಮದ ಮುನಿರಾಜು, ಪುನೀತ್, ರಾಮಕೃಷ್ಣ, ವೆಂಕಟೇಶಪ್ಪ ಎಂಬವರ ವಿರುದ್ಧ ಆರೋಪಿಗಳು ಪ್ರತಿ ದೂರು ದಾಖಲಿಸಿದ್ದಾರೆ. ಪ್ರಕರಣದ ತನಿಖಾಧಿಕಾರಿ ಕೋಲಾರ ವಿಭಾಗದ ಡಿವೈಎಸ್ಪಿ ಮಲ್ಲೇಶ್ ಶುಕ್ರವಾರ ಗ್ರಾಮಕ್ಕೆ ತೆರಳಿ ತನಿಖೆ ಆರಂಭಿಸಿದ್ದಾರೆ.

ಕೆಜಿಎಫ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಂ.ಶಾಂತರಾಜು ಬಂಗಾರಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅಮರೇಶ್ ಅವರನ್ನು ಶುಕ್ರವಾರ ಕಂಡು ಮಾಹಿತಿ ಪಡೆದರು.

ಹುಟ್ಟಿದಾಗ 500 ಗ್ರಾಂ ತೂಕ ಇದ್ದ ಹೆಣ್ಣು ಮಗು; 50 ದಿನ ನಿರಂತರ ಚಿಕಿತ್ಸೆ

ಕಾಂಗರೂ ಆರೈಕೆಯಲ್ಲಿ ಬೆಳೆದ ಕೂಸು

• ಪ್ರಮೋದ

ಕೊಪ್ಪಳ: ಹುಟ್ಟಿದಾಗ ಕೇವಲ 500 ಗ್ರಾಂ. ತೂಕ ಹೊಂದಿದ್ದ ಹೆಣ್ಣು ನವಜಾತ ಶಿಶುವಿಗೆ ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಕಿಮ್ಸ್) ತಾಯಿ ಮತ್ತು ಮಗುವಿನ ಆಸ್ಪತ್ರೆ ವೈದ್ಯರು ನಿರಂತರ 50 ದಿನಗಳ ಕಾಲ 'ಕಾಂಗರೂ' ಮಾದರಿ ಆರೈಕೆಯ ಚಿಕಿತ್ಸೆ ನೀಡಿದ್ದು, ಈಗ ಮಗುವಿನ ತೂಕ ಈಗ 1.2 ಕೆ.ಜಿ.ಗೆ ಏರಿಕೆಯಾಗಿದೆ.

ಅವಧಿಪೂರ್ವ ಹೆರಿಗೆ ಮತ್ತು ತಾಯಿಯಲ್ಲಿ ಪೌಷ್ಟಿಕಾಂಶದ ಕೊರತೆಯಿಂದಾಗಿ ಮಗುವಿನ ತೂಕ ಅತ್ಯಂತ ಕಡಿಮೆಯಿತ್ತು. ಹೀಗಾಗಿ ಮಗು ಬೆಳವಣಿಗೆ ಬಗ್ಗೆ ಪೋಷಕರಿಗೆ ಹಾಗೂ ವೈದ್ಯರಿಗೆ ಅನುಮಾನಗಳಿದ್ದವು. ಕಾಂಗರೂ ಮಾದರಿಯಲ್ಲಿ ನೀಡಿದ ಚಿಕಿತ್ಸೆ ಈಗ ಫಲ ನೀಡಿದೆ. ಇಲ್ಲಿನ ಆಸ್ಪತ್ರೆಯಲ್ಲಿ ಹಿಂದೆ 700 ಗ್ರಾಂ. ಇದ್ದ ಮಕ್ಕಳ ತೂಕವನ್ನು ಕ್ರಮೇಣ ಹೆಚ್ಚಿಸಲಾಗಿತ್ತು. ಇಲ್ಲಿ ಇದೇ ಮೊದಲ ಬಾರಿಗೆ 500 ಗ್ರಾಂ. ತೂಕದ ಮಗುವಿಗೆ ವೈದ್ಯರು 'ಮರುಜನ್ಮ' ನೀಡಿದ್ದಾರೆ. ವೈದ್ಯರ ಪ್ರಕಾರ ಇಲ್ಲಿನ ಆಸ್ಪತ್ರೆಯಲ್ಲಿ ಇಷ್ಟೊಂದು ಕಡಿಮೆ ತೂಕದ ಮಗು ಚೇತರಿಸಿಕೊಂಡ ವಿರಳ ಪ್ರಕರಣ ಇದಾಗಿದೆ.

ಕೊಪ್ಪಳ ತಾಲ್ಲೂಕಿನ ಬೆಟಗೇರಿ ಗ್ರಾಮದ ಸಾರವ್ವ ಎಂಬ ಮಹಿಳೆಗೆ ಇದು ಎರಡನೇ ಹೆರಿಗೆ. ಮೊದಲ ಮಗನಿಗೆ ಈಗ ನಾಲ್ಕು ವರ್ಷ. ಎರಡನೇ ಮಗುವಿಗಾಗಿ ಏಳು ತಿಂಗಳು ಗರ್ಭಿಣಿಯಾಗಿದ್ದಾಗ ಇದೇ ವರ್ಷದ ಆಗಸ್ಟ್ 30ರಂದು ಸಹಜ ಹೆರಿಗೆಯಾಗಿದೆ. ಆಗ ಮಗುವಿನ ತಲೆ, ಶ್ವಾಸಕೋಶ, ಕರುಳು, ಚರ್ಮ ಯಾವುದೂ ಸರಿಯಾಗಿ ಬೆಳೆದಿರಲಿಲ್ಲ. ಚರ್ಮ ಬೆಳೆಯದೇ ಇದ್ದಾಗ ಬೇರೆ ಸೋಂಕು ತಗಲುವ ಸಾಧ್ಯತೆ ಹೆಚ್ಚಿರುತ್ತದೆ. ಇಂಥ ಸಂಕೀರ್ಣ ಸಂದರ್ಭದಲ್ಲಿ ಕಾಂಗರೂ ಆರೈಕೆ ಮಾಡಿಸಲಾಗಿದೆ.

ಮಗಳಿಗೆ ಕಾಂಗರೂ ಮಾದರಿಯಲ್ಲಿ ಆರೈಕೆ ಮಾಡುತ್ತಿರುವ ಸಾರವ್ವ – ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಹುಟ್ಟಿದ ದಿನದಂದಲೂ ಶಿಶುವಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗಿತ್ತು. ಈಗ ತೂಕ ಏರಿಕೆಯಾಗಿರುವುದರಿಂದ ಗುರುವಾರ ಆ ಮಗುವನ್ನು ಐಸಿಯುನಿಂದ ಹೊರಗೆ ಕರೆತರಲಾಯಿತು.

'ಜನನದ ಸಮಯದಲ್ಲಿ ಮಗುವಿನ ತೂಕ ಸಾಮಾನ್ಯವಾಗಿ 2.5 ಕೆ.ಜಿ. ಇದ್ದರೆ ಆರೋಗ್ಯವಂತ ಎಂದು ಪರಿಗಣಿಸಲಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ಮಗುವಿನ ತೂಕ 500 ಗ್ರಾಂ ಇತ್ತು. ತೂಕ ಕಡಿಮೆಯಿದ್ದಾಗ ನಂಜು ಆಗುವುದು, ಕಣ್ಣಿನ ಸಮಸ್ಯೆ ಕಾಣಿಸಿಕೊಳ್ಳುತ್ತವೆ. ಈ ಮಗುವಿಗೆ ಆಗಿದ್ದ ನಂಜು ಗುಣಪಡಿಸಲಾಗಿದೆ. ಮಗು ಆರೋಗ್ಯವಾಗಿದ್ದು, ತಾಯಿ ಎದೆ ಹಾಲು ಕೊಡುತ್ತಿದ್ದಾಳೆ' ಎಂದು ಇಲ್ಲಿನ ಆಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಗಿರೀಶ ಹಿರೇಮಠ 'ಪ್ರಜಾವಾಣಿ'ಗೆ ತಿಳಿಸಿದರು.

ಮಕ್ಕಳ ವಿಭಾಗದ ನೋಡಲ್ ಅಧಿಕಾರಿ ಡಾ. ಸಿದ್ದಲಿಂಗ, ವೈದ್ಯರಾದ ಉದಯ್, ಶಶಿಕಾಂತ್, ಮಲ್ಲನಗೌಡ, ಹರ್ಷ ಮತ್ತು ಆಸ್ಪತ್ರೆ ಸಿಬ್ಬಂದಿ ಮಗುವಿನ ತೂಕ ಹೆಚ್ಚಾಗಲು ಶ್ರಮಿಸಿದ್ದಾರೆ.

> **ಮಗಳು ಹುಟ್ಟಿದಾಗ ಬಹಳಷ್ಟು ತೂಕ ಕಡಿಮೆಯಿದ್ದರಿಂದ ಹೇಗೆ ಆರೈಕೆ ಮಾಡಬೇಕು ಎನ್ನುವುದೇ ಗೊತ್ತಿರಲಿಲ್ಲ. ಆಸ್ಪತ್ರೆ ವೈದ್ಯರು ನನ್ನ ಪಾಲಿಗೆ ದೇವರಾಗಿ ಬಂದರು**
> **ಸಾರವ್ವ,** ಮಗುವಿನ ತಾಯಿ

> **ಕೊಪ್ಪಳದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ 500 ಗ್ರಾಂ. ತೂಕ ಹೊಂದಿದ್ದ ಮಗುವಿಗೆ ಕಾಂಗರೂ ಆರೈಕೆ ಮಾಡಿ ಯಶಸ್ಸು ಕಂಡಿದ್ದು ಇದೇ ಮೊದಲು. ಇದಕ್ಕೆ ವೈದ್ಯರು ಹಾಗೂ ಸಿಬ್ಬಂದಿ ಶ್ರಮ ಕಾರಣ**
> **ಡಾ. ಗಿರೀಶ ಹಿರೇಮಠ,** ಚಿಕ್ಕಮಕ್ಕಳ ವಿಭಾಗದ ಮುಖ್ಯಸ್ಥ

ಕಾಂಗರೂ ಆರೈಕೆ ಹೀಗಿರಲಿದೆ

'ತೂಕ ಕಡಿಮೆ ಇರುವ ಮಕ್ಕಳ ಸುಧಾರಣೆಗೆ ತಾಯಂದಿರು ನಿತ್ಯ 14ರಿಂದ 15 ತಾಸು ಮಗುವನ್ನು ಎದೆಗವುಚಿಕೊಂಡಿರುವುದನ್ನೇ ಕಾಂಗರೂ ಮಾದರಿ ಆರೈಕೆ ಎನ್ನುತ್ತೇವೆ. ಇದರಿಂದ ತೂಕ ಹೆಚ್ಚಾಗುವ ಜೊತೆಗೆ ಮಗುವಿನ ಸಹಜ ಉಸಿರಾಟಕ್ಕೆ ಸಹಾಯವಾಗುತ್ತದೆ. ತಾಯಿ ಮಗುವಿನ ಬಾಂಧವ್ಯ ವೃದ್ಧಿಯಾಗುತ್ತದೆ' ಎನ್ನುತ್ತಾರೆ ಡಾ.ಗಿರೀಶ ಹಿರೇಮಠ.

'ಒಂದು ಕೆ.ಜಿ.ಗಿಂತಲೂ ಕಡಿಮೆ ತೂಕ ಹೊಂದಿರುವ 15ರಿಂದ 20 ಮಕ್ಕಳಿಗೆ ಒಂದು ತಿಂಗಳಲ್ಲಿ ಕಾಂಗರೂ ಮಾದರಿಯಲ್ಲಿ ಇಲ್ಲಿ ಆರೈಕೆ ನೀಡಲಾಗಿದೆ' ಎಂದು ಅವರು ಹೇಳಿದರು.

ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಕಾಮಗಾರಿ ಮೊತ್ತ ₹1 ಕೋಟಿಗೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ಪರಿಶಿಷ್ಟ ಜಾತಿ, ಪಂಗಡದ ಗುತ್ತಿಗೆದಾರರ ಕಾಮಗಾರಿ ಮೊತ್ತವನ್ನು ₹1 ಕೋಟಿಗೆ ಹೆಚ್ಚಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಶೇ 24.10 ಮೀಸಲಾತಿಯಲ್ಲಿ ಕಾಮಗಾರಿ ಮೊತ್ತ ₹50 ಲಕ್ಷವಿತ್ತು. ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆ ನಿಯಮಗಳಿಗೆ ತಿದ್ದುಪಡಿ ತರಲಾಗಿದ್ದು, ಇದನ್ನು ₹1 ಕೋಟಿಗೆ ಹೆಚ್ಚಿಸಲಾಗಿದೆ. ಶೇ 17.15ರಷ್ಟು ಪರಿಶಿಷ್ಟ ಜಾತಿ ಹಾಗೂ ಶೇ 6.95ರಷ್ಟು ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ನಿಗದಿಪಡಿಸಲಾಗಿದೆ.

ಇದರಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಪೌರಾಡಳಿತ ನಿರ್ದೇಶನಾಲಯ ಅ.19ರಂದು ಸುತ್ತೋಲೆ ಹೊರಡಿಸಿದೆ.

ರಾಜ್ಯೋತ್ಸವ: 5 ಗೀತೆ ಗಾಯನಕ್ಕೆ ಆದೇಶ

ಬೆಂಗಳೂರು: ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನ.1ರಂದು ಶಾಲಾ–ಕಾಲೇಜು, ಸರ್ಕಾರಿ ಕಚೇರಿಗಳು ಸೇರಿ ವಿವಿಧೆಡೆ ಗೊತ್ತುಪಡಿಸಿದ ಕನ್ನಡದ ಐದು ಗೀತೆಗಳನ್ನು ಕಡ್ಡಾಯವಾಗಿ ಹಾಡುವ ಮೂಲಕ ಕನ್ನಡಾಂಬೆಗೆ ಗೀತ ನಮನ ಸಲ್ಲಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿದೆ.

‘ಕರ್ನಾಟಕ’ ನಾಮಕರಣದ ಸುವರ್ಣ ಮಹೋತ್ಸವದ ಪ್ರಯುಕ್ತ ‘ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ’ ಅಭಿಯಾನದಡಿ 2023ರ ನ.1ರಿಂದ 2024ರ ನ.1ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಈ ಅಭಿಯಾನದಡಿ ನ.1ರಂದು ಹುಯಿಲುಗೋಳ ನಾರಾಯಣರಾಯರ ‘ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು’, ಕುವೆಂಪು ಅವರ ‘ಎಲ್ಲಾದರು ಇರು ಎಂತಾದರು ಇರು’, ದ.ರಾ. ಬೇಂದ್ರೆ ಅವರ ‘ಒಂದೇ ಒಂದೇ ಕರ್ನಾಟಕ ಒಂದೇ’, ಸಿದ್ದಯ್ಯ ಪುರಾಣಿಕ ಅವರ ‘ಹೊತ್ತಿತೋ ಹೊತ್ತಿತು ಕನ್ನಡದ ದೀಪ’ ಹಾಗೂ ಚನ್ನವೀರ ಕಣವಿ ಅವರ ‘ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ’ ಗೀತೆಯನ್ನು ಕಡ್ಡಾಯವಾಗಿ ಹಾಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಧ್ವಜಾರೋಹಣದ ಬಳಿಕ, ರಾಷ್ಟ್ರಗೀತೆ, ನಾಡಗೀತೆ ಹಾಗೂ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಬಳಿಕ ನಿಗದಿಪಡಿಸಿದ ಐದು ಗೀತೆಗಳನ್ನು ಜಿಲ್ಲಾಮಟ್ಟ, ತಾಲ್ಲೂಕುಮಟ್ಟ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಹಾಡಬೇಕು. ಶಾಲಾ–ಕಾಲೇಜುಗಳು, ಸರ್ಕಾರಿ, ಅರೆ ಸರ್ಕಾರಿ ಹಾಗೂ ನಿಗಮ ಮಂಡಳಿಗಳ ಕಚೇರಿಗಳು, ಬ್ಯಾಂಕ್‌ಗಳು ಮತ್ತು ಸಂಘ–ಸಂಸ್ಥೆಗಳು ರಾಜ್ಯೋತ್ಸವ ಕಾರ್ಯಕ್ರಮದ ವೇಳಾಪಟ್ಟಿಯಲ್ಲಿ ಈ ಗೀತೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಲಾಗಿದೆ.

ಮುರುಘಾಮಠಕ್ಕೆ ನೋಟಿಸ್

ನವದೆಹಲಿ: ಧಾರ್ಮಿಕ ಸಂಸ್ಥೆಗಳ ದುರ್ಬಳಕೆ ತಡೆ ಕಾಯ್ದೆ ಅಡಿ ಮುರುಘಾ ಶರಣರ ಅಧಿಕಾರ ಚಲಾವಣೆಗೆ ನಿರ್ಬಂಧ ವಿಧಿಸಿದ್ದ ಚಿತ್ರದುರ್ಗ ಸೆಷನ್ಸ್ ಕೋರ್ಟ್ ಆದೇಶವನ್ನು ಹೈಕೋರ್ಟ್ ವಜಾಗೊಳಿಸಿದ್ದನ್ನು ಪ್ರಶ್ನಿಸಿ ಮಾಜಿ ಸಚಿವ ಎಚ್.ಏಕಾಂತಯ್ಯ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ವಿಶೇಷ ಮೇಲ್ಮನವಿ ಅರ್ಜಿಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ರಾಜೇಶ್ ಬಿಂದಾಲ್ ಅವರಿದ್ದ ಪೀಠ ವಿಚಾರಣೆಗೆ ಅಂಗೀಕರಿಸಿದೆ.

ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದ ಪೀಠ, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯಿಸಲು ಸೂಚಿಸಿದೆ.

ಮಠಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ್ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿದ್ದ ರಾಜ್ಯ ಸರ್ಕಾರದ ಆದೇಶವನ್ನು ರದ್ದುಗೊಳಿಸಿದ್ದ ಹೈಕೋರ್ಟ್, ಮಠ ಮಾನ್ಯಗಳಲ್ಲಿ ಸರ್ಕಾರದ ಹಸ್ತಕ್ಷೇಪ ಸಲ್ಲದು ಎಂದು ಹೇಳಿತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	19,625
ಇಂದಿನ ಅಂತ್ಯ	19,542
▼	83
ದಿನದ ಕನಿಷ್ಠ	19,518

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1590 (1610)
ಸೋಯಾ (ರಿಫೈನ್ಡ್)	₹915 (930)
ಸೂರ್ಯಕಾಂತಿ (ರಿಫೈನ್ಡ್)	₹915 (920)
ಪಾಮೋಲಿನ್	₹820 (825)

ವಿನಿಮಯ ದರ	
$ ಡಾಲರ್	83.11
£ ಪೌಂಡ್	100.80
€ ಯುರೊ	88.03
¥ ಯೆನ್ (100ಕ್ಕೆ)	55

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹8500-8870
ಕೆ.ಆರ್.ಪೇಟೆ	₹8060-8060
ತಿಪಟೂರು	₹8000-9800
ತುರುವೇಕೆರೆ	₹8900-8900

ಮುದ್ರಮನೆ ಕಾಫಿ (50 ಕೆಜಿಗೆ)	
ಎಪಿ	₹11000
ಎಸಿ	₹6440
ಆರ್‌ಪಿ	₹10000
ಆರ್‌ಸಿ	₹6095

ಎಸ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹133

ಚಿನ್ನದ ಇಟಿಎಫ್: ತಗ್ಗಿದ ಹೂಡಿಕೆ

ಲಾಭ ಗಳಿಕೆಗೆ ಗಮನ ಕೊಟ್ಟ ಹೂಡಿಕೆದಾರ: ಎಎಂಎಫ್‌ಐ



ನವದೆಹಲಿ (ಪಿಟಿಐ): ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಸೆಪ್ಟೆಂಬರ್‌ನಲ್ಲಿ ಬಂಡವಾಳ ಹೂಡಿಕೆ ಕಡಿಮೆ ಆಗಿದ್ದು, ನಿರ್ವಹಣಾ ಸಂಪತ್ತು ಮೌಲ್ಯವೂ ಇಳಿಕೆ ಕಂಡಿದೆ.

ಚಿನ್ನದ ಇಟಿಎಫ್‌ಗಳಲ್ಲಿ ಆಗಸ್ಟ್‌ನಲ್ಲಿ ₹1,028 ಕೋಟಿಯಷ್ಟು ಹೂಡಿಕೆ ಆಗುವ ಮೂಲಕ 17 ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿತ್ತು. ಆದರೆ, ಸೆಪ್ಟೆಂಬರ್‌ನಲ್ಲಿ ಹೂಡಿಕೆಯು ₹175 ಕೋಟಿಗೆ ಇಳಿಕೆ ಕಂಡಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ಮಾಹಿತಿ ನೀಡಿದೆ.

ಲಾಭ ಗಳಿಸಿಕೊಳ್ಳಲು ಹೂಡಿಕೆದಾರರು ಮುಂದಾಗಿದ್ದರಿಂದ ಬಂಡವಾಳ ಹೂಡಿಕೆ ಕಡಿಮೆ ಆಗಿದೆ ಎಂದು ಅದು ಹೇಳಿದೆ. ಚಿನ್ನದ ಇಟಿಎಫ್‌ನ ನಿರ್ವಹಣಾ ಸಂಪತ್ತು ಮೌಲ್ಯವು ಆಗಸ್ಟ್‌ನಲ್ಲಿ ₹24,318 ಕೋಟಿಯಷ್ಟು ಇದ್ದಿದ್ದು ಸೆಪ್ಟೆಂಬರ್ ಅಂತ್ಯಕ್ಕೆ ₹23,800 ಕೋಟಿಗೆ ಇಳಿಕೆ ಕಂಡಿದೆ.

'ಅಮೆರಿಕದಲ್ಲಿ ಬಡ್ಡಿದರವು ನಿರಂತರವಾಗಿ ಏರಿಕೆ ಆಗುತ್ತಿದೆ. ಹಣದುಬ್ಬರವು ನಿರೀಕ್ಷೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿದೆ. ಆರ್ಥಿಕ ಬೆಳವಣಿಗೆ ದರವು ಇಳಿಕೆ ಕಾಣುತ್ತಿದೆ. ಈ ಎಲ್ಲ ಕಾರಣಗಳಿಂದಾಗಿ ಹೂಡಿಕೆಗೆ ಚಿನ್ನವು ಸುರಕ್ಷಿತ ಎನ್ನುವ ಭಾವನೆಯು ಮುಂದುವರಿಯುವ ನಿರೀಕ್ಷೆ ಇದೆ' ಎಂದು ಮಾರ್ನಿಂಗ್‌ಸ್ಟಾರ್ ಇನ್‌ವೆಸ್ಟ್‌ಮೆಂಟ್ ಅಡ್ವೈಸರಿ ಇಂಡಿಯಾದ ವಿಶ್ಲೇಷಕ ಮೆಲ್ವಿನ್ ಸ್ಯಾಂಟರಿಟಾ ಹೇಳಿದ್ದಾರೆ.

ಏಪ್ರಿಲ್–ಜೂನ್ ಅವಧಿಯಲ್ಲಿ ಚಿನ್ನದ ಇಟಿಎಫ್‌ನಲ್ಲಿ ₹398 ಕೋಟಿ ಹೂಡಿಕೆ ಆಗಿತ್ತು. ಮಾರ್ಚ್ ತ್ರೈಮಾಸಿಕದಲ್ಲಿ ₹1,243 ಕೋಟಿ, ಡಿಸೆಂಬರ್ ತ್ರೈಮಾಸಿಕದಲ್ಲಿ ₹320 ಕೋಟಿ ಮತ್ತು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹165 ಕೋಟಿ ಬಂಡವಾಳ ಹಿಂತೆಗೆತ ಆಗಿದೆ. ಚಿನ್ನದ ಇಟಿಎಫ್‌ಗಳಲ್ಲಿ ಹೂಡಿಕೆದಾರರ ಖಾತೆಗಳ ಸಂಖ್ಯೆಯು ಆಗಸ್ಟ್ ಅಂತ್ಯದಲ್ಲಿ 47.95 ಲಕ್ಷದಿಂದ ₹48.06 ಲಕ್ಷಕ್ಕೆ ಏರಿಕೆ ಆಗಿದೆ ಎಂದು ಒಕ್ಕೂಟವು ಮಾಹಿತಿ ನೀಡಿದೆ.

ಚಿನ್ನದ ದರ ₹750, ಬೆಳ್ಳಿ ₹500 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ, ಬೆಳ್ಳಿ ದರ ಏರಿಕೆ ಕಂಡಿದೆ.

ಚಿನ್ನದ ದರ 10 ಗ್ರಾಂಗೆ ₹750ರಷ್ಟು ಏರಿಕೆಯಾಗಿ, ₹61,650ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹500 ಏರಿಕೆಯಾಗಿ 74,700ಕ್ಕೆ ತಲುಪಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಒಂದು ಔನ್ಸ್‌ಗೆ (28.34 ಗ್ರಾಂ) 1,980 ಡಾಲರ್, ಬೆಳ್ಳಿ 23.20 ಡಾಲರ್‌ನಂತೆ ಮಾರಾಟವಾಯಿತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ, ಬೆಳ್ಳಿ ದರ ಹೆಚ್ಚಿದ್ದರಿಂದ ದೇಶಿ ಮಾರುಕಟ್ಟೆಯಲ್ಲಿ ಪರಿಣಾಮ ಕಂಡಿದೆ.

ಹಣದುಬ್ಬರ ತಗ್ಗಿಸಲು ಆದ್ಯತೆ: ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್

'ಸದ್ಯಕ್ಕೆ ಇಳಿಯಲ್ಲ ಬಡ್ಡಿದರ'

ನವದೆಹಲಿ (ಪಿಟಿಐ): ಸದ್ಯದ ಮಟ್ಟಿಗೆ ಬಡ್ಡಿದರವು ಗರಿಷ್ಠ ಮಟ್ಟದಲ್ಲಿಯೇ ಇರಲಿದೆ. ಎಲ್ಲಿಯವರೆಗೆ ಬಡ್ಡಿದರವು ಗರಿಷ್ಠ ಮಟ್ಟದಲ್ಲಿಯೇ ಇರಲಿದೆ ಎನ್ನುವುದನ್ನು ಸಮಯವೇ ನಿರ್ಧರಿಸಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರು ಶುಕ್ರವಾರ ಹೇಳಿದ್ದಾರೆ.

ಕೌಟಿಲ್ಯ ಆರ್ಥಿಕ ಸಮಾವೇಶದಲ್ಲಿ ಪ್ರಶ್ನೆಯೊಂದಕ್ಕೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ. ಹಣದುಬ್ಬರವನ್ನು ತಗ್ಗಿಸುವ ನಿಟ್ಟಿನಲ್ಲಿ ಹೆಚ್ಚು ಗಮನ ಹರಿಸಲಾಗಿದೆ ಎಂದು ದಾಸ್ ತಿಳಿಸಿದ್ದಾರೆ.

ಸದ್ಯ ನಡೆಯುತ್ತಿರುವ ಜಾಗತಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ಹಲವು ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಏರುತ್ತಿರುವ ಹಣದುಬ್ಬರ ನಿಯಂತ್ರಿಸಲು ಬಡ್ಡಿದರ ಹೆಚ್ಚಳ ಮಾಡಿವೆ.

ಆರ್‌ಬಿಐ ಸಹ ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ರೆಪೊ ದರವನ್ನು 2022ರ ಮೇ ತಿಂಗಳಿನಿಂದ ಆರಂಭಿಸಿ ಒಟ್ಟು ಶೇ 2.50ರಷ್ಟು ಏರಿಕೆ ಮಾಡಿದೆ. ಇದರಿಂದಾಗಿ ಸಾಲದ ಮೇಲಿನ ಬಡ್ಡಿದರವು ಗರಿಷ್ಠ ಮಟ್ಟಕ್ಕೆ ತಲುಪಿದೆ. ಈ ವರ್ಷದ ಫೆಬ್ರುವರಿಯಿಂದ ಬಡ್ಡಿದರವನ್ನು ಶೇ 6.5ರಲ್ಲಿಯೇ ಉಳಿಸಿಕೊಂಡು ಬರಲಾಗುತ್ತಿದೆ.



ಶಕ್ತಿಕಾಂತ ದಾಸ್ –ಪಿಟಿಐ ಚಿತ್ರ

ಜುಲೈನಲ್ಲಿ ಶೇ 7.44ರ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದ್ದ ಚಿಲ್ಲರೆ ಹಣದುಬ್ಬರವು ಸೆಪ್ಟೆಂಬರ್‌ನಲ್ಲಿ ಶೇ 5ಕ್ಕೆ ಇಳಿಕೆ ಕಂಡಿದೆ. ಹಣದುಬ್ಬರವನ್ನು ಗರಿಷ್ಠ ಶೇ 6ರ ಒಳಗೆ ನಿಯಂತ್ರಿಸಬೇಕು ಎನ್ನುವ ಗುರಿಯನ್ನು ಕೇಂದ್ರ ಸರ್ಕಾರವು ಆರ್‌ಬಿಐಗೆ ನೀಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆಯ ಕುರಿತು ಮಾತನಾಡಿದ ಅವರು ಭಾರತದ ಪೆಟ್ರೋಲ್ ಪಂಪ್‌ಗಳಲ್ಲಿ ತೈಲ ದರ ಏಷ್ಟಿದೆ ಎನ್ನುವುದು ಮುಖ್ಯವಾಗುತ್ತದೆ. ದೇಶದಲ್ಲಿ ಇಂಧನ ದರ ಹೆಚ್ಚಾದರೆ ಹಣದುಬ್ಬರದ ಮೇಲೆ ಪರಿಣಾಮ ಬೀರಲಿದೆ ಎಂದು ತಿಳಿಸಿದ್ದಾರೆ. ಮಧ್ಯಪ್ರಾಚ್ಯ ಬಿಕ್ಕಟ್ಟು ಭಾರತದ ಮೇಲೆಯೂ ಪರಿಣಾಮ ಬೀರಲಿದೆ. ಆದರೆ ನಮ್ಮ ಆರ್ಥಿಕ ತಳಹದಿಯು ಬಲಿಷ್ಠವಾಗಿದೆ. ಇದರ ಜೊತೆಗೆ ಹಣಕಾಸು ವಲಯದ ಸ್ಥಿತಿಯೂ ಉತ್ತಮವಾಗಿ ಇರುವುದರಿಂದ ಹೆಚ್ಚಿನ ಹಾನಿ ಆಗುವುದಿಲ್ಲ ಎಂದು ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಮುಂದಿನ ಪೀಳಿಗೆಗೆ ಸಾಲದ ಹೊರೆ ವರ್ಗಾಯಿಸಲ್ಲ: ನಿರ್ಮಲಾ

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರವು ವಿತ್ತೀಯ ಕೊರತೆಯನ್ನು ಬಹಳ ಎಚ್ಚರಿಕೆಯಿಂದ ನಿರ್ವಹಿಸುತ್ತಿದೆ. ಸಾಲದ ಹೊರೆಯನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವುದಿಲ್ಲ ಎನ್ನುವ ಖಾತರಿಯನ್ನೂ ನೀಡಲು ಬಯಸುತ್ತದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶುಕ್ರವಾರ ಹೇಳಿದ್ದಾರೆ.

ಕೌಟಿಲ್ಯ ಆರ್ಥಿಕ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶದ ಒಟ್ಟಾರೆ ಸಾಲವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸರ್ಕಾರವು ಪ್ರಯತ್ನ ನಡೆಸುತ್ತಿದೆ ಎಂದಿದ್ದಾರೆ.

'ದೇಶದ ಆರ್ಥಿಕ ಸ್ಥಿರತೆಯ ಕುರಿತು ನಾವು ಜಾಗೃತರಾಗಿದ್ದೇವೆ. ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವ ಜವಾಬ್ದಾರಿಯನ್ನು ನಿರ್ವಹಿಸುವ ಕಡೆಗೂ ಗಮನ ಹರಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ತಗ್ಗಿದ ಪೇಟಿಎಂ ನಷ್ಟ

ನವದೆಹಲಿ (ಪಿಟಿಐ): ಪೇಟಿಎಂನ ಮಾತೃಸಂಸ್ಥೆ ಒನ್‌97 ಕಮ್ಯುನಿಕೇಷನ್ಸ್‌ನ ನಷ್ಟವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹291 ಕೋಟಿಗೆ ಇಳಿಕೆ ಕಂಡಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ನಷ್ಟ ₹571 ಕೋಟಿಯಷ್ಟು ಇತ್ತು. ಕಾರ್ಯಾಚರಣಾ ವರಮಾನ ಶೇ 32ರಷ್ಟು ಹೆಚ್ಚಾಗಿ ₹2,518 ಕೋಟಿಗೆ ಏರಿಕೆ ಕಂಡಿದೆ.

₹29 ಸಾವಿರ ಕೋಟಿ ಸಾಲ ಪಡೆದ ಅದಾನಿ ಸಿಮೆಂಟ್ಸ್

ಬೆಂಗಳೂರು (ರಾಯಿಟರ್ಸ್): ಎಸಿಸಿ ಲಿಮಿಟೆಡ್ ಮತ್ತು ಅಂಬುಜಾ ಸಿಮೆಂಟ್ಸ್ ಕಂಪನಿಗಳನ್ನು ಖರೀದಿಸಲು ಪಡೆದಿದ್ದ ಸಾಲ ತೀರಿಸುವ ಸಲುವಾಗಿ ಬ್ಯಾಂಕ್‌ಗಳಿಂದ ₹29 ಸಾವಿರ ಕೋಟಿ ಸಾಲ ಪಡೆಯಲಾಗಿದೆ ಎಂದು ಅದಾನಿ ಸಿಮೆಂಟ್ಸ್ ಶುಕ್ರವಾರ ತಿಳಿಸಿದೆ.

ಡಿಬಿಎಸ್, ಫಸ್ಟ್ ಅಬುಧಾಬಿ ಬ್ಯಾಂಕ್ ಸೇರಿದಂತೆ ಒಟ್ಟು 10 ಅಂತರರಾಷ್ಟ್ರೀಯ ಬ್ಯಾಂಕ್‌ಗಳಿಂದ ಮೂರು ವರ್ಷಗಳ ಅವಧಿಗೆ ಸಾಲ ಪಡೆಯಲಾಗಿದೆ ಎಂದು ಸಮೂಹವು ಪ್ರಕಟಣೆಯಲ್ಲಿ ತಿಳಿಸಿದೆ.

ಜೊಮಾಟೊ: ಶೇ 1ರಷ್ಟು ಷೇರು ಮಾರಿದ ಸಾಫ್ಟ್‌ಬ್ಯಾಂಕ್

ನವದೆಹಲಿ (ಪಿಟಿಐ): ಸಾಫ್ಟ್‌ಬ್ಯಾಂಕ್ ಕಂಪನಿಯು ಜೊಮಾಟೊದಲ್ಲಿ ಹೊಂದಿರುವ ಷೇರುಗಳಲ್ಲಿ ಶೇ 1.09ರಷ್ಟನ್ನು ₹1,040 ಕೋಟಿಗೆ ಮಾರಾಟ ಮಾಡಿದೆ.

ಅಂಗಸಂಸ್ಥೆ ಎಸ್‌ವಿಎಫ್ ಗ್ರೋತ್ ಮೂಲಕ ರಾಷ್ಟ್ರೀಯ ಷೇರುಪೇಟೆಯಲ್ಲಿ (ಎನ್‌ಎಸ್‌ಇ) ಈ ಪ್ರಮಾಣದ ಷೇರುಗಳನ್ನು ಮಾರಾಟ ಮಾಡಿರುವುದಾಗಿ ಸಾಫ್ಟ್‌ಬ್ಯಾಂಕ್ ಹೇಳಿದೆ. ಈ ಮಾರಾಟದ ಬಳಿಕ ಜೊಮಾಟೊದಲ್ಲಿ ಹೊಂದಿರುವ ಷೇರುಪಾಲು ಶೇ 1.08ಕ್ಕೆ ಇಳಿಕೆ ಕಂಡಿದೆ ಎಮದು ಅದು ತಿಳಿಸಿದೆ.

₹10 ಸಾವಿರ ಕೋಟಿ ಮೌಲ್ಯದ ₹2000 ನೋಟು ಜನರ ಬಳಿ

ನವದೆಹಲಿ (ಪಿಟಿಐ): ₹2000 ಮುಖಬೆಲೆಯ ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಹಿಂದಿರುಗುತ್ತಿದ್ದು, ಇನ್ನೂ ₹10,000 ಕೋಟಿ ಮೌಲ್ಯದ ನೋಟುಗಳು ಜನರ ಬಳಿ ಇವೆ. ಈ ಮೊತ್ತವೂ ವಾಪಸ್ ಬರುವ ನಿರೀಕ್ಷೆ ಇದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ (ಆರ್‌ಬಿಐ) ಶಕ್ತಿಕಾಂತ ದಾಸ್ ಶುಕ್ರವಾರ ಹೇಳಿದ್ದಾರೆ.

₹2000 ನೋಟುಗಳನ್ನು ಬ್ಯಾಂಕ್‌ಗಳಲ್ಲಿ ಬದಲಿಸಿಕೊಳ್ಳಲು ಅಥವಾ ಠೇವಣಿ ಇಡಲು ಅಕ್ಟೋಬರ್ 7ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಅಕ್ಟೋಬರ್ 8ರಿಂದ ಆರ್‌ಬಿಐ ಕೇಂದ್ರಗಳಲ್ಲಿ ಮಾತ್ರ ಬದಲಾಯಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ಮುಂಬೈ ಧಾರಣೆ

ಶೇಂಗಾ

20-10-2023

ಜಾವಾ 70/80(ಹೊಸ)	12200-12300
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11300-11400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1620)
ಒಂದು ವಾರದ ಡೆಲಿವರಿ	1595 (1615)
ಸೋಯಾ ಕಚ್ಚಾ	860 (870)
ಪಾಮ್ ವಾರದ ಡೆಲಿವರಿ	818 (823)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,500 (59,650)
ಬೆಳ್ಳಿ ಕೆ.ಜಿ 72,000 (71,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹232-470
ದ್ವಿತಳಿ (ಬಿ.ವಿ) ₹360-600

ವಿದೇಶಿ ವಿನಿಮಯ ಸಂಗ್ರಹ ಹೆಚ್ಚಳ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಹಲವು ವಾರ ಬಳಿಕ ಏರಿಕೆ ಕಂಡಿದೆ. ಅ. 13ಕ್ಕೆ ಕೊನೆಗೊಂಡ ವಾರದಲ್ಲಿ ₹9,545 ಕೋಟಿ ಹೆಚ್ಚಾಗಿ ₹48.63 ಲಕ್ಷ ಕೋಟಿಗೆ ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಅಕ್ಟೋಬರ್ 6ಕ್ಕೆ ಕೊನೆಗೊಂಡ ವಾರದಲ್ಲಿ ಮೀಸಲು ಸಂಗ್ರಹವು ₹48.55 ಲಕ್ಷ ಕೋಟಿಯಷ್ಟು ಇತ್ತು. ಮೀಸಲು ಸಂಗ್ರಹದಲ್ಲಿ ಹೆಚ್ಚಿನ ಪಾಲು ಹೊಂದಿರುವ ವಿದೇಶಿ ಕರೆನ್ಸಿಗಳ ಸಂಗ್ರಹವು ಅ. 13ಕ್ಕೆ ಕೊನೆಗೊಂಡ ವಾರದಲ್ಲಿ ₹1480 ಕೋಟಿಯಷ್ಟು ಕಡಿಮೆ ಆಗಿ ₹43.07 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಮಾರುಕಟ್ಟೆ	ತಳಿ	ಧಾರಣೆ
ಬಂಟ್ವಾಳ	ಹಳತು	46000-48500
	ಕೋಕ	15000-27500
ಕಾರ್ಕಳ	ಹೊಸತು	25000-36500
	ಹಳತು	30000-48500
ಕುಮಟ	ಚಿಪ್ಪು	30009-34519
	ಕೋಕ	20095-32600
	ಫ್ಯಾಕ್ಟರಿ	12099-27111
	ಹಳೆಚಾಲಿ	39490-40119
	ಹೊಸಚಾಲಿ	37690-40019
ಕುಂದಾಪುರ	ಹಳೆಚಾಲಿ	43500-47000
	ಹೊಸಚಾಲಿ	37000-41500
ಶಿವಮೊಗ್ಗ	ಬೆಟ್ಟೆ	48109-53399
	ಗೊರಬಾಲು	18039-37609
	ಹೊಸತು	45039-46751
	ರಾಶಿ	46099-48099
	ಸರಕು	47700-84500
ಸಿದ್ದಾಪುರ	ಬಿಳಿಗೋಟು	32119-34919
	ಚಾಲಿ	37455-40289
	ಕೋಕ	30000-34388
	ಕೆಂಪುಗೋಟು	31019-33599
	ರಾಶಿ	43109-46509
	ತಟ್ಟಿಬೆಟ್ಟೆ	38019-45699
ಶಿರಸಿ	ಬೆಟ್ಟೆ	38099-43099
	ಬಿಳಿಗೋಟು	30119-37299
	ಚಾಲಿ	37399-41699
	ರಾಶಿ	45599-48199
ಸುಳ್ಯ	ಹೊಸತು	29500-32500
ಯಲ್ಲಾಪುರ	ಬಿಳಿಗೋಟು	28813-35560
	ಚಾಲಿ	37820-40920
	ಕೋಕ	18612-24099
	ರಾಶಿ	46770-49609
	ತಟ್ಟಿಬೆಟ್ಟೆ	41560-43699

ರಷ್ಯಾ ತೈಲ ಆಮದು ಹೆಚ್ಚಳ

ನವದೆಹಲಿ (ರಾಯಿಟರ್ಸ್): ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಶೇ 11.8ರಷ್ಟು ಹೆಚ್ಚಾಗಿದ್ದು, ಪ್ರತಿ ದಿನಕ್ಕೆ 15.4 ಲಕ್ಷ ಬ್ಯಾರಲ್‌ನಷ್ಟು ತೈಲವನ್ನು ಆಮದು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಆದರೆ, ಸೌದಿ ಅರೇಬಿಯಾದಿಂದ ಕಚ್ಚಾ ತೈಲ ಆಮದು ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಶೇ 22ರಷ್ಟು ಇಳಿಕೆ ಆಗಿದ್ದು, ದಿನಕ್ಕೆ 5.27 ಲಕ್ಷ ಬ್ಯಾರಲ್‌ನಷ್ಟು ಆಗಿದೆ.

ಭಾರತವು ಕಳೆದ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಆಮದು ಮಾಡಿಕೊಂಡಿರುವುದರಲ್ಲಿ ರಷ್ಯಾದ ಪಾಲು ಶೇ 17ರಷ್ಟು ಇತ್ತು. ಅದು ಈ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಶೇ 40ಕ್ಕೆ ಏರಿಕೆ ಕಂಡಿದೆ. ಅಮೆರಿಕದಿಂದ ಆಮದು ಪ್ರಮಾಣವು ಶೇ 2.8 ರಿಂದ ಶೇ 3.2ಕ್ಕೆ ಅಲ್ಪ ಏರಿಕೆ ಕಂಡಿದೆ.

ಮಧ್ಯಪ್ರಾಚ್ಯದಿಂದ ಆಗುವ ತೈಲದ ಆಮದು ಶೇ 60 ಇದ್ದಿದ್ದು ಶೇ 44ಕ್ಕೆ ಇಳಿಕೆ ಕಂಡಿದೆ. ಭಾರತವು ಕಳೆದ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಪ್ರತಿ ದಿನಕ್ಕೆ 45 ಲಕ್ಷ ಬ್ಯಾರಲ್‌ನಷ್ಟು ತೈಲ ಆಮದು ಮಾಡಿಕೊಂಡಿತ್ತು. ಈ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಆಮದು ಪ್ರಮಾಣ ಶೇ 1.6ರಷ್ಟು ಇಳಿಕೆ ಕಂಡಿದೆ ಎಂದು ಮೂಲಗಳು ತಿಳಿಸಿವೆ.

ಗುರುಗ್ರಾಮದಲ್ಲಿ ಶುಕ್ರವಾರ ನಡೆದ ದುರ್ಗಾ ಪೂಜಾ ಕಾರ್ಯಕ್ರಮದಲ್ಲಿ ಭಕ್ತರು ಪೂಜೆ ಸಲ್ಲಿಸಿದರು. –ಪಿಟಿಐ ಚಿತ್ರ

ಪಾಕಿಸ್ತಾನದ ಗೂಢಚಾರಿ ಬಂಧನ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಪಾಕಿಸ್ತಾನದ ಗುಪ್ತಚರ ಸಂಸ್ಥೆಯ ಗೂಢಚಾರಿಕೆಗೆ ಸಹಕರಿಸಿದ ಆರೋಪದ ಮೇಲೆ 53 ವರ್ಷದ ವ್ಯಕ್ತಿಯನ್ನು ಗುಜರಾತ್ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಶುಕ್ರವಾರ ಬಂಧಿಸಿದೆ.

ಶಂಕಿತ ಆರೋಪಿ ಪಾಕಿಸ್ತಾನ ಮೂಲದವರಾಗಿದ್ದು, ದಶಕದ ಹಿಂದೆಯೇ ಭಾರತೀಯ ಪೌರತ್ವ ಪಡೆದಿದ್ದಾರೆ.ಆನಂದ್ ಜಿಲ್ಲೆಯ ತಾರಾಪುರದ ನಿವಾಸಿ ಲಾಭಶಂಕರ ಮಹೇಶ್ವರಿ ಬಂಧಿತ ಆರೋಪಿ. ಮಿಲಿಟರಿ ಗುಪ್ತಚರ ಸಂಸ್ಥೆಯಿಂದ ಪಡೆದ ಮಾಹಿತಿ ಆಧರಿಸಿ ಎಟಿಎಸ್ ಅಧಿಕಾರಿಗಳು ಈ ವ್ಯಕ್ತಿಯನ್ನು ಬಂಧಿಸಿದ್ದಾರೆ.

'ಸಿಬಿಐ, ಸಂಸತ್ ಸಮಿತಿಗೆ ಉತ್ತರಿಸುವೆ'

ನವದೆಹಲಿ (ಪಿಟಿಐ): 'ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಉದ್ಯಮಿಯಿಂದ ಲಂಚ ಪಡೆಯಲಾಗಿದೆ ಎಂದು ನನ್ನ ವಿರುದ್ಧ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ಮತ್ತು ಸಂಸತ್‌ನ ನೀತಿ–ನಿಯಮಗಳ ಸಮಿತಿಯಿಂದ ಕರೆಬಂದರೆ ಸೂಕ್ತ ಉತ್ತರ ನೀಡಲು ಸಿದ್ಧ' ಎಂದು ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾ ಹೇಳಿದ್ದಾರೆ.

ಪ್ರಶ್ನೆ ಕೇಳಲು ಟಿಎಂಸಿ ಸಂಸದೆಯು ಹಣ ಹಾಗೂ ಉಡುಗೊರೆ ಪಡೆದಿದ್ದಾರೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಮಾಡಿದ ಆರೋಪದ ಬಳಿಕ ಮಹುವಾ ಅವರು, ದೇಶದ ರಾಜಕೀಯ ಚರ್ಚೆಯ ಕೇಂದ್ರಬಿಂದುವಾಗಿದ್ದಾರೆ.

ಪಶ್ಚಿಮ ಬಂಗಾಳದ ಕೃಷ್ಣನಗರ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಅವರ ವಿರುದ್ಧ ದುಬೆ ಅವರು, ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೂ ದೂರು ನೀಡಿದ್ದಾರೆ. ನೀತಿ–ನಿಯಮಗಳ ಸಮಿತಿಗೆ ಈ ದೂರಿನ ತನಿಖೆಯ ಹೊಣೆಯನ್ನು ಒಪ್ಪಿಸಲಾಗಿದೆ.

'ಸಿಬಿಐ ಮತ್ತು ಸಂಸತ್ ಸಮಿತಿಯು ಕೇಳುವ ಪ್ರಶ್ನೆಗಳಿಗೆ ನಾನು ಉತ್ತರಿಸುತ್ತೇನೆ. ಆದರೆ, ಅದಾನಿಯ ನಿರ್ದೇಶನಕ್ಕೆ ಒಳಪಟ್ಟ ಮಾಧ್ಯಮಗಳು ನಡೆಸುವ ವಿಚಾರಣೆ ಅಥವಾ ಬಿಜೆಪಿ ಮುಖಂಡರ ಟ್ರೋಲ್‌ಗಳಿಗೆ ಉತ್ತರಿಸಲು ನನಗೆ ಸಮಯ ಅಥವಾ ಆಸಕ್ತಿ ಇಲ್ಲ. ಸದ್ಯ ನಾನು ನಾಡಿಯಾ ಜಿಲ್ಲೆಯಲ್ಲಿ ದುರ್ಗಾ ಪೂಜೆಯ ಸಂಭ್ರಮದಲ್ಲಿದ್ದೇನೆ' ಎಂದು ಮಹುವಾ 'ಎಕ್ಸ್'ನಲ್ಲಿ ಶುಕ್ರವಾರ ಪ್ರತಿಕ್ರಿಯಿಸಿದ್ದಾರೆ.

'ಮೋದಿ ಅವರಿಗೆ ಇರಿಸುಮುರಿಸು ಉಂಟು ಮಾಡುವ ಉದ್ದೇಶವನ್ನು ಸಂಸದೆ ಹೊಂದಿದ್ದರು. ಹಾಗಾಗಿ, ಉದ್ಯಮಿ ಗೌತಮ್ ಅದಾನಿ ಅವರನ್ನು ಗುರಿಯಾಗಿಟ್ಟುಕೊಂಡು ಸಂಸತ್‌ನಲ್ಲಿ ಅದಾನಿ ಸಮೂಹದ ಕಂಪನಿಗಳ ಬಗ್ಗೆ ಪ್ರಶ್ನೆ ಕೇಳಲು ಅವರಿಗೆ ನಾನು ಹಣ ಸಂದಾಯ ಮಾಡಿದ್ದೆ' ಎಂದು ಹೀರಾನಂದಾನಿ ಕಂಪನಿಯ ಸಿಇಒ ದರ್ಶನ್ ಹೀರಾನಂದಾನಿ, ಸಂಸತ್ ಸಮಿತಿಗೆ ಸಲ್ಲಿಸಿರುವ ಪತ್ರದಲ್ಲಿ ಹೇಳಿದ್ದಾರೆ.

ಅರ್ಜಿ ಹಿಂಪಡೆಯಲು ಮಹುವಾ ನಿರ್ಧಾರ

ನವದೆಹಲಿ: ಸಂಸದ ದುಬೆ ಹಾಗೂ ವಕೀಲ ಜೈಅನಂತ್ ದೇಹದ್ರಾಯ್ ಅವರು, ತಮ್ಮ ವಿರುದ್ಧ ಮಾನಹಾನಿ ಹೇಳಿಕೆ ನೀಡದಂತೆ ತಡೆ ಕೋರಿ ಸಂಸದೆ ಮಹುವಾ, ದೆಹಲಿ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ವಾಪಸ್ ಪಡೆಯುವುದಾಗಿ ಆಕೆಯ ವಕೀಲರು ಹೇಳಿದ್ದಾರೆ.

ಮಹುವಾ ಪರ ಹಾಜರಾದ ವಕೀಲ ಗೋಪಾಲ್ ಶಂಕರನಾರಾಯಣ, 'ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಸಂಸದೆಯು ಉದ್ಯಮಿಯಿಂದ ಲಂಚ ಪಡೆದಿದ್ದಾರೆ ಎಂದು ದೇಹದ್ರಾಯ್ ಸಿಬಿಐಗೆ ದೂರು ನೀಡಿದ್ದಾರೆ. ಇದನ್ನು ಹಿಂದಕ್ಕೆ ಪಡೆಯುವುದಾಗಿ ಅವರು ಒಪ್ಪಿದ್ದಾರೆ. ಇಬ್ಬರ ನಡುವಿನ ವಿವಾದದ ಇತ್ಯರ್ಥಕ್ಕೆ ತಾವು ಮಧ್ಯಸ್ಥಿಕೆವಹಿಸುವುದಾಗಿ ಹೈಕೋರ್ಟ್‌ಗೆ ತಿಳಿಸಿದರು.

ವಕೀಲರ ಈ ಹೇಳಿಕೆ ಆಲಿಸಿದ ನ್ಯಾಯಮೂರ್ತಿ ಸಚಿನ್ ದತ್ತಾ, ಕ್ಷಣಕಾಲ ದಿಗಿಲುಗೊಂಡರು. ಬಳಿಕ, 'ಆಗಿದ್ದರೆ ವಾದಿಸಲು ನ್ಯಾಯಾಲಯಕ್ಕೆ ವಾದಿಸಲು ಏಕೆ ಬರಬೇಕಿತ್ತು' ಎಂದು ಪ್ರಶ್ನಿಸಿದರು.

'ದೇಹದ್ರಾಯ್ ವಕೀಲರ ಸಂಘದ ಸದಸ್ಯರಾಗಿದ್ದಾರೆ. ಹಿಂದೆ ಪ್ರಕರಣವೊಂದರಲ್ಲಿ ನನಗೆ ನೆರವಾಗಿದ್ದರು. ನನ್ನ ಕಕ್ಷಿದಾರರಾದ ಮಹುವಾ ಅವರ ಗಮನಕ್ಕೂ ಇದನ್ನು ತಂದಿದ್ದೇನೆ. ಅವರ ಒಪ್ಪಿಗೆ ಸೂಚಿಸಿದ ಬಳಿಕ ಮಧ್ಯಸ್ಥಿಕೆಗೆ ನಿರ್ಧರಿಸಿದೆ' ಎಂದರು.'ಅಲ್ಲದೇ, ಈ ಕುರಿತು ದೇಹದ್ರಾಯ್ ಜೊತೆಗೆ ಮೊಬೈಲ್‌ನಲ್ಲಿ ಮಾತನಾಡಿದ್ದನ್ನು ಆಡಿಯೊ ರೆಕಾರ್ಡಿಂಗ್ ಮಾಡಿಕೊಂಡಿದ್ದೇನೆ' ಎಂದರು.

'ನೀವು ಮಧ್ಯಸ್ಥಿಕೆವಹಿಸುವುದಾದರೆ ಈ ಪ್ರಕರಣದಲ್ಲಿ ವಾದ ಮಂಡಿಸಲು ನಿಮಗೆ ಅರ್ಹತೆ ಇದೆಯೇ? ನಿಮ್ಮೊಳಗೆಯೇ ಈ ಪ್ರಶ್ನೆಗೆ ಉತ್ತರ ಕೊಂಡುಕೊಳ್ಳಬೇಕು' ಎಂದು ಹೇಳಿದ ನ್ಯಾಯಮೂರ್ತಿ ಅವರು, ಅಕ್ಟೋಬರ್ 31ಕ್ಕೆ ವಿಚಾರಣೆಯನ್ನು ಮುಂದೂಡಿದರು.

ಪಿಎಫ್‌ಐ ಕಾರ್ಯಕರ್ತನ ಬಂಧನ

ನವದೆಹಲಿ (ಪಿಟಿಐ): ಆರ್‌ಎಸ್‌ಎಸ್ ಮುಖಂಡ ಶ್ರೀನಿವಾಸನ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಕಾರ್ಯಕರ್ತ ಶಿಹಾಬ್ ಅಲಿಯಾಸ್ ಬಾಬು ಎಂಬಾತನನ್ನು ಕೇರಳದ ಮಲಪ್ಪುರದಲ್ಲಿರುವ ಆತನ ಮನೆಯಲ್ಲಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಬಂಧಿಸಿದೆ.

2022 ಏಪ್ರಿಲ್ 16ರಂದು ಶ್ರೀನಿವಾಸನ್ ಅವರ ಕೊಲೆ ನಡೆದಿದ್ದು, ಬಳಿಕ ಈತ ತಲೆ ಮರೆಸಿಕೊಂಡಿದ್ದ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.'ಪಿಎಫ್‌ಐ ನಡೆಸುತ್ತಿದ್ದ ಉಗ್ರ ಚಟುವಟಿಕೆಗಳಲ್ಲಿ ಮತ್ತು ಶ್ರೀನಿವಾಸನ್ ಕೊಲೆ ಪ್ರಕರಣದ ಸಂಚಿನಲ್ಲಿ ಶಿಹಾಬ್ ಶಾಮೀಲಾಗಿದ್ದಾನೆ' ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ಸುಲಿಗೆ: ರವಿ ಪೂಜಾರಿ ಸಹಚರನ ಸೆರೆ

ಠಾಣೆ (ಪಿಟಿಐ): ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿ ಗ್ಯಾಂಗ್‌ಸ್ಟರ್ ರವಿ ಪೂಜಾರಿ ಸಹಚರ ವಿಜಯ್ ಪುರುಷೋತ್ತಮ ಸಾಳ್ವಿ ಅಲಿಯಾಸ್ ವಿಜಯ್ ತಂಬಟ್‌ನನ್ನು ಮುಂಬೈನ ಛತ್ರಪತಿ ಶಿವಾಜಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪೊಲೀಸರು ಬಂಧಿಸಿದ್ದಾರೆ.

ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆಯಡಿ (ಎಂಸಿಒಸಿಎ) ವಿಜಯ್ ವಿರುದ್ಧ ಪ್ರಕರಣ ದಾಖಲಾಗಿತ್ತು ಎಂದು ಕ್ರೈಂ ಬ್ರಾಂಚ್ ಪೊಲೀಸರು ಶುಕ್ರವಾರ ತಿಳಿಸಿದ್ದಾರೆ. ದೇಶಬಿಟ್ಟು ಪರಾರಿಯಾಗಿದ್ದ ಈತನ ವಿರುದ್ಧ ಲುಕ್‌ಔಟ್ ನೋಟಿಸ್ ಹೊರಡಿಸಲಾಗಿತ್ತು.ಕೊಲೆಯತ್ನ ಪ್ರಕರಣದಲ್ಲೂ ವಿಜಯ್ ಆರೋಪಿಯಾಗಿದ್ದಾನೆ ಎಂದಿದ್ದಾರೆ.

ಪಂಜಾಬ್: ಎಎಪಿ ಸರ್ಕಾರ-ಪುರೋಹಿತ್ ನಡುವೆ ಮತ್ತೊಂದು ಸುತ್ತಿನ ಸಂಘರ್ಷ

'ರಾಜ್ಯಪಾಲರ ವಿರುದ್ಧ 'ಸುಪ್ರೀಂ' ಮೊರೆ'

ಚಂಡೀಗಢ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ನೇತೃತ್ವದ ಎಎಪಿ ಸರ್ಕಾರ ಹಾಗೂ ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ನಡುವೆ ಮತ್ತೊಂದು ಸುತ್ತಿನ ಸಂಘರ್ಷಕ್ಕೆ ಶುಕ್ರವಾರ ನಡೆದ ವಿಶೇಷ ಅಧಿವೇಶನ ಸಾಕ್ಷಿಯಾಯಿತು.

ಅಧಿವೇಶನದಲ್ಲಿ ಪ್ರಸ್ತಾವಿತ ಮೂರು ಮಸೂದೆಗಳನ್ನು ಮಂಡಿಸದಂತೆ ರಾಜ್ಯಪಾಲರು, ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಮಾನ್, ಕಲಾಪದಲ್ಲಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಮಸೂದೆಗಳನ್ನು ತಡೆಹಿಡಿಯುವಂತೆ ರಾಜ್ಯಪಾಲರು ಹೇಳಿದ್ದಾರೆ. ಒಂದು ವೇಳೆ ಮಂಡಿಸಿದರೂ ಅಂಕಿತ ಹಾಕುವುದಿಲ್ಲ ಎಂದಿದ್ದಾರೆ. ಅವರ ನಡೆ ವಿರುದ್ಧ ಸುಪ್ರೀಂ ಕೋರ್ಟ್‌ನ ಮೊರೆ ಹೋಗಲಾಗುವುದು' ಎಂದು ಘೋಷಿಸಿದರು.

ಭಗವಂತ್ ಮಾನ್

ಬನ್ವಾರಿಲಾಲ್ ಪುರೋಹಿತ್

ಕಲಾಪ ಮುಂದೂಡಿಕೆ:

ಮೊದಲ ದಿನದ ಕಲಾಪ ಶುರುವಾದ ವೇಳೆ ಮಾತನಾಡಿದ ಮಾನ್, 'ಸರ್ಕಾರವು ಸದನದಲ್ಲಿ ಯಾವುದೇ ಮಸೂದೆ ಮಂಡಿಸಲು ಇಚ್ಛಿಸುವುದಿಲ್ಲ. ಹಾಗಾಗಿ, ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಬೇಕು' ಎಂದು ಸ್ಪೀಕರ್ ಕುಲ್ತಾರ್ ಸಿಂಗ್ ಸಂಧ್ವಾನ್‌ಗೆ ಕೋರಿದರು.

'ರಾಜ್ಯಪಾಲರ ಜತೆ ನಾನು ಸಂಘರ್ಷ ಮುಂದುವರಿಸಲು ಇಚ್ಛಿಸುವುದಿಲ್ಲ. ಸದನದಲ್ಲಿ ಮಂಡಿಸುವ ಮಸೂದೆಗಳಿಗೆ ಅಂಕಿತ ಹಾಕುವುದಾಗಿ ರಾಜ್ಯಪಾಲರು ಹೇಳಬೇಕು. ಜತೆಗೆ, ಕಲಾಪವು ಕಾನೂನುಬದ್ಧವಾಗಿದೆ ಎಂದು ಪ್ರಕಟಿಸುವವರೆಗೂ ಸದನದಲ್ಲಿ ಮಸೂದೆ ಮಂಡಿಸುವುದಿಲ್ಲ' ಎಂದು ಹೇಳಿದರು.

ಮಾನ್ ಅವರ ಕೋರಿಕೆ ಮೇರೆಗೆ ಕಲಾಪವನ್ನು ಮುಂದೂಡುವ ಬಗ್ಗೆ ನಿರ್ಣಯ ಮಂಡಿಸಲಾಯಿತು. ಇದಕ್ಕೆ ಸದನವು ಒಪ್ಪಿಗೆ ನೀಡಿದ ಬಳಿಕ ಸ್ಪೀಕರ್, ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಪತ್ರದಲ್ಲಿ ಏನಿದೆ?

ಗುರುವಾರ ಸರ್ಕಾರಕ್ಕೆ ಪತ್ರ ಬರೆದಿದ್ದ ರಾಜ್ಯಪಾಲ ಪುರೋಹಿತ್, 'ವಿಶೇಷ ಅಧಿವೇಶನಕ್ಕೆ ಬದಲಾಗಿ ಚಳಿಗಾಲದ ಅಧಿವೇಶನ ಕರೆಯುವುದು ಉತ್ತಮ' ಎಂದು ಸಲಹೆ ನೀಡಿದ್ದರು. ಸರ್ಕಾರ ಕಾನೂನುಬಾಹಿರವಾಗಿ ಅಧಿವೇಶನ ನಡೆಸಲು ಮುಂದಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ಬಗ್ಗೆ ರಾಷ್ಟ್ರಪತಿ ಅವರಿಗೆ ವರದಿ ಮಾಡಲಾಗುವುದು ಎಂದು ಉಲ್ಲೇಖಿಸಿದ್ದರು.

ಶುಕ್ರವಾರ ಮತ್ತು ಶನಿವಾರ ಕರೆದಿರುವ ಅಧಿವೇಶನವು ಬಜೆಟ್ ಕಲಾಪದ ಮುಂದುವರಿದ ಭಾಗವೆಂದು ಸರ್ಕಾರ ಬಿಂಬಿಸುತ್ತಿದೆ. ಆದರೆ, ಇದು ಕಾನೂನುಬಾಹಿರವಾಗಿದೆ ಎಂದು ಪತ್ರದಲ್ಲಿ ಹೇಳಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9148525233, 7899235388

MNC ಕಂಪನಿಗಳಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ರೂಮ್, ESI, PF, OT. 18,500-47,500. SSLC, PUC. 8861041526, 7022121680.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ವ್ಯಾಪಾರ

Business to Business

Hotel & Restaurant

RUNNING DARSHINI hotels with seating for sale in Malleshwaram and Peenya. Contact 9845747879

Business Offers

General

CONTRACTOR/ PARTNER Required for running new Cement Brick Industry, Pavgada, Tumkur. Contact: 9448526221/ 9916211075

ಪ್ರವಾಸ

Travel

16.11.2023 08.01.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 22.11.2023 08.12.2023 13.01.2024 ದುಬೈ,ಅಬುದಾಬಿ 5 ದಿನಗಳು. 06.12.2023 12.01.2024 ನೇಪಾಳ 9 ದಿನಗಳು. 23.12.2023 12.01.2024 ಭೂತಾನ್ 8 ದಿನಗಳು. 17.11.2023 11.12.2023 ಶ್ರೀಲಂಕಾ 6 ದಿನಗಳು. 22.11.2023 06.12.2023 13.01.2024 ರಾಜಸ್ಥಾನ್ 10 ದಿನಗಳು. 12.12.2023 13.01.2024 ಗುಜರಾತ್ 8 ದಿನಗಳು. 27.11.2023 05.01.2024 ಅಸ್ಸಾಂ,ಮೇಘಾಲಯ 9 ದಿನಗಳು. 11.12.2023 04.01.2024 ಕಾಶಿ,ಗಯಾ ಅಲಹಾಬಾದ್ 7 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 24/11 ರಾಯಲ್ ರಾಜಸ್ತಾನ, ಜೈಪುರ್ 21/12 ಗುಜರಾತ್, ನಾಗನಾಥ, ಸೋಮನಾಥ್. 15/11 ಹೈದರಾಬಾದ್, ರಮನಾಚಾರ್ಯ. 9591017782, 9964527782

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Koppal

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕು,ಹನುಮಸಾಗರ ಪಟ್ಟಣದಲ್ಲಿ,ರಾಜ್ಯ ಹೆದ್ದಾರಿ`59,ಕುಷ್ಟಗಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ 4`ಸೈಟ್`ಗಳು ಮಾರಾಟಕ್ಕಿವೆ. (ಒಟ್ಟು`5400 ಚದುರಅಡಿ) ಮಾಹಿತಿಗಾಗಿ`ಸಂಪರ್ಕಿಸಿ: 9901594833, 8431173450.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ನೀವು ನಿಮ್ಮ ಮನೆ/ಸೈಟ್ ಮಾರಾಟ/ಖರೀದಿ ಮಾಡುವಾಗ ಮಾಡಬೇಕಾದ ಮೊದಲ ಕೆಲಸ
#1 ಇಲ್ಲಿ ಜಾಹೀರಾತು ನೀಡಿರಿ
www.dhclassifieds.com
ಬುಕ್ ಮಾಡಿ
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿ! ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9900428036 | +91 9731810277 |
+91 9845114560 | +91 9901641752 |
+91 9886213331 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮಂದಗತಿಯ ವಿಚಾರಣೆ ಪ್ರಕ್ರಿಯೆಗೆ ಸುಪ್ರೀಂ ಕೋರ್ಟ್ ಅಸಮಾಧಾನ

ತ್ವರಿತ ವಿಚಾರಣೆಗೆ ಸೂಚನೆ

ನವದೆಹಲಿ (ಪಿಟಿಐ): ಕಾನೂನು ಪ್ರಕ್ರಿಯೆಯು ಮಂದಗತಿಯಲ್ಲಿ ಸಾಗಿದರೆ ಕಕ್ಷಿದಾರರು ಭ್ರಮನಿರಸನಗೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅಲ್ಲದೆ, ಹಳೇ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ಹೈಕೋರ್ಟ್‌ಗಳು ಸೇರಿದಂತೆ ಕೋರ್ಟ್‌ಗಳಿಗೆ ಕೆಲ ನಿರ್ದೇಶನಗಳನ್ನು ನೀಡಿದೆ.

ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್, ಅರವಿಂದ ಕುಮಾರ್ ಅವರಿದ್ದ ಪೀಠವು, ಒಟ್ಟಾರೆ ಪರಿಸ್ಥಿತಿಯನ್ನು ಸುಧಾರಿಸಲು ನ್ಯಾಯಾಲಯ ಹಾಗೂ ವಕೀಲರ ಸಂಘಗಳ ಜಂಟಿ ಸಹಯೋಗ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟಿತು.

ರಾಷ್ಟ್ರೀಯ ನ್ಯಾಯಾಂಗ ದತ್ತಾಂಶ ಕೋಶದ (ಎನ್‌ಜೆಡಿಜಿ) ಮಾಹಿತಿಯನ್ನು ಉಲ್ಲೇಖಿಸಿ, ಕೆಲವು ಪ್ರಕರಣಗಳು 50 ವರ್ಷಗಳಿಂದ ಬಾಕಿ ಉಳಿದಿವೆ. ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶದಲ್ಲಿ ಕೆಲ ಪ್ರಕರಣಗಳು 65 ವರ್ಷ ಕಳೆದರೂ ಇತ್ಯರ್ಥವಾಗಿಲ್ಲ ಎಂದು ಹೇಳಿತು.

ತ್ವರಿತ ವಿಚಾರಣೆ ಸಂಬಂಧ 11 ನಿರ್ದೇಶನಗಳನ್ನು ನೀಡಿದ ಪೀಠವು, 'ಇದು, ನ್ಯಾಯ ಯಾರಿಗೂ ಕಾಯುವುದಿಲ್ಲ ಎಂಬ ಕಾಲಘಟ್ಟ, ಹೈಕೋರ್ಟ್‌ಗಳ ಎಲ್ಲ ಸಿಜೆಗಳಿಗೆ ಮನವಿ ಮಾಡಿದ್ದು, ಕೆಳಹಂತದ ಕೋರ್ಟ್‌ಗಳಿಗೆ ಸೂಚನೆಗಳನ್ನೂ ನೀಡಲಾಗಿದೆ' ಎಂದು ತಿಳಿಸಿತು.

ಸಿವಿಲ್ ವಿವಾದದ ಸಂಬಂಧ ಉತ್ತರಾಖಂಡ ಹೈಕೋರ್ಟ್ ಆದೇಶ ಉಲ್ಲೇಖಿಸಿ ಯಶಪಾಲ್ ಜೈನ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಪ್ರಕರಣದ ವಿಚಾರಣೆ 43 ವರ್ಷದ ಹಿಂದೆ ಆರಂಭವಾಗಿದ್ದು, ಇನ್ನೂ ಪ್ರಗತಿಯಲ್ಲಿದೆ.

ಹೈಕೋರ್ಟ್ ಆದೇಶಕ್ಕೆ ತಡೆ ನೀಡದ ಸುಪ್ರೀಂ ಕೋರ್ಟ್ ಪೀಠವು, ಪ್ರಕರಣವನ್ನು ಆರು ತಿಂಗಳಲ್ಲಿ ಇತ್ಯರ್ಥಪಡಿಸಬೇಕು ಎಂದು ಕೋರ್ಟ್‌ಗೆ ಸೂಚಿಸಿತು. ಇದೇ ಸಂದರ್ಭದಲ್ಲಿ ಮೇಲಿನ ಅಭಿಪ್ರಾಯಗಳನ್ನು ಪೀಠ ವ್ಯಕ್ತಪಡಿಸಿತು.

ಹೈಕೋರ್ಟ್‌ಗಳು ಮತ್ತು ಕೆಳಹಂತದ ಕೋರ್ಟ್‌ಗಳಿಗೆ ನೀಡಲಾದ ನಿರ್ದೇಶನಗಳನ್ನು ತೀರ್ಪು ಪ್ರಕಟವಾದ ವೇಳೆ ಓದಲಿಲ್ಲ. ಆ ತೀರ್ಪನ್ನು ಕೋರ್ಟ್‌ನ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿದ ಬಳಿಕ ಈ ನಿರ್ದೇಶನಗಳ ವಿವರ ಗೊತ್ತಾಗಿದೆ.

ನಿಥಾರಿ ಕೊಲೆ ಪ್ರಕರಣ: ಉದ್ಯಮಿ ಪಂಧೇರ್ ಬಿಡುಗಡೆ

ನೋಯ್ಡಾ (ಪಿಟಿಐ): 2006ರಲ್ಲಿ ನಡೆದಿದ್ದ 'ನಿಥಾರಿ ಸರಣಿ ಹತ್ಯೆ' ಪ್ರಕರಣದಲ್ಲಿ ಸಿಬಿಐ ವಿಶೇಷ ನ್ಯಾಯಾಲಯದಿಂದ ಖುಲಾಸೆಗೊಂಡಿರುವ ಮೋನಿಂದರ್ ಸಿಂಗ್ ಪಂಧೇರ್ ಗ್ರೇಟರ್ ನೋಯ್ಡಾದ ಲುಕ್ಸರ್ ಜೈಲಿನಿಂದ ಶುಕ್ರವಾರ ಬಿಡುಗಡೆಯಾದರು.

ಜೈಲಿನಿಂದ ಹೊರ ಬಂದ ಪಂಧೇರ್ ಅವರನ್ನು ಇಬ್ಬರು ವಕೀಲರು ಬರ ಮಾಡಿಕೊಂಡರು. ನಂತರ, ಯಾರೊಂದಿಗೂ ಮಾತನಾಡದೇ ಅವರು ಕಾರಿನಲ್ಲಿ ತೆರಳಿದರು.

ಈ ಕೊಲೆ ಪ್ರಕರಣದಲ್ಲಿ ಮರಣ ದಂಡನೆಗೆ ಗುರಿಯಾಗಿದ್ದ ಸುರೇಂದ್ರ ಕೋಲಿ ಹಾಗೂ ಮೋನಿಂದರ್ ಸಿಂಗ್ ಪಂಧೇರ್ ಅವರನ್ನು ಖುಲಾಸೆಗೊಳಿಸಿ ಅಲಹಾಬಾದ್ ಹೈಕೋರ್ಟ್ ಅ.16ರಂದು ಆದೇಶಿಸಿತ್ತು.

ಕೋಲಿ ಮತ್ತೊಂದು ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವುದರಿಂದ, ಜೈಲಿನಿಂದ ಬಿಡುಗಡೆಯಾಗುವ ಸಾಧ್ಯತೆ ಇಲ್ಲ ಎಂದು ವಕೀಲರೊಬ್ಬರು ತಿಳಿಸಿದ್ದಾರೆ.

ಮೋನಿಂದರ್ ಸಿಂಗ್ ಪಂಧೇರ್ ನಿವಾಸದಲ್ಲಿ ಕೆಲಸ ಮಾಡುತ್ತಿದ್ದ ಕೋಲಿ, ಹೆಣ್ಣು ಮಕ್ಕಳಿಗೆ ಆಮಿಷವೊಡ್ಡಿ ಮನೆಗೆ ಕರೆತರುತ್ತಿದ್ದ. ಆ ಬಳಿಕ ಈ ಇಬ್ಬರು ಅತ್ಯಾಚಾರಗೈದು, ಕೊಲೆ ಮಾಡುತ್ತಿದ್ದರು. ಆ ಮೃತದೇಹಗಳನ್ನು ಚರಂಡಿಯಲ್ಲಿ ಬಿಸಾಡುತ್ತಿದ್ದರು ಎಂದು ಪ್ರಾಸಿಕ್ಯೂಷನ್ ಆರೋಪಿಸಿತ್ತು.

ಈ ಇಬ್ಬರಿಗೆ ಗಾಜಿಯಾಬಾದ್‌ನ ಸಿಬಿಐ ನ್ಯಾಯಾಲಯ ಮರಣ ದಂಡನೆ ವಿಧಿಸಿತ್ತು. ಈ ಆದೇಶ ಪ್ರಶ್ನಿಸಿ ಕೋಲಿ ಹಾಗೂ ಪಂಧೇರ್ ಅಲಹಾಬಾದ್ ಹೈಕೋರ್ಟ್ ಮೊರೆ ಹೋಗಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಈ ಇಬ್ಬರ ಮೇಲಿನ ಆರೋಪವನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ಹೇಳಿ, ಇಬ್ಬರನ್ನು ಖುಲಾಸೆಗೊಳಿಸಿತ್ತು.

ಕೊಲಿಜಿಯಂ ಶಿಫಾರಸುಗಳಿಗೆ ಸಿಗದ ತ್ವರಿತ ಅನುಮೋದನೆ: ಸುಪ್ರೀಂ

'ನ್ಯಾಯಮೂರ್ತಿಗಳ ನೇಮಕದಲ್ಲಿ ತಾರತಮ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿ ಕೊಲಿಜಿಯಂ ಶಿಫಾರಸು ಮಾಡುವ ಹೆಸರುಗಳ ವಿಚಾರದಲ್ಲಿ ತಾರತಮ್ಯ ಮಾಡುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್ ಶುಕ್ರವಾರ ಕಳವಳ ವ್ಯಕ್ತಪಡಿಸಿದೆ.

'ಇಂಥ ನಡೆಯಿಂದ ಸೇವಾ ಹಿರಿತನಕ್ಕೆ ಧಕ್ಕೆಯಾಗುತ್ತದೆ. ಅಲ್ಲದೇ, ಅರ್ಹ ಅಭ್ಯರ್ಥಿಗಳು ಸುಪ್ರೀಂ ಕೋರ್ಟ್‌ನಲ್ಲಿ ಸೇವೆ ಸಲ್ಲಿಸುವುದಕ್ಕೆ ಅಡ್ಡಿಯನ್ನುಂಟು ಮಾಡುತ್ತದೆ ಎಂದೂ ಹೇಳಿದೆ.

ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ಆಗುತ್ತಿರುವ ವಿಳಂಬ ಕುರಿತು ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ ಕಿಶನ್ ಕೌಲ್, ಸುಧಾಂಶು ಧುಲಿಯಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ, ಈ ಮಾತು ಹೇಳಿತು. ಶಿಫಾರಸು ಮಾಡಲಾದ ಕೆಲವರ ಹೆಸರುಗಳ ಕಾರಣದಿಂದಾಗಿ ನೇಮಕಾತಿ ಪ್ರಕ್ರಿಯೆಯಲ್ಲಿ ಒಡಕು ಮೂಡಿದಲ್ಲಿ ತೊಂದರೆ ತಪ್ಪಿದ್ದಲ್ಲ. ಇದರಿಂದ, ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದವರ ಪೈಕಿ ಕೆಲವರು ನೇಮಕವಾಗುತ್ತಾರೆ, ಇನ್ನೂ ಕೆಲವರ ನೇಮಕಾತಿ ನಡೆಯುವುದಿಲ್ಲ ಎಂದು ನ್ಯಾಯಪೀಠ ಹೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಬಲ್ಬೀರ್ ಸಿಂಗ್, 'ಬಾಕಿ ಉಳಿದಿರುವ ನೇಮಕಾತಿ ಪ್ರಕ್ರಿಯೆ ಹಾಗೂ ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ವರ್ಗಾವಣೆ ಕುರಿತು ನಿರ್ಧಾರ ಕೈಗೊಳ್ಳಲು ಎರಡು ವಾರಗಳ ಸಮಯಾವಕಾಶ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

'ಈ ವರ್ಗದ ಶಿಫಾರಸುಗಳ ಆಧಾರದಲ್ಲಿ ನಡೆದ ನೇಮಕಾತಿ ಸಂಬಂಧ ಅಧಿಸೂಚನೆಗಳನ್ನು ಹೊರಡಿಸುವ ಕುರಿತು ಕ್ರಮ ಕೈಗೊಂಡಿರುವುದನ್ನು ಮೆಚ್ಚುತ್ತೇವೆ. ಆದರೆ, ಇನ್ನಷ್ಟು ತ್ವರಿತವಾಗಿ ಕ್ರಮ ಜರುಗಿಸುವ ಅಗತ್ಯ ಇದೆ' ಎಂದು ನ್ಯಾಯಮೂರ್ತಿಗಳು ಹೇಳಿದರು.

ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ದುಷ್ಯಂತ ದವೆ, 'ನ್ಯಾಯಮೂರ್ತಿಗಳ ವರ್ಗಾವಣೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಹಸ್ತಕ್ಷೇಪ ಮಾಡಬಾರದು ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಹೇಳುತ್ತಿದ್ದಾರೆ. ತಮಗೆ ಬೇಕಾದವರನ್ನು ಆಯ್ಕೆ ಮಾಡಿ, ವರ್ಗಾವಣೆ ಮಾಡುತ್ತಿದ್ದೇವೆ ಎಂಬುದನ್ನೂ ಹೇಳುತ್ತಿದ್ದಾರೆ' ಎಂದರು.

ಅಲ್ಲದೇ, ಆರ್.ಜಾನ್ ಸತ್ಯಂ ಅವರನ್ನು ಹೈಕೋರ್ಟ್ ನ್ಯಾಯಮೂರ್ತಿಯನ್ನಾಗಿ ನೇಮಕ ಮಾಡುವಂತೆ ಶಿಫಾರಸು ಮಾಡಲಾಗಿದ್ದರೂ, ಈ ವರೆಗೆ ಅನುಮೋದನೆ ನೀಡಿಲ್ಲ ಎಂಬುದನ್ನು ವಕೀಲ ದವೆ ಅವರು ನ್ಯಾಯಪೀಠದ ಗಮನಕ್ಕೆ ತಂದರು.

'ಒಂದು ವೇಳೆ ನಾವು ನಾಲ್ವರ ಹೆಸರನ್ನು ಶಿಫಾರಸು ಮಾಡಿದ್ದರೆ, ಈ ಬಗ್ಗೆ ನೀವು ಅಧಿಸೂಚನೆಯನ್ನು ಹೊರಡಿಸುತ್ತೀರಿ. ನಾಲ್ವರ ಪೈಕಿ ಒಬ್ಬರ ಹೆಸರನ್ನು ತಡೆಹಿಡಿಯುತ್ತೀರಿ. ಈ ಬಗ್ಗೆ ನೀವು ಏನೂ ಹೇಳಿಲ್ಲ' ಎಂದು ಜನರಲ್ ಸಿಂಗ್ ಅವರನ್ನು ಉದ್ದೇಶಿಸಿ ನ್ಯಾಯಪೀಠ ಕೇಳಿತು. ನಂತರ, ಎರಡೂ ಕಡೆಯವರ ವಾದಗಳನ್ನು ಆಲಿಸಿದ ನ್ಯಾಯಪೀಠ, ವಿಚಾರಣೆಯನ್ನು ನವೆಂಬರ್ 7ಕ್ಕೆ ಮುಂದೂಡಿತು.

ರಾಜತಾಂತ್ರಿಕರು ವಾಪಸು: ಕೆನಡಾ ಆರೋಪ ತಳ್ಳಿಹಾಕಿದ ಭಾರತ

ನವದೆಹಲಿ(ಪಿಟಿಐ): ದೇಶದಿಂದ ತನ್ನ 41 ರಾಜತಾಂತ್ರಿಕರನ್ನು ಹಿಂದಕ್ಕೆ ಕರೆಸಿಕೊಳ್ಳುವಂತೆ ಮಾಡಿರುವುದು ಅಂತರರಾಷ್ಟ್ರೀಯ ನಿಯಮಗಳ ಉಲ್ಲಂಘನೆ ಎಂಬುದಾಗಿ ಬಿಂಬಿಸುವ ಕೆನಡಾದ ಯತ್ನಗಳನ್ನು ಭಾರತ ಶುಕ್ರವಾರ ತಿರಸ್ಕರಿಸಿದೆ.

> ನಮ್ಮ ರಾಜತಾಂತ್ರಿಕರ ವಿರುದ್ಧ ಕೈಗೊಂಡಿರುವ ಕ್ರಮವು ಕೆನಡಾ ಮತ್ತು ಭಾರತದಲ್ಲಿರುವ ಲಕ್ಷಾಂತರ ಜನರ ಬದುಕು ಕಷ್ಟಕ್ಕೆ ಸಿಲುಕುವಂತೆ ಮಾಡಿದೆ
> **ಜಸ್ಟಿನ್ ಟ್ರೂಡೊ**, ಕೆನಡಾ ಪ್ರಧಾನಿ

ರಾಜತಾಂತ್ರಿಕ ಸಿಬ್ಬಂದಿ ಸಂಖ್ಯೆ ವಿಷಯದಲ್ಲಿ ಸಮಾನತೆಯನ್ನು ಖಾತ್ರಿಪಡಿಸುವುದಕ್ಕಾಗಿ ಕೈಗೊಂಡಿರುವ ಕ್ರಮವು, ರಾಜತಾಂತ್ರಿಕ ಸಂಬಂಧಗಳ ಕುರಿತ ವಿಯೆನ್ನಾ ಒಪ್ಪಂದಕ್ಕೆ ಅನುಗುಣವಾಗಿಯೇ ಇದೆ ಎಂದು ಹೇಳುವ ಮೂಲಕ ತನ್ನ ನಿಲುವನ್ನು ಭಾರತ ಸಮರ್ಥಿಸಿಕೊಂಡಿದೆ.

ತನ್ನ ರಾಜತಾಂತ್ರಿಕ ಅಧಿಕಾರಿಗಳನ್ನು ಹಿಂದಕ್ಕೆ ಕರೆಸಿಕೊಂಡ ನಂತರ ಮಾತನಾಡಿದ್ದ ಕೆನಡಾ ವಿದೇಶಾಂಗ ಸಚಿವೆ ಮೆಲಾನಿ ಜೋಲಿ, 'ಭಾರತದ ನಡೆಯು ಅಂತರರಾಷ್ಟ್ರೀಯ ಕಾನೂನಿಗೆ ವಿರುದ್ಧವಾದುದು ಹಾಗೂ ವಿಯೆನ್ನಾ ಒಪ್ಪಂದದ ಉಲ್ಲಂಘನೆ' ಎಂದು ಹೇಳಿದ್ದರು. ಇದರ ಬೆನ್ನಲ್ಲೇ, ವಿದೇಶಾಂಗ ಸಚಿವಾಲಯ ಈ ಪ್ರತಿಕ್ರಿಯೆ ನೀಡಿದೆ.

ಚುನಾವಣಾ 'ಚಿಹ್ನೆ': ಬಿಆರ್‌ಎಸ್ ಅರ್ಜಿ ವಿಚಾರಣೆಗೆ ನಕಾರ

ನವದೆಹಲಿ (ಪಿಟಿಐ): ಪಕ್ಷದ ಚಿಹ್ನೆ 'ಕಾರ್' ಅನ್ನು ಹೋಲುವ ಚಿಹ್ನೆಗಳನ್ನು ತೆಲಂಗಾಣದ ಎರಡು ಪಕ್ಷಗಳಿಗೆ ಚುನಾವಣಾ ಆಯೋಗ ಹಂಚಿಕೆ ಮಾಡಿದ್ದನ್ನು ಪ್ರಶ್ನಿಸಿ ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿತು.

ನ್ಯಾಯಮೂರ್ತಿಗಳಾದ ಅಭಯ್ ಎಸ್ ಓಕಾ ಮತ್ತು ಪಂಕಜ್ ಮಿತ್ತಲ್ ಅವರಿದ್ದ ಪೀಠ 'ಮತದಾರರಿಗೆ ಈ ಚಿಹ್ನೆಗಳ ವ್ಯತ್ಯಾಸ ಅರ್ಥವಾಗುವುದಿಲ್ಲ' ಎಂದು ಭಾವಿಸುವಿರಾ ಎಂದು ಪ್ರಶ್ನಿಸಿತು. ಆಗ ಪಕ್ಷ ಅರ್ಜಿ ಹಿಂಪಡೆಯಿತು.

'ಎರಡು ಪಕ್ಷಗಳಿಗೆ ಹಂಚಿಕೆ ಮಾಡಿರುವ ಚಿಹ್ನೆಯಿಂದ ರಾಜಕೀಯವಾಗಿ ಬಿಆರ್‌ಎಸ್ ಮೇಲೆ ಗಂಭೀರ ಪರಿಣಾಮ ಬೀರಬಹುದು' ಎಂಬ ಬಿಆರ್‌ಎಸ್ ಪರ ವಕೀಲರಾದ ಮುಕುಲ್ ರೊಹಟಗಿ ಮತ್ತು ಮೀನಾಕ್ಷಿ ಅರೋರಾ ಅವರ ವಾದವನ್ನು ನ್ಯಾಯಪೀಠ ತಳ್ಳಿ ಹಾಕಿತು. ಎರಡು ಪಕ್ಷಗಳಿಗೆ ಕ್ರಮವಾಗಿ 'ರೋಡ್ ರೋಲರ್', 'ಚಪಾತಿ ರೋಲರ್' ಅನ್ನು ಚಿಹ್ನೆಯಾಗಿ ಹಂಚಿದ್ದನ್ನು ಆಕ್ಷೇಪ ವ್ಯಕ್ತಪಡಿಸಿ ಪಕ್ಷ ಅರ್ಜಿ ಸಲ್ಲಿಸಿತ್ತು.

ಫೈಜಲ್ ಸದಸ್ಯತ್ವ ಮರುಸ್ಥಾಪನೆ ಪ್ರಶ್ನಿಸಿದ್ದಕ್ಕೆ ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಎನ್‌ಸಿಪಿಯ ಮೊಹಮ್ಮದ್ ಫೈಜಲ್ ಅವರ ಲೋಕಸಭಾ ಸದಸ್ಯತ್ವ ಮರುಸ್ಥಾಪನೆ ಪ್ರಶ್ನಿಸಿ ವಕೀಲರೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿ, ಅರ್ಜಿದಾರರಿಗೆ ₹1 ಲಕ್ಷ ದಂಡ ವಿಧಿಸಿದೆ.

ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದ ಸಂಸದರು ತಮ್ಮ ಸದಸ್ಯತ್ವ ಕಳೆದುಕೊಂಡರೆ, ಸುಪ್ರೀಂ ಕೋರ್ಟ್ ಖುಲಾಸೆಗೊಳಿಸುವ ವರೆಗೂ ಅವರು ಅನರ್ಹರಾಗಿರುತ್ತಾರೆ ಎಂದು ವಾದಿಸಿದ್ದ ವಕೀಲ ಅಶೋಕ್ ಪಾಂಡೆ ಅವರ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಅರವಿಂದ್ ಕುಮಾರ್ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ಪೀಠವು ತಿರಸ್ಕರಿಸಿತು.

'ವೃತ್ತಿಯಲ್ಲಿ ವಕೀಲರಾಗಿದ್ದರೂ ಏಕೆ ಇಂತಹ ಕ್ಷುಲ್ಲಕ ಅರ್ಜಿ ಸಲ್ಲಿಸುತ್ತಿದ್ದೀರಿ' ಎಂದು ತರಾಟೆಗೆ ತೆಗೆದುಕೊಂಡಿತು.

'ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕೆ. ಉಪಾಧ್ಯಾಯ ಅವರು ದೋಷಪೂರಿತವಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಅವರು ಮತ್ತೊಮ್ಮೆ ಸಂವಿಧಾನಬದ್ಧವಾಗಿ ಪ್ರಮಾಣ ಸ್ವೀಕರಿಸಬೇಕು' ಎಂದು ಪಾಂಡೆ ಸಲ್ಲಿಸಿದ್ದ ಪಿಐಎಲ್ ಅನ್ನು ಮತ್ತೊಂದು ಪೀಠ ಅ.13ರಂದು ವಜಾಗೊಳಿಸಿ, ₹5 ಲಕ್ಷ ದಂಡ ವಿಧಿಸಿತ್ತು.

ಏಕಕಾಲಕ್ಕೆ ಚುನಾವಣೆ: ಕಾನೂನು ಆಯೋಗದಿಂದ 25ಕ್ಕೆ ಮಾಹಿತಿ ಸಲ್ಲಿಕೆ

ನವದೆಹಲಿ(ಪಿಟಿಐ): ಲೋಕಸಭೆ ಮತ್ತು ವಿಧಾನಸಭೆಗಳ ಚುನಾವಣೆಗಳನ್ನು ಏಕಕಾಲಕ್ಕೆ ನಡೆಸುವುದಕ್ಕೆ ಸಂಬಂಧಿಸಿದಂತೆ ತಾನು ಸಿದ್ಧಪಡಿಸಿರುವ ಯೋಜನೆ ಕುರಿತ ಮಾಹಿತಿಯನ್ನು ಕಾನೂನು ಆಯೋಗವು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿಗೆ ಅ.25ರಂದು ಸಲ್ಲಿಸಲಿದೆ. ಇತ್ತೀಚೆಗೆ ಮೊದಲ ಸಭೆ ನಡೆಸಿದ್ದ ಕೋವಿಂದ್ ನೇತೃತ್ವದ ಉನ್ನತ ಸಮಿತಿಯು, ಈ ವಿಚಾರವಾಗಿ ಎಲ್ಲ ರಾಜಕೀಯ ಪಕ್ಷಗಳ ಅಭಿಪ್ರಾಯಗಳನ್ನು ಕೇಳಲು ನಿರ್ಧರಿಸಿತ್ತು. ಅದರಂತೆ, ಅಭಿಪ್ರಾಯಗಳನ್ನು ತಿಳಿಸುವಂತೆ ಅವುಗಳಿಗೆ ಪತ್ರವನ್ನು ಬರೆದು, ಎಲ್ಲರಿಗೂ ಒಪ್ಪಿಗೆಯಾಗುವ ದಿನದಂದು ಸಂವಾದ ನಡೆಸಲು ಇಚ್ಛಿಸಿದ್ದಾಗಿ ತಿಳಿಸಿದೆ ಎಂದು ಮೂಲಗಳು ಹೇಳಿವೆ.

ಅಲ್ಲದೇ, ರಾಜಕೀಯ ಪಕ್ಷಗಳು ಮುಂದಿನ ಮೂರು ತಿಂಗಳೊಳಗಾಗಿ ತಮ್ಮ ಅಭಿಪ್ರಾಯಗಳನ್ನು ಲಿಖಿತವಾಗಿ ಸಲ್ಲಿಸುವ ಆಯ್ಕೆಯನ್ನು ಸಮಿತಿ ನೀಡಿದೆ ಎಂದು ಮೂಲಗಳು ಹೇಳಿವೆ.

ವಿಧಾನಸಭೆಗಳ ಅವಧಿಯನ್ನು ವಿಸ್ತರಿಸುವುದು ಅಥವಾ ಕಡಿಮೆ ಮಾಡುವ ಮೂಲಕ 2029ರ ನಂತರ ಲೋಕಸಭಾ ಚುನಾವಣೆಯೊಂದಿಗೆ ವಿಧಾನಸಭೆಗಳ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದ ಸೂತ್ರವೊಂದನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ನಿವೃತ್ತ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ಕಾನೂನು ಆಯೋಗವು ಯೋಜನೆ ರೂಪಿಸುತ್ತಿದೆ.

ಮಾಜಿ ಪ್ರಧಾನಿ ಷರೀಫ್ ಇಂದು ಸ್ವದೇಶಕ್ಕೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರು 4 ವರ್ಷಗಳ ಬಳಿಕ ಶನಿವಾರ ಸ್ವದೇಶಕ್ಕೆ ಮರಳುವ ನಿರೀಕ್ಷೆಯಿದೆ. 4ನೇ ಬಾರಿಗೆ ಅಧಿಕಾರ ಗಳಿಸುವ ಪ್ರಯತ್ನದಲ್ಲಿ ಅವರು ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷ ಮುನ್ನಡೆಸಲಿದ್ದಾರೆ. 73 ವರ್ಷದ, ಪಾಕಿಸ್ತಾನ್ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) ಪಕ್ಷದ ಮುಖಂಡರಾದ ಷರೀಫ್ ಸದ್ಯ ದುಬೈನಲ್ಲಿದ್ದಾರೆ. ಅಲ್ಲಿದ್ದ ಖಾಸಗಿ ವಿಮಾನದಲ್ಲಿ ಪಾಕ್‌ಗೆ ಬರುವ ಸಂಭವವಿದೆ.

ಕರ್ನಾಟಕ ಉಚ್ಚ ನ್ಯಾಯಾಲಯ,
ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು–560 001
ಸಂ: ಜಿಒಬಿ(1) 8/2023 ದಿನಾಂಕ:19.10.2023

ಪ್ರಕಟಣೆ

ಕರ್ನಾಟಕ ನ್ಯಾಯಾಂಗ ಸೇವೆ (ನೇಮಕಾತಿ) ನಿಯಮಗಳು, 2004 ಮತ್ತು ತಿದ್ದುಪಡಿ ನಿಯಮಗಳು 2011, 2015 ಮತ್ತು 2016ರ ಅನ್ವಯ **ನೇರ ನೇಮಕಾತಿ ಮೂಲಕ ಜಿಲ್ಲಾ ನ್ಯಾಯಾಧೀಶರುಗಳ 14 ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು** ಆಹ್ವಾನಿಸಲಾಗಿದೆ. ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ **ದಿನಾಂಕ 17.11.2023.** ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯಪತ್ರದ (ವಿಶೇಷ) ಭಾಗ–V ರಲ್ಲಿ ದಿನಾಂಕ:19.10.2023 ರಂದು ಪ್ರಕಟವಾಗಿರುವ ಉಚ್ಚ ನ್ಯಾಯಾಲಯದ ಅಧಿಸೂಚನೆ ಸಂ.ಜಿಒಬಿ(1)8/2023 ದಿನಾಂಕ 19.10.2023 ಅನ್ನು ನೋಡಬಹುದಾಗಿದೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್: **https://karnatakajudiciary.kar.nic.in/recruitment.php** ಗೆ ಭೇಟಿ ನೀಡಬಹುದು.

ಸಹಿ/- (ಕೆ.ಎಸ್.ಭರತ್ ಕುಮಾರ್)
ವಾಸಾಸಂಇ/ಉನಿ-ಸಿ.ಪಿ/1794/ಕೆಎಸ್‌ಎಂಸಿಎ/2023-24 ರಿಜಿಸ್ಟ್ರಾರ್ ಜನರಲ್

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಹಾವೇರಿ–581 110
ಜಿಲ್ಲೆ : ಹಾವೇರಿ ರಾಜ್ಯ : ಕರ್ನಾಟಕ
ವೆಬ್‌ಸೈಟ್ : www.havericity.mrc.gov.in ದೂರವಾಣಿ ಕಛೇರಿ : 08375–232444
ಇ–ಮೈಲ್ : itstaff_ulb_haveri@yahoo.com ಜನಹಿತ ಸಹಾಯವಾಣಿ : 080 375–23108108
ಕ್ರ.ಸಂ/ನಸಹಾ/ತಾವಿ/2023–24 ದಿನಾಂಕ : 19–10–2023

ಟೆಂಡರ್ ಪ್ರಕಟಣೆ

ಈ ಮೂಲಕ ಯಾವತ್ತು ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಇ–ಪ್ರಕ್ಯೂರ್‌ಮೆಂಟ್ ಮೂಲಕ ಎಸ್.ಎಫ್.ಸಿ ಅನುದಾನದಡಿಯಲ್ಲಿ ಕಾಮಗಾರಿ ರೂ. **3.71** ಲಕ್ಷ ದಿಂದ ರೂ. **10.00** ಲಕ್ಷದ ಒಟ್ಟು ಆರು ಕಾಮಗಾರಿಗಳ ಮೊತ್ತ ರೂ. **33.22** ಲಕ್ಷದ ಕಾಮಗಾರಿಗಳಿಗೆ ಟೆಂಡರನ್ನು ಕರೆಯಲಾಗಿದ್ದು, ಆಸಕ್ತಿವುಳ್ಳ ಗುತ್ತಿಗೆದಾರರು ತಮ್ಮ ದರಗಳನ್ನು ಈ ಕೆಳಕಾಣಿಸಿದ ವೆಬ್‌ಸೈಟ್ ಮೂಲಕ ನಮೂದಿಸಬಹುದಾಗಿದೆ. **www.eproc.karnataka.gov.in** ದಲ್ಲಿ ನೋಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯಲ್ಲಿ ಸಂಬಂಧಪಟ್ಟ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಪೌರಾಯುಕ್ತರು, ನಗರಸಭೆ, ಹಾವೇರಿ
ವಾ.ಸಾ.ಇ./ಹಾವೇರಿ/280/2023–24/ದೇಶಪಾಂಡೆಪಬ್ಲಿಸಿಟಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಸೋಮಗುದ್ದು ರಸ್ತೆ, ಚಳ್ಳಕೆರೆ.
ದೂ.ಸಂ: 08195–250307 E.Mail I.D.: ubpee06@gmail.com
ಸಂಖ್ಯೆ: ಕಾಇಂ/ವಿಜನಿನಿ/ಭಮೇಯೋ/ವಿ–6/ಚಳ್ಳಕೆರೆ/ಟೆಂಡರ್ ಪ್ರಕಟಣೆ/2023–24/803 ದಿನಾಂಕ: 18.10.2023

ಕೊಟೇಷನ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನಂ.148, ಎಂಬೇಸಿ ಸ್ಕ್ವೇರ್, ಇನ್‌ಫ್ಯಾಂಟರಿ ರೋಡ್, ಬೆಂಗಳೂರು–560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಚಳ್ಳಕೆರೆ ಕಛೇರಿಯಡಿ ಬರುವ ಕಾಮಗಾರಿಗೆ ಸಂಬಂಧಿಸಿದಂತೆ Informative quotations are invited for the works under conducting third party inspection by consultants for QUALITY monitoring in Respect of Upper Bhadra Project for the "Survey,Design, Supply, Installation, Testing and Commissioning of Micro Irrigation System under Jagalur Branch Canal comprising Gravity Bulk Feeders, Construction of Sump cum Pump House, Supplying and installation of Pumping Machineries, Terminal Bay, Electrical Sub-station, Electrical Power line and other appurtenant works including construction of Pipe Distribution Network and Automated Drip Irrigation system for providing irrigation facility to 18423 Ha and filling up of 09 Nos. tanks coming under Jagalur Block of Jagalur Branch Canal under Upper Bhadra Project including SCADA with all accessories Operation and Maintenance for 5 years after the date of completion and transfer (BOMT) on Turnkey basis". (JBC-Package-1) (Indent No:1692) Reg.Conducting third party inspection ಕಾಮಗಾರಿಗೆ ಬಂಧಿಸಿದಂತೆ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದ್ದು, ದಿನಾಂಕ: 17.10.2023 ರಿಂದ 27.10.2023 ರ ಸಂಜೆ 5.00 ಗಂಟೆಯವರೆಗೆ ಈ ಕೆಳಗೆ ಸಹಿ ಮಾಡಿರುವ ವಿಭಾಗ ಕಛೇರಿಗೆ ಸಲ್ಲಿಸಬಹುದಾಗಿರುತ್ತದೆ. ವಿವರವಾದ ಕೊಟೇಶನ್‌ನ್ನು ನಿಗಮ ವೆಬ್‌ಸೈಟ್‌ನಲ್ಲಿ www.vjnl.in ಪ್ರಕಟಿಸಿದ್ದು, ಅಲ್ಲಿಂದ ಅಥವಾ ಕಚೇರಿ ಸಮಯದಲ್ಲಿ ಈ ಕಚೇರಿಯಿಂದ ವಿವರವನ್ನು ಪಡೆಯಬಹುದಾಗಿರುತ್ತದೆ. ಸದರಿ ಪ್ರಕಟಣೆಯನ್ನು ಪ್ರಕಟಿಸಿದ ಅಧಿಕಾರಿಯು ಯಾವುದೇ ಕಾರಣ ನೀಡದೆ ಸದರಿ ಅಧಿಸೂಚನೆಯನ್ನು ಮಾರ್ಪಡಿಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

DIPR/CTA/KSMCA/283/2023-24 ಸಹಿ/ ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭ.ಮೇ.ಯೋ. ವಿಭಾಗ ನಂ.06, ಚಳ್ಳಕೆರೆ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eepwdmys21@gmail.com ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:04/2023–24, ದಿನಾಂಕ: 16.10.2023

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ದ್ವಿ ಲಕೋಟೆಯಲ್ಲಿ ಸ್ಟ್ಯಾಂಡರ್ಡ್ ಬಿಡ್‌ಡಾಕ್ಯುಮೆಂಟ್ ಕೆಡಬ್ಲ್ಯೂ–4ರ ನಿಯಮಾವಳಿಗಳಂತೆ ಹೊರಡಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿರುವ ಟೆಂಡರ್ ನಿಯಮಾನುಸಾರ 1ನೇ ದರ್ಜೆ ಮತ್ತು 2ನೇ ದರ್ಜೆ ಗುತ್ತಿಗೆದಾರರು ಭಾಗವಹಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (viz https://kppp.Karnataka.gov.in) ಒಟ್ಟು 06 ಸಂಖ್ಯೆ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ದಿನಾಂಕ 07.11.2023ರ ಸಂಜೆ 5:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.1370.00 ಲಕ್ಷಗಳು, ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.498.00ಲಕ್ಷಗಳಾಗಿದ್ದು ಹಾಗೂ ಗರಿಷ್ಠ ಇ.ಎಂ.ಡಿ ರೂ.15.00 ಲಕ್ಷಗಳು ಮತ್ತು ಕನಿಷ್ಠ ಇ.ಎಂ.ಡಿ ರೂ 7.47ಲಕ್ಷಗಳಾಗಿರುತ್ತದೆ. ಟೆಂಡರ್ ಪೂರ್ವಬಾವಿ ಸಭೆಯನ್ನು ದಿನಾಂಕ 26.10.2023ರ ಬೆಳಿಗ್ಗೆ 11:30ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ನಿಗದಿಪಡಿಸಲಾಗಿದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

ರೈಲು ಗಾಲಿ ಕಾರ್ಖಾನೆ ಯಲಹಂಕ, ಬೆಂಗಳೂರು-560064.
ವೆಬ್‌ಸೈಟ್: www.rwf.indianrailways.gov.in

ಪಿಂಚಣಿ ಅದಾಲತ್

ರೈಲು ಗಾಲಿ ಕಾರ್ಖಾನೆಯ ಪಿಂಚಣಿದಾರರು ಮತ್ತು ಕುಟುಂಬ ಪಿಂಚಣಿದಾರರ **"ಪಿಂಚಣಿ ಸವಲತ್ತು"** ಗಳಿಗೆ ಮಾತ್ರವೇ ಸಂಬಂಧಿಸಿದಂತೆ ಕುಂದುಕೊರತೆಗಳನ್ನು ಬಗೆಹರಿಸಲು **ಪಿಂಚಣಿ ಅದಾಲತ್‌ನ್ನು 15.12.2023 (ಶುಕ್ರವಾರ), 10.30 ರೈಲು ಗಾಲಿ ಕಾರ್ಖಾನೆಯ ಆಡಳಿತ ಕಟ್ಟಡದ ಸಭಾಭವನದಲ್ಲಿ ನಡೆಸಲಾಗುತ್ತದೆ.**
ಪಿಂಚಣಿದಾರರು ಮತ್ತು ಕುಟುಂಬ ಪಿಂಚಣಿದಾರರು ತಮ್ಮ ದೂರಗಳನ್ನು ಸಂಪೂರ್ಣ ವಿವರಗಳೊಂದಿಗೆ **"ಪಿಂಚಣಿ ಅದಾಲತ್–2023"** ಎಂಬ ಮೇಲ್ಬರಹವಿರುವ ಲಕೋಟೆಯಲ್ಲಿ ಸಹಾಯಕ ಕಾರ್ಮಿಕ ಅಧಿಕಾರಿ, ರೈಲು ಗಾಲಿ ಕಾರ್ಖಾನೆ, ಯಲಹಂಕ, ಬೆಂಗಳೂರು–560 064 ಇವರಿಗೆ ದಿನಾಂಕ: 31.10.2023 ರೊಳಗೆ ತಲುಪುವಂತೆ ಕಳುಹಿಸಬಹುದು ಅಥವಾ ಅವರ ಕುಂದುಕೊರತೆಗಳನ್ನು **ks.poornima@gov.in ಗೆ ಇ–ಮೇಲ್ ಮಾಡಬಹುದು**
ಸಂಪೂರ್ಣ ಕಾನೂನು ಪ್ರಕ್ರಿಯೆಯ ಅಥವಾ ನಿಯಮಾವಳಿಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಪಿಂಚಣಿ ಅದಾಲತ್‌ನಲ್ಲಿ ಪರಿಗಣಿಸಲಾಗುವುದಿಲ್ಲ.

ಪ್ರಧಾನ ಮುಖ್ಯ ಕಾರ್ಮಿಕ ಅಧಿಕಾರಿ

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059. ದೂರವಾಣಿ: 080–28484515 / 4518
ಅಧಿಸೂಚನೆ ಸಂಖ್ಯೆ: ಡಿಪಿಎಸ್21ಪಿಯುಆರ್(ಬಿ)2023–24/ಮ್ಯಾಪ್‌ಲಿಥೋ/ಕರೆ–2 ದಿನಾಂಕ : 19.10.2023

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಅಲ್ಪಾವಧಿ ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಮ್ಯಾಪ್‌ಲಿಥೋ ಮುದ್ರಣ ಕಾಗದಗಳ ಸಂಗ್ರಹಣೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ.488.52 ಲಕ್ಷಗಳು** ಹಾಗೂ ಇ.ಎಂ.ಡಿ.ಯು **ರೂ.24.43 ಲಕ್ಷ**ಗಳಾಗಿರುತ್ತದೆ. ಟೆಂಡರ್‌ನ ಪೂರ್ವಭಾವಿ ಸಭೆಯ ದಿನಾಂಕ: **25.10.2023, ಬೆಳಿಗ್ಗೆ 11:30ಕ್ಕೆ** ಹಾಗೂ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: **27–10–2023, 17:30 ಗಂಟೆ**ಗಳಾಗಿರುತ್ತದೆ. ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು
ವಾಸಾಸಂಇ/ವಾ.ಪ್ರ/1795/ಎಂಎಎ/2023–24

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು–570 001
Ph: +91-0821-2520512 (Off.), 2520803 (Fax)
Website: www.mmcri/karnataka.gov.in
E-mail: mmcrimysore@yahoo.com
ಸಂ. ಸರಬ/ವಿವ/179/2023–24 ಅಕ್ಟೋಬರ್ 03, 2023

ಅಲ್ಪಾವಧಿ ಮರು–ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಸಹ ಆಸ್ಪತ್ರೆಗಳಿಗೆ ಸಾಮಾನ್ಯ ಶಸ್ತ್ರಚಿಕಿತ್ಸಾ ಪದಾರ್ಥಗಳನ್ನು ಸರಬರಾಜು ಮಾಡಲು ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿದ್ಯುನ್ಮಾನ ವೇದಿಕೆ ಮುಖಾಂತರ ಅಲ್ಪಾವಧಿ ಮರು–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ಮೂಲಕ ದಿನಾಂಕ 20.10.2023 ರಿಂದ ಪಡೆಯಬಹುದಾಗಿದ್ದು, ದಿನಾಂಕ 04.11.2023 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್
DIPR/DDMYS/KSMCA/541/2023-24

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ ನಂ.1 ತುಂಗಭದ್ರಾ ಜಲಾಶಯ ವಿಭಾಗ ಮುನಿರಾಬಾದ್
Mail ID-trdmrb@gmail.com Phone No: 08539-270306
EE/KNNL No.1 TRD/VNC Moder-IFB/1516 Date : 26.09.2023
EE/KNNL No.1 TRD/VNC Moder-IFB/1517 Date : 26.09.2023

ಟೆಂಡರ್ ಪ್ರಕಟಣೆ
(Only through kppp-procurement portal) (Two Cover)
OPEN COMPETITIVE BIDDING (OCB)
(AS PER ADB'S SINGLE STAGE TWO ENVELOPE BIDDING PROCEDURE)

ಈ ವಿಭಾಗದ ವ್ಯಾಪ್ತಿಗೆ ಒಳಪಡುವ ವಿಜಯನಗರ ಕಾಲುವೆ ಉಪ ವಿಭಾಗ, ಕಮಲಾಪುರ ವ್ಯಾಪ್ತಿಯಲ್ಲಿ ಬರುವ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿನ "1) Construction of Cut and Cover for Raya Channel from Ch: 8.900 to 8.970 Km, Trough from Ch: 2.200 to 3.200 km of Bella Channel and Chain Link Fencing km 0.400 to 6.700 km in Basavanna Channel under Modernisation of Vijayanagara Channels" (OCB No.KNNL-VNC-OCB-03/2). & 2) Construction of Cut and Cover for Basavanna Channel from Ch: 3.200 to 3.280 Km and Ch: 3.470 to 6.257 Km under Modernisation of Vijayanagara Channels (OCB No.KNNL-VNC-OCB-03/3), ಕಾಮಗಾರಿಯನ್ನು ಇ–ಪ್ರಕ್ಯೂರಮೆಂಟ್ ಪೋರ್ಟಾಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಯ **Item Rate Basis** ಟೆಂಡರ್‌ನ್ನು "ಎ.ಡಿ.ಬಿ ದ್ವಿಲಕೊಟೆಯ" ನಿಯಾಮಾವಳಿಗಳಂತೆ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ಕರೆಯಲಾಗಿದೆ. ಸದರಿ ಕಾಮಗಾರಿಯ ಅಂದಾಜು ಮೊತ್ತು ರೂ. **11.00** ರಿಂದ **50.00** ಕೋಟಿಗಳು ಇರುತ್ತವೆ. **ದಿನಾಂಕ: 26.10.2023** ರಂದು ಬೆಳಿಗ್ಗೆ **11.00** ಗಂಟೆಗೆ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ, ಬೆಂಗಳೂರು ಕಛೇರಿಯಲ್ಲಿ ಪ್ರೀಬಿಡ್ ಸಭೆಯನ್ನು ನಿಗಧಿಪಡಿಸಲಾಗಿದೆ ಹಾಗೂ ಇ–ಪ್ರಕ್ಯೂರಮೆಂಟ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 15.11.2023** ಸಂಜೆ **3.00** ಗಂಟೆಗೆ ಮತ್ತು **ದಿನಾಂಕ: 17.11.2023** ಸಾಯಂಕಾಲ **04.00** ಗಂಟೆಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಸದರಿ ಕಾಮಗಾರಿಯ ವಿವರಗಳನ್ನು **https://kppp.karnataka.gov.in/** ಅಂತರ್ಜಾಲದಲ್ಲಿ ಪಡೆಯಬಹುದು. ಮತ್ತು ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯ ದೂರವಾಣಿ ಸಂ: **08539–270306** ಹಾಗೂ **e-mail: trdmrb@gmail.com** ಗೆ ಸಂಪರ್ಕಿಸಲು ಹಾಗೂ ಕೆಲಸದ ದಿನಗಳಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕನೀನಿನಿ,ನಂ.1 ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್.
ಡಿಐಪಿಆರ್/ಕೊಪ್ಪಳ/199/ಕೆಎಸ್‌ಎಂಸಿಎ/2023–24

ಕೆನರಾ ಬ್ಯಾಂಕ್ Canara Bank ಸಿಂಡಿಕೇಟ್ Syndicate (ಭಾರತ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಆಡಳಿತ ವಿಭಾಗ, ಕೆನರಾ ಬ್ಯಾಂಕ್, ವೃತ್ತ ಕಚೇರಿ, ಮಂಗಳೂರು– 575001.
ಫೋನ್: 0824–2441811, ಇ–ಮೇಲ್: pecomlr@canarabank.com

ಚಿಕ್ಕಮಗಳೂರು ಜಿಲ್ಲೆ, ಪಂಚನಹಳ್ಳಿಯಲ್ಲಿ ಬ್ಯಾಂಕ್ ಶಾಖೆಯ ಕಟ್ಟಡ ನಿರ್ಮಾಣಕ್ಕಾಗಿ ಟೆಂಡರ್

ಕರ್ನಾಟಕ– 577182, ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲೂಕು, ಪಂಚನಹಳ್ಳಿ ಗ್ರಾಮದ ಪ್ಲೋಟ್ ನಂ. 7/2ಪಿ ರಲ್ಲಿರುವ ಬ್ಯಾಂಕ್‌ನ ಸ್ವಂತ ಆಸ್ತಿಯಲ್ಲಿ ಶಾಖೆಯ ಕಟ್ಟಡವನ್ನು ನಿರ್ಮಿಸಲು ಎರಡು ಬಿಡ್ಡ್ ವ್ಯವಸ್ಥೆಯಲ್ಲಿ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಹೆಚ್ಚಿನ ವಿವರ ಮತ್ತು ಟೆಂಡರ್ ಫಾರ್ಮ್‌ಗಳಿಗಾಗಿ ಬ್ಯಾಂಕಿನ ವೆಬ್‌ಸೈಟ್ **https://www.canarabank.com., https://eprocure.gov.in** ಅಥವಾ ನಮ್ಮ ಕಚೇರಿಯಿಂದ ಪಡೆಯಬಹುದು.
ಟೆಂಡರ್ ಫಾರ್ಮ್‌ನ್ನು ಸಲ್ಲಿಸಲು ಕೊನೆಯ ದಿನಾಂಕ **13.11.2023 ಸಂಜೆ 3.00 ಗಂಟೆ.** ಮುಂದಿನ ಸಂವಹನ, ತಿದ್ದುಪಡಿ ಮತ್ತು ಬದಲಾವಣೆಗಳಿದ್ದಲ್ಲಿ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ನೀಡಲಾಗುವುದು. ಅಪೂರ್ಣ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

ಸ್ಥಳ: ಮಂಗಳೂರು, ದಿನಾಂಕ: 20.10.2023 ಸಹಿ/– ಸಹಾಯಕ ಮಹಾಪ್ರಬಂಧಕರು, ವೃತ್ತ ಕಚೇರಿ, ಮಂಗಳೂರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಸಂ. 4, 100 ಅಡಿ ರಿಂಗ್ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು–560 085
ದೂ: 080–26980100, ಫ್ಯಾಕ್: 080–26422377
ಇ–ಮೇಲ್: dpi.dsert-ka@gmail.com | ವೆಬ್‌ಸೈಟ್: http://dsert.kar.nic.in
ಸಂಖ್ಯೆ: DPI/2023-24/SE0078 ದಿನಾಂಕ:20.10.2023

ಪ್ರಕಟಣೆ
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಇಂಗ್ಲಿಷ್ (REISI), ಜ್ಞಾನ ಭಾರತಿ ಆವರಣ, ಬೆಂಗಳೂರು, ಇಲ್ಲಿನ ಕ್ಯಾಂಟೀನ್ ನಿರ್ವಹಣೆಗಾಗಿ ಆಸಕ್ತ ಆಹಾರ ಪೂರೈಕೆ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಬಿಡ್ ಸಲ್ಲಿಸಲು ಕೊನೆಯ **ದಿನಾಂಕ: 20.11.2023** ಆಗಿರುತ್ತದೆ. ವಿವರವನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 080–26980100 ನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು
ವಾಸಾಸಂಇ/ವಾಪ್ರ/ಜಿಎ/1823/2023–24

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಒಡೆತನಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಬೆಸ್ಕಾಂ ವಿಚಾರಣೆಯ ಸಂಖ್ಯೆ: **BESCOM/2023-24/SE0016/CALL-2 ದಿನಾಂಕ:17.10.2023** ಅನುಸಾರ ಟೆಂಡರ್ ಅನ್ನು ಆಹ್ವಾನಿಸುತ್ತದೆ . "ಯಾಂತ್ರೀಕೃತ ಗೃಹರಕ್ಷಕ ಸೇವೆಗಳು, ಭದ್ರತಾ ಸೇವೆಗಳು,ತೋಟಗಾರ, ಎಸ್‌ಟಿಪಿ ಆಪರೇಟರ್‌ಗಳನ್ನು ಬೆಸ್ಕಾಂ ಇಂಟಿಗ್ರೇಟೆಡ್ ಕಂಟ್ರೋಲ್ ಸೆಂಟರ್‌ಗಳಿಗೆ (ಬಿಐಸಿಸಿ–1 ಮತ್ತು ಬಿಸಿಸಿ–2) HSR ಲೇಔಟ್ ಮತ್ತು ರಾಜಾಜಿನಗರ , ಬೆಂಗಳೂರು " ಒದಗಿಸಲು ಟೆಂಡರನ್ನು ಆಹ್ವಾನಿಸಲಾಗಿದೆ.
ಬಿಡ್ ದಸ್ತಾವೇಜುಗಳ ವಿತರಣೆ ದಿನಾಂಕ: **25.10.2023 @16:00** ಗಂಟೆಯಿಂದ ಬಿಡ್ ಸ್ವೀಕೃತಿಯ ಕೊನೆಯ ದಿನಾಂಕ: **02.11.2023 @16:00** ಗಂಟೆಯವರೆಗೆ. ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರವಾದ ಪ್ರಕಟಣೆಯನ್ನು **https://kppp.karnataka.gov.in** ವೆಬ್‌ಸೈಟ್‌ನ್ನು ಪ್ರವೇಶಿಸಿ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳ ಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/ ಪ್ರಧಾನ ವ್ಯವಸ್ಥಾಪಕರು (ವಿ) ಡಾಸ್,ಟಿಐಸಿ & ಎಸ್.ಜಿ, ಬೆವಿಕಂ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
No:RGU/ENG/ACS/CMC/43/2022-23 ದಿನಾಂಕ: 18.10.2023

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇವರು ರಾಗಾಆವಿವಿಗೆ Annual Comprehensive Maintenance Contract service for Air Conditioners ಸೇವೆಗಳನ್ನು ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ.

RGUHSK/2024-24/SE0001/CALL-2

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	18/10/2023
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	25/10/2023 4:30 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	26/10/2023 4.31 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.
ಸಹಿ/– ಕುಲಸಚಿವರು
ವಾ.ಸಾ.ಸಂ.ಇ/1800/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ–591304, ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)
ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2023–24/2132 ದಿನಾಂಕ:19.10.2023

ಅಲ್ಪಾವಧಿ ಟೆಂಡರ ಅಧಿಸೂವನೆ
(ಇ–ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲೂಡಿ ಕ್ಲಾಸ್–2 ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.eproc.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ ರೂ ರೂ. 423.67 ಲಕ್ಷ

1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:21.10.2023 ರ 10.30 ಬೆಳಿಗ್ಗೆ ರಿಂದ 02.11.2023 ರ ಸಾಯಂಕಾಲ 4.00 ಗಂಟೆ ವರಗೆ, 2:ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ:31.10.2023 ರ ಸಾಯಂಕಾಲ 4.00 ವರೆಗೆ, 3:ಫ್ರಿ ಬಿಡ್ ಮಿಟಿಂಗ್ ದಿನಾಂಕ:(ಕಾ.ನಿ.ಇಂ. ಕನಿನಿನಿ ಎಚ್.ಬಿ.ಸಿ. ವಿಭಾಗ ಅಥಣಿ): ದಿನಾಂಕ 30.10.2023 ರ 11.00 ಬೆಳಿಗ್ಗೆ,4:ಪೂರ್ಣವಾಗಿ ತುಂಬಿದ ಇ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 21.10.2023 ರ 10.30 ಬೆಳಿಗ್ಗೆ ರಿಂದ 02.11.2023 ರ ಸಾಯಂಕಾಲ 4.00 ಗಂಟೆ ವರಗೆ, 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ):04.11.2023 ರ ಬೆಳಿಗ್ಗೆ 11.00 ಗಂಟೆಗೆ. 6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:07.11.2023 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ), 7:ಗುತ್ತಿಗೆದಾರರು ಮೂಲ ದಾಖಲೆಗಳನ್ನು ಇ.ಇ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ ಕಚೇರಿ ಯಲ್ಲಿ ಹಾಜರಪಡಿಸುವ ದಿನಾಂಕ:06.11.2023 ಬೆಳ್ಳಿಗ್ಗೆ 11.00 ಗಂಟೆಗೆ

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.eproc.karnataka.gov.in/e-protal/index.seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–ಎಸ್.ಜಿ. ಶ್ರೀನಾಥ್, ಕಾರ್ಯನಿರ್ವಾಹಕ ಇಂಜಿನೀಯರರು, ಎಚ್.ಬಿ.ಸಿ ವಿಭಾಗ, ಅಥಣಿ
DIPR/BGM/RO-NO-544/KSMCA/2023-24

ಒಂದು ಕ್ಷೇತ್ರದ ಅಭ್ಯರ್ಥಿ ಹೆಸರು ಮಾತ್ರ ಬಾಕಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಧ್ಯಪ್ರದೇಶದ ವಿಧಾನಸಭೆ ಚುನಾವಣೆಗಾಗಿ ಕಾಂಗ್ರೆಸ್ 88 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಗುರುವಾರ ತಡರಾತ್ರಿ ಬಿಡುಗಡೆ ಮಾಡಿದೆ.

ನವೆಂಬರ್ 17ರಂದು 230 ಸದಸ್ಯ ಸ್ಥಾನಕ್ಕೆ ನಡೆಯಲಿರುವ ಚುನಾವಣೆಗೆ ಒಬ್ಬ ಅಭ್ಯರ್ಥಿ ಬಿಟ್ಟು ಉಳಿದ ಎಲ್ಲಾ ಅಭ್ಯರ್ಥಿಗಳ ಹೆಸರು ಪ್ರಕಟಿಸಿದೆ. ಈ ಒಂದು ಸ್ಥಾನಕ್ಕೆ ಉಪ ದಂಡಾಧಿಕಾರಿ ನಿಶಾ ಬಾಂಗ್ರೆ ಅವರನ್ನು ಹೆಸರಿಸಲು ಆಲೋಚಿಸಿದೆ. ಆದರೆ ಆಡಳಿತಾರೂಢ ಬಿಜೆಪಿಯು ಅವರು ತಮ್ಮ ಹುದ್ದೆಗೆ ನೀಡಿರುವ ರಾಜೀನಾಮೆಯನ್ನು ಇನ್ನೂ ಅಂಗೀಕರಿಸಿಲ್ಲ. ಹೀಗಾಗಿ ವಿಷಯ ಈಗ ನ್ಯಾಯಾಲಯದ ಮುಂದಿದೆ.

ಕಾಂಗ್ರೆಸ್ 229 ಸ್ಥಾನಗಳಿಗೆ ಪ್ರಕಟಿಸಿರುವ ಅಭ್ಯರ್ಥಿಗಳ ಪೈಕಿ ಹಾಲಿ ಶಾಸಕರು 93 ಮಂದಿ ಇದ್ದರೆ, 16 ಶಾಸಕರನ್ನು ಕೈಬಿಡಲಾಗಿದೆ. ಎರಡನೇ ಪಟ್ಟಿಯಲ್ಲೇ 10 ಶಾಸಕರನ್ನು ಕೈಬಿಟ್ಟಿದ್ದು 13 ಮಂದಿಯನ್ನು ಉಳಿಸಿಕೊಳ್ಳಲಾಗಿದೆ. ಒಂದು ಕ್ಷೇತ್ರದಲ್ಲಿ ಶಾಸಕರನ್ನು ಕೈಬಿಟ್ಟು ಅವರ ಮಗನಿಗೆ ಟಿಕೆಟ್ ನೀಡಲಾಗಿದೆ.

ನಿಶಾ ಬಾಂಗ್ರೆ ಅವರು ಕಾಂಗ್ರೆಸ್ ಟಿಕೆಟ್ ಬಯಸಿದ್ದಾರೆ. ಬಿಜೆಪಿ ಸರ್ಕಾರ ಅವರ ರಾಜೀನಾಮೆ ಅಂಗೀಕರಿಸದ ಕಾರಣ ಅವರು ಭೋಪಾಲ್ ಹೈಕೋರ್ಟ್ ಮೊರೆ ಹೋಗಿದ್ದಾರೆ.

'ಶಾಸಕರಾಗಲು ಮಾತ್ರ ಅಭ್ಯರ್ಥಿಗಳು ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಪಡೆದಿಲ್ಲ, ಮಧ್ಯಪ್ರದೇಶದ ಭವಿಷ್ಯವನ್ನು ರೂಪಿಸಲು ಚುನಾವಣೆ ಪ್ರವೇಶಿಸಿದ್ದಾರೆ. ಈ ರಾಜ್ಯದಲ್ಲಿ 18 ವರ್ಷಗಳಿಂದ ನಡೆದುಕೊಂಡು ಬಂದಿರುವ ದುರಾಡಳಿತವನ್ನು ಕೊನೆಗೊಳಿಸಲು ನಾವೆಲ್ಲರೂ ಒಗ್ಗೂಡಿ ಸಜ್ಜಾಗೋಣ' ಎಂದು ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್‌ನಾಥ್ ಶುಕ್ರವಾರ ನಸುಕಿನಲ್ಲಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ತೆಲಂಗಾಣ ರೈತರಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭರವಸೆ

ಅರಿಸಿನಕ್ಕೆ ₹15 ಸಾವಿರ ಬೆಂಬಲ ಬೆಲೆ

ಜಗ್ತಿಅಲ್ (ತೆಲಂಗಾಣ) (ಪಿಟಿಐ): ತೆಲಂಗಾಣದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅರಿಸಿನಕ್ಕೆ ಕ್ವಿಂಟಲ್‌ಗೆ ₹12,000 ರಿಂದ ₹15,000 ಬೆಂಬಲ ಬೆಲೆ ಸಿಗುತ್ತದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಹೇಳಿದ್ದಾರೆ.

ಪಕ್ಷದ 'ವಿಜಯಭೇರಿ' ಯಾತ್ರೆ ಅಂಗವಾಗಿ ಶುಕ್ರವಾರ ನಡೆದ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ರೈತರು ಬೆಳೆಯುವ ಪ್ರತಿ ಬೆಳೆಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಗಿಂತ ₹500 ಹೆಚ್ಚು ಪಡೆಯುವುದನ್ನು ಪಕ್ಷವು ಖಾತ್ರಿಪಡಿಸುತ್ತದೆ. ಇಲ್ಲಿನ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಯುಪಿಎ ಸರ್ಕಾರ ನಡೆಸಿದ ಜಾತಿಗಣತಿ ಅಂಕಿಅಂಶಗಳನ್ನು ಪ್ರಧಾನಿ ನರೇಂದ್ರ ಮೋದಿ ಬಹಿರಂಗ ಪಡಿಸಿಲ್ಲ ಎಂದು ಆರೋಪಿಸಿದ ಅವರು, ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಹಿಂದಿನ ಅಂಕಿಅಂಶ ಬಿಡುಗಡೆ ಮಾಡುವುದರ ಜತೆ ಹೊಸದಾಗಿ ಜಾತಿಗಣತಿ ಸಹ ನಡೆಸಲಾಗುವುದು ಎಂದರು.

ಬಿಆರ್‌ಎಸ್, ಬಿಜೆಪಿ ಮತ್ತು ಎಐಎಂಐಎಂ ವಿರುದ್ಧ ವಾಗ್ದಾಳಿ ನಡೆಸಿದ ರಾಹುಲ್, ಅವರೆಲ್ಲರೂ ಕಾಂಗ್ರೆಸ್ ಸೋಲಿಸಲು ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ ಮತ್ತು ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ನೇತೃತ್ವದ ಬಿಆರ್‌ಎಸ್ ಸಂಸತ್ತಿನಲ್ಲಿ ಬಿಜೆಪಿಯನ್ನು ಬೆಂಬಲಿಸುತ್ತದೆ ಎಂದು ಹೇಳಿದರು.

ತೆಲಂಗಾಣದ ಜತೆ ತಮ್ಮ ಸಂಬಂಧವು ಮಾಜಿ ಪ್ರಧಾನಿಗಳಾದ ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಅವರ ಕಾಲದಿಂದಲೂ ಇದೆ ಎಂದರು.

ರೋಡ್ ಶೋ ವೇಳೆ ರಸ್ತೆಬದಿಯ ಆಹಾರ ಮಳಿಗೆಯಲ್ಲಿ ರಾಹುಲ್ ಗಾಂಧಿ ದೋಸೆ ಮಾಡಲು ಯತ್ನಿಸಿದರು. ಮಕ್ಕಳಿಗೆ ಚಾಕೊಲೇಟ್‌ಗಳನ್ನು ಸಹ ನೀಡಿದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಪ್ರವಾಸ ಮುಕ್ತಾಯ: ಮೂರು ದಿನಗಳ ತೆಲಂಗಾಣ ಪ್ರವಾಸವನ್ನು ರಾಹುಲ್ ಗಾಂಧಿ ಶುಕ್ರವಾರ ಮುಕ್ತಾಯಗೊಳಿಸಿದರು.

ರೈತರ ಬೆಳೆಗಳಿಗೆ ಉತ್ತಮ ಬೆಂಬಲ ಬೆಲೆ, ಬಿಆರ್‌ಎಸ್-ಬಿಜೆಪಿ-ಎಐಎಂಐಎಂ ಸಂಬಂಧ ಮತ್ತು ಸರ್ಕಾರಿ ಸ್ವಾಮ್ಯದ ಸಿಂಗರೇಣಿ ಕೊಲಿಯರೀಸ್ ಕಂಪನಿ ಲಿಮಿಟೆಡ್ (ಎಸ್‌ಸಿಸಿಎಲ್)ಗೆ ಸಂಬಂಧಿಸಿದ ಸ್ಥಳೀಯ ಸಮಸ್ಯೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ತಮ್ಮ ಪ್ರವಾಸ ವೇಳೆ ಪ್ರಸ್ತಾಪಿಸಿದರು.

ತೆಲಂಗಾಣದ ಬಿಜೆಪಿ ನಾಯಕರನ್ನು 'ಬಾಲಿವುಡ್ ಹೀರೊಗಳಿಗೆ' ಹೋಲಿಸಿದ ರಾಹುಲ್, ಬಿಜೆಪಿ ನಾಯಕರು ಈಗ ಕಾಂಗ್ರೆಸ್ ಪಕ್ಷಕ್ಕೆ ಸೇರಲು ಸರತಿ ಸಾಲಿನಲ್ಲಿ ನಿಂತಿದ್ದಾರೆ ಎಂದು ಹೇಳಿದರು.

ನಿಜಾಮಾಬಾದ್ ಮತ್ತು ಜಗ್ತಿಅಲ್ ಜಿಲ್ಲೆಗಳಲ್ಲಿ ನಡೆದ ವಿವಿಧ ಸಭೆಗಳಲ್ಲಿ ಮಾತನಾಡಿದ ಅವರು, ತಮ್ಮ ತಾಯಿ ಸೋನಿಯಾ ಗಾಂಧಿ ಬೆಂಬಲಿಸದಿದ್ದರೆ ತೆಲಂಗಾಣ ರಾಜ್ಯ ರಚನೆಯಾಗುತ್ತಿರಲಿಲ್ಲ ಎಂದು ಹೇಳಿದರು.

ಆಶ್ವಾಸನೆಗಳು

- ಸಕ್ಕರೆ ಕಾರ್ಖಾನೆಗಳ ಪುನಶ್ಚೇತನಕ್ಕೆ ಒತ್ತು
- ದೇಶದಲ್ಲಿ ಹೊಸ ಜಾತಿಗಣತಿ ನಡೆಸಲು ಸಿದ್ಧ
- ಪ್ರತಿ ಬೆಳೆಗೂ ಎಂಎಸ್‌ಪಿಗಿಂತ ₹500 ಹೆಚ್ಚು ಹಣ ನೀಡಲು ಕ್ರಮ

ಬಿಆರ್‌ಎಸ್ ಸರ್ಕಾರ 'ಊಳಿಗಮಾನ್ಯ ಮನಸ್ಥಿತಿ'ಯದು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ದಯವಿಟ್ಟು ನಮಗೆ ಪಾಠ ಕಲಿಸಲು ಪ್ರಯತ್ನಿಸಬೇಡಿ

ಕೆ.ಟಿ.ರಾಮರಾವ್, ಬಿಆರ್‌ಎಸ್ ಕಾರ್ಯಾಧ್ಯಕ್ಷ

ತೆಲಂಗಾಣದ ಜಗ್ತಿಅಲ್ ಜಿಲ್ಲೆಯಲ್ಲಿ ರಸ್ತೆಬದಿಯ ಆಹಾರ ಮಳಿಗೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದೋಸೆ ಹುಯ್ದರು —ಪಿಟಿಐ ಚಿತ್ರ

ಮೋದಿಗೆ ಜನ ಕಲ್ಯಾಣ ಮುಖ್ಯವಲ್ಲ: ಪ್ರಿಯಾಂಕಾ

ಜೈಪುರ (ಪಿಟಿಐ): ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ಮೋದಿ ಸರ್ಕಾರದ ಗಮನ ಅಧಿಕಾರದಲ್ಲಿ ಉಳಿಯುವುದರ ಮೇಲಿದೆಯೇ ಹೊರತು ಜನ ಕಲ್ಯಾಣದ ಮೇಲಿಲ್ಲ ಎಂದು ಹೇಳಿದ್ದಾರೆ.

ರಾಜಸ್ಥಾನದ ದೌಸಾ ಜಿಲ್ಲೆಯ ಸಿಕ್ರಾಯ್ ನಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ತನ್ನ 'ಉದ್ಯಮಿ ಸ್ನೇಹಿತರಿಗಾಗಿ' ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

'ಬಿಜೆಪಿ ಅಧಿಕಾರದಲ್ಲಿದ್ದಾಗ ರಾಜಸ್ಥಾನದಲ್ಲಿ ಎಷ್ಟು ಯೋಜನೆಗಳನ್ನು ಪ್ರಾರಂಭಿಸಲಾಗಿದೆ? ಮೋದಿ ಮತ್ತು ಬಿಜೆಪಿಯ ಗಮನ ಜನ ಕಲ್ಯಾಣದ ಮೇಲಿಲ್ಲ. ಅಧಿಕಾರದಲ್ಲಿ ಉಳಿಯುವುದು ಮತ್ತು ತಮ್ಮನ್ನು ತಾವು ಬಲಪಡಿಸಿಕೊಳ್ಳುವುದೇ ಅವರಿಗೆ ಮುಖ್ಯವಾಗಿದೆ' ಎಂದು ಟೀಕಿಸಿದರು.

ನಿಜವಾದ ನಾಯಕ ವರ್ತಮಾನ ಮತ್ತು ಭವಿಷ್ಯ ನೋಡುತ್ತಾನೆ ಮತ್ತು ಭೂತಕಾಲದ ಬಗ್ಗೆ ಮತ್ತೆ ಮಾತನಾಡುವುದಿಲ್ಲ ಎಂದು ಮೋದಿ ವಿರುದ್ಧ ಪ್ರಿಯಾಂಕಾ ವಾಗ್ದಾಳಿ ನಡೆಸಿದರು.

ಅಭಿವೃದ್ಧಿ ಬಗ್ಗೆ ಮಾತನಾಡುವ ಬದಲು ಬಿಜೆಪಿ, ಧರ್ಮ ಮತ್ತು ಜಾತಿ ಸಮಸ್ಯೆಗಳನ್ನು ಏಕೆ ಎತ್ತುತ್ತದೆ ಎಂಬುದನ್ನು ಜನರು ಅರ್ಥಮಾಡಿಕೊಳ್ಳಬೇಕು ಎಂದು ಅವರು ಹೇಳಿದರು.

3ನೇ ಪಟ್ಟಿ ಪ್ರಕಟ

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ವಿಧಾನಸಭೆ ಚುನಾವಣೆಗಾಗಿ ಸಮಾಜವಾದಿ ಪಕ್ಷವು ಅಭ್ಯರ್ಥಿಗಳ ಮೂರನೇ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಇದರೊಂದಿಗೆ ಪಕ್ಷವು 33 ಅಭ್ಯರ್ಥಿಗಳ ಹೆಸರು ಪ್ರಕಟಿಸಿದಂತೆ ಆಗಿದೆ.

ಮೂರನೇ ಪಟ್ಟಿಯಲ್ಲಿ ಪಕ್ಷವು ಇಬ್ಬರು ಅಭ್ಯರ್ಥಿಗಳ ಹೆಸರನ್ನು ಮಾತ್ರ ಪ್ರಕಟಿಸಿದೆ.

10 ದಿನದಲ್ಲಿ ₹243 ಕೋಟಿ ಮೌಲ್ಯದ ವಸ್ತು ವಶ

ಹೈದರಾಬಾದ್: ತೆಲಂಗಾಣದಲ್ಲಿ ನೀತಿಸಂಹಿತೆ ಜಾರಿಯಾದಾಗಿನಿಂದ ಮತದಾರರಿಗೆ ಆಮಿಷ ಒಡ್ಡುವ ಸಲುವಾಗಿ ಸಂಗ್ರಹಿಸಿದ್ದ ನಗದು ಸೇರಿದಂತೆ ಒಟ್ಟು ₹243 ಕೋಟಿ ಮೌಲ್ಯದ ವಿವಿಧ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಪೈಕಿ ಚಿನ್ನ, ಬೆಳ್ಳಿ, ವಜ್ರ, ಪ್ಲಾಟಿನಂ ವಸ್ತುಗಳ ಮೌಲ್ಯ ₹ 120 ಕೋಟಿ ಆಗಿದೆ. ಉಳಿದಂತೆ ನಗದು, ಮದ್ಯ, ಗಾಂಜಾ ವಶಕ್ಕೆ ಪಡೆಯಲಾಗಿದೆ. 181.986 ಕೆ.ಜಿ ಚಿನ್ನ, 693.37 ಕೆ.ಜಿ. ಬೆಳ್ಳಿ, 154.45 ಕ್ಯಾರಟ್ ವಜ್ರವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಹೊಲಿಗೆ ಯಂತ್ರಗಳು, ಕುಕ್ಕರ್‌ಗಳು, ಸೀರೆಗಳು, ಗಡಿಯಾರಗಳು, ಹೆಲ್ಮೆಟ್‌ಗಳು, ಮೊಬೈಲ್‌ಗಳು, ಲಂಚ್ ಬಾಕ್ಸ್‌ಗಳು ಮತ್ತು ಇತರ ಅಡುಗೆ ಮನೆ ಸಾಮಗ್ರಿಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ ಅಕ್ಟೋಬರ್ 9ರಿಂದ ನೀತಿಸಂಹಿತೆ ಜಾರಿಯಲ್ಲಿದೆ.

2018ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ₹ 103 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿತ್ತು.

ನವದೆಹಲಿಯಲ್ಲಿ ಶುಕ್ರವಾರ ನಡೆದ ಬಿಜೆಪಿ ಕೇಂದ್ರ ಚುನಾವಣಾ ಸಮಿತಿ ಸಭೆಗೆ ಮಧ್ಯಪ್ರದೇಶದ ಸಿ.ಎಂ ಶಿವರಾಜ್ ಸಿಂಗ್ ಚೌಹಾಣ್ ಆಗಮಿಸಿದರು —ಪಿಟಿಐ ಚಿತ್ರ

ಚುನಾವಣಾ ಕಣದ ಸುತ್ತ

'ದೆಹಲಿಯಲ್ಲಿ ಸ್ನೇಹ, ರಾಜ್ಯದಲ್ಲಿ ಕುಸ್ತಿ'

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಶುಕ್ರವಾರ ಪ್ರತಿಪಕ್ಷಗಳ ಮೈತ್ರಿಕೂಟ 'ಇಂಡಿಯಾ'ವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ವಿಪಕ್ಷಗಳು 'ದೆಹಲಿಯಲ್ಲಿ ಸ್ನೇಹ ಮತ್ತು ರಾಜ್ಯಗಳಲ್ಲಿ ಕುಸ್ತಿ' ಎಂಬ ಧ್ಯೇಯವಾಕ್ಯದೊಂದಿಗೆ ಸಾಗುತ್ತಿವೆ ಎಂದು ಹೇಳಿದ್ದಾರೆ.

'ಇಂಡಿಯಾ' ಕೂಟದ ಕಾಂಗ್ರೆಸ್, ಸಮಾಜವಾದಿ ಪಕ್ಷ (ಎಸ್.ಪಿ) ಮತ್ತು ಆಮ್ ಆದ್ಮಿ ಪಕ್ಷ (ಎಎಪಿ) ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗೆ ಪ್ರತ್ಯೇಕವಾಗಿ ಅಭ್ಯರ್ಥಿಗಳನ್ನು ಘೋಷಿಸಿವೆ. ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 'ಇಂಡಿಯಾ' ಮೈತ್ರಿಕೂಟವನ್ನು ಕಡೆಗಣಿಸಿದೆ ಎಂಬುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ ಎಂದಿದ್ದಾರೆ.

ಮಧ್ಯಪ್ರದೇಶದಲ್ಲಿ ಎಸ್.ಪಿಗೆ ಇದುವರೆಗೆ ಯಾವುದೇ ಸ್ಥಾನ ಬಿಟ್ಟುಕೊಡದ ಕಾಂಗ್ರೆಸ್ ವಿರುದ್ಧ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಗುರುವಾರ ಅಸಮಾಧಾನವ್ಯಕ್ತಪಡಿಸಿದ್ದರು.

'ಅಂತರ್ ಸಮುದಾಯ ವಿವಾಹ: ಮಹಿಳೆಯರಿಗೆ ಟಿಕೆಟ್ ಬೇಡ'

ಐಜ್ವಾಲ್ (ಪಿಟಿಐ): ಸಮುದಾಯದ ಹೊರಗಿನ ವ್ಯಕ್ತಿಯನ್ನು ವಿವಾಹವಾಗಿರುವ ಮಿಜೋ ಮಹಿಳೆ ಮೆರಿಯಂ ಹ್ರಂಗ್‌ಚಲ್ ಅವರನ್ನು ಲುಂಗಲೆಇ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಕಣಕ್ಕಿಳಿಸಿರುವುದನ್ನು ವಿರೋಧಿಸಿ ಮಿಜೋ ಜೀರಲಾಇ ಪಾವಲ್ (ಎಂಜೆಡ್‌ಪಿ) ವಿದ್ಯಾರ್ಥಿ ಸಂಘದ ಸದಸ್ಯರು ಶುಕ್ರವಾರ ಪ್ರದರ್ಶನ ನಡೆಸಿದರು.

ಮಿಜೋ ಅಲ್ಲದ ವ್ಯಕ್ತಿಯನ್ನು ಮದುವೆಯಾದ ಮಿಜೋ ಮಹಿಳೆಯರಿಗೆ ಟಿಕೆಟ್ ನೀಡಬಾರದು ಎಂದು ಡಿಸೆಂಬರ್‌ನಲ್ಲಿ ಎಂಜೆಡ್‌ಪಿ ಎಲ್ಲಾ ರಾಜಕೀಯ ಪಕ್ಷಗಳನ್ನು ಒತ್ತಾಯಿಸಿತ್ತು.

ರಾಜ್ಯ ವಿಧಾನಸಭೆಯಲ್ಲಿ ಆಸೀನರಾಗುವ ಮತ್ತು ಮಿಜೋರಾಂ ಜನರನ್ನು ಪ್ರತಿನಿಧಿಸುವ ಇಂತಹ ರಾಜಕಾರಣಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಮಿಜೋರಾಂನ ಸಾಮಾಜಿಕ ನಿಯಮಗಳ ಪ್ರಕಾರ, ಇಂತಹ ಮಹಿಳೆಯರು ಪತಿ ಕಡೆಯ ಸಂಸ್ಕೃತಿ, ಸಂಪ್ರದಾಯ ಅನುಸರಿಸಬೇಕು ಎಂದು ಸಂಘ ಹೇಳಿದೆ. ಅಲ್ಲದೆ ಇಂತಹ ಮಿಜೋ ಮಹಿಳೆಯರು ಆಯ್ಕೆಯಾಗುವುದನ್ನು ತಡೆಯಲು ಚಳವಳಿಯನ್ನು ತೀವ್ರಗೊಳಿಸುವುದಾಗಿ ತಿಳಿಸಿದೆ.

'ಮತ್ತೆ ಎಂಎನ್‌ಎಫ್ ಅಧಿಕಾರಕ್ಕೆ'

ಐಜ್ವಾಲ್, ಮಿಜೋರಾಂ (ಪಿಟಿಐ): ವಿಧಾನಸಭಾ ಚುನಾವಣೆಯಲ್ಲಿ ಆಡಳಿತಾರೂಢ ಮಿಜೋ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) 25ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಮೂಲಕ ಅಧಿಕಾರ ಉಳಿಸಿಕೊಳ್ಳುತ್ತದೆ ಎಂದು ಎಂಎನ್‌ಎಫ್ ಅಧ್ಯಕ್ಷ ಹಾಗೂ ಮಿಜೋರಾಂ ಮುಖ್ಯಮಂತ್ರಿ ಝೊರಾಂಥಾಂಗ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಐಜ್ವಾಲ್ ಪೂರ್ವ -1 ಸ್ಥಾನದಿಂದ ನಾಮಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ಗಿಂತ ಪ್ರಮುಖ ವಿರೋಧ ಪಕ್ಷ ಝೊರಾಂ ಪೀಪಲ್ಸ್ ಮೂವ್‌ಮೆಂಟ್ (ಝಡ್‌ಪಿಎಂ) ಎಂಎನ್‌ಎಗೆ ಪೈಪೋಟಿ ನೀಡಲಿದೆ ಎಂದರು. 'ಮಿಜೋರಾಂನಲ್ಲಿ ಅಧಿಕಾರ ಉಳಿಸಿಕೊಳ್ಳುವ ವಿಶ್ವಾಸ ಇದೆ. ಹಲವಾರು ಅಡೆತಡೆಗಳ ಹೊರತಾಗಿಯೂ ಕಳೆದ ಐದು ವರ್ಷಗಳಲ್ಲಿ ನಾವು ಮಾಡಿದ ಕೆಲಸಗಳನ್ನು ಜನರು ಶ್ಲಾಘಿಸಿದ್ದಾರೆ' ಎಂದರು.

ಜೆಸಿಸಿ(ಜೆ) ಪಟ್ಟಿ ಬಿಡುಗಡೆ

ರಾಯಪುರ (ಪಿಟಿಐ): ಛತ್ತೀಸಗಢ ವಿಧಾನಸಭೆಗೆ ಮಾಜಿ ಮುಖ್ಯಮಂತ್ರಿ ಅಜಿತ್ ಜೋಗಿ ನೇತೃತ್ವದ ಜನತಾ ಕಾಂಗ್ರೆಸ್ ಛತ್ತೀಸಗಢ(ಜೆ) ಪಕ್ಷ ಶುಕ್ರವಾರ 16 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಪಟ್ಟಿಯನ್ನು ಜೆಸಿಸಿ (ಜೆ) ಅಧ್ಯಕ್ಷ ಅಮಿತ್ ಜೋಗಿ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ. 16 ಸ್ಥಾನಗಳ ಪೈಕಿ ಪರಿಶಿಷ್ಟ ಪಂಗಡಕ್ಕೆ ಎಂಟು ಮತ್ತು ಪರಿಶಿಷ್ಟ ಜಾತಿಗೆ ಒಂದು ಸ್ಥಾನ ಮೀಸಲಿರಿಸಲಾಗಿದೆ. ಮೊದಲ ಪಟ್ಟಿಯಲ್ಲಿ ಮಹಿಳೆಯರಿಗೆ ಅವಕಾಶ ನೀಡಿಲ್ಲ.

'ತಮ್ಮ ಪಕ್ಷವು ಸರ್ವ ಆದಿವಾಸಿ ಸಮಾಜ (ಎಸ್‌ಎಎಸ್) ಮತ್ತು ಗೊಂಡವಾನ ಗಣತಂತ್ರ ಪಾರ್ಟಿ (ಜಿಜಿಪಿ) ಜತೆ ಮೈತ್ರಿಗಾಗಿ ಸಂಪರ್ಕಿಸುತ್ತಿದೆ' ಎಂದು ಅಮಿತ್ ಜೋಗಿ ಸುದ್ದಿಸಂಸ್ಥೆಗೆ ತಿಳಿಸಿದ್ದರು. ಆದರೆ, ಈವರೆಗೆ ಯಾವುದೇ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿಲ್ಲ.

ಗಾಜಾ ನಗರದ ದಕ್ಷಿಣಕ್ಕೆ ಇರುವ ಅಲ್–ಜಹ್ರಾ ನಗರದಲ್ಲಿ ಇಸ್ರೇಲ್ ವಾಯುದಾಳಿಯಿಂದಾಗಿ ಧ್ವಂಸಗೊಂಡಿರುವ ಕಟ್ಟಡಗಳ ವೈಮಾನಿಕ ನೋಟ —ಎಎಫ್‌ಪಿ ಚಿತ್ರ

'ಗಾಜಾ ಮೇಲೆ ನಿಯಂತ್ರಣ ಸಾಧಿಸಲ್ಲ'

ಸುರಕ್ಷಿತ ಪ್ರದೇಶಗಳ ಮೇಲೆಯೂ ಇಸ್ರೇಲ್ ವೈಮಾನಿಕ ದಾಳಿ

ಖಾನ್ ಯೂನಿಸ್ (ಎಪಿ): ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ಶುಕ್ರವಾರ ಬೆಳಿಗ್ಗೆಯಿಂದಲೇ ವಾಯುದಾಳಿ ನಡೆಸಿದೆ. ಪ್ಯಾಲೆಸ್ಟೀನ್ ನಾಗರಿಕರಿಗೆ ಆಶ್ರಯ ಪಡೆಯಲು ಸೂಚಿಸಿದ್ದ ಸ್ಥಳಗಳ ಮೇಲೆಯೂ ಅದು ದಾಳಿ ನಡೆಸಿದೆ. ಅಲ್ಲದೆ, ಲೆಬನಾನ್ ಜೊತೆಗಿನ ಗಡಿಗೆ ಹೊಂದಿಕೊಂಡಿರುವ ಪಟ್ಟಣವೊಂದರಲ್ಲಿನ ನಿವಾಸಿಗಳ ಸ್ಥಳಾಂತರ ಆರಂಭಿಸಿದೆ.

ಹಮಾಸ್ ಬಂಡುಕೋರ ಸಂಘಟನೆಯ ಜೊತೆಗಿನ ಯುದ್ಧ ಕೊನೆಗೊಂಡ ನಂತರದಲ್ಲಿ ಗಾಜಾದಲ್ಲಿ ನಾಗರಿಕರ ಮೇಲೆ ನಿಯಂತ್ರಣ ಹೊಂದುವ ಯಾವುದೇ ಉದ್ದೇಶ ಇಲ್ಲ ಎಂದು ಇಸ್ರೇಲ್ ರಕ್ಷಣಾ ಸಚಿವ ಯುವಾವ್ ಗ್ಯಾಲಂಟ್ ಹೇಳಿದ್ದಾರೆ. ಯುದ್ಧವು ಮೂರು ಹಂತಗಳಲ್ಲಿ ನಡೆಯಲಿದೆ ಎಂಬುದು ಇಸ್ರೇಲ್‌ನ ನಿರೀಕ್ಷೆ ಎಂದು ಗ್ಯಾಲಂಟ್ ಹೇಳಿದ್ದಾರೆ. ವಾಯುದಾಳಿ, ಭೂದಾಳಿಯು ಯುದ್ಧದ ಮೊದಲ ಹಂತ.

ನಂತರದ ಹಂತದಲ್ಲಿ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಎದುರಾಗಬಹುದಾದ ಪ್ರತಿರೋಧವನ್ನು ಮಣಿಸುವುದು ಹಾಗೂ ಕೊನೆಯ ಹಂತದಲ್ಲಿ ಗಾಜಾ ಪಟ್ಟಿಯ ಮೇಲಿನ ಹೊಣೆಗಾರಿಕೆಯನ್ನು ಬಿಟ್ಟುಕೊಡುವುದು.

ಗಾಜಾ ಪಟ್ಟಿಯ ದಕ್ಷಿಣದಲ್ಲಿ ಇರುವ ಖಾನ್ ಯೂನಿಸ್ ನಗರದ ಮೇಲೆ ಭಾರಿ ಪ್ರಮಾಣದ ವಾಯುದಾಳಿ ನಡೆದಿದೆ ಎಂದು ಪ್ಯಾಲೆಸ್ಟೀನ್ ನಾಗರಿಕರು ತಿಳಿಸಿದ್ದಾರೆ. ಹಮಾಸ್ ಸಂಘಟನೆಗೆ ಸಂಬಂಧಿಸಿದ ನೂರಕ್ಕೂ ಹೆಚ್ಚಿನ ಗುರಿಗಳ ಮೇಲೆ ದಾಳಿ ನಡೆಸಿರುವುದಾಗಿ ಇಸ್ರೇಲ್ ಮಿಲಿಟರಿ ಹೇಳಿದೆ.

ಗಾಜಾ ಪಟ್ಟಿಯ ದಕ್ಷಿಣ ಭಾಗವು ಸುರಕ್ಷಿತ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಈಚೆಗೆ ಹೇಳಿದ್ದರು. ಆದರೆ ಇಸ್ರೇಲ್ ಮಿಲಿಟರಿ ವಕ್ತಾರ ನಿರ್ ದಿನಾರ್ ಅವರು 'ಯಾವ ವಲಯವೂ ಸುರಕ್ಷಿತವಲ್ಲ' ಎಂದು ತಿಳಿಸಿದ್ದಾರೆ.

ಗಾಜಾ ಪಟ್ಟಿಯ ಎಲ್ಲ ಕಡೆಗಳಲ್ಲಿಯೂ ವಾಯುದಾಳಿ ನಡೆಯುತ್ತಿರುವ ಕಾರಣ, ಉತ್ತರ ಭಾಗದಿಂದ ದಕ್ಷಿಣಕ್ಕೆ ಬಂದಿದ್ದವರ ಪೈಕಿ ಕೆಲವರು ಮತ್ತೆ ಉತ್ತರದ ಕಡೆ ಸಾಗುತ್ತಿರುವಂತೆ ಕಾಣುತ್ತಿದೆ ಎಂದು ವಿಶ್ವಸಂಸ್ಥೆ ಹೇಳಿದೆ. ಗಾಜಾದಲ್ಲಿ ಆಸ್ಪತ್ರೆಗಳು ಅಗತ್ಯ ವಸ್ತುಗಳ ಕೊರತೆ ಎದುರಿಸುತ್ತಿರುವ ಕಾರಣ, ಇರುವ ವಸ್ತುಗಳನ್ನು ಬಹಳ ಎಚ್ಚರಿಕೆಯಿಂದ ಬಳಸುತ್ತಿವೆ.

ಆಸ್ಪತ್ರೆಗಳಲ್ಲಿ ವೈದ್ಯರು ಚಿಕಿತ್ಸೆ ನೀಡಲು ಮೊಬೈಲ್ ಫೋನ್‌ನ ಬೆಳಕನ್ನು ಆಶ್ರಯಿಸುತ್ತಿದ್ದಾರೆ, ಗಾಯಗಳ ಚಿಕಿತ್ಸೆಗೆ ವಿನೆಗರ್ ಬಳಸುತ್ತಿದ್ದಾರೆ. ರಫಾ ಗಡಿಯಿಂದ ಗಾಜಾ ಪಟ್ಟಿಯೊಳಗೆ ಅಗತ್ಯ ವಸ್ತುಗಳನ್ನು ಸಾಗಿಸಲು ರಸ್ತೆ ರಿಪೇರಿ ಕೆಲಸವು ಶುಕ್ರವಾರ ನಡೆದಿದೆ.

ರಫಾ ಗಡಿಗೆ ಶುಕ್ರವಾರ ಭೇಟಿ ನೀಡಿದ ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರು, ಅಗತ್ಯ ವಸ್ತುಗಳನ್ನು ಆದಷ್ಟು ಬೇಗ ಗಾಜಾ ಪಟ್ಟಿಯೊಳಕ್ಕೆ ಒಯ್ಯಬೇಕು ಎಂದು ಆಗ್ರಹಿಸಿದ್ದಾರೆ.

ಲೆಬನಾನ್ ಗಡಿಯಿಂದ ಇಸ್ರೇಲ್‌ನತ್ತ ರಾಕೆಟ್ ದಾಳಿ ನಡೆಸುತ್ತಿರುವ ಹಿಜ್ಬುಲ್ಲಾ ಸಂಘಟನೆಯು, ಹಮಾಸ್ ನಾಶಕ್ಕೆ ಇಸ್ರೇಲ್ ಮುಂದಾದರೆ ತಾನೂ ಇಸ್ರೇಲ್ ವಿರುದ್ಧ ಸಮರ ಸಾರಬೇಕಾಗಬಹುದು ಎಂಬ ಸೂಚನೆ ನೀಡಿದೆ. ಅಕ್ಟೋಬರ್ 7ರ ನಂತರದಲ್ಲಿ ಗಾಜಾ ಪಟ್ಟಿಯಲ್ಲಿ 4,137 ಮಂದಿ ಮೃತಪಟ್ಟಿದ್ದಾರೆ. ಇವರಲ್ಲಿ ಹೆಚ್ಚಿನವರು ಮಹಿಳೆಯರು, ಮಕ್ಕಳು ಮತ್ತು ಹಿರಿಯರು. ಇಸ್ರೇಲ್‌ನಲ್ಲಿ 1,400ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ.

ಮುಖ್ಯಾಂಶಗಳು

- ಮೂರು ಹಂತಗಳಲ್ಲಿ ಯುದ್ಧ: ಇಸ್ರೇಲ್ ಲೆಕ್ಕಾಚಾರ
- ಅಗತ್ಯ ವಸ್ತು ಸಾಗಿಸಲು ರಫಾ ಗಡಿಯಲ್ಲಿ ರಸ್ತೆ ರಿಪೇರಿ
- ಮೊಬೈಲ್ ಫೋನ್ ಬೆಳಕಿನಲ್ಲಿ ಚಿಕಿತ್ಸೆ ನೀಡುತ್ತಿರುವ ವೈದ್ಯರು

ದಾಳಿಯಲ್ಲಿ ಗಾಯಗೊಂಡಿರುವ ಮಗುವನ್ನು ಗಾಜಾ ಪಟ್ಟಿಯ ಖಾನ್ ಯೂನಿಸ್‌ನಲ್ಲಿನ ನಾಸೆರ್ ಆಸ್ಪತ್ರೆಯಲ್ಲಿ ತಾಯಿ ಸಂತೈಸಿದರು —ಎಎಫ್‌ಪಿ ಚಿತ್ರ

ವೆಸ್ಟ್ ಬ್ಯಾಂಕ್‌ನಲ್ಲೂ ಕದನ?

ರಮಲ್ಲಾ/ಜೆರುಸಲೇಂ (ರಾಯಿಟರ್ಸ್): ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ವಾಯುದಾಳಿ ಮತ್ತು ಲೆಬನಾನ್ ಗಡಿಯಲ್ಲಿ ಹಿಜ್ಬುಲ್ಲಾ ಜೊತೆ ಸಂಘರ್ಷ ಆರಂಭವಾದಾಗಿನಿಂದ ವೆಸ್ಟ್ ಬ್ಯಾಂಕ್‌ನಲ್ಲಿ ಹಿಂಸಾಚಾರ ಹೆಚ್ಚಾಗಿದೆ. ಇದರಿಂದಾಗಿ, ಪ್ಯಾಲೆಸ್ಟೀನ್ ಜನರ ಈ ಪ್ರದೇಶವೂ ಈಗಿನ ಸಂದರ್ಭದಲ್ಲಿ ಸಂಘರ್ಷಕ್ಕೆ ತುತ್ತಾಗುವ ಅಪಾಯ ಹೆಚ್ಚಾಗಿದೆ.

ಇಸ್ರೇಲ್ ಸೇನೆಯು ಗಾಜಾ ಪಟ್ಟಿಯಲ್ಲಿ ಹಮಾಸ್ ಬಂಡುಕೋರರ ಜೊತೆ ಕದನದಲ್ಲಿ ತೊಡಗಿದೆ. 1967ರ ಯುದ್ಧದಲ್ಲಿ ಇಸ್ರೇಲ್ ವೆಸ್ಟ್ ಬ್ಯಾಂಕ್‌ನ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿತ್ತು. ಆ ಪ್ರದೇಶಗಳನ್ನು ಅದು ಈಗಲೂ ತನ್ನ ವಶದಲ್ಲಿ ಇರಿಸಿಕೊಂಡಿದೆ.

ಲೆಬನಾನ್ ಗಡಿಯಲ್ಲಿ ಹಿಜ್ಬುಲ್ಲಾ ಸಂಘಟನೆಯ ಜೊತೆ ಯುದ್ಧ ಶುರುವಾಗಬಹುದು ಎಂದು ಇಸ್ರೇಲ್ ಬೆಂಬಲಕ್ಕೆ ನಿಂತಿರುವ ಕೆಲವು ಪಾಶ್ಚಿಮಾತ್ಯ ದೇಶಗಳು ಆತಂಕ ವ್ಯಕ್ತಪಡಿಸಿವೆ. ಗಾಜಾ ಪಟ್ಟಿ ಹಾಗೂ ಲೆಬನಾನ್ ಗಡಿ ಮಾತ್ರವೇ ಅಲ್ಲದೆ, ವೆಸ್ಟ್ ಬ್ಯಾಂಕ್‌ನಲ್ಲಿಯೂ ಕಾದಾಟದ ಪರಿಸ್ಥಿತಿ ಸೃಷ್ಟಿಯಾಗಬಹುದು ಎಂಬ ಭೀತಿಯೂ ಇದೆ.

ಇಸ್ರೇಲ್ ಯೋಧರು ಹಾಗೂ ಪ್ಯಾಲೆಸ್ಟೀನ್ ಜನರ ನಡುವಿನ ಸಂಘರ್ಷವು ಜನರ ಸಾವಿಗೆ ಈಗಾಗಲೇ ಕಾರಣವಾಗಿದೆ. ಅಕ್ಟೋಬರ್ 7ರ ನಂತರದಲ್ಲಿ ಶುರುವಾದ ಸಂಘರ್ಷದಲ್ಲಿ ವೆಸ್ಟ್ ಬ್ಯಾಂಕ್‌ನಲ್ಲಿ 80ಕ್ಕೂ ಹೆಚ್ಚು ಮಂದಿ ಪ್ಯಾಲೆಸ್ಟೀನ್ ನಾಗರಿಕರು ಸಾವನ್ನಪ್ಪಿದ್ದಾರೆ. ಶುಕ್ರವಾರ ಮುಂಜಾನೆ ಮತ್ತೆ ದಾಳಿ ನಡೆಸಿರುವ ಇಸ್ರೇಲ್ ಹಲವರನ್ನು ಬಂಧಿಸಿದೆ. ವೆಸ್ಟ್ ಬ್ಯಾಂಕ್‌ನಲ್ಲಿ ಇರುವ ಪ್ಯಾಲೆಸ್ಟೀನ್ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ಪಡೆಗಳು ಗುರುವಾರ ವಾಯುದಾಳಿ ನಡೆಸಿವೆ.

ರಮಲ್ಲಾದಲ್ಲಿ ಹಮಾಸ್‌ನ ಮಿಲಿಟರಿ ವಿಭಾಗದ ಪರವಾಗಿ ಕೆಲವರು ಘೋಷಣೆಗಳನ್ನು ಕೂಗಿದ್ದಾರೆ. ಇದು ಸಶಸ್ತ್ರ ಪ್ರತಿರೋಧಕ್ಕೆ ಅಲ್ಲಿ ಬೆಂಬಲ ಹೆಚ್ಚಾಗುತ್ತಿದೆ ಎಂಬುದನ್ನು ತೋರಿಸುತ್ತಿದೆ.

ಚರ್ಚ್ ಮೇಲೆ ದಾಳಿ: 18 ಸಾವು

ಗಾಜಾ (ರಾಯಿಟರ್ಸ್): ನೆಲೆ ಕಳೆದುಕೊಂಡಿರುವ ನೂರಾರು ಮಂದಿ ಪ್ಯಾಲೆಸ್ಟೀನ್ ನಾಗರಿಕರಿಗೆ ಆಶ್ರಯ ನೀಡಿದ್ದ ಗ್ರೀಕ್ ಆರ್ಥಡಾಕ್ಸ್ ಚರ್ಚ್ ಮೇಲೆ ಇಸ್ರೇಲ್ ವಾಯುದಾಳಿ ನಡೆದಿದೆ. ಈ ದಾಳಿಯಿಂದಾಗಿ 18 ಮಂದಿ ಪ್ಯಾಲೆಸ್ಟೀನ್ ಕ್ರೈಸ್ತರು ಮೃತಪಟ್ಟಿದ್ದಾರೆ ಎಂದು ಹಮಾಸ್ ಸರ್ಕಾರದ ಮಾಧ್ಯಮ ಕಚೇರಿ ಹೇಳಿದೆ.

ಆದರೆ, ಸತ್ತವರ ಸಂಖ್ಯೆಯ ಕುರಿತು ಚರ್ಚ್ ಕಡೆಯಿಂದ ಮಾಹಿತಿ ಸಿಕ್ಕಿಲ್ಲ. ಹಮಾಸ್ ಬಂಡುಕೋರರ ಕಮಾಂಡ್ ಕೇಂದ್ರದ ಮೇಲಿನ ದಾಳಿಯ ಸಂದರ್ಭದಲ್ಲಿ ಚರ್ಚ್‌ನ ಭಾಗವೊಂದಕ್ಕೆ ಹಾನಿಯಾಗಿದೆ, ಈ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಇಸ್ರೇಲ್ ಮಿಲಿಟರಿ ತಿಳಿಸಿದೆ.

ವಾಯುದಾಳಿಯಿಂದ ತಪ್ಪಿಸಿಕೊಳ್ಳಲು ಕನಿಷ್ಠ ಐನೂರು ಮಂದಿ ಮುಸ್ಲಿಮರು ಹಾಗೂ ಕ್ರೈಸ್ತರು ಈ ಚರ್ಚ್‌ನಲ್ಲಿ ಆಶ್ರಯ ಪಡೆದಿದ್ದರು ಎಂದು ಪ್ಯಾಲೆಸ್ಟೀನ್ ಅಧಿಕಾರಿಗಳು ಹೇಳಿದ್ದಾರೆ. 'ಜೆರುಸಲೇಂನ ಆರ್ಥಡಾಕ್ಸ್ ಧರ್ಮಪ್ರಾಂತ್ಯವು ಈ ದಾಳಿಯನ್ನು ತೀವ್ರವಾಗಿ ಖಂಡಿಸುತ್ತದೆ' ಎಂದು ಪ್ರಕಟಣೆ ತಿಳಿಸಿದೆ. ಗಾಜಾದಲ್ಲಿ ಕ್ರೈಸ್ತರ ಸಂಖ್ಯೆ ಸರಿಸುಮಾರು 1,000 ಇದೆ.

ಮುಸ್ಲಿಂ ರಾಷ್ಟ್ರಗಳಲ್ಲಿ ಪ್ರತಿಭಟನೆ

ಬಾಗ್ದಾದ್ (ಎಪಿ): ಗಾಜಾ ಪಟ್ಟಿ ಮೇಲಿನ ದಾಳಿಯನ್ನು ಖಂಡಿಸಿ ಮುಸ್ಲಿಂ ದೇಶಗಳಲ್ಲಿ ಸಹಸ್ರಾರು ಮಂದಿ ಶುಕ್ರವಾರ ಪ್ರತಿಭಟನೆ ನಡೆಸಿದ್ದಾರೆ.

ಇರಾಕ್, ಈಜಿಪ್ಟ್, ಟರ್ಕಿ, ಇಂಡೊನೇಷ್ಯಾ, ಮಲೇಷ್ಯಾದಲ್ಲಿ ಪ್ರತಿಭಟನೆಗಳು ನಡೆದಿವೆ. ಇಸ್ರೇಲ್ ಕ್ರಮ ಖಂಡಿಸಿ ದಕ್ಷಿಣ ಕೊರಿಯಾದಲ್ಲಿಯೂ ಪ್ರತಿಭಟನೆ ನಡೆದಿದೆ. ಅಲ್ ಅಹ್ಲಿ ಅರಬ್ ಆಸ್ಪತ್ರೆ ಮೇಲಿನ ದಾಳಿಯನ್ನು ಪ್ರತಿಭಟನಕಾರರು ಖಂಡಿಸಿದರು.

ಇಸ್ರೇಲ್ ಜತೆ ಕೇರಳದ ಕಂಪನಿ ವಹಿವಾಟು ಸ್ಥಗಿತ

ಬೆಂಗಳೂರು (ಎಎಫ್‌ಪಿ): ಇಸ್ರೇಲ್ ಪೊಲೀಸರಿಗೆ ಸಮವಸ್ತ್ರ ಸಿದ್ಧಪಡಿಸಿಕೊಡುವ ಬಹುಕಾಲದ ಒಪ್ಪಂದವೊಂದನ್ನು ಕೇರಳದ ಕಂಪನಿಯೊಂದು ಕೊನೆಗೊಳಿಸಲಿದೆ. ಗಾಜಾ ಪಟ್ಟಿಯಲ್ಲಿ ನಡೆಯುತ್ತಿರುವ ಯುದ್ಧದ ಕಾರಣದಿಂದಾಗಿ 'ಈ ನೈತಿಕ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ತಿಳಿಸಿದೆ.

ಕೇರಳ ಮೂಲದ ಮಾರ್ಯನ್ ಅಪಾರೆಲ್ ಕಂಪನಿಯು ತಾನು 2015ರ ನಂತರದಲ್ಲಿ ಇಸ್ರೇಲ್ ಪೊಲೀಸರಿಗೆ ಪ್ರತಿವರ್ಷ ಅಂದಾಜು 1 ಲಕ್ಷ ಸಮವಸ್ತ್ರ ಪೂರೈಸುತ್ತಿದ್ದುದಾಗಿ ತಿಳಿಸಿದೆ.

ಆಸ್ಪತ್ರೆಯ ಮೇಲಿನ ದಾಳಿ ಹಾಗೂ ಸಾವಿರಾರು ಮಂದಿ ಅಮಾಯಕರ ಜೀವ ಹಾನಿಯು ಈ ತೀರ್ಮಾನಕ್ಕೆ ಕಾರಣ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಥಾಮಸ್ ಒಲಿಕ್ಕಲ್ ಹೇಳಿದ್ದಾರೆ. ಗಾಜಾದ ಅಲ್ ಅಹ್ಲಿ ಅರಬ್ ಆಸ್ಪತ್ರೆಯ ಮೇಲಿನ ದಾಳಿಗೆ ಕಾರಣ ಯಾರು ಎಂಬ ವಿಚಾರದಲ್ಲಿ ಇಸ್ರೇಲ್ ಹಾಗೂ ಹಮಾಸ್ ಪರಸ್ಪರ ದೋಷಾರೋಪಣೆಯಲ್ಲಿ ತೊಡಗಿವೆ.

ಇಸ್ರೇಲ್‌ಗೆ ಸಮವಸ್ತ್ರ ಪೂರೈಕೆ ಮಾಡಲು ಈಗಾಗಲೇ ಮಾಡಿಕೊಂಡಿರುವ ಡಿಸೆಂಬರ್‌ವರೆಗಿನ ಒಪ್ಪಂದವನ್ನು ಪಾಲಿಸಲಾಗುತ್ತದೆ ಎಂದು ಒಲಿಕ್ಕಲ್ ಹೇಳಿದ್ದಾರೆ.

'ಶಾಂತಿ ಮರುಸ್ಥಾಪನೆ ಆದ ನಂತರದಲ್ಲಿ ಇಸ್ರೇಲ್ ಜೊತೆ ಮತ್ತೆ ವಹಿವಾಟು ಆರಂಭಿಸುವುದಕ್ಕೆ ನಾವು ಸಿದ್ಧರಿದ್ದೇವೆ' ಎಂದು ಅವರು ಹೇಳಿದ್ದಾರೆ.

'ಪುರುಷರಿಗೆ ಗರ್ಭ ನಿರೋಧಕ ಔಷಧ'

ನವದೆಹಲಿ (ಪಿಟಿಐ): ಪುರುಷರಿಗಾಗಿ ಅಭಿವೃದ್ಧಿಪಡಿಸಿರುವ, ಇಂಜೆಕ್ಷನ್ ಮೂಲಕ ನೀಡಬಹುದಾದ ಗರ್ಭ ನಿರೋಧಕದ ಕ್ಲಿನಿಕಲ್ ಟ್ರಯಲ್‌ಗಳನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಪೂರ್ಣಗೊಳಿಸಿದೆ.

ವಿಶ್ವದ ಮೊದಲ ಈ ಗರ್ಭ ನಿರೋಧಕ ಔಷಧಿಯು ಸುರಕ್ಷಿತ ಹಾಗೂ ಪರಿಣಾಮಕಾರಿಯಾಗಿದ್ದು, ಯಾವುದೇ ಗಂಭೀರವಾದ ಅಡ್ಡಪರಿಣಾಮಗಳನ್ನುಂಟು ಮಾಡುವುದಿಲ್ಲ ಎಂದು ಐಸಿಎಂಆರ್ ತಿಳಿಸಿದೆ.

25ರಿಂದ 40 ವರ್ಷ ವಯೋಮಾನದ 303 ಅಭ್ಯರ್ಥಿಗಳು ಮೂರು ಹಂತದ ಕ್ಲಿನಿಕಲ್ ಟ್ರಯಲ್‌ನ ಭಾಗವಾಗಿದ್ದರು. ಅಧ್ಯಯನ ವರದಿಯು ಅಂತರರಾಷ್ಟ್ರೀಯ ನಿಯತಕಾಲಿಕೆ 'ಆ್ಯಂಡ್ರೊಲಜಿ'ಯಲ್ಲಿ ಪ್ರಕಟವಾಗಿದೆ.

ನವದೆಹಲಿ, ಉಧಂಪುರ, ಲುಧಿಯಾನ, ಜೈಪುರ ಹಾಗೂ ಖರಗಪುರದಲ್ಲಿ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್‌ಗಳನ್ನು ನಡೆಸಲಾಗಿತ್ತು ಎಂದು ಐಸಿಎಂಆರ್ ತಿಳಿಸಿದೆ.

ಪ್ರಸ್ತುತ ರೂಢಿಯಲ್ಲಿರುವ ವ್ಯಾಸೆಕ್ಟಮಿ, ಪರಿಣಾಮಕಾರಿಯಾದ ಗರ್ಭ ನಿರೋಧಕ ವಿಧಾನವಾಗಿದೆ. ಆದರೆ, ಈ ವಿಧಾನದಲ್ಲಿಯೂ ಹಲವು ಮಿತಿಗಳಿರುವುದರಿಂದ ಸುಧಾರಿತ ಗರ್ಭ ನಿರೋಧಕ ಔಷಧಿಯನ್ನು ಅಭಿವೃದ್ಧಿಪಡಿಸಬೇಕಾಯಿತು. ಒಂದು ಬಾರಿ ನೀಡಲಾಗುವ ಈ ಇಂಜೆಕ್ಷನ್ ದೀರ್ಘಕಾಲದವರೆಗೆ ಪರಿಣಾಮ ಹೊಂದಿರುತ್ತದೆ. ನಿರ್ಲಕ್ಷಿಸಬಹುದಾದಷ್ಟು ಅಡ್ಡ ಪರಿಣಾಮಗಳು ಕಂಡುಬರುತ್ತವೆ ಎಂದೂ ಹೇಳಿದೆ.

ಅರಬ್ಬಿ ಸಮುದ್ರದಲ್ಲಿ 'ತೇಜ್' ಚಂಡಮಾರುತ ಸೃಷ್ಟಿ

ನವದೆಹಲಿ (ಪಿಟಿಐ): ದೇಶದ ಆಗ್ನೇಯ ಹಾಗೂ ಅರಬ್ಬಿ ಸಮುದ್ರದ ನೈಋತ್ಯ ಭಾಗದಲ್ಲಿ ಕಡಿಮೆ ಒತ್ತಡದ ಪ್ರದೇಶ ಸೃಷ್ಟಿಯಾಗಿದೆ. ಇದು ಚಂಡಮಾರುತವಾಗಿ ಮಾರ್ಪಡುವ ಸಾಧ್ಯತೆಯಿದ್ದು, ಅಕ್ಟೋಬರ್ 21ರಂದು ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಕರಾವಳಿ ಪ್ರದೇಶಕ್ಕೆ ಅಪ್ಪಳಿಸುವ ನಿರೀಕ್ಷೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ತಿಳಿಸಿದೆ.

ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತ ಉಂಟಾಗಿದ್ದು, ಪ್ರತಿಕೂಲ ವಾತಾವರಣ ಸೃಷ್ಟಿಗೆ ಕಾರಣವಾಗಲಿದೆ. ಈ ಚಂಡಮಾರುತಕ್ಕೆ 'ತೇಜ್' ಎಂದು ಹೆಸರಿಡಲಾಗಿದೆ. ಪ್ರಸಕ್ತ ವರ್ಷದಲ್ಲಿ ಅರಬ್ಬಿ ಸಮುದ್ರದಲ್ಲಿ ಸೃಷ್ಟಿಯಾದ ಎರಡನೇ ಚಂಡಮಾರುತ ಇದಾಗಿದೆ ಎಂದು ವಿವರಿಸಿದೆ.

ಭಾನುವಾರದ ವೇಳೆಗೆ ತೀವ್ರತೆ ಪಡೆದುಕೊಳ್ಳುವ ಈ ಚಂಡಮಾರುತವು ಒಮನ್ ಹಾಗೂ ಅದಕ್ಕೆ ಹೊಂದಿಕೊಂಡ ಯೆಮನ್‌ನ ದಕ್ಷಿಣ ಕರಾವಳಿ ಪ್ರದೇಶಗಳತ್ತ ಚಲಿಸಲಿದೆ ಎಂದು ಹೇಳಿದೆ.

ನ್ಯಾಯಮೂರ್ತಿ ರವೀಂದ್ರ ಭಟ್ ನಿವೃತ್ತಿ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಅವರು ಶುಕ್ರವಾರ ಸೇವೆಯಿಂದ ನಿವೃತ್ತಿಯಾದರು. 2019ರ ಸೆಪ್ಟೆಂಬರ್ 23ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದಿದ್ದ ಭಟ್ ಅವರು, ನಾಲ್ಕು ವರ್ಷ ಸೇವೆ ಸಲ್ಲಿಸಿದ್ದರು.

ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ನ್ಯಾ. ಸಂಜಯ್ ಕೃಷ್ಣ ಕೌಲ್, ಭಟ್ ಅವರು ತಮ್ಮ ನಿಖರ ಮತ್ತು ಸಂಕ್ಷಿಪ್ತ ತೀರ್ಪುಗಳ ಮೂಲಕ ನ್ಯಾಯಾಂಗ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ವಿಶೇಷವಾಗಿ ಸಾಂವಿಧಾನಿಕ ವಿಚಾರಗಳಲ್ಲಿ ಅವರು ಉತ್ತಮ ಕೊಡುಗೆ ಶ್ಲಾಘನೀಯವಾಗಿದೆ ಎಂದು ಹೇಳಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

LG
ಯುನಿಲೆಟ್®
ಎಲೆಕ್ಟ್ರಾನಿಕ್ಸ್ ಅಂಡ್ ಮೋರ್...
India ka Celebration
FESTIVE EXCLUSIVE OFFERS
WIN LG DREAM HOME PACKAGE Every Day*
OLED TV • Side-by-Side Refrigerator • Front Load Washing Machine • Water Purifier • Microwave Oven
GRAND PRIZE AUDI Q3*
*Image source: Audi
To participate in these offers, send an SMS <"First Name" "Last Name" GTM Code> to 7835073507
HOME APPLIANCES OFFERS
FREE* GLASS BOWL KIT (On Select Models of Microwave Oven)
FREE* Maintenance worth ₹4200* (Part of 1st Year Package) (On Select Models of Water Purifier)
HOME ENTERTAINMENT OFFERS
3 YEAR* WARRANTY (With Select LG TVs)
FREE* LG SMART CAM Worth ₹9990 (With Select LG TVs)
Up to 26% CASHBACK Max ₹26000* ON SELECT CREDIT / DEBIT CARDS
OLED CIRCLE An exclusive alliance Get benefits up to ₹50000*
UP TO 30% OFF ON LG SOUNDBAR* (With Select LG TVs)
FIXED EMI Starting from ₹2999*
ADDITIONAL OFFERS
1* EMI Free / 0* Down Payment
*T&C apply. For more information kindly visit www.lg.com/in
190 CM (75) UHD 75UR9050PSK
• 4K Display / α5 AI Processor 4K Gen6 • Built-in Alexa / Apple Airplay & HomeKit / Works with Hey Google • 60 Hz
EMI: ₹3,999*
165 CM (65) UHD 65UR8040PSB
• 4K Display / α5 AI Processor 4K Gen6 • Built-in Alexa / Apple Airplay & HomeKit / Works with Hey Google • 60 Hz
EMI: ₹1,999*
139 CM (55) OLED 55C3PSA
• Self-LIT Pixels / α9 AI Processor 4K Gen6 / 120Hz • Dolby Vision & Dolby Atmos • NVIDIA G-Sync / AMD FreeSync / VRR / WiFi 6
EMI: ₹1,999*
655 LTRS SBS GL-B257DLWX
Side-By-Side • Premium Glass Door • AI ThinQ • DoorCooling+™ • Hygiene Fresh+™ • Wine Rack • Smart Diagnosis™ • Express Freeze • Easy Ice Maker (Door Mounted) • Multi Digital Sensor • Smart Inverter Compressor™ • Colour: Linen White Glass
EMI: ₹4,999*
Capacity: 655/650* Litres
655 LTRS SBS GL-B257EPZ3
Side-By-Side • Wi-Fi Convertible* • AI ThinQ • DoorCooling+™ • Hygiene Fresh+™ • Smart Diagnosis™ • Multi Air Flow • Express Freeze • Easy Ice Maker (Door Mounted) • Multi Digital Sensor • Smart Inverter Compressor™ • Colour: Shiny Steel
EMI: ₹4,999*
Wi-Fi Convertible
Capacity: 655/650* Litres
635 LTRS SBS GL-L257CPZX
Side-By-Side • AI ThinQ • DoorCooling+™ • Hygiene Fresh+™ • Wine Rack • Smart Diagnosis™ • Water and Ice Dispenser (Non Plumbing) • Spaceplus™ Ice System • Multi Air Flow • Express Freeze • Multi Digital Sensor • Smart Inverter Compressor™ • Colour: Shiny Steel
EMI: ₹4,999*
Capacity: 635 Litres
475 LTRS CBU GN-H602HLHM
AI ThinQ™ • Hygiene Fresh+™ • DoorCooling+™ • Digital Display • Smart Inverter Compressor™ • Toughened Glass Shelves • Lower Door Basket • Auto Smart Connect™ • Rating: 1-Star • Colour: Shiny Steel
EMI: ₹2,999*
Capacity: 475 Litres
380 LTRS CBU GL-T412VPZX
AI ThinQ™ • Hygiene Fresh+™ • DoorCooling+™ • Convertible • Digital Display • Smart Inverter Compressor™ • Toughened Glass Shelves • Lower Door Basket • Auto Smart Connect™ • Rating: 3-Star • Colour: Ebony Sheen
EMI: ₹2,999*
Capacity: 398*/380* Litres
343 LTRS FF GGL-S382SUSY
Convertible • Smart Inverter Compressor™ • Multi Air Flow • Toughened Glass Shelves • Lower Door Basket • Auto Smart Connect™ • Rating: 2-Star • Colour: Urban Steel
EMI: ₹2,999*
Capacity: 343 Litres
242 LTRS FF GL-N292BDSY
Convertible • Smart Inverter Compressor™ • Multi Air Flow • Toughened Glass Shelves • Lower Door Basket • Auto Smart Connect™ • Rating: 2-Star • Colour: Dazzle Steel
EMI: ₹1,999*
Capacity: 242 Litres
240 LTRS FF GL-S292RSCY
Convertible • Smart Inverter Compressor™ • Multi Air Flow • Toughened Glass Shelves • Lower Door Basket • Auto Smart Connect™ • Rating: 2-Star • Colour: Scarlet Charm
EMI: ₹1,999*
Capacity: 240 Litres
201 LTRS DC GL-D211HSEY
Smart Inverter Compressor™* • Toughened Glass Shelves • Base Stand Drawer* • Fast Ice Making • Auto Smart Connect* • Anti-Bacterial Shield • Moist 'N' Fresh • Rating: 5-Star (Gold Star Edition)* /3-Star* • Color: Scarlet Euphoria
EMI: ₹1,567*
Capacity: 201 Litres
185 LTRS DC GL-D199OBED
Toughened Glass Shelves • Base Stand Drawer* • Fast Ice Making • Anti-Bacterial Shield • Moist 'N' Fresh • Rating: 3-Star • Color: Blue Euphoria
EMI: ₹1,357*
10.5 kg / 7 kg DRYER & WASHER FHD1057STB
AI DD® • 6 Motion DD • TurboWash 360° • Steam+ • LG ThinQ™ (Wi-Fi) • Smart Diagnosis • 10-Year Warranty* • RPM: Max. 1400 • Color: Black VCM
EMI: ₹2,999*
11 KG FRONT LOAD FHP1411Z9B
AI DD® • 6 Motion DD • TurboWash 360° • Steam+ • LG ThinQ™ (Wi-Fi) • Smart Diagnosis • 10-Year Warranty* • RPM: Max. 1400 • Color: Platinum Silver
EMI: ₹2,999*
9 KG FRONT LOAD FHV1409Z4M
AI DD® • 6 Motion DD • Steam™ • Smart Diagnosis • 10-Year Warranty* • RPM: Max. 1400 • Color: Middle Black
EMI: ₹2,999*
9 KG TOP LOAD THD09NWM
AI DD® • 6 Motion DD • Direct Drive Motor • TurboWash™ • LG ThinQ™ (Wi-Fi) • Smart Diagnosis • Color: Middle Black
EMI: ₹1,999*
7 KG TOP LOAD T70AJMB1Z
Smart Inverter Motor • Smart Diagnosis • TurboDrum • Auto Pre Wash • Soft Closing Door • Color: MFS
EMI: ₹1,999*
Smart Inverter Motor
DISH WASHER DFB532FP 14 place
TrueSteam® • QuadWash™ • EasyRack™ Plus • Inverter Direct Drive • 100% Stainless Steel • LG ThinQ • Capacity: 14 Place Settings • Auto-Restart • Colour: Platinum Silver
EMI: ₹2,999*
Preethi FOOD PROCESSOR ZODIAC BLACK
35% OFF
UPTO 5% INSTANT DISCOUNT* SBI card
#Min. Trxn: ₹30,000; Max. Cashback: ₹5,000 per credit card account. Validity: 15 Oct - 13 Nov 2023. T & C apply.
HDFC BANK FESTIVE TREATS
CASHBACK UPTO ₹12,500*
CASHBACK UPTO ₹16,000*
Paytm EMI QR Card Cash Back No Cost EMI
7.5% INSTANT DISCOUNT HDFC BANK CREDIT/DEBIT CARDS ON EMI
EMI CARD EASY FINANCE CREDIT / DEBIT CARD EMI
0% INTEREST NO HIDDEN COSTS
UPTO 24 MONTHS NO COST EMIs
MATHIKERE: Old Raghu Med. Ph: 91484 50662. K R PURAM: Nr. TC Palya signal, Ph: 76195 55537. BANASHANKARI: Opp. Big Bazaar, Ph: 99000 46931. MARATHAHALLI: Opp. Innovative, Ph: 91484 50665/64. BOMMANAHALLI: Next to Shell Petrol, Ph: 99000 46913. YELAHANKA NEW TOWN: Opp Yelahanka Central Mall, Ph: 99000 46918. SAHAKAR NAGAR: Next to Swati Garden, Ph: 99000 46937. HEBBAGODI: Opp SKF, Next to KFC, Ph: 76195 55541. BASVESHWARA NAGAR: Modi Hospital Road, Ph: 99000 46934. R.T NAGAR: Next to Police Station, Ph: 99000 29308. SANJAY NAGAR: Next to HDFC Bank, Ph: 99000 46928. DEVANAHALLI: Opp. Indian Oil, Ph: 91481 40111. HOSAKOTE: Next to Chemmanur, Ph: 91081 78999. AKSHAY NAGAR: DLF City, Opp. Hiranandani, Ph: 99000 46943. HONGASANDRA: Opp SBI, Begur Road, Ph: 95915 26018. COX TOWN: Next to Gymkhana, Ph: 99000 46930. FRAZER TOWN: Opp. Canara Bank, Ph: 99000 12851. GANGA NAGAR: Opp Vishal Medicals, Ph: 99000 46949. HANUMANTH NAGAR: Opp. Canara Bank, Ph: 99000 46940. HEGGANAHALLI: Opp Bus Stop, Ph: 76195 55506. HESARAGHATTA MN RD: Opp. Karnataka Bank, Ph: 76195 55543. HRBR LAYOUT: Near Banaswadi Club, Ph: 99000 46946. HSR LAYOUT: Opp NIFT, 27 Main, Ph: 99000 18126. KOTHANUR: Next to Empire Hotel, Ph: 99002 37116. NAGARBHAVI: Ambedkar Col. Signal, Ph: 99725 97017. SUNKADAKATTE: Magadi Road, Ph: 76195 55509. RR NAGAR: Opp. BBMP Office, Ph: 99000 18217. PEENYA T DASARAHALLI: Next to Honda Showroom, Ph: 91485 70490. VIJAYANAGAR: Opp. Water Tank, Ph: 99000 12420. KENGERI: Opp. DS Max, Ph: 99000 12609. RAMANAGARA: Near Izoor P Stn., Ph: 99000 98795. NELAMANGALA: Opp. Shell Petrol Station, Ph: 99001 15781. KOLAR: Opp Honda, Ph: 99001 09852. TUMKUR: Opp. SIT, Batwadi, Ph: 91086 71999. DODDABALLAPUR: Talulk Office Road, Ph: 99000 46923.
LG BEST SHOPS: BANGALORE: RAMA MURTHY NAGAR, Ph: 99000 46915. BANASHANKARI, Ph: 99000 29309. HRBR LAYOUT, Ph: 95133 05557. MATHIKERE, Ph: 91484 50663. NAGARBHAVI, Ph: 99725 97043. PEENYA, Ph: 99000 12439. SAHAKAR NAGAR (NXT TO SWATI GARDEN), Ph: 95133 05559. MYSORE: Kuvempunagar, 91489 99894
*Terms and conditions apply. On select brands and products. Limited period offers. Images are for representation only, not actual products. Free gift not applicable for samsung. Finance at the sole discretion of the financier. #20% cash back as per the offers by card issuers and banks and finance companies.
50+ STORES | BENGALURU | MYSORE | TUMKUR | HOSAKOTE | RAMANAGARA | KOLAR | NELAMANGALA | MANDYA | CHITRADURGA | DODDABALLAPURA | SHIVAMOGGA | HASSAN | www.uniletstores.com

ದೊಡ್ಡಬಿದರುಕಲ್ಲು ಮಾರಣ್ಣ ಬಡಾವಣೆಯಲ್ಲಿ ನೀರಿನ ಅಭಾವ; ₹ 500 ಲಂಚ ಪಡೆದಿದ್ದಕ್ಕೆ ಸ್ಥಳೀಯರ ಪ್ರತಿಭಟನೆ

ನೀರು ಬಿಡಲು ಲಂಚ: ಬೋರ್‌ವೆಲ್‌ಗಳಿಗೆ ಬೀಗ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ನೀರು ಬಿಡಲು ಪ್ರತಿ ತಿಂಗಳು ₹ 500 ಲಂಚ ಕೇಳುತ್ತಿರುವ ವಾಟರ್‌ಮ್ಯಾನ್‌ಗಳು, ಹಣ ನೀಡದಿದ್ದರೆ ನೀರಿನ ಕೃತಕ ಅಭಾವ ಸೃಷ್ಟಿಸುತ್ತಿದ್ದಾರೆ. ತಮ್ಮದೇ ನೀರಿನ ಟ್ಯಾಂಕರ್‌ಗಳನ್ನು ಇಟ್ಟುಕೊಂಡು ದಂಧೆ ಮಾಡುತ್ತಿದ್ದಾರೆ' ಎಂದು ಆರೋಪಿಸಿ ದೊಡ್ಡಬಿದರುಕಲ್ಲು ಮಾರಣ್ಣ ಬಡಾವಣೆಯ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಬೋರ್‌ವೆಲ್‌ಗಳಿಗೆ ಬೀಗ ಹಾಕಿ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದ ನಿವಾಸಿಗಳು, ಖಾಲಿ ಕೊಡಗಳನ್ನು ಪ್ರದರ್ಶಿಸಿದರು. 'ನೀರಿನ ಹೆಸರಿನಲ್ಲಿ ದಂಧೆ ಮಾಡುತ್ತಿರುವ ವಾಟರ್ ಮ್ಯಾನ್‌ಗಳನ್ನು ಕೂಡಲೇ ಕೆಲಸದಿಂದ ವಜಾ ಮಾಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಸ್ಥಳೀಯ ನಿವಾಸಿ ಅನಸೂಯಮ್ಮ ಮಾತನಾಡಿ , 'ಬಡಾವಣೆಯಲ್ಲಿ ಒಂದು ವರ್ಷದಿಂದ ಕೃತಕ ನೀರಿನ ಅಭಾವ ಸೃಷ್ಟಿಸಲಾಗುತ್ತಿದೆ. ನೀರು ಬಿಡದೆ ವಾಟರ್‌ಮ್ಯಾನ್‌ಗಳು ದರ್ಪ ತೋರುತ್ತಿದ್ದಾರೆ' ಎಂದು ದೂರಿದರು.

'₹500 ಹಣ ಕೊಟ್ಟರೆ ಮಾತ್ರ ವಾಟರ್‌ಮ್ಯಾನ್‌ಗಳು ನೀರು ಬಿಡುತ್ತಿದ್ದಾರೆ. ಹಣ ಕೊಡದಿದ್ದರೆ, ನೀರು ಬಿಡುವುದಿಲ್ಲ. ನೀರು ಖಾಲಿಯಾದ ನಂತರ, ವಾಟರ್‌ಮ್ಯಾನ್‌ಗಳೇ ಟ್ಯಾಂಕರ್ ನೀರು ಖರೀದಿಸುವಂತೆ ಹೇಳುತ್ತಿದ್ದಾರೆ. ನೀರಿನ ಹೆಸರಿನಲ್ಲಿ ಹಣ ಮಾಡುವುದನ್ನೇ ವಾಟರ್‌ಮ್ಯಾನ್‌ಗಳು ದಂಧೆ ಮಾಡಿಕೊಂಡಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮತ್ತೊಬ್ಬ ಮಹಿಳೆ ಲಕ್ಷ್ಮಿ, 'ಮಾರಣ್ಣ ಬಡಾವಣೆಯಲ್ಲಿ ಮೂಲ ಸೌಕರ್ಯಗಳಿಲ್ಲ. ರಸ್ತೆ ಹಾಗೂ ಮೋರಿ ಸಮಸ್ಯೆ ಸಾಕಷ್ಟಿದೆ. ನೀರಿನ ಬವಣೆ ತೀವ್ರವಾಗಿದೆ. ನೀರಿನ ಹೆಸರಿನಲ್ಲಿ ಹಣ ಸುಲಿಗೆ ಮಾಡುತ್ತಿರುವ ವಾಟರ್ ಮ್ಯಾನ್‌ಗಳನ್ನು ಕೂಡಲೇ ಕೆಲಸದಿಂದ ವಜಾ ಮಾಡಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಸಂಸದ, ಶಾಸಕ ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜವಾಗಿಲ್ಲ' ಎಂದು ದೂರಿದರು.

ದೊಡ್ಡಬಿದರಕಲ್ಲು ವಾರ್ಡ್‌ನ ಮಾರಣ್ಣನ ಬಡಾವಣೆಯಲ್ಲಿ ನಿವಾಸಿಗಳು ಖಾಲಿ ಕೊಡ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು

ರಾಷ್ಟ್ರೋತ್ಥಾನ ಪರಿಷತ್ತಿನ ಸಹಯೋಗದಲ್ಲಿ ಐಸಿಎಸ್ ವೆಲ್ಫೇರ್ ಫೌಂಡೇಶನ್ ತನ್ನ ಸಂಸ್ಥೆಯ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಹಲವರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದರು

ಪ್ರತಿಭಟನಕಾರರು ಪೊಲೀಸ್ ವಶಕ್ಕೆ

ಪ್ಯಾಲೆಸ್ಟೀನ್ ಪರ ಪ್ರತಿಭಟಿಸಲು ಅವಕಾಶ ನಿರಾಕರಣೆ; ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಾಲೆಸ್ತೀನ್ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ತಡೆಯುವಂತೆ ವಿಶ್ವಸಂಸ್ಥೆಯ ಮೇಲೆ ಕೇಂದ್ರ ಸರ್ಕಾರ ಒತ್ತಡ ಹೇರಬೇಕು' ಎಂದು ಒತ್ತಾಯಿಸಿ ನಗರದಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದ ಹಲವರನ್ನು ಪೊಲೀಸರು ವಶಕ್ಕೆ ಪಡೆದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಿಪಿಐ, ಸಿಪಿಐಎಂ ಹಾಗೂ ಸಿಪಿಐ ಎಂಎಲ್ ವತಿಯಿಂದ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಆದರೆ, ಪ್ರತಿಭಟನೆಗೆ ಪೊಲೀಸರು ಅನುಮತಿ ನಿರಾಕರಿಸಿದ್ದರು.

ಪಕ್ಷಗಳ ಮುಖಂಡರು, ಕಾರ್ಯಕರ್ತರು ಉದ್ಯಾನದಲ್ಲಿ ಸೇರಿದ್ದರು. ಸ್ಥಳಕ್ಕೆ ಬಂದಿದ್ದ ಪೊಲೀಸರು, 'ಪ್ರತಿಭಟನೆಗೆ ಅವಕಾಶವಿಲ್ಲ. ನೀವು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಲಾಗಿದೆ' ಎಂದಿದ್ದರು.

'ಪ್ರತಿಭಟನೆ ಎಲ್ಲರ ಹಕ್ಕು. ಹೀಗಾಗಿ, ಪ್ರತಿಭಟಿಸುತ್ತಿದ್ದೇವೆ' ಎಂದು ಪ್ರತಿಭಟನಕಾರರು ಹೇಳಿದ್ದರು. ನಂತರ, ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ಮಾತಿನ ಚಕಮಕಿ ನಡೆಯಿತು.

20ಕ್ಕೂ ಹೆಚ್ಚು ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದವರನ್ನು ಪೊಲೀಸರು ವಶಕ್ಕೆ ಪಡೆದು ಬಸ್‌ಗಳಲ್ಲಿ ಕರೆದೊಯ್ದರು – ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಮಗಳ ಮೇಲೆ ಅತ್ಯಾಚಾರ: ತಂದೆಗೆ 20 ವರ್ಷ ಜೈಲು

ಬೆಂಗಳೂರು: ಮಗಳ ಮೇಲೆ ಅತ್ಯಾಚಾರ ಎಸಗಿ ಗರ್ಭಿಣಿಯನ್ನಾಗಿ ಮಾಡಿದ್ದ ಅಪರಾಧಿ ತಂದೆಗೆ 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ನಗರದ 5ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಕಾಮಾಕ್ಷಿಪಾಳ್ಯ ಠಾಣೆಯಲ್ಲಿ 2022ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಎನ್. ನರಸಮ್ಮ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಅನುರೇವು ವಾದಿಸಿದ್ದರು.

'ಅಪರಾಧಿಯು ಪತ್ನಿ ಹಾಗೂ ಮಕ್ಕಳ ಜೊತೆ ವಾಸವಿದ್ದ. 2022ರ ಜನವರಿ ಹಾಗೂ ಮಾರ್ಚ್‌ನಲ್ಲಿ ತನ್ನ ಮಗಳ ಮೇಲೆಯೇ ಹಲವು ಬಾರಿ ಅತ್ಯಾಚಾರ ಎಸಗಿದ್ದ. ಕೆಲ ತಿಂಗಳ ನಂತರ, ಬಾಲಕಿ ಗರ್ಭಿಣಿ ಎಂಬುದು ಗೊತ್ತಾಗಿತ್ತು. ಈ ಬಗ್ಗೆ ತಾಯಿ ವಿಚಾರಿಸಿದಾಗ, ತಂದೆಯೇ ಅತ್ಯಾಚಾರ ಎಸಗಿರುವುದಾಗಿ ಬಾಲಕಿ ಹೇಳಿದ್ದಳು' ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಅನುರೇವು ತಿಳಿಸಿದ್ದಾರೆ.

'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಕಾಮಾಕ್ಷಿಪಾಳ್ಯ ಠಾಣೆಯ ಇನ್‌ಸ್ಪೆಕ್ಟರ್ ಲೋಹಿತ್ ಬಿ.ಎನ್., ತಂದೆಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು' ಎಂದು ಹೇಳಿದ್ದಾರೆ.

'ಅಪರಾಧಿಗೆ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಜೊತೆಯಲ್ಲಿ ₹ 10 ಸಾವಿರ ದಂಡ ವಿಧಿಸಲಾಗಿದೆ. ಪ್ರಾಧಿಕಾರದಿಂದ ನೊಂದ ಬಾಲಕಿಗೆ ₹ 7 ಲಕ್ಷ ಪರಿಹಾರ ನೀಡುವಂತೆಯೂ ನ್ಯಾಯಾಲಯ ಶಿಫಾರಸು ಮಾಡಿದೆ' ಎಂದು ಅನುರೇವು ತಿಳಿಸಿದ್ದಾರೆ.

ಕಾರು ಗುದ್ದಿಸಿ ವ್ಯಾಪಾರಿ ಕೊಲೆ

ಬೆಂಗಳೂರು: ಮಾತುಕತೆಗೆಂದು ಕರೆದು ಕಾರು ಗುದ್ದಿಸಿ ಸೈಯದ್ ಅಸ್ಗರ್ (49) ಅವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಪುಲಿಕೇಶಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಎಸ್.ಕೆ. ಗಾರ್ಡನ್ ನಿವಾಸಿ ಸೈಯದ್ ಅಸ್ಗರ್, ಗುಜರಿ ವ್ಯಾಪಾರಿ. ಶುಕ್ರವಾರ ರಾತ್ರಿ ಇವರನ್ನು ಕೊಲೆ ಮಾಡಲಾಗಿದೆ. ಸ್ನೇಹಿತರೇ ಕೃತ್ಯ ಎಸಗಿ ಪರಾರಿಯಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ಸೈಯದ್ ಅಸ್ಗರ್ ಹಾಗೂ ಸ್ನೇಹಿತರ ನಡುವೆ ಹಣಕಾಸು ವ್ಯವಹಾರವಿತ್ತು. ಇದೇ ವಿಚಾರವಾಗಿ ಹಲವು ಬಾರಿ ಮಾತುಕತೆ ನಡೆದಿತ್ತು. ಸೈಯದ್‌ಗೆ ಗುರುವಾರವೂ ಕರೆ ಮಾಡಿದ್ದ ಆರೋಪಿಗಳು, ಹಣಕಾಸು ವ್ಯವಹಾರದ ಬಗ್ಗೆ ಮಾತನಾಡಬೇಕೆಂದು ಹೇಳಿದ್ದರು.'

'ಗುರುವಾರ ರಾತ್ರಿ 12.30ರ ಸುಮಾರಿಗೆ ಸೈಯದ್ ಪಾಟರಿ ವೃತ್ತಕ್ಕೆ ಹೋಗಿದ್ದರು. ಸ್ಥಳದಲ್ಲಿದ್ದ ಸ್ನೇಹಿತರ ಜೊತೆ ಮಾತನಾಡುತ್ತಿದ್ದರು. ಪರಸ್ಪರ ಮಾತಿನ ಚಕಮಕಿ ನಡೆದು ಗಲಾಟೆ ಶುರುವಾಗಿತ್ತು. ಇದೇ ಸಂದರ್ಭದಲ್ಲಿ ಆರೋಪಿಗಳು, ಸ್ಥಳದಿಂದ ಹೊರಡುವುದಾಗಿ ಕಾರು ಹತ್ತಿದ್ದರು. ಸೈಯದ್ ರಸ್ತೆಯಲ್ಲಿ ನಿಂತಿದ್ದರು. ಅವರಿಗೆ ಕಾರು ಗುದ್ದಿಸಿದ್ದ ಆರೋಪಿಗಳು, ಸ್ಥಳದಿಂದ ಪರಾರಿಯಾಗಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ತೀವ್ರ ಗಾಯಗೊಂಡಿದ್ದ ಸೈಯದ್ ಅಸ್ಗರ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಆಸ್ಪತ್ರೆಯಲ್ಲಿಯೇ ಮೃತಪಟ್ಟಿದ್ದಾರೆ' ಎಂದು ಹೇಳಿದರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ (ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)

E-Mail:pdchikkaballapur@gmail.com, Ph:08156-277005

ಸಂಖ್ಯೆ:ಜಿನಕೋ/ಇಂದಿರಾ ಕ್ಯಾಂಟೀನ್/ಸಿ.ಆರ್/02/2021–22

ದಿನಾಂಕ:17.10.2023

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ "ಇಂದಿರಾ ಕ್ಯಾಂಟೀನ್" ತೆರೆಯಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಒಂದು ವರ್ಷದ ಅವಧಿಗೆ ಆಹಾರ ಸರಬರಾಜುದಾರರ ಏಜೆನ್ಸಿ ನೇಮಕ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅಧಿಕೃತ ಸರಬರಾಜುದಾರರು/ಏಜೆನ್ಸಿರವರು ಭಾಗವಹಿಸಬಹುದಾಗಿರುತ್ತದೆ. ಅರ್ಹ ಏಜೆನ್ಸಿದಾರರು ವೆಬ್‌ಸೈಟ್ www.kppp.karnataka.gov.in ನಲ್ಲಿ ಇಂಡೆಂಟ್‌ಗಳ ಮುಖಾಂತರ ಮಾಹಿತಿಯನ್ನು ಪಡೆಯಬಹುದಾಗಿದೆ. **ಕಾಮಗಾರಿಗಳ ವಿವರ:** (1) ಪ್ಯಾಕೇಜ್ ನಂ.1 ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ನಗರಸಭೆ, ಗೌರಿಬಿದನೂರು, ನಗರಸಭೆ ಮತ್ತು ಗುಡಿಬಂಡೆ ಪಟ್ಟಣ ಪಂಚಾಯಿತಿ, **(No.DMA/2023-24/IND0609).** ಒಂದು ವರ್ಷಕ್ಕೆ ಸರಬರಾಜು ಮಾಡುವ **ಅಂದಾಜು ಮೊತ್ತ: ರೂ. 271.56 ಲಕ್ಷ** (ಜಿ.ಎಸ್.ಟಿ ಒಳಗೊಂಡಂತೆ). **ಇ.ಎಂ.ಡಿ ಮೊತ್ತ: ರೂ. 4.08 ಲಕ್ಷ.** (2) ಪ್ಯಾಕೇಜ್ ನಂ.2 ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರಸಭೆ, ಶಿಡ್ಲಘಟ್ಟ ನಗರಸಭೆ ಮತ್ತು ಬಾಗೇಪಲ್ಲಿ ಪುರಸಭೆ. **(No.DMA/2023-24/IND0608).** ಒಂದು ವರ್ಷಕ್ಕೆ ಸರಬರಾಜು ಮಾಡುವ ಅಂದಾಜು **ಮೊತ್ತ: ರೂ. 294.19 ಲಕ್ಷ** (ಜಿ.ಎಸ್.ಟಿ ಒಳಗೊಂಡಂತೆ). **ಇ.ಎಂ.ಡಿ ಮೊತ್ತ: ರೂ. 4.42 ಲಕ್ಷ.** ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸತಕ್ಕದ್ದು. (1) ಪೂರ್ವಭಾವಿ ಸಭೆ (PRE-BID MEETING) : **30.10.2023 ರ ಪೂರ್ವಾಹ್ನ 11.00 ಗಂಟೆಗೆ** ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ. (2) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 16.11.2023 ರ ಸಂಜೆ: 05.30 ಗಂಟೆಗೆ.** (3) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 18.11.2023 ರ ಪೂರ್ವಾಹ್ನ 11.00 ಗಂಟೆಗೆ.** (4) ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 20.11.2023 ರ ಬೆಳಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸಿದ ದಿನದಂದು. ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:120/ಕೆಎಸ್‌ಎಂ.ಸಿ.ಎ/2023–24

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ. ದೂರವಾಣಿ ಸಂಖ್ಯೆ:08156–270058

EMail ID: eerdwsd.ckb2@gmail.com

ಸಂಖ್ಯೆ:/ಕಾಅ/ಗ್ರಾ.ಕು.ನೀ.& ನೈ.ವಿ/ಚಿ.ಪುರ/ಟೆಂಡರ್/ಸ.ಇಂ–1/2023–24

ದಿನಾಂಕ: 18.10.2023

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಟೆಂಡರ್ ಪ್ರಕಟಣೆ ಸಂಖ್ಯೆ: 10/Call-2/2023–24 ದಿನಾಂಕ: 18.10.2023

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು **2022–23ನೇ** ಸಾಲಿನ JJM ಯೋಜನೆಯಡಿ **ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕಿನ 37 ಗ್ರಾಮಗಳಲ್ಲಿ** ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂದಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್ **KW-II & KW-III** ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ **(Credit Card/Direct Debit/ NEFT & OTC** ಮುಖೇನ) ಅಥವ ಚಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://kppp.karnataka.gov.in/** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ **ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ: 27.10.2023 ರಂದು ಸಂಜೆ 5.30 ಗಂಟೆವರೆಗೆ.** (2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 28.10.2023 ರಂದು ಸಂಜೆ 5.30 ಗಂಟೆವರೆಗೆ.** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 30.10.2023 ಬೆಳಗ್ಗೆ 11.00 ಗಂಟೆಗೆ.** (4) ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ: 02.11.2023 ಬೆಳಗ್ಗೆ 11.00 ಗಂಟೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:115/ಕೆಎಸ್‌ಎಂಸಿಎ/2023–24

ಬಿಬಿಎಂಪಿ ಐಟಿ ವಿಭಾಗದ 38 ಸಿಬ್ಬಂದಿಗೆ ಸಂಕಷ್ಟ

5 ತಿಂಗಳಿಂದ ವೇತನ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಐಟಿ ವಿಭಾಗದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ 38 ಸಿಬ್ಬಂದಿಗೆ ಐದು ತಿಂಗಳಿಂದಲೂ ವೇತನ ನೀಡಿಲ್ಲ.

ಗುತ್ತಿಗೆದಾರರ ಬದಲಾವಣೆ ಹಾಗೂ ಕಾರ್ಯಾಚರಣೆಯಲ್ಲಿ ಗೊಂದಲ ಸೃಷ್ಟಿಯಾಗಿರುವುದರಿಂದ ಮೇ ತಿಂಗಳಿನಿಂದ ವೇತನ ನೀಡಲಾಗಿಲ್ಲ.

ಆರ್‌ಎಂಎಸ್ ಟೆಕ್ನಾಲಜಿ, 8 ವರ್ಷಗಳಿಂದ ಗುತ್ತಿಗೆಯಲ್ಲಿ ಸಿಬ್ಬಂದಿ ಒದಗಿಸುತ್ತಿತ್ತು. ಪ್ರತಿ ಎರಡು ವರ್ಷಕ್ಕೊಮ್ಮೆ ನವೀಕರಿಸ ಲಾಗುತ್ತಿದ್ದ ಸಿಬ್ಬಂದಿಯ ಗುತ್ತಿಗೆ ಅವಧಿ 2023ರ ಏ. 28ರಂದು ಮುಗಿದಿದೆ. ಈ ಗುತ್ತಿಗೆಯನ್ನು ಬಿಬಿಎಂಪಿ ಕಿಯೊನಿಕ್ಸ್‌ಗೆ ನೀಡಿದ್ದು, ಹಿಂದಿನ ಕಂಪನಿ ನೀಡುತ್ತಿದ್ದ ವೇತನಕ್ಕಿಂತ ಕಡಿಮೆ ನೀಡುವುದಾಗಿ ಹೊಸ ಗುತ್ತಿಗೆದಾರರು ತಿಳಿಸಿದ್ದಾರೆ. ಆದರೆ, ಮೇ ತಿಂಗಳಿನಿಂದ ವೇತನ ಪಾವತಿಯಾಗಿಲ್ಲ.

'ಇದನ್ನೆಲ್ಲ ಸರಿಪಡಿಸಲಾಗುತ್ತದೆ ಎಂದು ಐಟಿ ಸಲಹೆಗಾರ ನಾಗೇಶ್, ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋತ್, ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅವರು ಹೇಳುತ್ತಿದ್ದಾರೆಯೇ ಹೊರತು ಶುಕ್ರವಾರದ ಸಂಜೆಯವರೆಗೂ ನಮಗೆ ವೇತನ ಬಂದಿಲ್ಲ' ಎಂದು ಐಟಿ ವಿಭಾಗದ ಸಿಬ್ಬಂದಿ ದೂರಿದರು.

'ಪ್ರತಿ ವರ್ಷ ಶೇ 10ರಷ್ಟು ವೇತನ ಹೆಚ್ಚಿಸಲಾಗುತ್ತದೆ ಎಂದು ಹಿಂದಿನ ಗುತ್ತಿಗೆದಾರರು ಒಪ್ಪಂದ ಮಾಡಿಕೊಂಡಿದ್ದರು. ಆದರೆ, ಇದೀಗ ಕಿಯೊನಿಕ್ಸ್ ಸಂಸ್ಥೆ ನಮಗೆ 10 ರಿಂದ 30 ಸಾವಿರ ಕಡಿಮೆ ವೇತನ ನೀಡುವುದಾಗಿ ಹೇಳುತ್ತಿದೆ. ಪ್ರತಿ ವರ್ಷ ವೇತನ ಹೆಚ್ಚಾಗುತ್ತದೆಯೇ ಹೊರತು ಕಡಿಮೆ ಮಾಡಲಾಗುತ್ತದೆಯೇ? ನನಗೆ ಅಷ್ಟು ವೇತನ ಇಲ್ಲ ನಿಮಗೇಕೆ ಎಂದು ಐಟಿ ಸಲಹೆಗಾರ ನಾಗೇಶ್ ಅವರೇ ಎಲ್ಲವನ್ನೂ ವಿಳಂಬ ಮಾಡುತ್ತಿದ್ದಾರೆ. ನಿಮಗೆ ಕೆಲಸವನ್ನೇ ನೀಡಿಲ್ಲ ಎನ್ನುತ್ತಾರೆ' ಎಂದು ಸಿಬ್ಬಂದಿ ಆರೋಪಿಸಿದರು.

'ಹೊಸ ಗುತ್ತಿಗೆದಾರರನ್ನು ಒಪ್ಪಿಕೊಳ್ಳದೆ ಕೆಲವು ಸಿಬ್ಬಂದಿ ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯ, ಕೆಲಸ ಮಾಡುವವರಿಗೆ ತೊಂದರೆ ಕೊಡದಂತೆ ನೋಡಿಕೊಳ್ಳಿ ಎಂದು ತಿಳಿಸಿದೆ. ಆದರೆ, ನೇರವಾಗಿ ಬಿಬಿಎಂಪಿಯಿಂದ ವೇತನ ಪಾವತಿಸಲು ಸಾಧ್ಯವಿಲ್ಲ. ಗುತ್ತಿಗೆದಾರರೊಂದಿಗೆ ಅವರು ಒಪ್ಪಂದ ಮಾಡಿಕೊಂಡರೆ ಮಾತ್ರ ವೇತನ ಬಿಡುಗಡೆ ಆಗುತ್ತದೆ' ಎಂದು ಬಿಬಿಎಂಪಿ ಐಟಿ ವಿಭಾಗದ ಸಲಹೆಗಾರ ನಾಗೇಶ್ ತಿಳಿಸಿದರು.

'ಆರ್‌ಎಂಎಸ್ ನೀಡುತ್ತಿದ್ದ ವೇತನವನ್ನೇ ನೀಡುವಂತೆ ಹೈಕೋರ್ಟ್ ತಿಳಿಸಿದರೆ ಅದನ್ನು ಹಿಂಬಾಕಿಯಾಗಿ (ಅರಿಯರ್ಸ್) ನೀಡುತ್ತೇವೆ. ಹೊಸ ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಳ್ಳಿ ಎಂದು ಹೇಳಿದ್ದೇವೆ. ಇದೀಗ 27 ಮಂದಿ ಒಪ್ಪಂದ ಮಾಡಿಕೊಂಡಿದ್ದಾರೆ. ಅವರು ಹಾಜರಾತಿಯನ್ನು ತಂದುಕೊಟ್ಟರೆ ವೇತನ ಬಿಡುಗಡೆ ಮಾಡುತ್ತೇವೆ' ಎಂದು ಹೇಳಿದರು.

'ಕಾರ್ಯಾದೇಶ ನೀಡುವಲ್ಲಿ ಕೆಲವು ತೊಂದರೆ ಆಗಿದ್ದರಿಂದ ವೇತನ ನೀಡುವಲ್ಲಿ ವಿಳಂಬವಾಗಿದೆ. ಆದಷ್ಟು ಬೇಗ ಪರಿಹರಿಸುತ್ತೇವೆ' ಎಂದು ಬಿಬಿಎಂಪಿ ಐಟಿ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋತ್ ಮಾಹಿತಿ ನೀಡಿದರು.

ವೇತನ ತಾರತಮ್ಯ ನಿವಾರಣೆ ಹಾಗೂ ಮುಂಬಡ್ತಿಗೆ ಅವಕಾಶ ಕಲ್ಪಿಸುವಂತೆ ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ರಾಜ್ಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಶಿಕ್ಷಕರ ಸಂಘದಿಂದ ಪ್ರತಿಭಟನೆ ನಡೆಯಿತು –ಪ್ರಜಾವಾಣಿ ಚಿತ್ರ

ಮುಂಬೈಯಲ್ಲಿ 'ಪಿಲಿ ನಲಿಕೆ'

ಮಂಗಳೂರು: ಕರಾವಳಿಯ ಪಿಲಿ ನಲಿಕೆಯನ್ನು (ಹುಲಿ ಕುಣಿತ) ಮುಂಬೈ ಮಹಾನಗರಕ್ಕೆ ಪರಿಚಯಿಸಲು ನಿರ್ಧರಿಸಲಾಗಿದ್ದು ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಮುಂಬೈ ಮಹಾನಗರದಲ್ಲಿ ಸ್ಪರ್ಧೆ ಏರ್ಪಡಿಸುವ ಯೋಜನೆ ಇದೆ ಎಂದು ಮಿಥುನ್ ರೈ ತಿಳಿಸಿದರು.

ಗುತ್ತಿಗೆದಾರನ ಬೆದರಿಸಿ ಸುಲಿಗೆ: ಮಾಜಿ ಕಾರ್ಪೊರೇಟರ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆದಾರರನ್ನು ಬೆದರಿಸಿ ಸುಲಿಗೆ ಮಾಡಿದ್ದ ಆರೋಪದಡಿ ಮಾಜಿ ಕಾರ್ಪೊರೇಟರ್ ಜಿ.ಕೆ. ವೆಂಕಟೇಶ್ ಅವರನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಗುತ್ತಿಗೆದಾರ ಚಂದ್ರು ಅವರನ್ನು ಬೆದರಿಸಿ ಸುಲಿಗೆ ಮಾಡಿದ್ದ ಸಂಬಂಧ ಯಶವಂತಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಿ ಕಮಿಷನರ್ ಆದೇಶ ಹೊರಡಿಸಿದ್ದಾರೆ.

'ಪ್ರಕರಣದ ಕಡತಗಳನ್ನು ಸುಪರ್ದಿಗೆ ಪಡೆದು, ಆರೋಪಿ ವೆಂಕಟೇಶ್ ಅವರನ್ನು ವಶಕ್ಕೆ ಪಡೆಯಲಾಗಿದೆ. ವಿಚಾರಣೆ ನಡೆಸಿ ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಸಿಸಿಬಿ ಮೂಲಗಳು ಹೇಳಿವೆ.

ಮೂರು ಬಾರಿ ಕೃತ್ಯ: 'ಗುತ್ತಿಗೆದಾರ ಚಂದ್ರು ಅವರು ಯಶವಂತಪುರ ವಾರ್ಡ್‌ನಲ್ಲಿ ಕಾಮಗಾರಿ ಮಾಡಲು ಗುತ್ತಿಗೆ ಪಡೆದಿದ್ದರು. ಇದೇ ವಾರ್ಡ್‌ನ ಮಾಜಿ ಕಾರ್ಪೊರೇಟರ್ ಜಿ.ಕೆ. ವೆಂಕಟೇಶ್ ಹಾಗೂ ಇತರರು, ಕಾಮಗಾರಿಗೆ ಆಕ್ಷೇಪ ವ್ಯಕ್ತಪಡಿಸಿದ್ದರು' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಆಗಸ್ಟ್ 11, ಸೆಪ್ಟೆಂಬರ್ 13 ಹಾಗೂ ಅಕ್ಟೋಬರ್ 17ರಂದು ಗುತ್ತಿಗೆದಾರನ್ನು ಅಡ್ಡಗಟ್ಟಿ ಬೆದರಿಸಿದ್ದ ಆರೋಪಿಗಳು, 8 ಚೆಕ್‌ಗಳು ಹಾಗೂ ಮೊಬೈಲ್ ಸುಲಿಗೆ ಮಾಡಿದ್ದರು. ತಮ್ಮ ವಾರ್ಡ್‌ನಲ್ಲಿ ಕಾಮಗಾರಿ ಕೈಗೊಳ್ಳದಂತೆ ತಾಕೀತು ಮಾಡಿದ್ದರು. ನೊಂದ ಗುತ್ತಿಗೆದಾರ, ಯಶವಂತಪುರಕ್ಕೆ ದೂರು ನೀಡಿದ್ದರು' ಎಂದು ಹೇಳಿವೆ.

'ಪ್ರಕರಣದ ಪ್ರಮುಖ ಆರೋಪಿಯನ್ನು ವಶಕ್ಕೆ ಪಡೆದಿದ್ದು, ನಾಪತ್ತೆಯಾದವರ ಶೋಧ ನಡೆಸಲಾಗುತ್ತಿದೆ' ಎಂದು ತಿಳಿಸಿವೆ.

ನಾಗರಿಕರೇ 'ಕೆರೆ ಮಿತ್ರ'ರಾಗಿ

ಉದ್ಯಾನಗಳಿಗೆ 'ಹಸಿರು ಮಿತ್ರ': 30ರವರೆಗೆ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕೆರೆ ಹಾಗೂ ಉದ್ಯಾನಗಳ ನಿರ್ವಹಣೆಯ ಮೇಲ್ವಿಚಾರಣೆ ನಡೆಸಲು ನಾಗರಿಕರಿಗೆ ಅವಕಾಶ ಕಲ್ಪಿಸಲಾಗಿದ್ದು, ಆಸಕ್ತರು 'ಕೆರೆ ಮಿತ್ರ' ಹಾಗೂ 'ಹಸಿರು ಮಿತ್ರ'ರಾಗಿ ನೋಂದಾಯಿಸಿಕೊಳ್ಳಬಹುದು.

ನಗರದ ನಿವಾಸಿಗಳು ತಮ್ಮ ವಾರ್ಡ್‌ನಲ್ಲಿರುವ ಕೆರೆ ಅಥವಾ ಉದ್ಯಾನದ ನಿರ್ವಹಣೆ ಕಾಮಗಾರಿ ಬಗ್ಗೆ ಮೇಲ್ವಿಚಾರಣೆ ನಡೆಸಲು ಆಸಕ್ತಿ ಹೊಂದಿದ್ದರೆ https://bbmp.gov.in/ ಜಾಲತಾಣದಲ್ಲಿ ಅ.30ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು.

ಹೆಸರು ನೋಂದಾಯಿಸಿದವರಲ್ಲಿ ಯಾದ್ರಚ್ಛಿಕವಾಗಿ(ರ್‍ಯಾಂಡಮ್) 10 ಜನರನ್ನು ಆಯ್ಕೆ ಮಾಡಲಾಗುತ್ತದೆ. ಅವರು 'ಕೆರೆ ಮಿತ್ರ' ಹಾಗೂ 'ಹಸಿರು ಮಿತ್ರ'ರಾಗಿ ಒಂದು ತಿಂಗಳು ಕೆರೆ ಅಥವಾ ಉದ್ಯಾನದ ಮೇಲ್ವಿಚಾರಣೆಯನ್ನು ನಿರ್ವಹಿಸಬಹುದು. ಅಭಿಪ್ರಾಯಗಳನ್ನು ತಿಳಿಸಬಹುದು ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ತಿಳಿಸಿದರು.

ಕೆರೆಯಲ್ಲಿ ನಡೆಯುವ ಅಭಿವೃದ್ಧಿ ಕಾಮಗಾರಿ, ನಿರ್ವಹಣೆ ಕಾಮಗಾರಿಗಳನ್ನು ಪ್ರತಿನಿತ್ಯ ಪರಿಶೀಲಿಸಿ, ಅಂತರ್ಜಾಲದಲ್ಲಿ ದಾಖಲಿಸಬೇಕು. ಈ ಪ್ರಕ್ರಿಯೆಗೆ ಮುಂದಿನ ದಿನಗಳಲ್ಲಿ ಆ್ಯಪ್ ಕೂಡ ಕಾರ್ಯನಿರ್ವಹಿಸಲಿದೆ. ಕೆರೆ ಹಾಗೂ ಉದ್ಯಾನಗಳನ್ನು ಉತ್ತಮವಾಗಿ ನಿರ್ವಹಣೆ ಮಾಡಬೇಕು ಎಂಬ ಉದ್ದೇಶದಿಂದ ಈ ಯೋಜನೆ ಜಾರಿಗೆ ತರಲಾಗಿದೆ ಎಂದರು.

'ಬ್ರ್ಯಾಂಡ್ ಬೆಂಗಳೂರು ಸಮ್ಮೇಳನ'ದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಾಗರಿಕರಿಗೆ ಕೆರೆ, ಉದ್ಯಾನಗಳ ನಿರ್ವಹಣೆ ನೀಡುವ ಬಗ್ಗೆ ಭರವಸೆ ನೀಡಿದರು. ಅವರ ಯೋಜನೆಯಂತೆ ಪ್ರಥಮ ಹಂತವಾಗಿ 'ಕೆರೆ ಮಿತ್ರ' ಹಾಗೂ 'ಹಸಿರು ಮಿತ್ರ' ಆರಂಭವಾಗುತ್ತಿದೆ' ಎಂದು ಮಾಹಿತಿ ನೀಡಿದ್ದರು.

ಆರಂಭವಾಗದ ಲಿಂಕ್: ಕೆರೆ ಅಥವಾ ಉದ್ಯಾನದ ನಿರ್ವಹಣೆ ಕಾಮಗಾರಿ ಮೇಲ್ವಿಚಾರಣೆಗೆ ವೆಬ್‌ಸೈಟ್‌ನಲ್ಲಿ (https://bbmp.gov.in/) ಮಾತ್ರ ನೋಂದಾಯಿಸಿಕೊಳ್ಳಲು ಅವಕಾಶವಿದೆ.

ಆದರೆ, ಎಂದಿನಂತೆ ಬಿಬಿಎಂಪಿ ಐಟಿ ವಿಭಾಗ ನಿಧಾನಗತಿಯಲ್ಲಿದೆ. ಶುಕ್ರವಾರದ ರಾತ್ರಿಯವರೆಗೂ ನೋಂದಣಿಯ ಲಿಂಕ್ ಅಪ್‌ಲೋಡ್ ಆಗಿರಲಿಲ್ಲ ಎಂದು ಪರಿಸರ ಕಾರ್ಯಕರ್ತ ರಾಮ್‌ಪ್ರಸಾದ್ ದೂರಿದರು.

'ಲಿಂಕ್ ಅಪ್‌ಲೋಡ್ ಮಾಡಲು ಐಟಿ ವಿಭಾಗಕ್ಕೆ ತಿಳಿಸಲಾಗಿದೆ. ಆದಷ್ಟು ಶೀಘ್ರವಾಗಿ ಲಿಂಕ್ ಲಭ್ಯವಾಗಲಿದೆ' ಎಂದು ವಿಜಯಕುಮಾರ್ ತಿಳಿಸಿದರು.

ಕಳ್ಳರ ಬಂಧನ

ಕೊರಟಗೆರೆ: ನಾಲ್ವರು ಅಂತರ ಜಿಲ್ಲಾ ಕಳ್ಳರನ್ನು ಬಂಧಿಸಿರುವ ಪಟ್ಟಣ ಠಾಣೆ ಪೊಲೀಸರು ₹5 ಲಕ್ಷ ಬೆಲೆ ಬಾಳುವ ಚಿನ್ನ, ಬೆಳ್ಳಿ ಆಭರಣಗಳನ್ನು ವಶಕ್ಕೆ ಪಡೆದಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಗೆ ತಿಳಿಸಿರುವ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಶ್ರೀಮತಿ. ಶಾಂತ ಕುಮಾರಿ ಕೋಂ ಶ್ರೀ. (ಲೇಟ್) ಶಿವಲಿಂಗಯ್ಯ, ವಯಸ್ಸು 54 ವರ್ಷಗಳು, ನಂ.249/ಎ, ವಾರ್ಡ್ ನಂ.2, ವಿನಾಯಕ ನಗರ, ಬಿ.ಎಂ ರಸ್ತೆ, ರಾಮನಗರ–562159 ರಲ್ಲಿ ವಾಸವಿರುವ ("ಮಾಲೀಕರು") ಇವರ ಮಾಲೀಕತ್ವದಲ್ಲಿರುವ ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಇನ್ನು ಮುಂದೆ "ಷೆಡ್ಯೂಲ್ ಸ್ವತ್ತು" ಎಂದು ಕರೆಯಲ್ಪಡುವ ಖರೀದಿಸಲು ಆಸಕ್ತರಾಗಿರುತ್ತಾರೆ.

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು, ಅವಿಭಾಜಿತ ಹಿಂದು ಕುಟುಂಬ , ಕಂಪನಿ, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆ(ಗಳು), ಬ್ಯಾಂಕೇತರ ಹಣಕಾಸು ಸಂಸ್ಥೆ(ಗಳು), ಸಂಸ್ಥೆ, ವ್ಯಕ್ತಿಗಳ ಸಂಘ ಅಥವಾ ಸಂಘಟಿತ ಅಥವಾ ಅಸಂಘಟಿತ ವ್ಯಕ್ತಿಗಳು, ಸಾಲದಾತರು ಷೆಡ್ಯೂಲ್ ಸ್ವತ್ತಿನ ಮೇಲೆ ಅಧಿಕಾರವನ್ನು, ಹಕ್ಕುಗಳನ್ನು, ಚಾರ್ಜ್, ಲೀನ್ ಅಥವಾ ಮತ್ತಾವುದೇ ವಿಧದ ಹಿತಾಸಕ್ತಿಯನ್ನು ಹೊಂದಿದ್ದಲ್ಲಿ ಅಂತಹ ವ್ಯಕ್ತಿ/ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿನ ಮೇಲೆ ತಮ್ಮ ಮಾಲೀಕತ್ವವನ್ನು ರುಜುವಾತು ಮಾಡುವ ದಾಖಲೆಗಳು ಯಾವುದಾದರು ಇದ್ದಲ್ಲಿ ಮತ್ತು ಪ್ರಸ್ತಾಪಿತ ಮಾರಾಟಕ್ಕೆ ಅವರ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಅಂತಹ ಕ್ಲೇಮ್/ಕ್ಲೇಮ್‌ಗಳು, ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅವುಗಳನ್ನು ರುಜುವಾತು ಮಾಡುವ ದಾಖಲೆಗಳ ಸಹಿತ ಈ ಸಾರ್ವಜನಿಕ ತಿಳುವಳಿಕೆ ಪ್ರಕಟವಾದ 14 (ಹದಿನಾಲ್ಕು ದಿನಗಳ) ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಸಲ್ಲಿಸುವುದು. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳನ್ನು ನಮಗೆ ಸಲ್ಲಿಸದಿದ್ದಲ್ಲಿ ಮೇಲ್ಕಾಣಿಸಿದ ಮಾಲೀಕರುಗಳು ಷೆಡ್ಯೂಲ್ ಸ್ವತ್ತಿನ ಮೇಲೆ ಅಧಿಕಾರ ಹಿತಾಸಕ್ತಿ ಮತ್ತು ಹಕ್ಕುಗಳನ್ನು ಹೊಂದಿದ್ದಾರೆ ಎಂದು ಪರಿಭಾವಿಸಲಾಗುವುದು. ತದನಂತರ ನಮ್ಮ ಕಕ್ಷೀದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಅನಿರ್ಬಂಧಿತವಾಗಿ ಮುಂದುವರೆಯಲಿದ್ದಾರೆ ಎಂದು ತಿಳಿಯುವುದು.

ಷೆಡ್ಯೂಲ್ ಸ್ವತ್ತಿನ ವಿವರ

ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕಸಬಾ–1 ಹೋಬಳಿ, ಕೊತ್ತೀಪುರ ಗ್ರಾಮದ ಸರ್ವೆ ನಂ.215/4 (ಹಳೆ ಸರ್ವೆ ನಂ.215) ರಲ್ಲಿರುವ (ದಿನಾಂಕ 27.04.2021 ರಂದು ರಾಮನಗರ ಜಿಲ್ಲಾಧಿಕಾರಿಯವರು ಹೊರಡಿಸಿರುವ ಅಧಿಕೃತ ಜ್ಞಾಪನ ಸಂಖ್ಯೆ.220063 ರಂತೆ) ವಾಸಯೋಗ್ಯ ಪ್ರದೇಶವಾಗಿ ಪರಿವರ್ತಿತವಾಗಿರುವ 3 ಎಕರೆ ವಿಸ್ತೀರ್ಣವಿರುವ ಜಮೀನು ಮತ್ತು ಚಕ್ಕುಬಂದಿ. **ಪೂರ್ವಕ್ಕೆ:** ಸರ್ವೆ ನಂ.216 ರಲ್ಲಿರುವ ಜಮೀನು, **ಪಶ್ಚಿಮಕ್ಕೆ:** ಸರ್ವೆ ನಂ.214/5 & 214 ರಲ್ಲಿರುವ ಜಮೀನು, **ಉತ್ತರಕ್ಕೆ:** ಸರ್ವೆ ನಂ.215/2 ರಲ್ಲಿರುವ ಜಮೀನು, **ದಕ್ಷಿಣಕ್ಕೆ:** ಸರ್ವೆ ನಂ.215/1 ರಲ್ಲಿರುವ ಜಮೀನು

ದಿನಾಂಕ : 21/ 10/ 2023

ಮಂಜುನಾಥ ರೆಡ್ಡಿ. ಆರ್, ವಕೀಲರು

ನಂ.1932, 15ನೇ ಎ ಕ್ರಾಸ್, 9ನೇ ಮುಖ್ಯ ರಸ್ತೆ, ಜುಡಿಶಿಯಲ್ ಲೇಔಟ್, ಜಿಕೆವಿಕೆ ಅಂಚೆ, ಬೆಂಗಳೂರು – 560065, ಇ–ಮೇಲ್: **vanyaassociates@gmail.com**

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–52. ದೂರವಾಣಿ ಸಂಖ್ಯೆ: 22263479

ಸಂಖ್ಯೆ : STRRPA/TP/ಭೂ.ಪ/33/2023-24 ದಿನಾಂಕ: 20.10.2023

ಪ್ರಕಟಣೆ

ಉಪನಗರ ವರ್ತುಲ ರಸ್ತೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಈ ಕೆಳಕಂಡ ಅರ್ಜಿದಾರರು ಪ್ರಸ್ತಾಪಿತ ಪ್ರದೇಶದಲ್ಲಿ **ಶೈಕ್ಷಣಿಕ** ಉದ್ದೇಶಕ್ಕೆ ಭೂಪರಿವರ್ತನೆ ಮಾಡಲು ಅಭಿಪ್ರಾಯ ಕೋರಿರುತ್ತಾರೆ. ಸದರಿ ಜಮೀನು ಅನುಮೋದಿತ ಮಹಾಯೋಜನೆ ನಕ್ಷೆಯಂತೆ ಕೃಷಿ ವಲಯದಲ್ಲಿದ್ದು, ವಲಯ ನಿಯಮಾವಳಿಗಳಂತೆ ಕೃಷಿ ವಲಯದಲ್ಲಿ ವಿಶೇಷ ಸಂದರ್ಭದಲ್ಲಿ ಶೈಕ್ಷಣಿಕ ಉದ್ದೇಶಕ್ಕೆ ಅನುಮತಿ ನೀಡಲು ಅವಕಾಶ ಇದ್ದು, ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು, ಹೋಬಳಿ, ಗ್ರಾಮ	ಸ.ನಂ	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಅರ್ಜಿದಾರರು ಕೋರಿರುವ ಭೂಉಪಯೋಗ
ಶ್ರೀಮತಿ ರಮ್ಯ.ಬಿ.ಆರ್ ಕೋಂ ಸುನೀಲ್ ಕುಮಾರ್ ಹೆಚ್.ಆರ್ ನಂ.457, ರಾಂಕಾ ಕೋರ್ಟ್, ಎನ್‌ಡಿ–18, ಕ್ಯಾಂಬ್ರಿಡ್ಜ್ ಲೇಔಟ್, ಹಲಸೂರು ಬೆಂಗಳೂರು ಉತ್ತರ	ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಸೊಣ್ಣಪ್ಪನಹಳ್ಳಿ ಗ್ರಾಮ	80/2	2–19	ವ್ಯವಸಾಯ	ಶೈಕ್ಷಣಿಕ

ಸದರಿ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ ಹದಿನೈದು ದಿನದೊಳಗಾಗಿ ಲಿಖಿತವಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

DIPR/CP/RO1822/AAPL/2023-24

ಸಂಚಾರ ಸಿಗ್ನಲ್‌ಗಳ ಬ್ಯಾಟರಿ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಗ್ರೌಂಡ್ಸ್ ಜಂಕ್ಷನ್‌ನ ಸಿಗ್ನಲ್‌ನಲ್ಲಿ ಅಳವಡಿಸಿದ್ದ ಬ್ಯಾಟರಿಗಳನ್ನು ಕಳ್ಳತನ ಮಾಡಲಾಗಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಾಗಿದೆ.

'ಸಂಚಾರ ಸಿಗ್ನಲ್ ನಿರ್ವಹಣೆ ಹೊಣೆ ಹೊತ್ತಿರುವ ಕಂಪನಿಯ ಎಂಜಿನಿಯರ್ ಅವರು ಕಳ್ಳತನದ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

'ಸಿಗ್ನಲ್‌ಗಳ ಕಾರ್ಯಾಚರಣೆಗಾಗಿ 2 ಬ್ಯಾಟರಿಗಳನ್ನು ಅಳವಡಿಸಲಾಗಿತ್ತು. ಇವುಗಳ ಮೌಲ್ಯ ₹ 12 ಸಾವಿರ. ಅ.13ರಂದು ರಾತ್ರಿ ಆರೋಪಿಗಳು ಬ್ಯಾಟರಿಗಳನ್ನು ಕದ್ದೊಯ್ದಿದ್ದಾರೆ. ಇದರಿಂದ ಸಿಗ್ನಲ್‌ಗಳ ಕಾರ್ಯಾಚರಣೆ ಸ್ಥಗಿತಗೊಂಡಿತ್ತು' ಎಂದು ತಿಳಿಸಿವೆ.

ನವವರ್ಣ

ನವರಾತ್ರಿಯ ಆರನೆಯ ದಿನ ಜಗನ್ಮಾತೆಯನ್ನು ಕಾತ್ಯಾಯನಿಯ ಸ್ವರೂಪದಲ್ಲಿ ಪೂಜಿಸಲಾಗುತ್ತದೆ. 'ಕತ' ಎಂಬ ಮಹರ್ಷಿಯ ವಂಶದಲ್ಲಿ ಲೋಕಕಲ್ಯಾಣಾರ್ಥವಾಗಿ ದೇವಿಯು ಜನಿಸಿದಳು ಎಂಬ ವಿವರ ಪುರಾಣಗಳಲ್ಲಿದೆ. ದೇವಿಯು ತಪಸ್ಸಿಗೆ ಒಲಿಯುತ್ತಾಳೆ ಎಂಬುದು ಇಲ್ಲಿಯ ತಾತ್ಪರ್ಯ. ಅಭಯ ಮತ್ತು ವರದಮುದ್ರೆಗಳನ್ನು ಧರಿಸಿರುವ ದೇವಿಯು, ಇನ್ನೆರಡು ಕೈಗಳಲ್ಲಿ ಖಡ್ಗ ಮತ್ತು ಕಮಲವನ್ನು ಹಿಡಿದಿದ್ದಾಳೆ. ಹಸಿರುಬಣ್ಣ ಸಮೃದ್ಧಿಗೆ ಸಂಕೇತ; ಪ್ರಕೃತಿಗೆ ಸಂಕೇತ. ದೇವಿಯ ಈ ಗುಣಗಳನ್ನು ಸ್ಮರಿಸುತ್ತ ಹಸಿರುಬಣ್ಣದ ಸೀರೆಯನ್ನುಟ್ಟು ನಾರಿಯರು ನಲಿದಿದ್ದಾರೆ.

ಬೂದು ಬಣ್ಣದ ಧಿರಿಸನ್ನು ಧರಿಸಿ ತೆಗೆಸಿಕೊಂಡ ಚಿತ್ರಗಳನ್ನು ಶನಿವಾರ ಸಂಜೆ 4 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ... 7338018541

ಶಿಲ್ಪಾ, ತ್ರಿವೇಣಿ ಮತ್ತು ಸ್ನೇಹಿತೆಯರು, ಎಚ್‌ಎಸ್‌ಆರ್ ಬಡಾವಣೆ, ಬೆಂಗಳೂರು

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮಹಿಳಾ ಸಿಬ್ಬಂದಿ, ಬೆಂಗಳೂರು

ಕುಶಲ ಮತ್ತು ಸ್ನೇಹಿತೆಯರು, ಲಲಿತ ನೃತ್ಯಕಲಾ ತಂಡ, ರಾಮನಗರ

ಆರತಿ ಮತ್ತು ಗೆಳತಿಯರು, ಕೃಷಿ ಇಲಾಖೆ

ಕಲ್ಯಾಣಿ, ಶಾರದಾ, ಸುಜಾತಾ ಕಾತ್ಯಾಯಿನಿ, ಮಮತಾ, ಆಶಾ ಮತ್ತು ಗೌರಿ, ಎಂಪಿಎಂ ಬಡಾವಣೆ, ನಾಗರಬಾವಿ, ಬೆಂಗಳೂರು

ಚನ್ನಮ್ಮ ದೇವೇಗೌಡ ಮತ್ತು ಪುತ್ರಿಯರಾದ ಅನುಸೂಯ ಮಂಜುನಾಥ್ ಹಾಗೂ ಶೈಲಜಾ ಚಂದ್ರಶೇಖರ್

ಕವಿತಾ ಕುಸುಮ್ ಮತ್ತು ಗೆಳತಿಯರು, ಎಂಎಲ್‌ಎ ಬಡಾವಣೆ, ಬೆಂಗಳೂರು

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ಲಾಂಟೇಷನ್ ಮ್ಯಾನೇಜ್‌ಮೆಂಟ್‌ನ ಮಹಿಳಾ ಸಿಬ್ಬಂದಿ, ಬೆಂಗಳೂರು

ಹೆಣ್ಣೂರು ಜೈವಿಕ ಉದ್ಯಾನದ ಮಹಿಳಾ ಮಂಡಳಿ, ಎಚ್‌ಬಿಆರ್ ಬಡಾವಣೆ, ಬೆಂಗಳೂರು

ಪೂರ್ಣ ಪ್ರಜ್ಞಾ ಅಕಾಡೆಮಿಯ ಶಾಲಾ ಸಿಬ್ಬಂದಿ, ಕಮ್ಮಗೊಂಡನಹಳ್ಳಿ, ಬೆಂಗಳೂರು

ರಾಣಿ ಎಚ್.ಎಸ್., ಮಲ್ಲೇಶ್ವರ, ಬೆಂಗಳೂರು

ಕಣ್ವ ಡಯಾಗ್ನೋಸ್ಟಿಕ್ಸ್‌ನ ಮಹಿಳಾ ಸಿಬ್ಬಂದಿ, ಬೆಂಗಳೂರು

ಜಿಯಾ ಸುನಿಲ್ ಮತ್ತು ಸಹೋದರಿಯರು, ಶ್ರೀರಾಂಪುರ, ಬೆಂಗಳೂರು

ಲಕ್ಷ್ಮೀದೇವಿ ಮತ್ತು ಕುಟುಂಬ, ಜೈ ಭಾರತ ನಗರ ಬೆಂಗಳೂರು

ಎಸ್‌ಕೆಡಿಆರ್‌ಡಿಪಿ ಸಿಬ್ಬಂದಿ, ಧಾರವಾಡ ಪ್ರಾದೇಶಿಕ ಕಚೇರಿ

ಪ್ರೆಸಿಡೆನ್ಸಿ ಕಾಲೇಜ್‌ನ (ಸ್ವಾಯತ್ತ) ಬೋಧಕ ಸಿಬ್ಬಂದಿ, ಹೆಬ್ಬಾಳ, ಬೆಂಗಳೂರು

ವರ್ಷಾ ಮತ್ತು ಕುಟುಂಬಸ್ಥರು, ಬೆಂಗಳೂರು

ಬೆಸ್ಕಾಂ ಲೆಕ್ಕಪರಿಶೋಧನಾ ವಿಭಾಗ, ಬೆಂಗಳೂರು

ಮ್ಯಾಕ್ಸ್ ಸ್ಪೂರ್ತಿ ಅಪಾರ್ಟ್‌ಮೆಂಟ್‌ನ ಗೆಳತಿಯರು, ವಿದ್ಯಾರಣ್ಯಪುರ, ಬೆಂಗಳೂರು

ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ ಸಿಬ್ಬಂದಿ, ತಲಘಟ್ಟಪುರ

ಶಾರದಾ ಮತ್ತು ಸ್ನೇಹಿತೆಯರು, ಟೆಲಿಕಾಂ ಬಡಾವಣೆ, ಬೆಂಗಳೂರು

ವಿಎಚ್‌ಡಿ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಹೋಮ್‌ಸೈನ್ಸ್ ಕಾಲೇಜ್, ಬೆಂಗಳೂರು

ಸುಷ್ಮಾ ಮತ್ತು ಸಹೋದ್ಯೋಗಿಗಳು, ಪೂರ್ಣಪ್ರಜ್ಞಾ ವಿದ್ಯಾ ಕೇಂದ್ರ, ಸದಾಶಿವನಗರ, ಬೆಂಗಳೂರು

ನವರಸ ನಟನಾ ಅಕಾಡೆಮಿ, ಸದಾಶಿವನಗರ, ಬೆಂಗಳೂರು

ಸುಜನಾ ಮತ್ತು ಸ್ನೇಹಿತೆಯರು, ಬೆಂಗಳೂರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮಹಿಳಾ ಸಿಬ್ಬಂದಿ, ವಿಜಯನಗರ, ಬೆಂಗಳೂರು

ರೂಪಾ ಮತ್ತು ಗೆಳತಿಯರು, ಮಂಜುನಾಥ ನಗರ, ಬೆಂಗಳೂರು

ಸುಜಾತ ಮತ್ತು ತಂಡ, ಕೆಪಿಟಿಸಿಎಲ್, ಕಾವೇರಿ ಭವನ, ಬೆಂಗಳೂರು

ಮಧುರಾ ಮತ್ತು ಸ್ನೇಹಿತೆಯರು, ಕೋರಮಂಗಲ, ಬೆಂಗಳೂರು

ಸಂಧ್ಯಾ ಮತ್ತು ಸ್ನೇಹಿತೆಯರು, ಕೆಂಗೇರಿ

ರೇಣುಕಾ ಹಾಗೂ ಸಹೋದ್ಯೋಗಿಗಳು, ಪಿಎಂಶ್ರೀ (ಕೆಪಿಎಸ್) ಶಾಲೆ, ಹೆಬ್ಬಾಳ, ಬೆಂಗಳೂರು

ಶನಿವಾರ • ಅಕ್ಟೋಬರ್ 21, 2023 ಪ್ರಜಾವಾಣಿ

ಬಿಜೆಪಿ ಕಾರ್ಯಕರ್ತ ಆತ್ಮಹತ್ಯೆ: ಸಿಐಡಿ ತನಿಖೆ

ತುಮಕೂರು: ಕಲಬುರಗಿ ಜಿಲ್ಲೆಯ ಬಿಜೆಪಿ ಕಾರ್ಯಕರ್ತ ಶಿವಕುಮಾರ ಪೂಜಾರಿ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಯಲಿದ್ದು, ವರದಿ ಬಂದ ನಂತರ ಸತ್ಯಾಂಶ ತಿಳಿಯಲಿದೆ. ವರದಿ ಆಧಾರದ ಮೇಲೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಇದರಲ್ಲಿ ಯಾರು ಭಾಗಿಯಾಗಿದ್ದಾರೆ, ಯಾರೆಲ್ಲ ಕೈವಾಡ ಇದೆ ಎಂದು ಗೊತ್ತಾಗಲಿದೆ' ಎಂದರು.

ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರ ಪಾತ್ರ ಇದೆ ಎಂದು ಕೆಲವರು ಆರೋಪ ಮಾಡುತ್ತಿದ್ದಾರೆ. ಇಂತಹ ವಿಚಾರದಲ್ಲಿ ಎಲ್ಲಾ ಆರೋಪಗಳಿಗೆ ಉತ್ತರ ಕೊಡಲು ಸಾಧ್ಯವಿಲ್ಲ. ಆರೋಪ ಮಾಡುತ್ತಿರುವವರ ಹೇಳಿಕೆ ಪಡೆದು ಪರಿಶೀಲಿಸಿ, ಖಚಿತ ಪಡಿಸಿಕೊಳ್ಳಬೇಕಿದೆ. ಅದಕ್ಕಾಗಿಯೇ ಸಿಐಡಿ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಮಲೆನಾಡಿನ ಜಿಲ್ಲೆಗಳಲ್ಲೂ ಮೈಕೊರೆಯುವ ಚಳಿ ಇಲ್ಲ

ರಾಜ್ಯದಲ್ಲಿ ಈ ಬಾರಿ ಚಳಿ ಕಡಿಮೆ

• ಆದಿತ್ಯ ಕೆ.ಎ.

4 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆ

'ಮುಂಗಾರು ಅವಧಿ ಯಲ್ಲಿ ಕೈಕೊಟ್ಟಿದ್ದ ಮಳೆ ಅ.1ರಿಂದ 18ರ ತನಕ ನಾಲ್ಕು ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚಾಗಿ ಸುರಿದಿದೆ. ಹಾಸನ, ಕೊಡಗು, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ 18 ದಿನಗಳ ಅವಧಿಯಲ್ಲಿ ವಾಡಿಕೆಗಿಂತ ಶೇ 20ರಷ್ಟು ಅಧಿಕ ಮಳೆಯಾಗಿದೆ. ಇದರಿಂದ ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಿಗೆ ನೀರು ಹರಿದುಬಂದಿದೆ. ಬೆಳೆಗಳಿಗೂ ಅನುಕೂಲವಾಗಿದೆ' ಎಂದು ಎ. ಪ್ರಸಾದ್ ಮಾಹಿತಿ ನೀಡಿದರು.

ಬೆಂಗಳೂರು: ವಾತಾವರಣದಲ್ಲಿ ಉಂಟಾಗಿರುವ ಬದಲಾವಣೆಯಿಂದ ರಾಜ್ಯದಲ್ಲಿ ಈ ವರ್ಷ ಚಳಿಗಾಲ ಆರಂಭ ಸ್ವಲ್ಪ ವಿಳಂಬವಾಗುವ ಸಾಧ್ಯತೆಯಿದೆ. ಜತೆಗೆ, ಚಳಿಗಾಲದ ಅವಧಿಯಲ್ಲಿ ಮೈಕೊರೆಯುವ ಚಳಿ ಇರುವುದಿಲ್ಲ; ಸಾಮಾನ್ಯ ಚಳಿಯಷ್ಟೇ ಇರುವ ಸಾಧ್ಯತೆಯಿದೆ.

ಈ ವರ್ಷ ಲಾ ನಿನಾ (ಸಾಗರ ಮತ್ತು ವಾತಾವರಣದ ವಿದ್ಯಮಾನ) ಪರಿಸ್ಥಿತಿ ಕೊನೆಗೊಂಡು, ಎಲ್ ನಿನೊ ವಿದ್ಯಮಾನ ಮರುಕಳಿಸಿದ್ದರಿಂದ ಮುಂಗಾರು ಅವಧಿಯಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿತ್ತು. ಮಳೆಗಾಲದ ಬಹುತೇಕ ದಿನಗಳಲ್ಲಿ ಬಿಸಿಲ ವಾತಾವರಣ ಕಂಡುಬಂದಿತ್ತು. ಚಳಿಗಾಲದ ಮೇಲೂ ಅದರ ಪರಿಣಾಮ ಉಂಟಾಗುವ ಸಾಧ್ಯತೆಯಿದ್ದು ಚಳಿ ಕಡಿಮೆ ಇರಲಿದೆ ಎಂದು ಹವಾಮಾನ ತಜ್ಞರು ಅಂದಾಜಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಎಲ್ ನಿನೊ ಪ್ರಭಾವವು ಫೆಬ್ರುವರಿ ಅಥವಾ ಮಾರ್ಚ್ 15ರವರೆಗೆ ಇರಲಿದ್ದು ಚಳಿಗಾಲದಲ್ಲಿ ಉಷ್ಣಾಂಶ ಕನಿಷ್ಠ ಮಟ್ಟಕ್ಕೆ ಕುಸಿಯುವ ಸಾಧ್ಯತೆ ತೀರ ಕಡಿಮೆ. ಡಿಸೆಂಬರ್ ಹಾಗೂ ಜನವರಿಯಲ್ಲಿ ಮಲೆನಾಡು ಭಾಗದ ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಚಳಿಯ ಪ್ರಭಾವ ಸ್ವಲ್ಪ ತೀವ್ರತೆ ಪಡೆದುಕೊಳ್ಳಲಿದೆ. ಆದರೆ, ಉಷ್ಣಾಂಶ ಕನಿಷ್ಠ ಮಟ್ಟಕ್ಕೆ ಕುಸಿಯುವುದಿಲ್ಲ. ಉತ್ತರ ಒಳನಾಡು, ದಕ್ಷಿಣ ಒಳನಾಡಿನಲ್ಲಿ ಇದೇ ವಾತಾವರಣ ಇರಲಿದೆ. ಇದೇ ತಿಂಗಳಲ್ಲಿ ಕೆಲವು ದಿನ ಶೀತಗಾಳಿ ಬೀಸಲಿದೆ. ಫೆಬ್ರುವರಿ 15ರ ನಂತರ ಉಷ್ಣಾಂಶದಲ್ಲಿ ಮತ್ತೆ ಏರಿಕೆ ಆಗಲಿದೆ ಎಂದು ತಜ್ಞರು ಮುನ್ಸೂಚನೆ ನೀಡಿದ್ದಾರೆ.

ಸದ್ಯ ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿಯುವುದಕ್ಕೆ ಪೂರಕ ವಾತಾವರಣ ನಿರ್ಮಾಣವಾಗಿದೆ. ಇನ್ನೆರಡು ದಿನಗಳಲ್ಲಿ ಅದರ ಸ್ಥಿತಿ ಇನ್ನಷ್ಟು ನಿಚ್ಚಳವಾಗಲಿದೆ. ವಾಯುಭಾರ ಕುಸಿತವಾದರೆ ಅದು ಆಂಧ್ರಪ್ರದೇಶದ ಉತ್ತರ ಭಾಗ ಅಥವಾ ಒಡಿಶಾದ ಕರಾವಳಿ ಕಡೆಗೆ ಚಲಿಸಲಿದೆ. ರಾಜ್ಯದ ಅಲ್ಲಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಜತೆಗೆ, ಹಿಂಗಾರು ಮಳೆ ಅವಧಿಯೂ ಸ್ವಲ್ಪ ದೀರ್ಘವಾಗಿರಲಿದ್ದು, ಚಳಿಗಾಲ ಆರಂಭ ಸ್ವಲ್ಪ ತಡವಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಜ್ಞರು ಮಾಹಿತಿ ನೀಡಿದ್ದಾರೆ.

ಹಿಂಗಾರು ಸಹ ದುರ್ಬಲ: 'ಇಡೀ ದೇಶದಲ್ಲಿಯೇ ನೈರುತ್ಯ ಮುಂಗಾರು ಕೊನೆಗೊಂಡಿದೆ. ಹಿಂಗಾರು ಮಳೆ ಅವಧಿ ಆರಂಭವಾಗಿದೆ. ಈ ಬಾರಿ ಹಿಂಗಾರು ಸಹ ದುರ್ಬಲವಾಗಿರಲಿದೆ. ಹಿಂಗಾರು ಅವಧಿಯಲ್ಲಿ ತಮಿಳುನಾಡು ಕರಾವಳಿ ಪ್ರದೇಶದಲ್ಲಿ ವ್ಯಾಪಕ ಮಳೆಯಾಗಬೇಕು. ಮುಂದಿನ ಒಂದು ವಾರದವರೆಗೂ ಅಂತಹ ವಾತಾವರಣವಿಲ್ಲ' ಎಂದು ಹವಾಮಾನ ಇಲಾಖೆಯ ವಿಜ್ಞಾನಿ ಎ. ಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

ಬೆಂಗಳೂರಿನಲ್ಲಿ 1883ರ ಡಿಸೆಂಬರ್‌ನಲ್ಲಿ ಕನಿಷ್ಠ ಉಷ್ಣಾಂಶ 8.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. 1974ರ ಅಕ್ಟೋಬರ್ 31ರಂದು ಕನಿಷ್ಠ ಉಷ್ಣಾಂಶ 13 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು ಎಂದು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಮತ್ತೆ 223 ಪಿಡಿಒ, ಗ್ರಾಮ ಪಂಚಾಯಿತಿ ನೌಕರರ ವರ್ಗಾವಣೆ

ಬೆಂಗಳೂರು: ಮೈಸೂರು ಹಾಗೂ ಕಲಬುರಗಿ ಕಂದಾಯ ವಿಭಾಗ ವ್ಯಾಪ್ತಿಯ ಜಿಲ್ಲೆಗಳ 223 ಪಿಡಿಒ ಹಾಗೂ ಗ್ರಾಮ ಪಂಚಾಯತಿಗಳ ವಿವಿಧ ವೃಂದದ ಸಿಬ್ಬಂದಿಯನ್ನು ವರ್ಗಾವಣೆ ಮಾಡಿ ಗ್ರಾಮೀಣಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಸಾರ್ವತ್ರಿಕ ವರ್ಗಾವಣೆ ಅವಧಿ ಮುಗಿದು ಮೂರು ತಿಂಗಳ ನಂತರವೂ ವರ್ಗಾವಣೆ ಪ್ರಕ್ರಿಯೆ ಮುಂದುವರಿದಿದೆ. ಜುಲೈ 4ರಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವರ್ಗಾವಣೆಗೆ ಹಲವು ಬಾರಿ ಆದೇಶ ಹೊರಡಿಸಲಾಗಿದೆ. 650ಕ್ಕೂ ಹೆಚ್ಚು ಪಿಡಿಒಗಳನ್ನು ಮೊದಲ ಪಟ್ಟಿಯಲ್ಲಿ ವರ್ಗಾವಣೆ ಮಾಡಲಾಗಿತ್ತು. 60ಕ್ಕೂ ಹೆಚ್ಚು ಪಿಡಿಒಗಳಿಗೆ ಸ್ಥಳ ತೋರಿಸದೇ ವರ್ಗಾವಣೆ ಮಾಡಲಾಗಿತ್ತು. ನಂತರ ಪಿಡಿಒಗಳ ವರ್ಗಾವಣೆ ಪ್ರಸ್ತಾವಕ್ಕೆ ಅನುಮೋದನೆ ಕೋರಿ ಸಚಿವರು ಸಲ್ಲಿಸಿದ್ದ ಪಟ್ಟಿಯೂ ಸೋರಿಕೆಯಾಗಿತ್ತು. ಈಗ ಮತ್ತೆ ವರ್ಗಾವಣೆ ಪ್ರಕ್ರಿಯೆ ಮುಂದುವರಿಸಲಾಗಿದೆ.

ಕೃಷಿಭೂಮಿಯಲ್ಲಿ ಅನಧಿಕೃತ ಬಡಾವಣೆ: ಪ್ರತಿಭಟನೆ

ಯಲಹಂಕ: ಹಸಿರು ವಲಯಕ್ಕೆ ಒಳಪಟ್ಟ ಕೃಷಿಭೂಮಿಯಲ್ಲಿ ನಿರ್ಮಿಸುತ್ತಿರುವ ಅನಧಿಕೃತ ಬಡಾವಣೆಗಳನ್ನು ಕೂಡಲೇ ನಿಲ್ಲಿಸಬೇಕು ಎಂದು ಒತ್ತಾಯಿಸಿ, ದಲಿತ ಸಂಘಟನೆಗಳ ಒಕ್ಕೂಟದ ಸದಸ್ಯರು ತಹಶೀಲ್ದಾರ್ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು. ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಸರ್ಕಾರಿ ಕೆರೆ- ಕುಂಟೆ, ರಾಜಕಾಲುವೆ ಮತ್ತು ಪಿಟಿಸಿಎಲ್ ಕಾಯ್ದೆಗೆ ಒಳಪಟ್ಟ ದಲಿತರ ಜಮೀನು, ಹಸಿರು ವಲಯಕ್ಕೆ ಒಳಪಟ್ಟ ಕೃಷಿಭೂಮಿಯಲ್ಲಿ ಭೂಪರಿವರ್ತನೆ ಆದೇಶವಿಲ್ಲದೆ ಹಾಗೂ ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಅನಧಿಕೃತ ಬಡಾವಣೆಗಳನ್ನು ನಿರ್ಮಿಸಿ ನಿವೇಶನಗಳನ್ನಾಗಿ ವಿಂಗಡಿಸಲಾಗುತ್ತಿದೆ. ಉಪ ನೋಂದಣಾಧಿಕಾರಿ, ಸರ್ಕಾರದ ನಿಗದಿತ ಶುಲ್ಕಕ್ಕಿಂತ ಹೆಚ್ಚು ಹಣ ಪಡೆದು ನೋಂದಣಿ ಮಾಡುತ್ತಿದ್ದಾರೆ. ಇವರ ಮೇಲೆ ಕ್ರಮಕೈಗೊಳ್ಳದ ಕಂದಾಯ ಸಚಿವರನ್ನು ಸಂಪುಟದಿಂದ ಕೂಡಲೇ ಕೈಬಿಡಬೇಕು ಎಂದು ಆಗ್ರಹಿಸಿದರು.

ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಈರಣ್ಣ.ಜಿ.ಮೌರ್ಯ, ದಲಿತ ಮುಖಂಡ ಕೆ.ಎಂ.ಮುರಳಿ, ವೆಂಕಟೇಶ್, ಮುನಿರಾಜು, ಎಂ.ಸತೀಶ್, ಎಚ್.ಬಿ.ಹನುಮಯ್ಯ ಇದ್ದರು. ತಹಶೀಲ್ದಾರ್ ಅನಿಲ್ ಕುಮಾರ್ ಆರೋಲಿಕರ್ ಅವರಿಗೆ ಮನವಿ ಸಲ್ಲಿಸಿದರು.

'ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ಬರೀ ಊಹಾಪೋಹ'

ಪ್ರಜಾವಾಣಿ ವಾರ್ತೆ

ಅಥಣಿ (ಬೆಳಗಾವಿ): 'ನನಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ಕೊಡುವ ಕುರಿತು ಮಾಧ್ಯಮಗಳಲ್ಲಿ ನಾನು ನೋಡಿದೆ. ಇದೆಲ್ಲ ಊಹಾಪೋಹ ಅಷ್ಟೇ. ನನ್ನ ಜತೆ ಸಿ.ಎಂ ಹಾಗೂ ಡಿ.ಸಿ.ಎಂ ಯಾರೂ ಮಾತುಕತೆ ನಡೆಸಿಲ್ಲ. ಮಾಧ್ಯಮದಲ್ಲಿ ಮಾತ್ರ ಈ ಚರ್ಚೆ ನಡೆಯುತ್ತಿದೆ' ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, 'ಪದಾಧಿಕಾರಿಗಳ ನೇಮಕ ಚರ್ಚೆ ಪಕ್ಷದಲ್ಲಿ ನಡೆಯುತ್ತಿದೆ. ಕೆಪಿಸಿಸಿ ಹಾಗೂ ಎಐಸಿಸಿ ಅಧ್ಯಕ್ಷರ ನೇತೃತ್ವದಲ್ಲಿ ನಡೆಯುತ್ತದೆ. ಇದರ ಹೊರತಾಗಿ, ಇಂದಿನವರೆಗೆ ನನ್ನ ಕಾರ್ಯಾಧ್ಯಕ್ಷ ಮಾಡುವ ಕುರಿತು ಯಾರೂ ಚರ್ಚಿಸಿಲ್ಲ' ಎಂದೂ ಹೇಳಿದರು.

'ಡಿ.ಕೆ. ಶಿವಕುಮಾರ ಅವರು ಹುಕ್ಕೇರಿಗೆ ಧಾರ್ಮಿಕ ಕಾರ್ಯಕ್ರಮಕ್ಕೆ ಬಂದಿದ್ದರು. ಅವರು ಬೆಳಗಾವಿಗೆ ಬರುವುದು ಶಾಸಕರಿಗೆ ಮತ್ತು ಮಂತ್ರಿಗಳಿಗೆ ಮಾಹಿತಿ ನೀಡಲಿಲ್ಲ. ಇದರಿಂದ ಕೆಲವು ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಕೆಲಸದಲ್ಲಿದ್ದರು. ನಾನು ಕೂಡ ಬೆಂಗಳೂರಿನಲ್ಲಿ ಬೇರೆ ಕೆಲಸದ ನಿಮಿತ್ತ ಉಳಿದಿದ್ದೆ. ಶಿವಕುಮಾರ ಅವರು ಭಾಗವಹಿಸಿದ್ದು ಸರ್ಕಾರಿ ಕಾರ್ಯಕ್ರಮವಲ್ಲ. ಈ ವಿಚಾರವನ್ನು ಅಪಾರ್ಥ ಮಾಡಿಕೊಳ್ಳಬಾರದು' ಎಂದರು.

ಲೋಕಸಭಾ ಚುನಾವಣೆ ಹೊತ್ತಿಗೆ ಕಾಂಗ್ರೆಸ್ ಸರ್ಕಾರ ಉರುಳುತ್ತದೆ ಈಶ್ವರಪ್ಪ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, 'ಈಶ್ವರಪ್ಪ ಅವರು ಇಂಥ ಹೇಳಿಕೆ ನೀಡುವುದು ಹೊಸದಲ್ಲ. ಮೊದಲಿನಿಂದಲೂ ಈ ರೀತಿ ಹೇಳುತ್ತಲೇ ಇರುತ್ತಾರೆ' ಎಂದರು.

'ಬೆಳಗಾವಿ ಕಾಂಗ್ರೆಸ್‌ನಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ನಾವು ಎಲ್ಲರೂ ಒಂದಾಗಿದ್ದೇವೆ. ಒಳ್ಳೆಯ ಕೆಲಸ ಮಾಡುವುದಕ್ಕೆ ಚಿಂತನೆ ಮಾಡಿದ್ದೇವೆ' ಎಂದೂ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಬಡ್ಡಿ ಸಮೇತ ₹17 ಲಕ್ಷ ಹಿಂದಿರುಗಿಸಿ'

ಡಿ.ಕೆ. ಶಿವಕುಮಾರ್‌ಗೆ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ಲ್ಯಾಟ್ ಖರೀದಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಗ್ರಾಹಕರೊಬ್ಬರ ಮುಂಗಡ ಮೊತ್ತ ಹಿಂದಿರುಗಿಸುವಾಗ ಕಡಿತಗೊಳಿಸಿದ್ದ ₹ 17 ಲಕ್ಷವನ್ನು ಬಡ್ಡಿ ಸಮೇತ ಹಿಂದಿರುಗಿಸುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶಿಸಿದೆ.

ಈ ಸಂಬಂಧ ಎನ್‌ಟಿವೈ ಬಡಾವಣೆಯ ರಾಘವ ನಗರದ ನಿವಾಸಿ ಜೆ. ರಾಘವೇಂದ್ರ ಸಲ್ಲಿಸಿದ್ದ ದೂರಿನ ವಿಚಾರಣೆ ನಡೆಸಿದ ಬೆಂಗಳೂರು ನಗರ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎಂ.ಶೋಭಾ ಮತ್ತು ಸದಸ್ಯೆ ಸುಮಾ ಅನಿಲ್ ಕುಮಾರ್ ಅವರಿದ್ದ ಪೀಠವು ಈ ಕುರಿತಂತೆ ಇದೇ 9ರಂದು ಆದೇಶಿಸಿದೆ.

'ಮುಂಗಡ ಹಣದಲ್ಲಿ ಕಡಿತ ಮಾಡಿರುವ ₹ 17 ಲಕ್ಷವನ್ನು ವಾರ್ಷಿಕ ಶೇ 10ರ ಬಡ್ಡಿ ದರದಲ್ಲಿ ಹಿಂದಿರುಗಿಸಬೇಕು. ವ್ಯಾಜ್ಯದ ವೆಚ್ಚವಾಗಿ ₹ 10 ಸಾವಿರ ಪರಿಹಾರ ಪಾವತಿಸಬೇಕು. ಈ ಆದೇಶವನ್ನು ಮುಂದಿನ 60 ದಿನಗಳಲ್ಲಿ ಪಾಲಿಸಬೇಕು. ವಿಫಲವಾದಲ್ಲಿ ಒಪ್ಪಂದ ಮಾಡಿಕೊಂಡ ದಿನಕ್ಕೆ ಅನುಗುಣವಾಗಿ ಶೇ 12 ರ ಬಡ್ಡಿ ಸೇರಿಸಿ ಕೊಡಬೇಕು' ಎಂದು ಪೀಠವು ಎದುರುದಾರರಾದ ಡಿ.ಕೆ. ಶಿವಕುಮಾರ್, ಡಿ.ಕೆ. ಮಂಜುಳಾ, ಡಿ.ಕೆ.ಸುರೇಶ್, ಡಿ.ಕೆ. ಕೆಂಪೇಗೌಡ ಹಾಗೂ ಸಲಾರ್‌ಪುರಿಯಾ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ನಿರ್ದೇಶಿಸಿದೆ.

ಪ್ರಕರಣವೇನು?

ಡಿ.ಕೆ. ಶಿವಕುಮಾರ್, ಡಿ.ಕೆ. ಮಂಜುಳಾ, ಡಿ.ಕೆ. ಸುರೇಶ್, ಡಿ.ಕೆ.ಕೆಂಪೇಗೌಡ ಹಾಗೂ ಸಲಾರ್‌ಪುರಿಯಾ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ ಜೊತೆ ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದ "ಡಿವಿನಿಟಿ ಪ್ರಾಜೆಕ್ಟ್"ನಲ್ಲಿನ ಫ್ಲ್ಯಾಟ್‌ವೊಂದನ್ನು ₹ 86,06,800 ಮೊತ್ತಕ್ಕೆ ಖರೀದಿಸಲು ರಾಘವೇಂದ್ರ ಅವರು 2017ರ ಏಪ್ರಿಲ್ 10ರಂದು ಒಪ್ಪಂದ ಮಾಡಿಕೊಂಡಿದ್ದರು. ಮುಂಗಡವಾಗಿ ₹ 30,81,352 ಪಾವತಿ ಮಾಡಿದ್ದರು. ಆದರೆ, ಕೊರೊನಾ ಕಾರಣ ನೀಡಿ ₹ 56,25,458 ಮೊತ್ತವನ್ನು ನಿಗದಿತ ಸಮಯಕ್ಕೆ ಪಾವತಿ ಮಾಡಿರಲಿಲ್ಲ.

ಏತನ್ಮಧ್ಯೆ, ಎದುರುದಾರರು ರಾಘವೇಂದ್ರ ಅವರ ಜೊತೆ ಒಪ್ಪಂದ ಮಾಡಿಕೊಂಡಿದ್ದ ಫ್ಲ್ಯಾಟ್ ಅನ್ನು ಮತ್ತೊಬ್ಬರಿಗೆ ಮಾರಾಟ ಮಾಡಿದ್ದರು. ತರುವಾಯ ರಾಘವೇಂದ್ರ ಅವರಿಗೆ ಮುಂಗಡ ಹಣದಲ್ಲಿ ₹ 17,77,422 ಮೊತ್ತವನ್ನು ಕಡಿತಗೊಳಿಸಿ ಉಳಿದ ₹ 13,03,930 ಮೊತ್ತವನ್ನು ಚೆಕ್ ಮೂಲಕ ಹಿಂದಿರುಗಿಸಿದ್ದರು.

'ಡಿ.ಕೆ.ಶಿವಕುಮಾರ್ ಮತ್ತು ಎದುರುದಾರರಾದ ಅವರ ಕುಟುಂಬದ ಸದಸ್ಯರು ನನ್ನ ಜೊತೆ ಒಪ್ಪಂದ ಮಾಡಿಕೊಂಡಿದ್ದ ಫ್ಲ್ಯಾಟ್ ಅನ್ನು ಮತ್ತೊಬ್ಬರಿಗೆ ಲಾಭಕ್ಕೆ ಮಾರಿಕೊಂಡಿದ್ದಾರೆ. ಆದರೂ, ನಮ್ಮಿಂದ ₹ 17,77,422 ಮೊತ್ತವನ್ನು ಕಡಿತಗೊಳಿಸಿದ್ದಾರೆ. ಇದು ದೊಡ್ಡಮಟ್ಟದ ಲಾಭ ಗಳಿಸುವ ಮತ್ತು ಖರೀದಿದಾರರನ್ನು ದುರುಪಯೋಗಪಡಿಸಿಕೊಳ್ಳುವ ಪ್ರಕ್ರಿಯೆಯಾಗಿದೆ' ಎಂದು ರಾಘವೇಂದ್ರ ಗ್ರಾಹಕರ ಆಯೋಗಕ್ಕೆ ದೂರು ನೀಡಿದ್ದರು.

ಈ ದೂರಿಗೆ ಆಕ್ಷೇಪಣೆ ಸಲ್ಲಿಸಿದ್ದ ಎದುರುದಾರರು, '2017ರಲ್ಲಿ ಫ್ಲ್ಯಾಟ್ ಮಾರಾಟಕ್ಕೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಆದರೆ, ಒಪ್ಪಂದದ ನಂತರ ಕೇಂದ್ರ ಸರ್ಕಾರ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಜಾರಿ ಮಾಡಿತ್ತು. ಹೀಗಾಗಿ, ಫ್ಲ್ಯಾಟ್ ವೆಚ್ಚ ಪರಿಷ್ಕರಣೆಯಾಗಿದ್ದು, ಅದರ ಮೊತ್ತ ₹ 1 ಕೋಟಿ 4 ಲಕ್ಷಕ್ಕೆ ಏರಿಕೆಯಾಗಿದೆ. ದೂರುದಾರರು ಒಪ್ಪಂದದಂತೆ ಬಾಕಿ ಮೊತ್ತ ₹ 55 ಲಕ್ಷವನ್ನು ನಿಗದಿತ ಸಮಯದಲ್ಲಿ ಪಾವತಿ ಮಾಡುವಲ್ಲಿ ವಿಫಲರಾಗಿದ್ದು ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದ್ದಾರೆ' ಎಂದು ಪ್ರತಿಪಾದಿಸಿದ್ದರು.

ಶಿಕ್ಷಕರ ನೇಮಕಾತಿ: ಇಂದಿನಿಂದ ಕೌನ್ಸೆಲಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವೀಧರ ಪ್ರಾಥಮಿಕ ಶಿಕ್ಷಕರ (6ರಿಂದ 8ನೇ ತರಗತಿ) ನೇಮಕಾತಿಯ ಅಂತಿಮ ಆಯ್ಕೆ ಪಟ್ಟಿಯನ್ನು ಶಾಲಾ ಶಿಕ್ಷಣ ಇಲಾಖೆ ಪ್ರಕಟಿಸಿದ್ದು, ಅ.21ರಿಂದಲೇ ಸ್ಥಳ ಆಯ್ಕೆಗೆ ಕೌನ್ಸೆಲಿಂಗ್ ನಡೆಯಲಿದೆ.

'ಸ್ಥಗಿತಗೊಂಡಿದ್ದ 13,352 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ತಕ್ಷಣ ಮುಂದುವರಿಸುವಂತೆ ಅ.12ರಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಆದೇಶಿಸಿತ್ತು. ಹಾಗಾಗಿ, ಮೊದಲ ತಾತ್ಕಲಿಕ ಪಟ್ಟಿಯಲ್ಲಿ ಕೈಬಿಟ್ಟಿದ್ದ 451 ಅಭ್ಯರ್ಥಿಗಳು ಹಾಗೂ ಎರಡನೇ ಆಯ್ಕೆ ಪಟ್ಟಿಯಲ್ಲಿ ಸೇರಿಸಿದ್ದ ಅಷ್ಟೇ ಸಂಖ್ಯೆಯ ಅಭ್ಯರ್ಥಿಗಳನ್ನು ಹೊರಗಿಟ್ಟು ಅಂತಿಮ ಆಯ್ಕೆಪಟ್ಟಿ ಪ್ರಕಟಿಸಲಾಗಿದೆ. ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ)ಯ ಅಂತಿಮ ಆದೇಶದ ನಂತರ ಉಳಿದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಇಲಾಖೆ ನಿರ್ಧರಿಸಿದೆ.

ವಿವಾಹಿತ ಮಹಿಳೆಯರು ಪತಿಯ ಆದಾಯದ ಆಧಾರದಡಿ ತಮ್ಮ ಆದಾಯ ಪ್ರಮಾಣ ಪತ್ರವನ್ನು ನೇಮಕಾತಿ ವೇಳೆ ಸಲ್ಲಿಸಬೇಕಿತ್ತು. ಅದರ ಬದಲು, ತಂದೆಯ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ ಎಂಬ ಕಾರಣ ನೀಡಿ 451 ಅಭ್ಯರ್ಥಿಗಳನ್ನು ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ ಕೈಬಿಡಲಾಗಿತ್ತು. ಇದನ್ನು ಪ್ರಶ್ನಿಸಿ, ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಏಕಸದಸ್ಯ ನ್ಯಾಯಪೀಠದ ಆದೇಶದ ನಂತರ ಅವರನ್ನು ಪಟ್ಟಿಗೆ ಸೇರಿಸಿ, ಮೊದಲ ಆಯ್ಕೆಪಟ್ಟಿಯಲ್ಲಿದ್ದ ಅಷ್ಟೇ ಸಂಖ್ಯೆಯ ಅಭ್ಯರ್ಥಿಗಳನ್ನು ಕೈಬಿಟ್ಟು ಎರಡನೇ ಪಟ್ಟಿ ಪ್ರಕಟಿಸಲಾಗಿತ್ತು.

2022ರ ಮಾರ್ಚ್‌ನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧಿಸೂಚನೆ ಹೊರಡಿಸಿತ್ತು. 68,849 ಅಭ್ಯರ್ಥಿಗಳು ಸಿಇಟಿ ಬರೆದಿದ್ದರು. ಕಳೆದ ನವೆಂಬರ್‌ನಲ್ಲೇ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು.

ಅಭ್ಯರ್ಥಿಗಳು ಜಿಲ್ಲಾವಾರು ಪಟ್ಟಿಯ ಪ್ರಕಾರ ಆಯಾ ಉಪ ನಿರ್ದೇಶಕರ ಕಚೇರಿಗಳಲ್ಲಿ ಕೌನ್ಸೆಲಿಂಗ್‌ಗೆ ಭಾಗವಹಿಸಬೇಕು. ಗ್ರಾಮೀಣ ಸಿ ವಲಯವನ್ನೇ ಆಯ್ಕೆ ಮಾಡಿಕೊಳ್ಳಬೇಕು. ಕೋರ್ಟ್‌ನಲ್ಲಿ ಯಾವುದೇ ಪ್ರಕರಣ ದಾಖಲಿಸಿಲ್ಲ ಎಂದು ಮುಚ್ಚಳಿಕೆ ಬರೆದುಕೊಡಬೇಕು. ನೇಮಕಾತಿ ಆದೇಶ ಪಡೆದ 15 ದಿನಗಳ ಒಳಗೆ ಕರ್ತವ್ಯಕ್ಕೆ ಹಾಜರಾಗಬೇಕು. ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ ಹಾಗೂ 371 (ಜೆ) ಸಂಬಂಧ ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಹೊರತುಪಡಿಸಿ ಕೌನ್ಸೆಲಿಂಗ್ ನಡೆಯಲಿದೆ.

ಕ್ರಿಕೆಟ್ ವೀಕ್ಷಣೆ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಏಕದಿನ ವಿಶ್ವಕಪ್ ಟೂರ್ನಿಯ ಪಾಕಿಸ್ತಾನ ಹಾಗೂ ಆಸ್ಟ್ರೇಲಿಯಾ ತಂಡಗಳ ನಡುವಿನ ಪಂದ್ಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್.

ಇಸ್ರೇಲ್ ಪರ ಪೋಸ್ಟ್: ವೈದ್ಯ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಸ್ರೇಲ್ ಪರ ಪೋಸ್ಟ್ ಹಾಕಿದ ಆರೋಪದ ಮೇಲೆ ಕನ್ನಡಿಗ ಡಾಕ್ಟರ್ ಒಬ್ಬರನ್ನು ಬಹರೇನ್ ಪೊಲೀಸರು ಬಂಧಿಸಿದ್ದಾರೆ.

ಹಮಾಸ್ ಉಗ್ರರನ್ನು ವಿರೋಧಿಸಿ, ಡಾ. ಸುನಿಲ್ ರಾವ್ ಎನ್ನುವವರು 'X' ನಲ್ಲಿ ಹಾಕಿರುವ ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಕೆಲವರು ಈ ಪೋಸ್ಟ್‌ಗೆ ಆಕ್ಷೇಪ ವ್ಯಕ್ತಪಡಿಸಿ, ಬಹರೇನ್ ಆಡಳಿತವನ್ನು ಟ್ಯಾಗ್ ಮಾಡಿದ್ದರು. ಇದನ್ನು ಆಧರಿಸಿ, ಅಲ್ಲಿನ ಪೊಲೀಸರು ಅವರನ್ನು ಬಂಧಿಸಿದ್ದಾರೆ ಎನ್ನಲಾಗಿದೆ.

ಇದರ ಬೆನ್ನಲ್ಲೇ ಅವರು ಕಾರ್ಯ ನಿರ್ವಹಿಸುತ್ತಿದ್ದ ಬಹರೇನ್‌ನ ರಾಯಲ್ ಆಸ್ಪತ್ರೆ, ಅವರನ್ನು ಕರ್ತವ್ಯದಿಂದ ಬಿಡುಗಡೆ ಗೊಳಿಸಿದೆ. ಈ ಸಂಬಂಧ ಆಸ್ಪತ್ರೆ 'X' ನಲ್ಲಿ ಪೋಸ್ಟ್ ಹಾಕಿಕೊಂಡಿದೆ.

10 ವರ್ಷಗಳಿಂದ ಬಹರೇನ್‌ನಲ್ಲಿ ವಾಸವಿರುವ ಸುನಿಲ್ ಅವರು, ವಿಶಾಖಪಟ್ಟಣದಲ್ಲಿ ಎಂಬಿಬಿಎಸ್ ಮತ್ತು ಮಂಗಳೂರಿನ ಕೆಎಂಸಿ ಆಸ್ಪತ್ರೆಯಲ್ಲಿ ಎಂಡಿ ಪೂರೈಸಿದವರು.

ROYAL BAHRAIN Hospital

It has come to our attention that Dr. Sunil Rao who is working as a Specialist in Internal Medicine has posted tweets on social media platforms that are offensive to our society. We would like to confirm that his tweets and ideology are personal and do not reflect the opinion and values of the Hospital. This is a violation of our code of conduct and we have taken the necessary legal actions and his services have been terminated with immediate effect.

ಬಹರೇನ್‌ನ ರಾಯಲ್ ಆಸ್ಪತ್ರೆ 'X'ನಲ್ಲಿ ಹಾಕಿರುವ ಪೋಸ್ಟ್

ಎನ್‌ಎಂಡಿಸಿ ಕಚೇರಿಗೆ ಸಿವಿಸಿ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ವಿಚಕ್ಷಣ ಆಯೋಗದ ಕಾರ್ಯದರ್ಶಿ ಪಿ. ಡೇನಿಯಲ್ ಅವರು ಈಚೆಗೆ ಎನ್‌ಎಂಡಿಸಿ ಲಿಮಿಟೆಡ್‌ನ ಹೈದರಾಬಾದ್ ಕಚೇರಿಗೆ ಭೇಟಿ ನೀಡಿ ಉದ್ಯೋಗಿಗಳೊಂದಿಗೆ ಸಂವಾದ ನಡೆಸಿದರು.

ಕಾರ್ಪೊರೇಟ್ ಆಡಳಿತದಲ್ಲಿ ಏಕತೆ ತರುವ ನಿಟ್ಟನಲ್ಲಿ ಆಯೋಗವು ಗಮನ ಹರಿಸುತ್ತಿದೆ. ಹೀಗಾಗಿ ಭ್ರಷ್ಟಾಚಾರ ಮುಕ್ತವಾಗಿ ರಾಷ್ಟ್ರಕ್ಕೆ ಬದ್ಧವಾಗಿರುವಂತೆ ಡೇನಿಯಲ್ ಅವರು ಉದ್ಯೋಗಿಗಳಿಗೆ ಸಲಹೆ ನೀಡಿದರು.

ಎನ್‌ಎಂಡಿಸಿಯು ಪಾರದರ್ಶಕತೆಯಲ್ಲಿ ನಿರಂತರವಾಗಿ ಸುಧಾರಣೆ ತರುತ್ತಿದೆ. ಸಾಮರ್ಥ್ಯ ವೃದ್ಧಿ ಮತ್ತು ತಂತ್ರಜ್ಞಾನ ಬಳಸಿಕೊಳ್ಳುವ ಮೂಲಕ ವಹಿವಾಟಿನ ಹೊಣೆಗಾರಿಕೆಯನ್ನು ಹೆಚ್ಚಿಸಲಾಗುತ್ತಿದೆ ಎಂದು ಮುಖ್ಯ ವಿಚಕ್ಷಣಾ ಅಧಿಕಾರಿ (ಸಿವಿಒ) ಬಿ. ವಿಶ್ವನಾಥ ಅವರು ಇದೇ ವೇಳೆ ತಿಳಿಸಿದರು.

ತೆಲಂಗಾಣ ಶಾಸಕರ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾದಗಿರಿ ಹೊರವಲಯದ ವನಕೇರಿ ಬಡಾವಣೆಯಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಮತ್ತು ವೇದಿಕೆಯಲ್ಲಿ ಕತ್ತಿ ಝಳಪಿಸಿದ ಆರೋಪದಡಿ ತೆಲಂಗಾಣ ಶಾಸಕ ರಾಜಾಸಿಂಗ್ ಠಾಕೂರ್ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ರಾಜಾಸಿಂಗ್ ಠಾಕೂರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮೇಲ್ನೋಟಕ್ಕೆ ಅರ್ಜಿದಾರರ ವಿರುದ್ಧದ ಆರೋಪಗಳಿಗೆ ಯಾವುದೇ ಸಾಕ್ಷ್ಯಗಳಿಲ್ಲ. ಆರೋಪ ಹೊರಿಸುವ ಮುನ್ನ ಸಕ್ಷಮ ಪ್ರಾಧಿಕಾರದಿಂದ ವಿಚಾರಣೆಗೆ ಪೂರ್ವಾನುಮತಿಯನ್ನೂ ಪಡೆದಿಲ್ಲ. ಹಾಗಾಗಿ, ಈ ಪ್ರಕರಣಕ್ಕೆ ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 153 ಎ ಅನ್ವಯ ಆಗುವುದಿಲ್ಲ' ಎಂದು ಪ್ರಕರಣ ರದ್ದುಗೊಳಿಸಿದೆ. ತನಿಖೆ ಪೂರ್ಣಗೊಳಿಸಿದ್ದ ಪೊಲೀಸರು ಐಪಿಸಿ ಕಲಂ 153ಎ ಮತ್ತು ಶಸ್ತ್ರಾಸ್ತ್ರ ಕಾಯ್ದೆ-1959ರ ಕಲಂ 25ರ (1ಎಎ) ಅಡಿ 2019ರಲ್ಲಿ ಯಾದಗಿರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

'ಅಶಕ್ತ ಹೋರಾಟಗಾರರಿಗೆ ನೆರವು ನೀಡಿ'

ಬೆಂಗಳೂರು: 'ಕರ್ನಾಟಕ ನಾಮಕರಣದ ಸುವರ್ಣ ಮಹೋತ್ಸವದ ಸ್ಮರಣಾರ್ಥ ಸಂಕಷ್ಟದಲ್ಲಿರುವ ಕನ್ನಡ ಪರ ಹೋರಾಟಗಾರರಿಗೆ ಆರ್ಥಿಕ ನೆರವು ನೀಡಬೇಕು' ಎಂದು ಕನ್ನಡ ಗೆಳೆಯರ ಬಳಗ ಸರ್ಕಾರಕ್ಕೆ ಆಗ್ರಹಿಸಿದೆ.

ಈ ಬಗ್ಗೆ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. 'ಕರ್ನಾಟಕ ಸರ್ಕಾರವು ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಇನ್ನಾವ ರಾಜ್ಯ ಸರ್ಕಾರವು ಭಾಷೆ ಮತ್ತು ಸಂಸ್ಕೃತಿಗೆ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತಿಲ್ಲ. ಈಗ ಕರ್ನಾಟಕ ನಾಮಕರಣದ ಸುವರ್ಣ ಮಹೋತ್ಸವ ಪ್ರಯುಕ್ತ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯಕ್ರಮಗಳಡಿ ಸಂಕಷ್ಟದಲ್ಲಿರುವ 60 ವರ್ಷಗಳು ದಾಟಿದ ಕನ್ನಡ ಪರ ಹೋರಾಟಗಾರರನ್ನೂ ಪರಿಗಣಿಸಿ, ಮಾಸಾಶನ ಹಾಗೂ ವೈದ್ಯಕೀಯ ನೆರವು ನೀಡಲು ಕ್ರಮವಹಿಸಬೇಕು' ಎಂದು ಹೇಳಿದ್ದಾರೆ.

ಸಮಯ ಕೊಡದ ಮೋದಿ: ಚಲುವರಾಯಸ್ವಾಮಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದ ಸಂಕಷ್ಟದ ಕುರಿತು ಹೇಳಿಕೊಳ್ಳಲು ನಿಯೋಗ ಬರುತ್ತೇವೆ ಎಂದು ಪತ್ರ ಬರೆದು ಕೋರಿದರೂ, ಪ್ರಧಾನಿಯು ಸ್ಪಂದಿಸದಿರುವುದು, ಸಮಯ ಕೊಡದಿರುವುದು ಸ್ವತಂತ್ರ ಭಾರತದ ಇತಿಹಾಸದಲ್ಲೇ ಇದೇ ಮೊದಲು' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ದಸರಾ ಅಂಗವಾಗಿ ಇಲ್ಲಿನ ಜೆ.ಕೆ. ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ 'ರೈತ ದಸರಾ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ರಾಜ್ಯದ 216 ತಾಲ್ಲೂಕುಗಳು ತೀವ್ರ ಬರಪೀಡಿತವಾಗಿದ್ದು, ಹಲವು ಸವಾಲುಗಳನ್ನು ಎದುರಿಸುತ್ತಿದ್ದೇವೆ. ₹5,020 ಕೋಟಿ ಪರಿಹಾರ ಕೊಡುವಂತೆ ಕೇಳಿದ್ದೇವೆ. ಕಾವೇರಿ ನದಿ ನೀರು ಹಂಚಿಕೆಯ ವಿವಾದವನ್ನು ಬಗೆಹರಿಸಲು ಮಧ್ಯಪ್ರವೇಶಿಸುವಂತೆ ಹಾಗೂ ಸಹಕಾರ ನೀಡುವಂತೆ ಕೋರಿದ್ದೇವೆ. ಎರಡೂವರೆ ತಿಂಗಳಲ್ಲಿ ಮೂರು ಬಾರಿ ಪತ್ರ ಬರೆದರೂ ಪ್ರಧಾನಿಯಿಂದ ಪ್ರತಿಕ್ರಿಯೆ ಬಂದಿಲ್ಲ' ಎಂದರು.

'ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಬಿಜೆಪಿಯ ಸಂಸದರೂ, ಸಮಯ ಕೊಡಿ ಎಂದು ಪ್ರಧಾನಿಯನ್ನು ಕೇಳಿಲ್ಲ; ಕೊಡಿಸಿಯೂ ಇಲ್ಲ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬರ ಎದುರಿಸುತ್ತಿದ್ದರೂ ಗೃಹ ಸಚಿವರಾಗಲೀ, ಕೃಷಿ ಸಚಿವರಾಗಲಿ ನಮ್ಮ ಭೇಟಿಗೆ ಸಮಯ ನೀಡಿಲ್ಲ. ಕಾರ್ಯದರ್ಶಿಗಳೂ ಸಿಗುತ್ತಿಲ್ಲ. ಕೇಂದ್ರ ಸರ್ಕಾರವು ರಾಜ್ಯದ ಬಗ್ಗೆ ತಾರತಮ್ಯ ಹಾಗೂ ತಾತ್ಸಾರವನ್ನು ತೋರುತ್ತಿದೆ' ಎಂದು ಆರೋಪಿಸಿದರು.

ನಗರದಲ್ಲಿ ಇಂದು

ಪೊಲೀಸ್ ಸಂಸ್ಮರಣ ದಿನಾಚರಣೆ: **ಮುಖ್ಯ ಅತಿಥಿ:** ಸಿದ್ದರಾಮಯ್ಯ, ಅಧ್ಯಕ್ಷತೆ: ಜಿ. ಪರಮೇಶ್ವರ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಹುತಾತ್ಮರ ಉದ್ಯಾನ, ನಗರ ಸಶಸ್ತ್ರ ಮೀಸಲು ಪಡೆ, ಮೈಸೂರು ರಸ್ತೆ, ಬೆಳಿಗ್ಗೆ 8

ಘಟಿಕೋತ್ಸವ: ಮುಖ್ಯ ಅತಿಥಿ: ಡಾ.ಸುಜಾತಾ ರಾಥೋಡ್, ಅಧ್ಯಕ್ಷತೆ: ಕಾಟುರಿ ಸುಬ್ಬಾ ರಾವ್, ಆಯೋಜನೆ: ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್ ಆ್ಯಂಡ್ ಹಾಸ್ಪಿಟಲ್ಸ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 10

ಸಂಸ್ಕೃತಿ ಸಂಗಮ: ಜೀವಮಾನ ಸಾಧನೆಗೆ ಸಾಧಕರಿಗೆ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ: ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಿವರಾಜ ವಿ. ಪಾಟೀಲ, ವಿಶೇಷ ಸಂಚಿಕೆ ಬಿಡುಗಡೆ: ಹಂ.ಪ. ನಾಗರಾಜಯ್ಯ, ಉಪಸ್ಥಿತಿ: ಸಿ. ಸೋಮಶೇಖರ, ಪ್ರಶಸ್ತಿ ಪುರಸ್ಕೃತರು: ಶಾಂತಾ ಇಮ್ರಾಪುರ, ಅಂಮ್ಮೆಂಬಳ ವಾಸುದೇವ ನಾವಡ, ಹಿ.ಚಿ. ಬೋರಲಿಂಗಯ್ಯ, ನರಸಿಂಹಲು ವಡವಾಟಿ, ಆಯೋಜನೆ: ಡಾ.ಸಿ. ಸೋಮಶೇಖರ–ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ, ಸ್ಥಳ: ಗಾಂಧಿ ಭವನ, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30

'ಮೀಟ್ ಎಂಡ್ ಗ್ರೀಟ್ ವಿತ್ ಸೆಲಿಬ್ರಿಟಿ': ರೋಹಿತ್ ಚಕ್ರತೀರ್ಥ, ಗುರು ಗೌರವ: ಕೆ. ಎಸ್ ಚಂದ್ರಶೇಖರ್, ಗಂಗಮ್ಮ ರಾಜಗೋಪಾಲ್, ಆಯೋಜನೆ ಹಾಗೂ ಸ್ಥಳ: ರಾಯಲ್ ಕಾಲೇಜು, ಮತ್ತಿಕೆರೆ, ಬೆಳಿಗ್ಗೆ 11

ಸೀತಾ ಲಕ್ಷ್ಮಿ ಪೆರೋಥ್

ಭರತನಾಟ್ಯ ರಂಗಪ್ರವೇಶ: ಸೀತಾ ಲಕ್ಷ್ಮಿ ಪೆರೋಥ್, ಗೌರವ ಅತಿಥಿ: ಎಂ.ಸೂರ್ಯಪ್ರಸಾದ್, ಮುಖ್ಯ ಅತಿಥಿಗಳು: ಕನ್ಯಾ ರಾಮಚಂದ್ರನ್, ರತ್ನಾ ಸುಪ್ರಿಯಾ ಶ್ರೀಧರನ್, ಆಯೋಜನೆ: ನಾಟ್ಯಮಯೂರಿ ಕ್ಲಾಸಿಕಲ್ ಡ್ಯಾನ್ಸ್ ಇನ್‌ಸ್ಟಿಟ್ಯೂಟ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6.15

ನೃತ್ಯೋಲ್ಲಾಸ ದಸರಾ ಸಂಭ್ರಮ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಬಿ. ವೀರಪ್ಪ, ಮುಖ್ಯ ಅತಿಥಿ: ಬಲವಂತರಾವ್ ಪಾಟೀಲ, ಆಯೋಜನೆ: ಮಾರಿಕಾಂಬಾ ನೃತ್ಯ ಕಲಾ ಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30

'ರಾಮಾಯಣದಲ್ಲಿ ಪ್ರಭುತ್ವ ಲೋಕಗಳು' ವಿಷಯದ ಬಗ್ಗೆ ದತ್ತಿ ಉಪನ್ಯಾಸ: ಕೆ.ಇ. ರಾಧಾಕೃಷ್ಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಕಾವ್ಯ ಕಾರಣ 5: ಬಂಜಗೆರೆ ಜಯಪ್ರಕಾಶ್ ಅವರ ಕವಿತೆ

ವಿಶ್ಲೇಷಣೆ: ಪ್ರಕಾಶ್ ಮಂಟೇದ, ಕವನ ವಾಚನ: ಭಾಗ್ಯಲಕ್ಷ್ಮಿ ವಿ., ಕಾವ್ಯಶ್ರೀ ಎಚ್., ಲಕ್ಷ್ಮೀನಾರಾಯಣ ಸ್ವಾಮಿ, ಸಂಜ್ಯೋತಿ ವಿ.ಕೆ., ಡಿ.ಆರ್. ದೇವರಾಜ, ಸೂರ್ಯಕೀರ್ತಿ, ಮುನಿಯಪ್ಪ ಹುಸ್ಕೂರು, ದಿವ್ಯಶ್ರೀ ಅದರಂತೆ, ಮೇದರದೊಡ್ಡಿ ಹನುಮಂತ, ಅಕ್ಷಯ್ ಗೌತಮ್, ಆಯೋಜನೆ: ಅವಿರತ ಪುಸ್ತಕ, ಬೆಂಗಳೂರು ಆರ್ಟ್ ಫೌಂಡೇಶನ್, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಕನ್ನಡ ಭವನ, ಸಂಜೆ 5.30

ನಾಟಕ ಪ್ರದರ್ಶನ ಹಾಗೂ 'ರಂಗ ನೇಪಥ್ಯ ಕಲಾ ಪದ್ದಣ್ಣ ಪ್ರಶಸ್ತಿ ಪ್ರದಾನ: **ಅಧ್ಯಕ್ಷತೆ:** 'ಮುಖ್ಯಮಂತ್ರಿ' ಚಂದ್ರು, ಮುಖ್ಯ ಅತಿಥಿ: ಅಂಕಲ್ ಶ್ಯಾಮ್ ಸುಂದರ್, ಚಡ್ಡಿ ನಾಗೇಶ್, ಪ್ರಶಸ್ತಿ ಪುರಸ್ಕೃತರು: ಸುರೇಶ್ ಎನ್., ಸುಗುಣ ಸಿ.ಎಸ್., ಪರಮೇಶ್ ಜೋಳದ, ನಾಟಕಗಳು: 'ಮಧ್ಯರಾತ್ರಿಯಿಂದ ಮುಂಜಾನೆವರೆಗೆ', 'ತಮಸೋಮ', ಆಯೋಜನೆ: ಕಲಾಗಂಗೋತ್ರಿ ರಂಗ ತಂಡ, ಸ್ಥಳ: ಸಿ. ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 6

ನವರಾತ್ರಿ ವಿಶೇಷ

ಶರನ್ನವರಾತ್ರಿ ಮಹೋತ್ಸವ: ರುದ್ರಾಭಿಷೇಕ, ಮಹಾರುದ್ರ ಹೋಮ ಬೆಳಿಗ್ಗೆ 7ಕ್ಕೆ, ಸುದರ್ಶನ ಹೋಮ, ವಿಷ್ಣು ಸಹಸ್ರನಾಮ ಪಾರಾಯಣ, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ವೇದ ವಿಜ್ಞಾನ ಮಹಾವಿದ್ಯಾಪೀಠ, ಕನಕಪುರ ಮುಖ್ಯರಸ್ತೆ, ಸಂಜೆ 4.30

ವಚನ ನವರಾತ್ರಿ: ಉಪನ್ಯಾಸ: ಮಧು ಶಿವಕುಮಾರ್, ಅತಿಥಿಗಳು: ವಿಮಲ ಶಿವಪ್ರಕಾಶ್, ಜಲಜಾ ಶಂಕರ್, ಸುಮಿತ್ರಾ ರಾಯರೆಡ್ಡಿ, ವಚನ ಸಂಗೀತ: ಸುಶೀಲಾ ಮತ್ತು ತಂಡ, ಕಲಾವತಿ ಬೇವಿನಮರದ, ವಚನ ರೂಪಕ: ಗುಡ್ಡರ ನಾಡಿನಲ್ಲಿ ಗಡಿಬಿಡಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, #533, 7ನೇ ಮುಖ್ಯ ರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ದೇವಿ ಸ್ತೋತ್ರ ಪಠಣ, ಚಲನಚಿತ್ರ ಉತ್ಸವ: 'ಸಂದಿಗ್ಧ' ಚಲನಚಿತ್ರ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಸಂಜೆ 5

ದೇವಿಗೆ ವೈಷ್ಣವಿ ಅಲಂಕಾರ: ಭಜನೆ, ಸಂಗೀತ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಮಾತಾ ಅನ್ನಪೂರ್ಣೇಶ್ವರಿ ದೇವಾಲಯ, ಬ್ಯಾಂಕ್ ಕಾಲೊನಿ, ಕೋಣನಕುಂಟೆ, ಸಂಜೆ 5.30ರಿಂದ

43ನೇ ವರ್ಷದ ನವರಾತ್ರಿ ಸಾಂಸ್ಕೃತಿಕ ಉತ್ಸವ: ಲಘು ಸಂಗೀತ: ಭಾರತಿ ವೆಂಕಟೇಶ್, ಆಯೋಜನೆ ಹಾಗೂ ಸ್ಥಳ: ಶ್ರೀ ಪದ್ಮಾವತಿ ಕಲಾನಿಕೇತನ, 2ನೇ ಕ್ರಾಸ್, ಮತ್ತಿಕೆರೆ ಬಡಾವಣೆ, ಸಂಜೆ 6

ಮಹಾಲಕ್ಷ್ಮಿ ಅಲಂಕಾರ, ಮುತ್ತಿನ ಅಲಂಕಾರ, ಸಾಂಸ್ಕೃತಿಕ ಕಾರ್ಯಕ್ರಮ: ಆಯೋಜನೆ ಮತ್ತು ಸ್ಥಳ: ಮಹೇಶ್ವರಿ ದೇವಸ್ಥಾನ ಟ್ರಸ್ಟ್, ಮಲ್ಲೇಶ್ವರ, ಸಂಜೆ 6

ನಾದಾರಾಧನೆ: ಸದಾಶಿವ ಭಟ್, ಪಕ್ಕವಾದ್ಯ: ಶ್ರೀಮಂತ ನೀಲೂರು, ಶಿವಕುಮಾರ್, ಆಯೋಜನೆ ಹಾಗೂ ಸ್ಥಳ: ಉದಯಭಾನು ಕಲಾ ಸಂಘ, ಕೆಂಪೇಗೌಡ ನಗರ, ಸಂಜೆ 6

ದುರ್ಗಾ ದೇವಿಗೆ 'ಕಾಲರಾತ್ರಿ ದೇವಿ ಅಲಂಕಾರ': ಭಜನೆ: ಮಧು ತಂಡ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣರಾಜಪುರ, ಸಂಜೆ 6

ದೇವಿಗೆ ಪೂಜೆ: ಸಾಂಸ್ಕೃತಿಕ ಕಾರ್ಯಕ್ರಮ: ವೀಣಾ ಶೇಖರ್ ತಂಡ, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡ ರಾಮ ದೇವಸ್ಥಾನ, ವಿಜಯನಗರ, ಸಂಜೆ 6

ದೇವಿಗೆ ಸರಸ್ವತಿ ಅಲಂಕಾರ: ತರಕಾರಿ ಅಲಂಕಾರ, ಆಯೋಜನೆ ಮತ್ತು ಸ್ಥಳ: ಮಾರಮ್ಮ ಆಂಜನೇಯಸ್ವಾಮಿ ಸೇವಾ ಟ್ರಸ್ಟ್, ಚಿನ್ನಯ್ಯನಪಾಳ್ಯ, ಸಂಜೆ 6

ನವರಾತ್ರಿ ಸಾಂಸ್ಕೃತಿಕ ಸಿಂಚನ: ಸಂಗೀತ ಕಾರ್ಯಕ್ರಮ: ಗಾಯನ: ಮೇಘಶ್ರೀ ಸಂತೋಷ್, ಪಿಟೀಲು: ಶಶಿಧರ್, ಮೃದಂಗ: ವೇಣುಗೋಪಾಲ್ ಎಂ.ಕೆ., ಘಟ: ರವಿತೇಜಾ ಬಿ.ವಿ., ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಕೆಂಗೇರಿ ಉಪನಗರ, ಸಂಜೆ 6ರಿಂದ

ಮಹೇಶ್ವರಿ ದೇವಸ್ಥಾನದಲ್ಲಿ 112ನೇ ನವರಾತ್ರಿ ಉತ್ಸವದ ಪ್ರಯುಕ್ತ ನೃತ್ಯ ಪ್ರದರ್ಶನ: ಪ್ರಣವಾಂಜಲಿ ಅಕಾಡೆಮಿ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ವಿದ್ಯಾರ್ಥಿಗಳಿಂದ, ನಿರ್ದೇಶನ: ಪವಿತ್ರ ಪ್ರಶಾಂತ್, ಆಯೋಜನೆ ಹಾಗೂ ಸ್ಥಳ: ಮಹೇಶ್ವರಿ ದೇವಸ್ಥಾನ, 8ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 6.30

ಸಾಂಸ್ಕೃತಿಕ ಕಾರ್ಯಕ್ರಮ: ಆಯೋಜನೆ: ತ್ರಿಕೋನ ಶಕ್ತಿ ಪೀಠ, ಸ್ಥಳ: ನಂ.35/1, ಸಾತನೂರು, ಬಾಗಲೂರು ಕ್ರಾಸ್, ಕಂಟ್ರಿ ಕ್ಲಬ್ ಹತ್ತಿರ, ಸಾತನೂರು, ಸಂಜೆ 6.30

ಯಲ್ಲಮ್ಮ ದೇವಿಗೆ ತರಕಾರಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6.30

ದೇವಿಗೆ ಮಹಾಭಿಷೇಕ, ಅಷ್ಟಲಕ್ಷ್ಮೀ ಅಲಂಕಾರ: ಸಾಮೂಹಿಕ ಲಲಿತ ಸಹಸ್ರ ಪಾರಾಯಣ ಮಧ್ಯಾಹ್ನ 1.30ಕ್ಕೆ, ಸಾಂಸ್ಕೃತಿಕ ಕಾರ್ಯಕ್ರಮ: ರಾಧಿಕಾ ವೆಂಕಟರಮಣ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30ಕ್ಕೆ

ಸಾಂಸ್ಕೃತಿಕ ಕಾರ್ಯಕ್ರಮ: ವೇಣು ವಾದನ: ಸಂಜನಾ ರಾವ್, ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರಮಠ ಶಂಕರಪುರ, ಸಂಜೆ 7

ದೊಡ್ಡಮ್ಮ ದೇವಿಗೆ ಮುತ್ತಿನ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಸಂಜೆ 7.30

ನವವರ್ಣ

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಮಹಿಳಾ ಸಿಬ್ಬಂದಿ, ಬಹುಮಹಡಿ ಕಟ್ಟಡ, ಬೆಂಗಳೂರು

ಎಸ್‌ಜಿ ಇಂಟರ್‌ನ್ಯಾಷನಲ್ ಶಾಲೆಯ ಸಿಬ್ಬಂದಿ, ನಂದಿನಿ ಬಡಾವಣೆ, ಬೆಂಗಳೂರು

ಬೆಸ್ಕಾಂ ಸಿಬ್ಬಂದಿ, ರಾಜರಾಜೇಶ್ವರಿ ನಗರ ವಿಭಾಗ, ಬ್ಯಾಟರಾಯನಪುರ

ಶುಭಾಲಕ್ಷ್ಮಿ ಮತ್ತು ಗೆಳತಿಯರು, ಕಾವೇರಿ ಭವನ

ಅನು, ಗೀತಾ, ರೋಶಿನಿ, ವಿಜಯಾ, ಆಶಾ, ಸಾರಿಕಾ, ಸುಧಾ ವಿಜಿ ಮತ್ತು ಹಂಸ, ಶ್ರೀರಾಮ್ ಸೃಷ್ಟಿ ಅಪಾರ್ಟ್‌ಮೆಂಟ್, ಹೆಬ್ಬಾಳ–1

ದಿವ್ಯಜ್ಯೋತಿ ಅರುಣ್, ಬಸವೇಶ್ವರ ನಗರ, ಬೆಂಗಳೂರು

ಗೀತಾ ಮತ್ತು ಗೆಳತಿಯರು, ಆರ್‌ಪಿಸಿ ಬಡಾವಣೆ

ಅನಸೂಯ, ಇಂದಿರಾ ಮತ್ತು ಮೀನಾಕ್ಷಿ, ಗಂಗಾನಗರ, ಬೆಂಗಳೂರು

ಶ್ರೀ ನಿಧಿ ವಿದ್ಯಾ ಮಂದಿರದ ಶಿಕ್ಷಕಿಯರೊಂದಿಗೆ ವಿದ್ಯಾರ್ಥಿನಿಯರು , ಶ್ರೀನಗರ, ಬೆಂಗಳೂರು

ವಿಶ್ವಚೇತನಾ ಯೋಗ ಶಾಲೆಯ ತಂಡದ ಸದಸ್ಯೆಯರು, ವಿಜಯನಗರ, ಬೆಂಗಳೂರು

ಶೈಲಮ್ಮ ಮತ್ತು ಗೆಳತಿಯರು, ಹೊಸಕೋಟೆ

ಹೇಮಾ ಮತ್ತು ಸ್ನೇಹಿತೆಯರು, ಪದ್ಮನಾಭ ನಗರ, ಬೆಂಗಳೂರು

ಬನಶಂಕರಿ ಭಜನಾ ಮಂಡಳಿ, ಗಿರಿನಗರ, ಬೆಂಗಳೂರು

ಬೆಂಗಳೂರು ಗ್ರಾಮಾಂತರ ಜಿಲ್ಲಾ ನ್ಯಾಯಾಲಯ ಸಿಬ್ಬಂದಿ

ಬೊಮ್ಮನಹಳ್ಳಿ ಕ್ಲಸ್ಟರ್‌ನ ಶಿಕ್ಷಕಿಯರು, ನೆಲಮಂಗಲ

ಬೋಧಕ ಸಿಬ್ಬಂದಿ, ಐಎಸ್‌ಬಿ.ಆರ್ ಪದವಿ ಕಾಲೇಜು, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.

ಭಾಗ್ಯ ಮತ್ತು ಸ್ನೇಹಿತೆಯರು, ಆನೇಕಲ್, ಬೆಂಗಳೂರು

ರಮಣಶ್ರೀ ಕ್ಯಾಲಿಫೋರ್ನಿಯಾ ಗಾರ್ಡನ್ಸ್ ಅಪಾರ್ಟ್‌ಮೆಂಟ್ ಗೆಳತಿಯರು, ಬೆಂಗಳೂರು

ಸಿಬ್ಬಂದಿ, ಜಿಆರ್‌ವಿ ಇಂಗ್ಲಿಷ್ ಪ್ರೌಢಶಾಲೆ, ಗಂಗಾನಗರ, ಬೆಂಗಳೂರು

ಪ್ರತಿಮ ಮತ್ತು ಸ್ನೇಹಿತೆಯರು, ಅರಣ್ಯ ಇಲಾಖೆ, ಮಲ್ಲೇಶ್ವರ

ಇಎಸ್‌ಐ ಆಸ್ಪತ್ರೆ ಸಿಬ್ಬಂದಿ, ಇಂದಿರಾನಗರ

ಚಿನ್ನಿ, ಬನಶಂಕರಿ

ಪ್ರಶಾಂತಿ ಮತ್ತು ಗೆಳತಿಯರು, ರಾಜಾಜಿನಗರ, ಬೆಂಗಳೂರು

ಪ್ರಾಚಾರ್ಯರು ಮತ್ತು ಸಿಬ್ಬಂದಿ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬೆಂಗಳೂರು

ವಾಸವಿ ವನಿತಾ ಸಂಘದ ಸದಸ್ಯೆಯರು, ರಾಮನಗರ

ರಮ್ಯಾ ಮತ್ತು ಸ್ನೇಹಿತೆಯರು, ಮಾಸ್ಟರ್ಸ್ ಪಿಯು ಕಾಲೇಜ್, ಟಿ. ದಾಸರಹಳ್ಳಿ

ತನ್ವಿತಾ ರಾಮಗೊಂಡಾಳೆ, ಬೆಂಗಳೂರು

ಸಮಾಜ ಕಲ್ಯಾಣ ಇಲಾಖೆಯ ಸಹೋದ್ಯೋಗಿಗಳು, ಬೆಂಗಳೂರು

ದಿವ್ಯಾ ಮತ್ತು ಸ್ನೇಹಿತೆಯರು, ನಾಗರಭಾವಿ, ಬೆಂಗಳೂರು

ಭಾರತಿ ಮತ್ತು ಸ್ನೇಹಿತೆಯರು, ಬಿಟಿಎಂ ಬಡಾವಣೆ, ಬೆಂಗಳೂರು

ಉಮಾ ಮತ್ತು ಸ್ನೇಹಿತೆಯರು, ಮುತ್ಯಾಲನಗರ, ಬೆಂಗಳೂರು

ಏಕದಿನ ಕ್ರಿಕೆಟ್ ವಿಶ್ವಕಪ್ – 2023

ಪಾಕಿಸ್ತಾನ ಎದುರು ಗೆದ್ದ ಆಸ್ಟ್ರೇಲಿಯಾ • ಶಹೀನ್ ಆಫ್ರಿದಿಗೆ ಐದು ವಿಕೆಟ್ • ಬಾಬರ್ ಬಳಗಕ್ಕೆ ಎರಡನೇ ಸೋಲು

ವಾರ್ನರ್–ಮಾರ್ಷ್ ಅಬ್ಬರಕ್ಕೆ ಜಯ

• ಗಿರೀಶ ದೊಡ್ಡಮನಿ

ಬೆಂಗಳೂರು: 'ಕ್ಯಾಚ್‌ಗಳು ಮ್ಯಾಚ್ ಗೆಲ್ಲಿಸುತ್ತವೆ' ಎಂಬ ಹಳೆಯ ಗಾದೆ ಶುಕ್ರವಾರ ಮತ್ತೊಮ್ಮೆ ನಿಜವಾಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ವಿಶ್ವಕಪ್ ಪಂದ್ಯದ ಐದನೇ ಓವರ್‌ನಲ್ಲಿ ಪಾಕಿಸ್ತಾನ ತಂಡದ ಉಸಾಮ ಮೀರ್ ನೆಲಕ್ಕೆ ಚೆಲ್ಲಿದ ಕ್ಯಾಚ್‌ನಿಂದಾಗಿ ರನ್‌ಗಳ ಹೊಳೆಯೇ ಹರಿಯಿತು. ಜೀವದಾನ ಪಡೆದ ಡೇವಿಡ್ ವಾರ್ನರ್ ಅಬ್ಬರದ ಶತಕ ಬಾರಿಸಿದರು. ಮಿಚೆಲ್ ಮಾರ್ಷ್ ಅವರೊಂದಿಗೆ ದ್ವಿಶತಕದ ಜೊತೆಯಾಟವನ್ನೂ ಆಡಿದರು. ಇದರಿಂದಾಗಿ ಆಸ್ಟ್ರೇಲಿಯಾ ತಂಡವು 62 ರನ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಪಾಕ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಫ್ಲ್ಯಾಟ್ ಪಿಚ್ ಮೇಲೆ ವಿಜೃಂಭಿಸಿದ ವಾರ್ನರ್ (163; 124ಎ, 4X14, 6X9) ಮತ್ತು ಮಾರ್ಷ್ (121; 108ಎ, 4X10, 6X9) ಅವರ ಶತಕಗಳಿಂದಾಗಿ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 367 ರನ್ ಗಳಿಸಿತು. ಅದಕ್ಕುತ್ತರವಾಗಿ ಪಾಕ್ ತಂಡಕ್ಕೆ 45.3 ಓವರ್‌ಗಳಲ್ಲಿ 305 ರನ್‌ಗಳಿಸಲಷ್ಟೇ ಸಾಧ್ಯವಾಯಿತು.

ಇನಿಂಗ್ಸ್‌ನ ಐದನೇ ಓವರ್‌ನಲ್ಲಿ ಶಹೀನ್ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿದ ವಾರ್ನರ್ ಅವರ ಕ್ಯಾಚ್ ಅನ್ನು ಫೀಲ್ಡರ್ ಉಸಾಮ ಮೀರ್ ಕೈಚೆಲ್ಲಿದರು. ಇದು ವಾರ್ನರ್‌ಗೆ ವರದಾನವಾಯಿತು. ಕೇವಲ 85 ಎಸೆತಗಳಲ್ಲಿ ಶತಕದ ಗಡಿ ಮುಟ್ಟಿದರು. ಮೇಲಕ್ಕೆ ಜಿಗಿದು ಗಾಳಿ ಗುದ್ದಿ ಸಂಭ್ರಮಿಸಿದ ಅವರು 'ಪುಷ್ಪ' ಚಿತ್ರದ ಅಲ್ಲು ಅರ್ಜುನ್ ಅವರ ಶೈಲಿಯನ್ನು ತೋರಿಸಿದರು.

ನಂತರದ ಎಸೆತದಲ್ಲಿ ಮಾರ್ಷ್ ಕೂಡ ಶತಕ ಗಳಿಸಿದರು. ಅವರು 101 ಎಸೆತಗಳಲ್ಲಿ ಶತಕ ದಾಟಿದರು. ಅದರಲ್ಲಿ 10 ಬೌಂಡರಿಗಳಿದ್ದವು. ಇಬ್ಬರೂ ತಲಾ ಆರು ಸಿಕ್ಸರ್ ಹೊಡೆದರು. ಆಸ್ಟ್ರೇಲಿಯಾ ತಂಡವು ಇನಿಂಗ್ಸ್‌ನಲ್ಲಿ ಒಟ್ಟು 19 ಸಿಕ್ಸರ್‌ಗಳು ದಾಖಲಾದವು.

ಅಡ್ಡಿಯಾದ ಶಹೀನ್: ಪಾಕ್ ತಂಡದ ವೇಗಿ ಶಹೀನ್ ಅಫ್ರಿದಿ (54ಕ್ಕೆ5) ತಡವಾಗಿ ಯಶಸ್ಸು ಗಳಿಸಿದರು. ಆದರೆ ಆಸ್ಟ್ರೇಲಿಯಾ ತಂಡವು ನಾಲ್ಕನೂರು ರನ್‌ಗಳ ಮೊತ್ತ ದಾಟದಂತೆ ತಡೆದರು. ವಾರ್ನರ್ ಮತ್ತು ಮಾರ್ಷ್ ಮೊದಲ ವಿಕೆಟ್ ಜೊತೆಯಾಟದಲ್ಲಿ 259 ರನ್ ಸೇರಿಸಿ ಗಟ್ಟಿ ಬುನಾದಿ ಹಾಕಿದರು. ಇದರಿಂದಾಗಿ ತಂಡವು 400 ರನ್‌ಗಳಿಗಿಂತಲೂ ಹೆಚ್ಚಿನ ಮೊತ್ತವನ್ನು ಗಳಿಸುವ ಸಾಧ್ಯತೆ ಇತ್ತು. 34ನೇ ಓವರ್‌ನಲ್ಲಿ ಮಾರ್ಷ್ ವಿಕೆಟ್ ಗಳಿಸುವ ಮೂಲಕ ಜೊತೆಯಾಟ ಮುರಿದ ವೇಗಿ ಶಹೀನ್ ಅಫ್ರಿದಿ ಪಾಕ್ ತಂಡಕ್ಕೆ ತುಸು ಸಮಾಧಾನ ತಂದರು.

ಮಾರ್ಷ್ ನಂತರ ಬಂದ ಯಾವ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್ ಆಡಲಿಲ್ಲ. ವಾರ್ನರ್ ಕ್ರೀಸ್‌ನಲ್ಲಿರುವವರೆಗೆ ರನ್‌ಗಳು ಹರಿದವು. ಅವರು 43ನೇ ಓವರ್‌ನಲ್ಲಿ ಹ್ಯಾರಿಸ್ ಬೌಲಿಂಗ್‌ನಲ್ಲಿ ಶದಾಬ್‌ಗೆ ಕ್ಯಾಚಿತ್ತರು.

ಗುರಿ ಬೆನ್ನಟ್ಟಿದ ಪಾಕ್ ತಂಡಕ್ಕೂ ಉತ್ತಮ ಆರಂಭ ದೊರೆಯಿತು. ಅರ್ಧಶತಕ ಬಾರಿಸಿದ ಶಫೀಕ್ ಮತ್ತು ಇಮಾಮ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 134 ರನ್ ಗಳಿಸಿದರು. ಆದರೆ ಮೊಹಮ್ಮದ್ ರಿಜ್ವಾನ್ ಎಂದಿನಂತೆ ಹೋರಾಟ ಮಾಡಿದರು. 46 ರನ್ ಗಳಿಸಿದರು. ಸೌದ್ ಶಕೀಲ್ 30 ರನ್ ಗಳಿಸಿದರು. ಆದರೆ ಉಳಿದ ಬ್ಯಾಟರ್‌ಗಳಿಗೆ ಹೋರಾಟ ಸಾಧ್ಯವಾಗಲಿಲ್ಲ.

ಪಾಕ್ ಆಟಗಾರರಿಗೂ ಜೀವದಾನಗಳು ಲಭಿಸಿದ್ದವು. 12ನೇ ಓವರ್‌ನಲ್ಲಿ ಶಫೀಕ್ ಅವರ ಕ್ಯಾಚ್ ಅನ್ನು ಪಡೆಯುವಲ್ಲಿ ಸೀನ್ ಅಬಾಟ್ ಲೋಪವೆಸಗಿ 'ಸಿಕ್ಸರ್' ಕಾಣಿಕೆ ಕೊಟ್ಟರು. 18ನೇ ಓವರ್‌ನಲ್ಲಿ ಮ್ಯಾಕ್ಸ್‌ವೆಲ್ ಎಸೆತದಲ್ಲಿ ಇಮಾಮ್ ಕೊಟ್ಟ ಕ್ಯಾಚ್ ಅನ್ನು ಕಮಿನ್ಸ್ ಬಿಟ್ಟರು. ಆದರೆ ಈ ಅವಕಾಶಗಳನ್ನು ಬ್ಯಾಟರ್‌ಗಳು ಬಳಸಿಕೊಳ್ಳಲಿಲ್ಲ.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 367 (ಡೇವಿಡ್ ವಾರ್ನರ್ 163, ಮಿಚೆಲ್ ಮಾರ್ಷ್ 121, ಮಾರ್ಕಸ್ ಸ್ಟೋಯಿನಿಸ್ 21, ಜೋಷ್ ಇಂಗ್ಲಿಸ್ 13, ಶಾಹೀನ್ ಅಫ್ರಿದಿ 54ಕ್ಕೆ5, ಹ್ಯಾರಿಸ್ ರವೂಫ್ 83ಕ್ಕೆ3, ಉಸಾಮ ಮೀರ್ 82ಕ್ಕೆ1) ಪಾಕಿಸ್ತಾನ: 45.3 ಓವರ್‌ಗಳಲ್ಲಿ 305 (ಅಬ್ದುಲ್ಲಾ ಶಫೀಕ್ 64, ಇಮಾಮ್ ಉಲ್ ಹಕ್ 70, ಮೊಹಮ್ಮದ್ ರಿಜ್ವಾನ್ 46, ಸೌದ್ ಶಕೀಲ್ 30, ಇಫ್ತಿಕಾರ್ ಅಹಮದ್ 26, ಪ್ಯಾಟ್ ಕಮಿನ್ಸ್ 62ಕ್ಕೆ2, ಆ್ಯಡಂ ಜಂಪಾ 53ಕ್ಕೆ4, ಮಾರ್ಕಸ್ ಸ್ಟೊಯಿನಿಸ್ 40ಕ್ಕೆ2) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 62 ರನ್ ಜಯ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡದ ಬ್ಯಾಟರ್‌ಗಳಾದ ಮಿಚೆಲ್ ಮಾರ್ಷ್ ಹಾಗೂ ಡೇವಿಡ್ ವಾರ್ನರ್ ಶತಕ ಗಳಿಸಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಹೆಚ್ಚು ಬಾರಿ 150+ ರನ್ ಗಳಿಸಿದ ಬ್ಯಾಟರ್‌ಗಳು (ಏಕದಿನ ಕ್ರಿಕೆಟ್)

ಸ್ಕೋರ್	ಆಟಗಾರ	ದೇಶ
8	ರೋಹಿತ್ ಶರ್ಮಾ	ಭಾರತ
7	ಡೇವಿಡ್ ವಾರ್ನರ್	ಆಸ್ಟ್ರೇಲಿಯಾ
5	ಸಚಿನ್ ತೆಂಡೂಲ್ಕರ್	ಭಾರತ
5	ಕ್ರಿಸ್ ಗೇಲ್	ವೆಸ್ಟ್ ಇಂಡೀಸ್
5	ವಿರಾಟ್ ಕೊಹ್ಲಿ	ಭಾರತ

ಮಾವನ ದಾಖಲೆ ಸರಿಗಟ್ಟಿದ ಅಳಿಯ

ಪಾಕಿಸ್ತಾನ ತಂಡದ ವೇಗಿ ಶಹೀನ್ ಅಫ್ರಿದಿ ಅವರು ತಮ್ಮ ಮಾವ ಶಾಹೀದ್ ಅಫ್ರಿದಿ ಅವರ ದಾಖಲೆಯನ್ನು ಶುಕ್ರವಾರ ಸರಿಗಟ್ಟಿದರು.

ಏಕದಿನ ವಿಶ್ವಕಪ್ ಕ್ರಿಕೆಟ್‌ನಲ್ಲಿ ಐದು ವಿಕೆಟ್ ಗೊಂಚಲನ್ನು ಎರಡು ಬಾರಿ ಪಡೆದ ದಾಖಲೆ ಶಾಹೀದ್ ಹೆಸರಲ್ಲಿ ಇದೆ. ಇಲ್ಲಿ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಶಹೀನ್ ಐದು ವಿಕೆಟ್ ಪಡೆದರು. ವಿಶ್ವಕಪ್ ಟೂರ್ನಿಗಳಲ್ಲಿ ಅವರು ಎರಡನೇ ಬಾರಿ ಈ ಸಾಧನೆ ಮಾಡಿದರು.

ಕ್ರೀಡಾಂಗಣ ಶೇ 70ರಷ್ಟು ಭರ್ತಿ

ಚಿನ್ನಸ್ವಾಮಿ ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿಯು ಶುಕ್ರವಾರ ಶೇ 70ರಷ್ಟು ಭರ್ತಿಯಾಗಿತ್ತು. 34 ಸಾವಿರ ಪ್ರೇಕ್ಷಕರ ಆಸನ ಸಾಮರ್ಥ್ಯದ ಗ್ಯಾಲರಿ ಇಲ್ಲಿದೆ. ಭಾರತ ಆಡದಿರುವ ಪಂದ್ಯಕ್ಕೂ ಇಷ್ಟು ಜನ ಸೇರಿರುವುದು ವಿಶೇಷ ಎಂದು ಆಯೋಜಕರು ಸಂತಸ ವ್ಯಕ್ತಪಡಿಸಿದ್ದಾರೆ.

ಹ್ಯಾರಿಸ್ ಓವರ್‌ನಲ್ಲಿ 24 ರನ್!

ವೇಗಿ ಹ್ಯಾರಿಸ್ ರವೂಫ್ ತಮ್ಮ ಮೊದಲ ಓವರ್‌ನಲ್ಲಿಯೇ ದಂಡನೆಗೊಳಗಾದರು. ನಾಯಕ ಬಾಬರ್ ಆಜಂ ಒಂಬತ್ತನೇ ಓವರ್ ಹಾಕಲು ಹ್ಯಾರಿಸ್‌ಗೆ ಚೆಂಡು ಕೊಟ್ಟರು. ಇದೊಂದೇ ಓವರ್‌ನಲ್ಲಿ ಬ್ಯಾಟರ್‌ಗಳು 24 ರನ್ ಸೂರೆ ಮಾಡಿದರು. ಅದರಲ್ಲಿ ವಾರ್ನರ್ ಒಂದು ಬೌಂಡರಿ ಹಾಗೂ ಸಿಕ್ಸರ್‌ನೊಂದಿಗೆ ಹನ್ನೊಂದು ರನ್ ಗಳಿಸಿದರು. ಮಾರ್ಷ್ ಸತತ ಮೂರು ಬೌಂಡರಿ ಹೊಡೆದರು. ಸಾಲದ್ದಕ್ಕೆ ಹ್ಯಾರಿಸ್ ಒಂದು ವೈಡ್ ಕೂಡ ಹಾಕಿದರು.

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ನ್ಯೂಜಿಲೆಂಡ್	4	4	0	0	8	1.923
ಭಾರತ	4	4	0	0	8	1.659
ದಕ್ಷಿಣ ಆಫ್ರಿಕಾ	3	2	1	0	4	1.385
ಆಸ್ಟ್ರೇಲಿಯಾ	4	2	2	0	4	-0.193
ಪಾಕಿಸ್ತಾನ	4	2	2	0	4	-0.456
ಇಂಗ್ಲೆಂಡ್	3	1	2	0	2	-0.084
ಬಾಂಗ್ಲಾದೇಶ	4	1	3	0	2	-0.784
ನೆದರ್ಲೆಂಡ್ಸ್	3	1	2	0	2	-0.993
ಅಫ್ಗಾನಿಸ್ತಾನ	4	1	3	0	2	-1.250
ಶ್ರೀಲಂಕಾ	3	0	3	0	0	-1.532

ಆರಂಭಿಕ ಬ್ಯಾಟರ್‌ಗಳಿಬ್ಬರೂ ಶತಕ ಗಳಿಸಿದ್ದು (ವಿಶ್ವಕಪ್ ಪಂದ್ಯ)

ಆಟಗಾರರು	ದೇಶ	ವಿರುದ್ಧ	ಸ್ಥಳ	ವರ್ಷ
ಉಪುಲ್ ತರಂಗಾ–ತಿಲಕರತ್ನೆ ದಿಲ್ಶಾನ್	ಶ್ರೀಲಂಕಾ	ಜಿಂಬಾಬ್ವೆ	ಪಲ್ಲೆಕೆಲೆ	2011
ಉಪುಲ್ ತರಂಗಾ–ತಿಲಕರತ್ನೆ ದಿಲ್ಶಾನ್	ಶ್ರೀಲಂಕಾ	ಇಂಗ್ಲೆಂಡ್	ಕೊಲಂಬೊ	2011
ರೋಹಿತ್ ಶರ್ಮಾ–ಕೆ.ಎಲ್. ರಾಹುಲ್	ಭಾರತ	ಶ್ರೀಲಂಕಾ	ಲೀಡ್ಸ್	2019
ಡೇವಿಡ್ ವಾರ್ನರ್–ಮಿಚೆಲ್ ಮಾರ್ಷ್	ಆಸ್ಟ್ರೇಲಿಯಾ	ಪಾಕಿಸ್ತಾನ	ಬೆಂಗಳೂರು	2023

ಸಿಎಂ, ಡಿಸಿಎಂ ಪಂದ್ಯ ವೀಕ್ಷಣೆ

ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ವೀಕ್ಷಿಸಿದರು. ಅವರನ್ನು ಬಿಸಿಸಿಐ ಪದಾಧಿಕಾರಿ ರಾಜೀವ ಶುಕ್ಲಾ, ಹಿರಿಯ ಕ್ರಿಕೆಟಿಗ ಬ್ರಿಜೇಶ್ ಪಟೇಲ್ ಮತ್ತು ಕೆಎಸ್‌ಸಿಎ ಅಧಿಕಾರಿಗಳು ಸ್ವಾಗತಿಸಿದರು. ಅವರೊಂದಿಗೆ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜ್ ಹಾಜರಿದ್ದರು.

'ಪಾಕ್ ಜೆರ್ಸಿಗೆ ಅವಕಾಶವಿಲ್ಲ'

ನಾವು (ಭಾರತ) ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಆತಿಥ್ಯ ವಹಿಸಿದ್ದೇವೆ. ಆದರೆ ಕ್ರೀಡಾಂಗಣದೊಳಗೆ ಪಾಕಿಸ್ತಾನ ತಂಡದ ಜೆರ್ಸಿ ತೊಟ್ಟು ಪ್ರವೇಶಿಸಲು ಅವಕಾಶ ಕೊಡುತ್ತಿಲ್ಲ. @ಬಿಸಿಸಿಐ @ಐಸಿಸಿ ಆಸ್ಟ್ರೇಲಿಯಾ ಜೆರ್ಸಿ ತೊಡಲು ಅವಕಾಶ ಕೊಟ್ಟಿದ್ದಾರೆ. ಒಬ್ಬ ತಟಸ್ಥ ವ್ಯಕ್ತಿಯಾಗಿ ನನಗೆ ಯಾವುದೇ ದೇಶವನ್ನು ಬೆಂಬಲಿಸುವ ಸ್ವಾತಂತ್ರ್ಯ ಇದೆ. ಮತ್ಯಾಕೆ ಈ ಗತಿ?

–ಮುರಳಿ ತಳಲೂರು

ಪಂದ್ಯ ವೀಕ್ಷಿಸುವಾಗ ಕೆಲವರು ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗುವುದನ್ನು ತಡೆಯುತ್ತಿರುವುದು ವಿಷಾದಕರ. ಇದು ಕ್ರೀಡೆಯ ಆಶಯದ ವಿರುದ್ಧ ನಿಲುವು. ಈ ರೀತಿ ಮಾಡಿದ ಅಧಿಕಾರಿಯು ಎಲ್ಲ ಭಾರತೀಯರ ಪ್ರತಿನಿಧಿಯಲ್ಲ. ಜನರು ಆಟದ ಸಂತಸವನ್ನು ಆಸ್ವಾದಿಸಲು ಭದ್ರತಾ ಸಿಬ್ಬಂದಿ ಅನುಕೂಲ ಮಾಡಿಕೊಡಬೇಕು.

–ಮೊಮಿನ್ ಸಕೀಬ್

ದಕ್ಷಿಣ ಆಫ್ರಿಕಾ– ಇಂಗ್ಲೆಂಡ್ ನಡುವಣ ಪೈಪೋಟಿ ಇಂದು • ಡಿ ಕಾಕ್ ಮೇಲೆ ಚಿತ್ತ

ಆಘಾತದಿಂದ ಹೊರಬರುವ ಪ್ರಯತ್ನ

ಇಂಗ್ಲೆಂಡ್ ನಾಯಕ ಜೋಸ್ ಬಟ್ಲರ್ ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ

ಮುಂಬೈ (ಪಿಟಿಐ): ಕಳೆದ ಪಂದ್ಯದಲ್ಲಿ ಎದುರಾಗಿದ್ದ ಅನಿರೀಕ್ಷಿತ ಆಘಾತದಿಂದ ಹೊರಬರುವ ಪ್ರಯತ್ನದಲ್ಲಿರುವ ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಶನಿವಾರ ಸೆಣಸಾಟ ನಡೆಸಲಿವೆ.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಗೆದ್ದು ಪಾಯಿಂಟ್ ಪಟ್ಟಿಯಲ್ಲಿ ಮೇಲಕ್ಕೇರುವ ಗುರಿಯನ್ನು ಉಭಯ ತಂಡಗಳು ಹೊಂದಿವೆ.

ಈ ಟೂರ್ನಿಯಲ್ಲಿ ಇದುವರೆಗಿನ ಗರಿಷ್ಠ ಮೊತ್ತ (5ಕ್ಕೆ 428) ಪೇರಿಸಿದ್ದ ದಕ್ಷಿಣ ಆಫ್ರಿಕಾ ತಂಡ, ಧರ್ಮಶಾಲಾದಲ್ಲಿ ನಡೆದಿದ್ದ ಹಿಂದಿನ ಪಂದ್ಯದಲ್ಲಿ ನೆದರ್ಲೆಂಡ್ಸ್ ಎದುರು ಆಘಾತ ಅನುಭವಿಸಿತ್ತು. ಅದೇ ರೀತಿ, ಇಂಗ್ಲೆಂಡ್ ತಂಡ ದೆಹಲಿಯಲ್ಲಿ ನಡೆದಿದ್ದ ಪಂದ್ಯದಲ್ಲಿ ಅಫ್ಗಾನಿಸ್ತಾನ ಎದುರು ಪರಾಭವಗೊಂಡಿತ್ತು.

ತೆಂಬಾ ಬವುಮಾ ಬಳಗ ಮೊದಲ ಎರಡು ಪಂದ್ಯಗಳಲ್ಲಿ ಆಸ್ಟ್ರೇಲಿಯಾ ಮತ್ತು ಶ್ರೀಲಂಕಾ ತಂಡಗಳನ್ನು 100 ರನ್‌ಗಳಿಗೂ ಅಧಿಕ ಅಂತರದಿಂದ ಮಣಿಸಿ ಟೂರ್ನಿಯಲ್ಲಿ ಉತ್ತಮ ಆರಂಭ ಪಡೆದಿತ್ತು. ಆದರೆ ನೆದರ್ಲೆಂಡ್ಸ್ ಕೈಯಲ್ಲಿ ಎದುರಾದ ಸೋಲು, ಒತ್ತಡದ ಸನ್ನಿವೇಶದಲ್ಲಿ ತಂಡದ ದೌರ್ಬಲ್ಯ ಏನೆಂಬುದನ್ನು ಎತ್ತಿ ತೋರಿಸಿತ್ತು.

ಆದರೂ, ಒಂದು ತಂಡವಾಗಿ ಹೋರಾಡುವಲ್ಲಿ ವಿಫಲವಾಗಿರುವ ಜೋಸ್ ಬಟ್ಲರ್ ಬಳಗವನ್ನು ಮಣಿಸಲು ಬೇಕಾದಷ್ಟು ಸಾಮರ್ಥ್ಯವನ್ನು ದಕ್ಷಿಣ ಆಫ್ರಿಕಾ ಹೊಂದಿದೆ.

ಸತತ ಎರಡು ಶತಕ ಗಳಿಸಿದ್ದ ಕ್ವಿಂಟನ್ ಡಿ ಕಾಕ್ ಅಲ್ಲದೆ ಏಡನ್ ಮರ್ಕರಮ್ ಮತ್ತು ರಸಿ ವ್ಯಾನ್ ಡೆರ್ ಡಸೆ ಅವರು ಉತ್ತಮ ಫಾರ್ಮ್‌ನಲ್ಲಿದ್ದಾರೆ. ಡಿ ಕಾಕ್ ತಮ್ಮ ಫಾರ್ಮ್‌ಅನ್ನು ಇಂಗ್ಲೆಂಡ್ ವಿರುದ್ಧವೂ ಮುಂದುವರಿಸುವ ವಿಶ್ವಾಸಲ್ಲಿದ್ದಾರೆ.

ವೇಗದ ಬೌಲರ್‌ಗಳಾದ ಕಗಿಸೊ ರಬಾಡ (7 ವಿಕೆಟ್) ಹಾಗೂ ಮಾರ್ಕೊ ಜಾನ್ಸೆನ್ (6 ವಿಕೆಟ್) ಅವರು ಎದುರಾಳಿ ಬ್ಯಾಟರ್‌ಗಳಿಗೆ ಸವಾಲಾಗಬಲ್ಲರು. ಇದುವರೆಗೆ ಪ್ರಭಾವಿ ಎನಿಸದ ಲುಂಗಿ ಗಿಡಿ ಅವರೂ ಫಾರ್ಮ್ ಕಂಡುಕೊಂಡರೆ, ಇಂಗ್ಲೆಂಡ್‌ಗೆ ದೊಡ್ಡ ಮೊತ್ತ ಪೇರಿಸುವುದು ಕಷ್ಟವಾಗಲಿದೆ.

ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಕೈಯಲ್ಲಿ 'ಪೆಟ್ಟು' ತಿಂದಿದ್ದ ಬಟ್ಲರ್ ಬಳಗ, ಬಾಂಗ್ಲಾದೇಶ ಎದುರು ಗೆದ್ದಿತ್ತು. ಆದರೆ ಅಫ್ಗನ್ ಎದುರು ಮುಗ್ಗರಿಸಿತ್ತು.

ಮೂರು ಪಂದ್ಯಗಳಲ್ಲಿ ಕ್ರಮವಾಗಿ 43, 20 ಹಾಗೂ 9 ರನ್ ಗಳಿಸಿರುವ ಬಟ್ಲರ್ ಅವರಿಂದ ತಂಡ ಉತ್ತಮ ಆಟ ನಿರೀಕ್ಷಿಸುತ್ತಿದೆ. ಲಿಯಾಮ್ ಲಿವಿಂಗ್‌ಸ್ಟೋನ್ (ಮೂರು ಪಂದ್ಯಗಳಲ್ಲಿ ಕ್ರಮವಾಗಿ 20, 0, 10 ರನ್) ಅವರ ಕಳಪೆ ಫಾರ್ಮ್ ಚಿಂತೆಗೆ ಕಾರಣವಾಗಿದೆ.

ಎರಡು ಅರ್ಧಶತಕಗಳನ್ನು ಗಳಿಸಿರುವ ಜೋ ರೂಟ್ ಮತ್ತು ಒಂದು ಶತಕ ಹೊಡೆದಿರುವ ಡೇವಿಡ್ ಮಲಾನ್ ಹೊರತುಪಡಿಸಿ, ಇತರ ಬ್ಯಾಟರ್‌ಗಳಿಂದ ಇನ್ನೂ ದೊಡ್ಡ ಮೊತ್ತ ಬಂದಿಲ್ಲ.

ಕ್ವಿಂಟನ್ ಡಿ ಕಾಕ್ –ಪಿಟಿಐ ಚಿತ್ರ

ಸ್ಟೋಕ್ಸ್ ಆಡುವ ಸಾಧ್ಯತೆ

ಆಲ್‌ರೌಂಡರ್ ಬೆನ್‌ಸ್ಟೋಕ್ಸ್ ಅವರು ಈ ಪಂದ್ಯದಲ್ಲಿ ಕಣಕ್ಕಿಳಿಯುವ ವಿಶ್ವಾಸವನ್ನು ಇಂಗ್ಲೆಂಡ್ ತಂಡ ಹೊಂದಿದೆ. ಗಾಯದಿಂದ ಚೇತರಿಸಿಕೊಂಡಿರುವ ಅವರು ಸಹ ಆಟಗಾರರ ಜತೆ ಅಭ್ಯಾಸ ನಡೆಸಿದ್ದಾರೆ. ಸೊಂಟ ನೋವಿನಿಂದ ಬಳಲಿದ್ದ ಸ್ಟೋಕ್ಸ್, ಮೊದಲ ಮೂರು ಪಂದ್ಯಗಳಲ್ಲಿ ಆಡಿರಲಿಲ್ಲ.

'ಬೆನ್ ಅವರು ಪೂರ್ಣ ಪ್ರಮಾಣದಲ್ಲಿ ಅಭ್ಯಾಸ ನಡೆಸಿದ್ದು, ಕಣಕ್ಕಿಳಿಯಲು ಸಜ್ಜಾಗಿದ್ದಾರೆ. ಅವರ ಉಪಸ್ಥಿತಿ ಸಹ ಆಟಗಾರರಿಗೆ ಹುರುಪು ನೀಡಲಿದೆ' ಎಂದು ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ ಹೇಳಿದ್ದಾರೆ.

ಬಲಾಬಲ

ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಉಭಯ ತಂಡಗಳು ಏಳು ಸಲ ಎದುರಾಗಿದ್ದು, ಇಂಗ್ಲೆಂಡ್ 4–3 ರಿಂದ ಮುನ್ನಡೆಯಲ್ಲಿದೆ. ವಾಂಖೆಡೆ ಕ್ರೀಡಾಂಗಣದಲ್ಲಿ ಇವೆರಡು ತಂಡಗಳು ಇದೇ ಮೊದಲ ಬಾರಿ ಮುಖಾಮುಖಿಯಾಗಲಿವೆ.

ಏಕದಿನ ಕ್ರಿಕೆಟ್‌ನಲ್ಲಿ ಎರಡು ತಂಡಗಳು 69 ಸಲ ಹಣಾಹಣಿ ನಡೆಸಿವೆ. ದಕ್ಷಿಣ ಆಫ್ರಿಕಾ 33 ರಲ್ಲಿ ಹಾಗೂ ಇಂಗ್ಲೆಂಡ್ 30 ರಲ್ಲಿ ಗೆದ್ದಿವೆ. ಒಂದು ಪಂದ್ಯ ಟೈ ಆಗಿದ್ದು, ಐದು ಪಂದ್ಯಗಳು ರದ್ದುಗೊಂಡಿವೆ.

ವಾಂಖೆಡೆ ಕ್ರೀಡಾಂಗಣದ ಪಿಚ್ ಬ್ಯಾಟಿಂಗ್ ಸ್ನೇಹಿಯಾಗಿದ್ದು, ಬೃಹತ್ ಮೊತ್ತದ ಹೋರಾಟ ನಿರೀಕ್ಷಿಸಲಾಗಿದೆ. ಈ ವರ್ಷದ ಆರಂಭದಲ್ಲಿ ಐಪಿಎಲ್ ಪಂದ್ಯಗಳು ನಡೆದ ಬಳಿಕ ಅಂಗಳದ ಔಟ್‌ಫೀಲ್ಡ್‌ಅನ್ನು ಹೊಸದಾಗಿ ಸಿದ್ಧಪಡಿಸಲಾಗಿದೆ.

ಪಂದ್ಯ ಆರಂಭ: ಮಧ್ಯಾಹ್ನ 2
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮುಂದಿನ ಪಂದ್ಯಕ್ಕೆ ಹಾರ್ದಿಕ್ ಅಲಭ್ಯ

ಹಾರ್ದಿಕ್

ನವದೆಹಲಿ (ಎಎಫ್‌ಪಿ): ಭಾರತದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಕಾಲಿನ ಗಾಯದ ಕಾರಣ ಭಾನುವಾರ ನ್ಯೂಜಿಲೆಂಡ್ ವಿರುದ್ಧ ನಡೆಯಲಿರುವ ವಿಶ್ವಕಪ್ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಶುಕ್ರವಾರ ಹೇಳಿಕೆಯಲ್ಲಿ ತಿಳಿಸಿದೆ.

ಬಾಂಗ್ಲಾದೇಶ ವಿರುದ್ಧ ಪಂದ್ಯದಲ್ಲಿ ತಮ್ಮದೇ ಬೌಲಿಂಗ್‌ನಲ್ಲಿ (ಪಂದ್ಯದ 9ನೇ ಓವರ್) ಲಿಟ್ಟನ್ ದಾಸ್ ಅವರ ನೇರ ಡ್ರೈವ್ ತಡೆಯುವ ಯತ್ನದಲ್ಲಿ ಚೆಂಡು ಅವರ ಎಡಗಾಲಿನ ಕೆಳಭಾಗಕ್ಕೆ ಬಡಿದಿತ್ತು. ನಂತರ ಅವರು ಬೌಲಿಂಗ್ ಮುಂದುವರಿಸಲಾಗದೇ ಕುಂಟುತ್ತ ಕ್ರೀಡಾಂಗಣದಿಂದ ನಿರ್ಗಮಿಸಿದ್ದರು.

ಪಾಂಡ್ಯ ಅವರು ಭಾನುವಾರ ಧರ್ಮಶಾಲಾದಲ್ಲಿ ನಡೆಯುವ ಪಂದ್ಯಕ್ಕೆ ತಂಡದ ಜೊತೆ ತೆರಳುವುದಿಲ್ಲ. ಅದರ ಬದಲು ಅವರು ನೇರವಾಗಿ ಲಖನೌದಲ್ಲಿ ತಂಡವನ್ನು ಸೇರಿಕೊಳ್ಳಲಿದ್ದಾರೆ. ಅಲ್ಲಿ ಅ. 29ರಂದು ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ ಎಂದು ಬಿಸಿಸಿಐ ಕಾರ್ಯದರ್ಶಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪಾಂಡ್ಯ ಗಾಯಗೊಂಡಾಗ, ಅವರ ಅಪೂರ್ಣ ಓವರ್‌ನ ಕೊನೆಯ ಮೂರು ಎಸೆತಗಳನ್ನು ವಿರಾಟ್ ಕೊಹ್ಲಿ ಬೌಲ್ ಮಾಡಿದ್ದರು.

ಲಂಕಾಕ್ಕೆ ಜಯದ ಗುರಿ

ಲಖನೌ (ಪಿಟಿಐ): ಪ್ರಬಲ ದಕ್ಷಿಣ ಆಫ್ರಿಕಾ ತಂಡಕ್ಕೆ ಅನಿರೀಕ್ಷಿತ ಆಘಾತ ನೀಡಿದ ಉತ್ಸಾಹದಲ್ಲಿರುವ ನೆದರ್ಲೆಂಡ್ಸ್ ತಂಡ ಶನಿವಾರ ಇಲ್ಲಿ ನಡೆಯುವ ವಿಶ್ವಕಪ್ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಎದುರಿಸಲಿದೆ. ಆಡಿರುವ ಮೂರೂ ಪಂದ್ಯಗಳಲ್ಲಿ ಸೋಲುಂಡಿರುವ ಲಂಕನ್ನರು ಮೊದಲ ಗೆಲುವಿಗಾಗಿ ಹಾತೊರೆಯುತ್ತಿದ್ದಾರೆ.

ಧರ್ಮಶಾಲಾದಲ್ಲಿ ಕಳೆದ ಮಂಗಳವಾರ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಗೆಲ್ಲುವ ಮೂಲಕ ನೆದರ್ಲೆಂಡ್ಸ್ ತಂಡ ಟೆಸ್ಟ್ ತಂಡವೊಂದರ ಎದುರು ಏಕದಿನ ಮಾದರಿಯಲ್ಲಿ ಮೊದಲ ಗೆಲುವು ದಾಖಲಿಸಿತ್ತು. ಇದು ತಂಡದ ನೈತಿಕ ಸ್ಥೈರ್ಯ ಹೆಚ್ಚಿಸಿದ್ದು, ಈಗ ಎರಡನೇ ಗೆಲುವಿನ ನಿರೀಕ್ಷೆಯಲ್ಲಿದೆ.

ಆದರೆ ತಂಡದ ಮೊದಲ ಮೂರು ಅಗ್ರ ಆಟಗಾರರಾದ– ವಿಕ್ರಮಜಿತ್ ಸಿಂಗ್, ಮ್ಯಾಕ್ಸ್ ಒ ಡೌಡ್ ಮತ್ತು ಕಾಲಿನ್ ಆ್ಯಕರ್‌ಮನ್ ಅವರು ತಂಡಕ್ಕೆ ಉತ್ತಮ ಆರಂಭ ನೀಡುತ್ತಿಲ್ಲ. ಹೀಗಾಗಿ ಮಧ್ಯಮ ಕ್ರಮಾಂಕದ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದೆ. ಆಲ್‌ರೌಂಡರ್ ಬಾಸ್ ಡಿ ಲೀಡೆ ಅವರು ಬೌಲಿಂಗ್‌ನಲ್ಲಿ ಮಿಂಚಿದ್ದಾರೆ. ಆದರೆ ಬ್ಯಾಟಿಂಗ್‌ನಲ್ಲಿ ನಿರೀಕ್ಷಿತ ಆಟವಾಡಿಲ್ಲ.

ಇನ್ನೊಂದೆಡೆ ಶ್ರೀಲಂಕಾಕ್ಕೆ ಬೌಲಿಂಗ್ ವಿಭಾಗದಲ್ಲಿ ಸಮಸ್ಯೆ ಎದುರಾಗಿದೆ. ತಂಡ ಸಾಂಘಿಕ ಪ್ರದರ್ಶನ ನೀಡಲು ಸಾಧ್ಯವಾಗುತ್ತಿಲ್ಲ. ಆ ತಂಡದ ಬ್ಯಾಟರ್‌ಗಳು ಗಮನಾರ್ಹ ಪ್ರದರ್ಶನ ನೀಡಿದ್ದಾರೆ. ಮೊದಲ ಎರಡು ಪಂದ್ಯಗಳಲ್ಲಿ 300ಕ್ಕೂ ಅಧಿಕ ಮೊತ್ತ ಕಲೆಹಾಕಿದ್ದರು. ಆದರೆ ಬೌಲಿಂಗ್ ಕೈಕೊಡುತ್ತಿದೆ. ಕೆಲವು ಬೌಲರ್‌ಗಳು ಗಾಯಾಳಾಗಿದ್ದಾರೆ. ಏಳು ವಿಕೆಟ್ ಪಡೆದಿರುವ ವೇಗಿ ದಿಲ್ಶನ್ ಮಧುಶಂಕ ಅವರೇ ತಂಡದ ಪ್ರಮುಖ ಬೌಲರ್ ಆಗಿ ಹೊರಹೊಮ್ಮಿದ್ದಾರೆ. ಆಸ್ಟ್ರೇಲಿಯಾ ವಿರುದ್ಧ ಇದೇ ಮೈದಾನದಲ್ಲಿ ಮಧುಶಂಕ ಉತ್ತಮ ಪ್ರದರ್ಶನ ನೀಡಿದ್ದಾರೆ.

ಡಚ್ ತಂಡ, ಎಡಗೈ ಸ್ಪಿನ್ನರ್ ರೊಲೋಫ್ ವಾನ್‌ಡೆರ್ ಮರ್ವ್ ಅವರಿಂದ ಹೆಚ್ಚಿನ ಕೊಡುಗೆ ನಿರೀಕ್ಷಿಸುತ್ತಿದೆ. ಪಿಚ್‌ನಲ್ಲಿ ಅವರಿಗೆ ನೆರವೂ ಸಿಗಬಹುದು.

ಪಂದ್ಯ ಆರಂಭ: ಬೆಳಿಗ್ಗೆ 10.30.

ಶ್ರೀಲಂಕಾ ತಂಡದ ಚಮಿಕ ಕರುಣರತ್ನೆ –ಪಿಟಿಐ ಚಿತ್ರ

ರಾಜ್ಯಮಟ್ಟದ ದಸರಾ ಕ್ರೀಡಾಕೂಟದ ಅಥ್ಲೆಟಿಕ್ಸ್

ಶಶಿಕಾಂತ್, ಸ್ನೇಹಾ ವೇಗದ ಸರದಾರರು

• ಮೋಹನ್ ಕುಮಾರ ಸಿ.

ಮೈಸೂರು: ಬೆಂಗಳೂರಿನ ವಿ.ಎ.ಶಶಿಕಾಂತ್ ಮತ್ತು ಮಂಗಳೂರಿನ ಎಸ್.ಎಸ್.ಸ್ನೇಹಾ ಇಲ್ಲಿ ನಡೆಯುತ್ತಿರುವ ಸಿ.ಎಂ ಕಪ್ ರಾಜ್ಯಮಟ್ಟದ ದಸರಾ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ವೇಗದ ರಾಜ ಹಾಗೂ ರಾಣಿಯಾಗಿ ಹೊರಹೊಮ್ಮಿದರು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 100 ಮೀ. ಓಟದ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಶಶಿಕಾಂತ್ 10.77 ಸೆಕೆಂಡುಗಳಲ್ಲಿ ಗೆಲುವಿನ ಗೆರೆ ದಾಟಿ ಚಿನ್ನ ಗೆದ್ದರೆ, ಬೆಂಗಳೂರಿನ ಆರ್ಯನ್ ಮನೋಜ್ ಬೆಳ್ಳಿ ಹಾಗೂ ದಕ್ಷಿಣ ಕನ್ನಡದ ಸಿಜನ್ ಥಾಮಸ್ ಕಂಚು ಗೆದ್ದರು.

ಮಹಿಳಾ ವಿಭಾಗದಲ್ಲಿ ಸ್ನೇಹಾ 11.73 ಸೆಕೆಂಡ್‌ನಲ್ಲಿ ಗುರಿ ದಾಟಿ ಚಿನ್ನ ಗೆದ್ದರೆ, ಬೆಂಗಳೂರಿನ ನಿಯೋಲ್ ಕಾರ್ನ್ ಬೆಳ್ಳಿ ಹಾಗೂ ಮಂಗಳೂರಿನ ಅರಣ್ಯ ಇಲಾಖೆಯ ಪಿ.ಜೆ.ಸ್ನೇಹಾ ಕಂಚಿನ ಪದಕ ಜಯಿಸಿದರು.

ಅಥ್ಲೆಟಿಕ್ಸ್ ಫಲಿತಾಂಶ: ಪುರುಷರು: 100 ಮೀ. ಓಟ: ವಿ.ಎ.ಶಶಿಕಾಂತ್ (ಬೆಂಗಳೂರು)–1, ಆರ್ಯನ್ ಮನೋಜ್ (ಬೆಂಗಳೂರು)–2, ಸಿಜನ್ ಥಾಮಸ್ (ದಕ್ಷಿಣ ಕನ್ನಡ)–3. ಕಾಲ: 10.77 ಸೆ.; 1,500 ಮೀ. ಓಟ: ಕೆ.ಸೂರ್ಯ (ಬೆಂಗಳೂರು)–1, ನಾಗರಾಜ ದಿವಟೆ (ಧಾರವಾಡ)–2, ಬಿ.ಡಿ.ಸಚಿನ್ (ಬೆಂಗಳೂರು)–3. ಕಾಲ: 4ನಿ, 07.51 ಸೆ.; ಟ್ರಿಪಲ್ ಜಂಪ್: ಕಪಿಲ್ ಆನಂದ (ಬೆಂಗಳೂರು)–1, ಬಿ.ಮಂಜುನಾಥ (ಮಂಡ್ಯ)–2, ಯಶಸ್ ಆರ್. ಗೌಡ (ಮಂಡ್ಯ)–3. ದೂರ: 15.52 ಮೀ.; ಡಿಸ್ಕಸ್ ಥ್ರೋ: ಮೊಹಮ್ಮದ್ ಸಖ್ಲೈನ್ (ಮೈಸೂರು)–1, ನಾಗೇಂದ್ರ ಅಣ್ಣಪ್ಪ (ಉತ್ತರ ಕನ್ನಡ)–2, ಎಂ.ಜಿ.ಬಸವರಾಜ (ಕೆಎಸ್‌ಪಿ)–3. ದೂರ: 53.97 ಮೀ.; 400 ಮೀಟರ್ಸ್ ಓಟ: ಜಿ.ಸಿ.ಗುರುಪ್ರಸಾದ್ (ಮೈಸೂರು)–1, ಶ್ರೀನಾಥ್ (ಬೆಳಗಾವಿ)–2, ನಿಖಿಲ್ ಸಿದ್ದರಾಮ್ (ಉಡುಪಿ)–3. ಕಾಲ: 48.50 ಸೆ.

ಮಹಿಳೆಯರು: 100 ಮೀಟರ್ಸ್ ಓಟ: ಎಸ್.ಎಸ್.ಸ್ನೇಹಾ (ಮಂಗಳೂರು)–1, ನಿಯೋಲ್ ಕಾರ್ನ್ (ಬೆಂಗಳೂರು)–2, ಪಿ.ಜೆ.ಸ್ನೇಹಾ (ಮಂಗಳೂರು)–3. ಕಾಲ: 11.73 ಸೆ.; 1,500 ಮೀಟರ್ಸ್ ಓಟ: ಚೈತ್ರಾ ದೇವಾಡಿಗ (ದಕ್ಷಿಣ ಕನ್ನಡ)–1, ಸಿ.ಪ್ರಿಯಾಂಕ (ಬೆಂಗಳೂರು)–2, ಇ.ಬಿ. ಅರ್ಪಿತಾ (ದಕ್ಷಿಣ ಕನ್ನಡ)–3. ಕಾಲ: 4ನಿ, 39.38 ಸೆ.; ಟ್ರಿಪಲ್ ಜಂಪ್: ಜಿ.ಪವಿತ್ರಾ (ಉಡುಪಿ)–1, ಸಿ.ಅಂಜಲಿ (ದ.ಕ)–2, ಐಶ್ವರ್ಯಾ ಹಿರೋಜಿ (ಬೆಳಗಾವಿ)–3. ದೂರ: 12.90 ಮೀ.; ಡಿಸ್ಕಸ್ ಥ್ರೋ: ಎಂ.ಎನ್.ಸುಷ್ಮಾ (ಮೈಸೂರು)–1, ಕಲಾವತಿ (ಬೆಂಗಳೂರು)–2, ಐಶ್ವರ್ಯಾ (ದ.ಕ)–3. ದೂರ: 47.06 ಮೀ.

ಸಿ.ಎಂ ಕಪ್ ರಾಜ್ಯಮಟ್ಟದ ದಸರಾ ಕ್ರೀಡಾಕೂಟದ 1,500 ಮೀಟರ್ಸ್ ಓಟದ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ದಕ್ಷಿಣ ಕನ್ನಡದ ಚೈತ್ರಾ ದೇವಾಡಿಗ ಅವರ ಓಟ –ಪ್ರಜಾವಾಣಿ ಚಿತ್ರ/ಅನೂಪ್ ರಾಘು.ಟಿ.

ಕುಸ್ತಿ: ಫೈನಲ್‌ಗೆ ಸುನಿಲ್

ಪ್ರಜಾವಾಣಿ ವಾರ್ತೆ

ಮೈಸೂರು: ಬಾಗಲಕೋಟೆಯ ಮುಧೋಳದ ಸುನಿಲ್ ಪಡತಾರೆ ಹಾಗೂ ಜಮಖಂಡಿಯ ಗೋಪಾಲ ಕೋಳಿ ಅವರು ದಸರಾ ಕುಸ್ತಿ ಟೂರ್ನಿಯ 'ದಸರಾ ಕಂಠೀರವ' ಕಿರೀಟಕ್ಕಾಗಿ ನಡೆಯುವ ಹಣಾಹಣಿಯ ಫೈನಲ್ ಪ್ರವೇಶಿಸಿದರು.

ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಪಡತಾರೆ, ಜಮಖಂಡಿಯ ಪಾಂಡುರಂಗ ಶಿಂಧೆ ಅವರನ್ನು 'ಚಿತ್' ಮಾಡಿ ಸತತ ಮೂರನೇ ಬಾರಿ ಫೈನಲ್ ಪ್ರವೇಶಿಸಿದರು. ಗೋಪಾಲ ಕೋಳಿ ಮುಧೋಳದ ಬಾಬೂಸಾಹೇಬ ಶಿಂಧೆ ಎದುರು ಗೆದ್ದರು.

ಅಂತಿಮ ಘಟ್ಟಕ್ಕೆ ರೋಹನ್: 'ದಸರಾ ಕೇಸರಿ' ಪಟ್ಟಕ್ಕಾಗಿ ನಡೆದ 74 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಬೆಳಗಾವಿಯ ರೋಹನ್ ನಾರಾಯಣ ಅವರು ದಾವಣಗೆರೆಯ ಬಸವರಾಜ ಎಸ್. ಪಾಟೀಲ ವಿರುದ್ಧ ಗೆದ್ದು ಅಂತಿಮ ಘಟ್ಟ ಪ್ರವೇಶಿಸಿದರು. ಉತ್ತರಕನ್ನಡದ ಪೈಲ್ವಾನ್ ಎಂ.ಜಿ.ಮಂಜುನಾಥ್ ಮತ್ತೊಂದು ಸ್ಪರ್ಧೆಯಲ್ಲಿ ಗದಗದ ಫಾಲಾಕ್ಷ ಗೌಡ ಎದುರು ಗೆದ್ದರು.

'ದಸರಾ ಕಿಶೋರ್' ಪಟ್ಟಕ್ಕಾಗಿ ನಡೆಯುತ್ತಿರುವ 65 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ದಾವಣಗೆರೆಯ ಮಹೇಶ್ ಪಿ. ಗೌಡ ಹಾಗೂ ಉತ್ತರ ಕನ್ನಡದ ಕೊರವರ ಸಂಜೀವ ಮುಖಾಮುಖಿಯಾಗಲಿದ್ದಾರೆ. ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಮಹೇಶ್ ಅವರು ಸಚಿನ್ ಸಿರಗುಪ್ಪಿ ಎದುರು ಜಯಿಸಿದರು. ಉತ್ತರ ಕನ್ನಡದ ಸುಲೇಮಾನ್ ಸಾಬ್ ವಿರುದ್ಧ ಕೊರವರ ಸಂಜೀವ ಗೆದ್ದರು.

'ದಸರಾ ಕಿಶೋರಿ' ಪ್ರಶಸ್ತಿಯ ಸೆಮಿಫೈನಲ್‌ನಲ್ಲಿ ಬೆಳಗಾವಿಯ ಸ್ವಾತಿ ಪಾಟೀಲ, ಉತ್ತರ ಕನ್ನಡದ ಶಾಲಿನಿ ಎಸ್. ಸಿದ್ಧಿ ವಿರುದ್ಧ ಗೆದ್ದರೆ, ಬಾಗಲಕೋಟೆಯ ಐಶ್ವರ್ಯಾ ಕರಿಗಾರ್ ವಿರುದ್ಧ ಹಳಿಯಾಳದ ಲಕ್ಷ್ಮಿ ಎಸ್.ಪಾಟೀಲ ಜಯಗಳಿಸಿದರು.

ಮೈಸೂರು ವಿಭಾಗ ಮಟ್ಟದ 'ದಸರಾ ಕುಮಾರ್' ಕುಸ್ತಿ ಸ್ಪರ್ಧೆಯ ಸೆಮಿಫೈನಲ್‌ನಲ್ಲಿ ಮೈಸೂರಿನ ದೀಕ್ಷಿತ್ ಗೌಡ ತಮ್ಮ ಊರಿನವರೇ ಆದ ಚೇತನ್ ಗೌಡ ಅವರನ್ನು ಮಣಿಸಿದರು.

ಮೂಡುಬಿದಿರೆಯ ಎಕ್ಸಲೆಂಟ್ ಕಾಲೇಜು ಜೈನಕಾಶಿಯಲ್ಲಿ ಶಿಕ್ಷಣ ಕ್ರಾಂತಿ

ಮೂಡುಬಿದಿರೆ (ದಕ್ಷಿಣ ಕನ್ನಡ): ಶಿಸ್ತು, ಗುಣಮಟ್ಟದ ಶಿಕ್ಷಣದ ಜತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪ್ರಾಥಮಿಕ ಹಂತದಲ್ಲೇ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಿ ಉತ್ತಮ ಫಲಿತಾಂಶವನ್ನು ದಾಖಲಿಸಿಕೊಂಡು ಬರುತ್ತಿರುವ ಮೂಡುಬಿದಿರೆಯ ಎಕ್ಸಲೆಂಟ್ ಶಿಕ್ಷಣ ಸಂಸ್ಥೆ ರಾಜ್ಯದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದೆನಿಸಿದೆ.

ಅಲ್ಪ ಅವಧಿಯಲ್ಲೇ ಅದ್ಭುತ ಪ್ರಗತಿ: ಜೈನಕಾಶಿ, ಶಿಕ್ಷಣ ಕಾಶಿಯಾಗಿ ಬೆಳೆಯುತ್ತಿರುವ ಮೂಡುಬಿದಿರೆಯಿಂದ 4 ಕಿಮೀ ದೂರದ ಕಲ್ಲಬೆಟ್ಟು ಪ್ರಶಾಂತ ಜಾಗದಲ್ಲಿ ಯುವರಾಜ್ ಜೈನ್ ಮತ್ತು ರಶ್ಮಿತಾ ಜೈನ್ ದಂಪತಿ ದಶಕದ ಹಿಂದೆ ಪ್ರಾರಂಭಿಸಿದ ವಿದ್ಯಾ ಸಂಸ್ಥೆಯೇ ಎಕ್ಸಲೆಂಟ್ ಪದವಿ ಪೂರ್ವ ಕಾಲೇಜು. 2012ರಲ್ಲಿ ಕೇವಲ 185 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಸಂಸ್ಥೆಯಲ್ಲಿ ಪ್ರಸ್ತುತ ರಾಜ್ಯದ ವಿವಿಧೆಡೆಯ 2500 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. 6ನೇ ತರಗತಿಯಿಂದ 10ನೇ ತರಗತಿಯವರೆಗೆ ಆಂಗ್ಲ ಮಾಧ್ಯಮ ಶಾಲೆ, ಸಿಬಿಎಸ್‌ಇ ಸ್ಕೂಲ್, ಐಐಟಿ, ಸಿಇಟಿ, ನೀಟ್ ತರಬೇತಿಯನ್ನು ನೀಡುತ್ತಿದೆ. ಸಂಸ್ಥೆಯ ಅಧ್ಯಕ್ಷರ ದೂರದರ್ಶಿ ಚಿಂತನೆಯ ಫಲವಾಗಿ ಅಲ್ಪ ಅವಧಿಯಲ್ಲೆ ಕಾಲೇಜು ಅದ್ಭುತ ಪ್ರಗತಿ ಕಂಡಿದೆ.

ಫಲಿತಾಂಶದಲ್ಲಿ ಏರಿಕೆ: ವಿದ್ಯಾರ್ಥಿಗಳನ್ನು ಕೇವಲ ಅಂಕಕ್ಕೆ ಸೀಮಿತಗೊಳಿಸದೆ ಅವರಲ್ಲಿ ಆಧ್ಯಾತ್ಮಿಕ, ನೈತಿಕ ಮೌಲ್ಯಗಳನ್ನು ಬೆಳೆಸಲು ಗುರುಕುಲ ಮಾದರಿಯ ಶಿಕ್ಷಣಕ್ಕೂ ಒತ್ತು ನೀಡುತ್ತಿದೆ. ಅನುಭವಿ ಪ್ರಾಧ್ಯಾಪಕರ ಬೋಧನೆಯಿಂದ ಪ್ರತಿ ವರ್ಷವೂ ಉತ್ತಮ ಫಲಿತಾಂಶದ ಸಾಧನೆ ತೋರುತ್ತಾ ಸಮಾಜಕ್ಕೆ ಸುಸಂಸ್ಕೃತ ವಿದ್ಯಾರ್ಥಿಗಳನ್ನು ನೀಡುತ್ತಾ ಬಂದಿದೆ. ನೀಟ್‌ನಲ್ಲಿ ರ‍್ಯಾಂಕ್ ಪಡೆದ ಅನೇಕ ವಿದ್ಯಾರ್ಥಿಗಳು ದೇಶದಾದ್ಯಂತ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಎಂಬಿಬಿಎಸ್ ಹಾಗೂ ಎಂಜಿನಿಯರಿಂಗ್ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ವೈಶಿಷ್ಟ್ಯಗಳು: ಪ್ರತಿ ವಿದ್ಯಾರ್ಥಿ ಗುಂಪಿಗೆ ಒಬ್ಬರು ಮೇಲ್ವಿಚಾರಕ ಉಪನ್ಯಾಸಕರು. ಬೋಧನಾ ಅನುಭವದ ಪ್ರಾಧ್ಯಾಪಕರು, ಕ್ಲಪ್ತ ಸಮಯದಲ್ಲಿ ಹೆತ್ತವರಿಗೂ ಪರೀಕ್ಷೆಯ ಅಂಕಗಳ ರವಾನೆ, ಕಲಿಕೆಯಲ್ಲಿ ಹಿಂದುಳಿದವರಿಗೆ ವಿಶೇಷ ತರಗತಿಗಳು, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ, ನಗದು ಪುರಸ್ಕಾರದ ಮೂಲಕ ಪ್ರೋತ್ಸಾಹ. ಮನೆ ವಾತಾವರಣದ ಸುಸಜ್ಜಿತ ಹಾಸ್ಟೆಲ್ ವ್ಯವಸ್ಥೆ, ಪೌಷ್ಟಿಕ ಆಹಾರ, ವೈದ್ಯಕೀಯ ಸೌಲಭ್ಯ. ಕಲಿಕೆಗೆ ಪೂರಕವಾಗಿ ಪ್ರಯೋಗಾಲಯ, ವೈಜ್ಞಾನಿಕ ಸಂಶೋಧನೆಗಾಗಿ ಕೇಂದ್ರ ಸರಕಾರದ ಸಹಕಾರದೊಂದಿಗೆ ಅಟಲ್‌ಟಿಂಕರಿಂಗ್ ಲ್ಯಾಬ್ ಸೌಲಭ್ಯವನ್ನು ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗೆ 9900099652 ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸುವಂತೆ ಕಾಲೇಜಿನ ಪ್ರಕಟಣೆ ತಿಳಿಸಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

LG
ಪೈ ಇಂಟರ್‌ನ್ಯಾಷನಲ್
India ka Celebration
Life's Good.
FESTIVE EXCLUSIVE OFFERS
WIN LG DREAM HOME PACKAGE Every Day*
OLED TV • Side-by-Side Refrigerator • Front Load Washing Machine • Water Purifier • Microwave Oven
GRAND PRIZE AUDI Q3*
To participate in these offers, send an SMS <"First Name" "Last Name" GTM Code> to 7835073507
HOME APPLIANCES OFFERS
FREE* GLASS BOWL KIT (On Select Models of Microwave Oven)
FREE* Maintenance worth ₹4200* (Part of 1st Year Package) (On Select Models of Water Purifier)
Up to 26%* CASHBACK Max ₹26000* ON SELECT CREDIT / DEBIT CARDS
OLED CIRCLE An exclusive alliance Get benefits up to ₹50000*
HOME ENTERTAINMENT OFFERS
3 YEAR* WARRANTY (With Select LG TVs)
FREE* LG SMART CAM Worth ₹9990 (With Select LG TVs)
UP TO 30% OFF ON LG SOUNDBAR* (With Select LG TVs)
FIXED EMI Starting from ₹2999*
ADDITIONAL OFFERS
1* EMI Free / 0* Down Payment
ಮೆಗಾ ಫೆಸ್ಟಿವಲ್ ಸೇಲ್
THE KING OF SALE IS BACK
ಗೆಲ್ಲಿರಿ 8 ಕೋಟಿ ಮೌಲ್ಯದ ವರೆಗಿನ ಆಕರ್ಷಕ ಬಹುಮಾನಗಳು
ಗೆಲ್ಲಿರಿ 30 ಲಕ್ಷ ವರೆಗಿನ ಉಚಿತ ಶಾಪಿಂಗ್
ಗೆಲ್ಲಿರಿ 10 HYUNDAI AURA CARS
ಗೆಲ್ಲಿರಿ 10 HYUNDAI GRAND i10 NIOS CARS
Celebrate Diwali with irresistible offers from LG.
OLED C3 | 195(77) / 164(65) / 139(55)
• Self-Lit Pixels / α9 AI Processor 4K Gen6 / 120Hz • Dolby Vision & Dolby Atmos • NVIDIA G-Sync / AMD FreeSync / VRR / Wi-Fi 6
Up to 20% CASHBACK ₹15000 EMI: ₹3,999*
UHD-UR9050 | 190(75) / 164(65) / 139(55) 108(43)
• 4K Display / α5 AI Processor 4K Gen6 • Built-in Alexa / Apple Airplay & HomeKit / Works with Hey Google
Up to 10% CASHBACK ₹5000 EMI: ₹2,999*
Nano 80 | 164(65) / 139(55)
• Real 4K NanoCell / α5 AI Processor 4K Gen5 • AI Brightness Control, Local Dimming • Built-in Google Assistant & Alexa
Up to 10% CASHBACK ₹7500 EMI: ₹2,999*
UHD-UR8040 | 190(75) / 177(70) / 164(65) 139(55) / 127(50) / 108(43)
• 4K Display / α5 AI Processor 4K Gen6 • Built-in Alexa / Apple Airplay & HomeKit / Works with Hey Google
Up to 10% CASHBACK ₹5000 EMI: ₹3,999*
UHD-UR7790 | 108(43)
• 4K Display / α5 AI Processor 4K Gen6 • Built-in Alexa / Apple Airplay & HomeKit / Works with Hey Google
Up to 10% CASHBACK ₹3500 EMI: ₹999*
Presenting Wi-Fi Convertible Powered by AI ThinQ
NOW, CONVERT FREEZER TO FRIDGE FROM ANYWHERE!
BUY 1 LG SIDE-BY-SIDE REFRIGERATOR
GET 1 DOUBLE DOOR REFRIGERATOR*
Worth ₹29499/-**
GL-B257EPZX
• Side-By-Side • AI ThinQ • DoorCooling+™ • Hygiene Fresh+™ • Smart Diagnosis™ • Multi Air Flow • Express Freeze • Easy Ice Maker (Door Mounted) • Multi Digital Sensor • Smart Inverter Compressor™ • Colour: Shiny Steel
EMI: ₹4,999*
Up to 20% CASHBACK ₹20000 Capacity: 655/650* Litres
GL-T342TPZY
• AI ThinQ™ • DoorCooling+™ • Convertible • Digital Display • Smart Inverter Compressor™ • Toughened Glass Shelves • Lower Door Basket • Auto Smart Connect™ • Rating: 3-Star*/2-Star^ • Colour: Shiny Steel
EMI: ₹2,999*
Up to 15% CASHBACK ₹7000 Capacity: 343*/322* Litres
GL-T262TESX*
• AI ThinQ™ • DoorCooling+™ • Convertible • Digital Display • Smart Inverter Compressor™ • Toughened Glass Shelves • Lower Door Basket • Auto Smart Connect™ • Rating: 3-Star • Colour: Ebony Sheen
EMI: ₹1,999*
Up to 15% CASHBACK ₹7000 Capacity: 246* Litres
NEW ARRIVAL
FHD1107STB 11 kg (Wash) 7 kg (Dry)
• AI DD® • 6 Motion DD • TurboWash 360° • Steam+ • LG ThinQ™ (Wi-Fi) • Smart Diagnosis • 10-Year Warranty* • RPM: Max. 1400 • Color: Black VCM
Up to 20% CASHBACK ₹12000 EMI: ₹6,299*
FHP1411Z9B 11 kg
• AI DD® • 6 Motion DD • TurboWash 360° • Steam+ • LG ThinQ™ (Wi-Fi) • Smart Diagnosis • 10-Year Warranty* • RPM: Max. 1400 • Color: Platinum Silver
Up to 20% CASHBACK ₹12000 EMI: ₹2,999*
FHV1409Z4M 9 kg
• AI DD® • 6 Motion DD • Steam™ • Smart Diagnosis • 10-Year Warranty* • RPM: Max. 1400 • Color: Middle Black
Up to 15% CASHBACK ₹9000 EMI: ₹3,999*
THD10SWP 10 kg
• AI DD® • 6 Motion DD • Direct Drive Motor • TurboWash™ • LG ThinQ™ (Wi-Fi) • Smart Diagnosis • Color: Middle Black
Up to 15% CASHBACK ₹4500 EMI: ₹1,999*
T70AJMB1Z 7 kg
• Smart Inverter Motor • Auto Tub Clean • Jet Spray+ • TurboWash™ • Smart Diagnosis • TurboDrum • Soft Closing Door • Color: Middle Black
Up to 5% CASHBACK ₹2500 EMI: ₹1,750*
*T & C Apply.
PRODUCT & SERVICE RELATED ENQUIRIES
+91 91084 44777
SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY
FOR REFRIGERATORS, WASHING MACHINES, LED TV'S
Store Locator

ಧಾರವಾಡ: ಐಟಿಎಫ್ ಟೆನಿಸ್ ಡಬಲ್ಸ್ ಫೈನಲ್ ಇಂದು

ಸೆಮಿಫೈನಲ್‌ಗೆ ರಾಮಕುಮಾರ್

• ಬಿ.ಜೆ.ಧನ್ಯಪ್ರಸಾದ್

ಧಾರವಾಡ: ಶ್ರೇಯಾಂಕಕ್ಕೆ ನ್ಯಾಯ ಸಿಗುವಂತೆ ಮೊದಲ ನಾಲ್ಕು ಶ್ರೇಯಾಂಕದ ಆಟಗಾರರು, ಇಲ್ಲಿ ನಡೆಯುತ್ತಿರುವ ಐಟಿಎಫ್ ಟೆನಿಸ್ ಟೂರ್ನಿಯಲ್ಲಿ ಶುಕ್ರವಾರ ಸಿಂಗಲ್ಸ್ ಸೆಮಿಫೈನಲ್ ತಲುಪಿದರು. ಭಾರತದ ಇಬ್ಬರು ಆಟಗಾರರು– ದಿಗ್ವಿಜಯ ಪ್ರತಾಪ್ ಸಿಂಗ್ ಮತ್ತು ರಾಮಕುಮಾರ್ ರಾಮನಾಥನ್ ಇವರಲ್ಲಿ ಒಳಗೊಂಡಿದ್ದಾರೆ.

ಭಾರತದ ರಾಮಕುಮಾರ್ ರಾಮನಾಥನ್ ಅವರು ಚೆಂಡನ್ನು ರಿಟರ್ನ್ ಮಾಡಲು ಮುಂದಾದರು ಪ್ರಜಾವಾಣಿ ಚಿತ್ರ/ಬಿ.ಎಂ.ಕೇದಾರನಾಥ

ಧಾರವಾಡ ಜಿಲ್ಲಾ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ₹20.7 ಲಕ್ಷ ಬಹುಮಾನದ ಈ ಟೂರ್ನಿಯಲ್ಲಿ ಅಗ್ರ ಶ್ರೇಯಾಂಕದ ನಿಕ್ ಚಾಪೆಲ್ (ಅಮೆರಿಕ) ಅವರು ಕ್ವಾರ್ಟರ್ ಫೈನಲ್‌ನಲ್ಲಿ ಅಮೋಘ ಕೌಶಲ ಪ್ರದರ್ಶಿಸಿ 6–2, 6–4 ರಿಂದ ಏಳನೇ ಶ್ರೇಯಾಂಕದ ಸಿದ್ಧಾರ್ಥ ರಾವತ್ ಅವರನ್ನು ಸೋಲಿಸಿದರು.

ಕುತೂಹಲ ಕೆರಳಿಸಿದ ಇನ್ನೊಂದು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ರಷ್ಯದ ಆಟಗಾರ, ಎರಡನೇ ಶ್ರೇಯಾಂಕದ ಬೊಗ್ದಾನ್ ಬೊಬ್ರೊವ್ 7–6 (6), 7–6 (3) ರಿಂದ ಆರನೇ ಶ್ರೇಯಾಂಕದ ಫ್ಲೊರೆಂಟ್ ಬಾಕ್ಸ್ (ಫ್ರಾನ್ಸ್) ಅವರನ್ನು ಹಿಮ್ಮೆಟ್ಟಿಸಿದರು. ಗೆಲುವಿಗೆ ಬೊಬ್ರೊವ್ ಸುಮಾರು ಎರಡು ಗಂಟೆ ತೆಗೆದುಕೊಂಡರು.

ಮೂರನೇ ಶ್ರೇಯಾಂಕದ ದಿಗ್ವಿಜಯ್ ಪ್ರತಾಪ್ ಸಿಂಗ್ ಅವರು 6–4, 6–7 (3), 6–2 ರಿಂದ ಐದನೇ ಶ್ರೇಯಾಂಕದ ಆಟಗಾರ ಕಝುಕಿ ನಿಶಿವಾಕಿ (ಜಪಾನ್) ಅವರನ್ನು ಸೋಲಿಸುವ ದಾರಿಯಲ್ಲಿ ಬೆವರುಹರಿಸ-ಬೇಕಾಯಿತು.

ನಾಲ್ಕನೇ ಶ್ರೇಯಾಂಕದ ರಾಮಕುಮಾರ್ ರಾಮನಾಥನ್ ಛಲದ ಆಟವಾಡಿ ಎಂಟನೇ ಶ್ರೇಯಾಂಕದ ಎಸ್‌.ಡಿ.ಪ್ರಜ್ವಲ್ ದೇವ್ (ಕರ್ನಾಟಕ) ಅವರನ್ನು 6–4, 4–6, 6–1 ರಿಂದ ಸೋಲಿಸಿ ಅಂತಿಮ ನಾಲ್ಕರ ಘಟ್ಟಕ್ಕೆ ಮುನ್ನಡೆದರು.

ಸೆಮಿಫೈನಲ್‌ನಲ್ಲಿ ರಾಮಕುಮಾರ್, ಎಡಗೈ ಆಟಗಾರ ಚಾಪೆಲ್ ಅವರನ್ನು, ಬೊಬ್ರೊವ್, ದಿಗ್ವಿಜಯ್ ಅವರನ್ನು ಎದುರಿಲಿದ್ದಾರೆ.

ಡಬಲ್ಸ್ ಫೈನಲ್ ಶನಿವಾರ ನಡೆಯಲಿದೆ. ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ, ಶ್ರೇಯಾಂಕರಹಿತ ಜೋಡಿ ಸಾಯಿ ಕಾರ್ತಿಕ್ ರೆಡ್ಡಿ ಗಂಟಾ–ಮನೀಷ್ ಸುರೇಶ್ ಕುಮಾರ್ 3–6, 7–6 (3), 11–13 ರಿಂದ ನಾಲ್ಕನೇ ಶ್ರೇಯಾಂಕದ ಸಿದ್ಧಾಂತ್ ಬಂಥಿಯಾ–ವಿಷ್ಣುವರ್ಧನ್ ಅವರನ್ನು ಸೋಲಿಸಿದರೆ, ಮೂರನೇ ಶ್ರೇಯಾಂಕದ ಪ್ರಜ್ವಲ್ ದೇವ್–ನಿತಿನ್ ಕುಮಾರ್ ಸಿನ್ಹಾ ಜೋಡಿ 6–3, 6–3 ರಿಂದ ದಿಗ್ವಿಜಯ್ ಪ್ರತಾಪ್ ಸಿಂಗ್– ಕರಣ್ ಸಿಂಗ್ ಜೋಡಿಯನ್ನು ಸೋಲಿಸಿತು.

ಚೆಸ್: ಅಗ್ರಸ್ಥಾನದಲ್ಲಿ ಆಗಸ್ಟಿನ್, ಲೋಕೇಶ್

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕದ ಎ.ಆಗಸ್ಟಿನ್, ತಮಿಳುನಾಡಿನ ಲೋಕೇಶ್ ಎನ್. ಮತ್ತು ರಾಮನಾಥನ್ ಬಾಲಸುಬ್ರ-ಹ್ಮಣ್ಯಂ ಅವರು ಫಿಡೆ ರೇಟೆಡ್ ಅಖಿಲ ಭಾರತ ಚೆಸ್ ಟೂರ್ನಿಯ ಎಂಟನೇ ಸುತ್ತಿನ ನಂತರ ಶುಕ್ರವಾರ ತಲಾ ಏಳು ಪಾಯಿಂಟ್‌ಗಳೊಂದಿಗೆ ಮುನ್ನಡೆ ಕಾಯ್ದುಕೊಂಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಚೆಸ್ ಸಂಸ್ಥೆ, ನಗರದ ಪುರಭವನದಲ್ಲಿ ಆಯೋಜಿಸಿರುವ ಈ ಟೂರ್ನಿಯಲ್ಲಿ ಮಧ್ಯಾಹ್ನ ಏಳನೇ ಸುತ್ತಿನ ನಂತರ ಈ ಮೂವರೂ ತಲಾ 6.5 ಪಾಯಿಂಟ್ಸ್ ಸಂಗ್ರಹಿಸಿದ್ದ-ರು. ಎಂಟನೇ ಸುತ್ತಿನಲ್ಲಿ ಮೂವರೂ ತಮ್ಮ ಪಂದ್ಯಗಳನ್ನು 'ಡ್ರಾ' ಮಾಡಿಕೊಂಡರು. ಶನಿವಾರ ಟೂರ್ನಿ ಮುಕ್ತಾಯಗೊಳ್ಳಲಿದೆ.

1, 2 & 3-BHK APARTMENTS FOR SALE IN VARIOUS LOCATIONS.

PRM/KA/RERA/1251/308/PR/201201/003733
ELECTRONIC CITY
HOSA ROAD JUNCTION
₹ 45.00 - 49.00 Lakhs*
9164 045 000

PRM/KA/RERA/1251/308/PR/290122/004660
SARJAPURA
SARJAPUR - ATTIBELE ROAD
₹ 33.88 - 43.57 Lakhs*
9164 122 000

PRM/KA/RERA/1251/309/PR/220223/005748
THANISANDRA
5 MINS. FROM KNSIT
₹ 47.29 - 86.79 Lakhs*
8880 461 461

PRM/KA/RERA/1251/310/PR/150223/005721
MYSORE ROAD
NR. R R DENTAL COLLEGE
₹ 42.80 - 71.85 Lakhs*
8088 445 445

PRM/KA/RERA/1251/309/PR/060923/006244
OFF TUMKUR ROAD
NR. HIMALAYA WELLNESS CO.
₹ 32.58 - 55.57 Lakhs*
8880 465 465

HENNUR ROAD
DODDAGUBBI, NR. DECATHLON
₹ 47.97 - 63.09 Lakhs*
8880 003 003

PRM/KA/RERA/1251/446/PR/210312/004002
K R PURAM
NEAR GARDEN CITY UNIV.
₹ 50.92 - 66.45 Lakhs*
8880 438 000

PRM/KA/RERA/1251/310/PR/190328/002502
KENGERI
NEAR HOYSALA CIRCLE
₹ 79.04 Lakhs*
8880 759 759

PRM/KA/RERA/1251/446/PR/110722/005059
BEGUR
10 MINS. SILK BOARD
₹ 36.72 - 52.29 Lakhs*
8880 472 472

PRM/KA/RERA/1251/308/PR/280222/004739
CHANDAPURA
10 MIN. TO NARAYANA HOSP.
₹ 32.02 - 43.40 Lakhs*
8880 013 310

PRM/KA/RERA/1251/309/PR/211209/004576
YELAHANKA
ISRO LAYOUT PHASE II
₹ 44.60 - 81.15 Lakhs*
8880 758 758

*T & C Apply

HOME MAKER

A HOUSE WIFE CAN EARN MORE THAN
ONE LAKH
PER MONTH*

TO BECOME A "DS-MAX HOME-MAKER"
CALL
8880 099 291

FACILITY MANAGEMENT SERVICES

FOR APARTMENTS & COMMERCIAL COMPLEXES

- MEP & Security Services
- Gardening & Landscaping
- STP / WTP / RO Maintenance
- Swimming Pool Maintenance
- Housekeeping

CALL : 9164 022 000

ELEGANT INTERIORS

DIRECTLY FROM OUR FACTORY

OFFICES / VILLAS / APARTMENTS
INDEPENDENT HOUSES /
RESTAURANTS / RETAIL SPACES

9164 056 000

We are looking for lands under JV / Outright purchase

*T & C Apply

REFER & EARN

GET A 2-BHK APARTMENT FOR FREE*

CALL : 8880 463 463

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations.
Visit : www.rera.karnataka.gov.in

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಜೀವನದಲ್ಲಿ ಏನೇ ಏರುಪೇರಾದರೂ ಆಲೋಚನೆಯೇ ನಿಮ್ಮ ಮೂಲ ಬಂಡವಾಳ ಮತ್ತು ಆಸ್ತಿಯಾಗಿರಬೇಕು.

–ಎ.ಪಿ.ಜೆ. ಅಬ್ದುಲ್ ಕಲಾಂ

ವೈದ್ಯರಿಗೆ ಗ್ರಾಮೀಣ ಸೇವೆ ವಿನಾಯಿತಿ ತೀರ್ಮಾನದ ಮರುಪರಿಶೀಲನೆ ಅಗತ್ಯ

ಗ್ರಾಮೀಣ ಮತ್ತು ನಗರ ಪ್ರದೇಶದ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಪದವೀಧರರು ಒಂದು ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎನ್ನುವ ನಿಯಮವನ್ನು ರದ್ದುಗೊಳಿಸುವ ರಾಜ್ಯ ಸಚಿವ ಸಂಪುಟ ಸಭೆಯ ನಿರ್ಧಾರ ವ್ಯಾಪಕ ಚರ್ಚೆಗೊಳಗಾಗಬೇಕಾದುದು. ಈ ತೀರ್ಮಾನ ಗ್ರಾಮೀಣ ಭಾಗಗಳಲ್ಲಿನ ವೈದ್ಯಕೀಯ ಸೇವೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಲ್ಲದು. ವೈದ್ಯಕೀಯ ಸವಲತ್ತುಗಳ ಕೊರತೆ ಎದುರಿಸುತ್ತಿರುವ ಗ್ರಾಮೀಣ ಪ್ರದೇಶಗಳು ಮತ್ತಷ್ಟು ತೊಂದರೆ ಎದುರಿಸಲು ಸರ್ಕಾರದ ತೀರ್ಮಾನವೇ ಎಡೆಮಾಡಿಕೊಡಬಹುದು. ಕರ್ನಾಟಕದಲ್ಲಿ ಎಂಬಿಬಿಎಸ್ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ಪೂರ್ಣಗೊಳಿಸುವ ಅಭ್ಯರ್ಥಿಗಳು ಗ್ರಾಮೀಣ ಹಾಗೂ ನಗರ ಪ್ರದೇಶದ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎಂಬ ನಿಯಮ ಈಗ ಜಾರಿಯಲ್ಲಿದೆ. ಇದರಿಂದಾಗಿ, ಹೊಸದಾಗಿ ವೈದ್ಯ ವೃತ್ತಿ ಪ್ರವೇಶಿಸುವ ತರುಣ ವೈದ್ಯರು ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸುವ ಅನಿವಾರ್ಯ ಇತ್ತು. 2012ರ ಕಾಯ್ದೆ ಮತ್ತು 2015ರ ನಿಯಮಗಳು ಎಂಬಿಬಿಎಸ್ ಮತ್ತು ವೈದ್ಯಕೀಯ ಸ್ನಾತಕೋತ್ತರ ಅಭ್ಯರ್ಥಿಗಳು ಗ್ರಾಮೀಣ ಹಾಗೂ ನಗರ ಪ್ರದೇಶದ ಆರೋಗ್ಯ ಕೇಂದ್ರಗಳಲ್ಲಿ ಸೇವೆ ಸಲ್ಲಿಸುವುದನ್ನು ಕಡ್ಡಾಯಗೊಳಿಸಿದ್ದವು. ಇದೀಗ, 'ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ಮಸೂದೆ–2023'ಕ್ಕೆ ಒಪ್ಪಿಗೆ ನೀಡಿರುವ ಸಚಿವ ಸಂಪುಟ, 'ಇದನ್ನು ತುರ್ತಾಗಿ ಜಾರಿಗೊಳಿಸುವ ಉದ್ದೇಶದಿಂದ ಸುಗ್ರೀವಾಜ್ಞೆ ಹೊರಡಿಸಲು ತೀರ್ಮಾನಿಸಿದೆ'. ಇತರ ಯಾವುದೇ ಪದವೀಧರರಿಗಿಲ್ಲದ ಕಡ್ಡಾಯ ಗ್ರಾಮೀಣ ಸೇವೆಯ ಷರತ್ತನ್ನು ವೈದ್ಯರಿಗೆ ಹೇರುವುದು ಸರಿಯಲ್ಲವೆನ್ನುವ ವಾದ ತಾರ್ಕಿಕವಾಗಿ ಸರಿ. ಆದರೆ, ಜನಜೀವನವನ್ನು ಹಸನುಗೊಳಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸುವ ಇತರ ಉದ್ಯೋಗಗಳಿಗೂ ಜೀವಗಳನ್ನು ಉಳಿಸಲು ಶ್ರಮಿಸುವ ವೈದ್ಯಕೀಯ ವೃತ್ತಿಗೂ ವ್ಯತ್ಯಾಸವಿದೆ. ಉಳಿದ ವೃತ್ತಿಗಳಿಗಿಂತಲೂ ಹೆಚ್ಚು ಸೇವಾ ಮನೋಭಾವವನ್ನು ವೈದ್ಯ ವೃತ್ತಿ ಅಪೇಕ್ಷಿಸುತ್ತದೆ. ಆ ಕಾರಣದಿಂದಾಗಿ, ಗ್ರಾಮೀಣ ಸೇವೆಯನ್ನು ಸಲ್ಲಿಸುವುದನ್ನು ವೈದ್ಯ ವೃತ್ತಿಯ ಸೇವಾ ಮನೋಭಾವದ ರೂಪದಲ್ಲಿಯೇ ನೋಡಬೇಕಾಗಿದೆ.

ಗ್ರಾಮೀಣ ಸೇವೆ ಸಲ್ಲಿಸುವುದನ್ನು ವೈದ್ಯ ವೃತ್ತಿಯ ಸೇವಾ ಮನೋಭಾವದ ರೂಪದಲ್ಲೇ ನೋಡಬೇಕಾಗಿದೆ

ಗ್ರಾಮೀಣ ಭಾಗಗಳಲ್ಲಿ ಕಡ್ಡಾಯವಾಗಿ ಸೇವೆ ಸಲ್ಲಿಸುವುದನ್ನು ಜನರ ಅನುಕೂಲದ ದೃಷ್ಟಿಯಿಂದಷ್ಟೇ ನೋಡಬೇಕಾಗಿಲ್ಲ. ಹಳ್ಳಿಗಳಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು, ವೈದ್ಯಕೀಯ ವೃತ್ತಿಯನ್ನು ಹೊಸತಾಗಿ ಪ್ರವೇಶಿಸುವ ತರುಣ ತರುಣಿಯರ ವ್ಯಕ್ತಿತ್ವ ವಿಕಸನದ ರೂಪದಲ್ಲೂ ನೋಡಬೇಕು. ಸಾರ್ವಜನಿಕ ಸೇವೆಯಲ್ಲಿ ಇರುವವರು ಗ್ರಾಮೀಣ ಭಾರತವನ್ನು ಪರಿಚಯಿಸಿಕೊಂಡಾಗಷ್ಟೇ ತಮ್ಮ ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಲ್ಲರು. ಗ್ರಾಮೀಣ ಭಾಗಗಳಲ್ಲಿ ಸೇವೆ ಸಲ್ಲಿಸುವ ಅವಕಾಶ ಇಲ್ಲದೆ ಹೋದಾಗ, ಸಮಾಜವನ್ನು ಅರ್ಥ ಮಾಡಿಕೊಳ್ಳುವ ಅಪೂರ್ವ ಅವಕಾಶವೊಂದು ಯುವ ವೈದ್ಯರಿಗೆ ತಪ್ಪಿಹೋಗುತ್ತದೆ. ಇದರಿಂದಾಗಿ, ವೈದ್ಯಕೀಯ ಕ್ಷೇತ್ರಕ್ಕೆ ಅಗತ್ಯವಾದ ಮಾನವೀಯ ಆಯಾಮವೊಂದರ ಕೊರತೆಯುಂಟಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಪದವೀಧರರು ಒಂದು ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸುವ ನಿಯಮ ರದ್ದುಪಡಿಸಲು ತೀರ್ಮಾನಿಸಿರುವ ಸರ್ಕಾರ, ರಾಜ್ಯದಲ್ಲಿ ವೈದ್ಯರ ಕೊರತೆಯಿಲ್ಲ ಎಂದು ಹೇಳುತ್ತಿದೆ. ಈ ಮಾತು ಸತ್ಯಕ್ಕೆ ದೂರವಾದುದು. 2023–24ನೇ ಸಾಲಿನಲ್ಲಿ 3,251 ಎಂಬಿಬಿಎಸ್ ಅಭ್ಯರ್ಥಿಗಳು ಸರ್ಕಾರಿ ಸೇವೆಗೆ ಹೆಸರು ನೋಂದಾಯಿಸಿದ್ದಾರೆ. ಆದರೆ, 1,897 ಹುದ್ದೆಗಳು ಮಾತ್ರ ಖಾಲಿಯಿದ್ದು, ಎಲ್ಲರಿಗೂ ಅವಕಾಶ ಕಲ್ಪಿಸಲು 1,354 ಹೆಚ್ಚುವರಿ ಹುದ್ದೆಗಳನ್ನು ಸೃಜಿಸಬೇಕಾಗುತ್ತದೆ. ಅಗತ್ಯವಿದ್ದಷ್ಟೇ ವೈದ್ಯರನ್ನು ಹೊಂದಾಣಿಕೆ ನೇಮಕ ಮಾಡುತ್ತೇವೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ತಿಳಿಸಿದ್ದಾರೆ. ಈ ಹೇಳಿಕೆಯ ಜೊತೆಯಲ್ಲಿಯೇ, ಆರ್ಥಿಕವಾಗಿ ಹಿಂದುಳಿದ ಎಲ್ಲ ವರ್ಗಗಳಿಗೆ ವೈದ್ಯಕೀಯ ಸೇವೆಯನ್ನು ಒದಗಿಸುವ 'ನಮ್ಮ ಕ್ಲಿನಿಕ್'ಗಳು ಆರಂಭಗೊಂಡ ಹತ್ತು ತಿಂಗಳಲ್ಲೇ ಅನಾರೋಗ್ಯಕ್ಕೆ ತುತ್ತಾಗಿರುವ ವರದಿ ಕಳೆದ ತಿಂಗಳು ಸುದ್ದಿಯಾಗಿದ್ದುದನ್ನು ಗಮನಿಸಬೇಕು. 'ನಮ್ಮ ಆರೋಗ್ಯ, ನಮ್ಮ ಸಮೀಕ್ಷೆ' ಎನ್ನುವ ಘೋಷವಾಕ್ಯದಿಂದ ಆರಂಭವಾದ ಅನೇಕ 'ನಮ್ಮ ಕ್ಲಿನಿಕ್'ಗಳು ವೈದ್ಯರ ಹಾಗೂ ಸಿಬ್ಬಂದಿಯ ಕೊರತೆಯಿಂದ ಹೆಸರಿಗಷ್ಟೇ ಕಾರ್ಯನಿರ್ವಹಿಸುತ್ತಿವೆ. ವೈದ್ಯರ ಕೊರತೆಯಿಂದ ಗ್ರಾಮೀಣ ಪ್ರದೇಶಗಳ ಜನರು ಎದುರಿಸುತ್ತಿರುವ ಸಂಕಷ್ಟಗಳ ಕುರಿತ ವರದಿಗಳು ಮಾಧ್ಯಮಗಳಲ್ಲಿ ನಿರಂತರವಾಗಿ ಪ್ರಕಟಗೊಳ್ಳುತ್ತಿವೆ. ಈ ವಾಸ್ತವಕ್ಕೆ ಬೆನ್ನುಹಾಕಿ, ರಾಜ್ಯದಲ್ಲಿ ವೈದ್ಯರ ಕೊರತೆಯಿಲ್ಲ ಎಂದು ಹೇಳಿರುವ ಸರ್ಕಾರದ ಮಾತನ್ನು ತಿಳಿವಳಿಕೆಯ ಕೊರತೆ ಎಂದೇ ಭಾವಿಸಬೇಕಾಗುತ್ತದೆ. ವೈದ್ಯ ಪದವೀಧರರಿಗೆ ಗ್ರಾಮೀಣ ಪ್ರದೇಶಗಳಲ್ಲಿನ ಸೇವೆಯನ್ನು ಕಡ್ಡಾಯಗೊಳಿಸಿರುವ ನಿರ್ಧಾರವನ್ನು ಸರ್ಕಾರ ಮರುಪರಿಶೀಲಿಸಬೇಕು. ಹಳ್ಳಿಗಳು, ಪಟ್ಟಣಗಳಲ್ಲಿನ ಸರ್ಕಾರಿ ಆಸ್ಪತ್ರೆಗಳು ದುರ್ಬಲಗೊಳ್ಳದಂತೆ ನೋಡಿಕೊಳ್ಳಬೇಕಾದುದು ಸರ್ಕಾರದ ಹೊಣೆಗಾರಿಕೆ. ತಾರ್ಕಿಕವಾದ ಮಾತನಾಡುವ ಬದಲು, ವಾಸ್ತವದ ನೆಲೆಗಟ್ಟಿನಲ್ಲಿ ಗ್ರಾಮೀಣರಿಗೆ ವೈದ್ಯಕೀಯ ಸವಲತ್ತುಗಳನ್ನು ಒದಗಿಸುವ ದಿಸೆಯಲ್ಲಿ ಸರ್ಕಾರ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ನಡೆಸಬೇಕು.

ದಿನದ ಟ್ವೀಟ್

ಭತ್ತದ ಬೇಸಾಯ: ಚಿಂತನೆ ಅಗತ್ಯ

ಭತ್ತದ ಬೆಳೆಗೆ ಸಂಬಂಧಿಸಿದ ವಿಶ್ವವಿಖ್ಯಾತ ವಿಜ್ಞಾನಿ ಡಾ. ಗುರುದೇವ್ ಖುಷ್ ಅವರೊಂದಿಗೆ ನಡೆಸಿದ ಚರ್ಚೆಯ ಸಂದರ್ಭದಲ್ಲಿ, ಭತ್ತ ಬೇಸಾಯದ ಭವಿಷ್ಯದ ಬಗ್ಗೆ ನಾವು ಮಾತನಾಡಿದ್ದು. ಕಡಿಮೆ ನೀರು, ಕಡಿಮೆ ರಾಸಾಯನಿಕ ಬೇಡುವ ಮತ್ತು ಭತ್ತದ ಬೇಸಾಯವನ್ನು ಲಾಭದಾಯಕಗೊಳಿಸುವ ಭತ್ತದ ತಳಿಗಳನ್ನು ಅಭಿವೃದ್ಧಿಪಡಿಸಬೇಕಾದ ಅಗತ್ಯ ಇದೆ.

ದೇವಿಂದರ್ ಶರ್ಮಾ, ಲೇಖಕ

ಕಿಡಿನುಡಿ

ರಾಜ್ಯದಲ್ಲಿ ಈ ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಯಾವ ಬಗೆಯ ಭ್ರಷ್ಟಾಚಾರದ ಆರೋಪಗಳಿದ್ದವೋ ಕಾಂಗ್ರೆಸ್ ನೇತೃತ್ವದ ಸರ್ಕಾರದ ಬಗ್ಗೆಯೂ ಈಗ ಅದೇ ಬಗೆಯ ಆರೋಪಗಳು ಕೇಳಿಬರುತ್ತಿವೆ. ಬೆಂಕಿ ಇಲ್ಲದೆ ಹೊಗೆ ಆಡುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶೀಘ್ರದಲ್ಲಿ ಕ್ರಮ ಕೈಗೊಳ್ಳದಿದ್ದರೆ, ಜನ ಅವರ ಮೇಲೆ ಹಾಗೂ ಅವರ ಪಕ್ಷದ ಮೇಲೆ ವಿಶ್ವಾಸ ಕಳೆದುಕೊಳ್ಳುತ್ತಾರೆ.

ಗೌತಮ್ ಮಾಚಯ್ಯ, ಪತ್ರಕರ್ತ

25 ವರ್ಷಗಳ ಹಿಂದೆ

ಬುಧವಾರ, 21-10-1998

• ದೇವೇಗೌಡ-ಪಟೇಲ್ ಬಣ ಸಜ್ಜು

ಬೆಂಗಳೂರು, ಅ. 20– ರಾಜ್ಯ ಜನತಾದಳದಲ್ಲಿ ಉದ್ಭವಿಸಿರುವ ಬಿಕ್ಕಟ್ಟು ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿದ್ದು, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಮತ್ತು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಬೆಂಬಲಿಗರ ಗುಂಪುಗಳು ಬಲಾಬಲ ಪ್ರದರ್ಶನಕ್ಕೆ ಸಜ್ಜಾಗುತ್ತಿವೆ.

ಕಳೆದ ಎರಡು ದಿನಗಳಲ್ಲಿ ದಳದ ಎರಡೂ ಪಾಳಯದಲ್ಲಿ ಬಿರುಸಿನ ಚಟುವಟಿಕೆಗಳು ನಡೆದಿದ್ದು, ಪಕ್ಷದ ಶಾಸಕರ ಮನವೊಲಿಸಿ ತಮ್ಮತ್ತ ಸೆಳೆದುಕೊಳ್ಳುವ ಕಾರ್ಯವನ್ನು ಎರಡೂ ಗುಂಪಿನವರು ಮುಂದುವರಿಸಿದ್ದಾರೆ.

• ಚದುರಂಗರ ಅಂತ್ಯಕ್ರಿಯೆ

ಮೈಸೂರು, ಅ. 20– ಸೋಮವಾರ ಸಂಜೆ ಇಲ್ಲಿ ನಿಧನರಾದ ಖ್ಯಾತ ಸಾಹಿತಿ ಹಾಗೂ ಚಲನಚಿತ್ರ ನಿರ್ದೇಶಕ ಚದುರಂಗ (84) ಅವರ ಅಂತ್ಯಸಂಸ್ಕಾರವನ್ನು ಚಾಮುಂಡಿ ಬೆಟ್ಟದ ತಪ್ಪಲಿನ ವಿದ್ಯುತ್ ಚಿತಾಗಾರದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಇಂದು ನೆರವೇರಿಸಲಾಯಿತು.

• ಸತ್ಯಕಾಮ ಇನ್ನಿಲ್ಲ

ಬೆಂಗಳೂರು, ಅ. 20– ಮಂತ್ರ ತಂತ್ರಗಳನ್ನೆಲ್ಲಾ ವಸ್ತುವನ್ನಾಗಿಸಿಕೊಂಡು ವಿನೂತನ ಶೈಲಿಯ ಕಥೆ ಮತ್ತು ಕಾದಂಬರಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಧಾರೆ ಎರೆದಿದ್ದ ಸ್ವಾತಂತ್ರ್ಯ ಹೋರಾಟಗಾರ ಸತ್ಯಕಾಮ (ಅನಂತ ಕೃಷ್ಣ ಶಹಾಪೂರ) ಅವರು ಇಂದು ಇಲ್ಲಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಹೃದಯಾಘಾತದಿಂದ ನಿಧನರಾದರು.

50 ವರ್ಷಗಳ ಹಿಂದೆ

ಭಾನುವಾರ, 21-10-1973

• ಅಂತರಜಾತಿ ವಿವಾಹಕ್ಕೆ ಧನಸಹಾಯದ ಪರಿಶೀಲನೆ

ಬೆಂಗಳೂರು, ಅ. 20– ಹರಿಜನರು ಮತ್ತು ಸವರ್ಣೀಯರ ಮಧ್ಯೆ ಅಂತರಜಾತಿ ವಿವಾಹಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ 2,000 ರೂಪಾಯಿವರೆಗೆ ಧನಸಹಾಯ ನೀಡಬೇಕೆಂಬ ಸಮಾಜ ಕಲ್ಯಾಣ ಇಲಾಖೆಯ ಸಲಹೆಯೊಂದು ಸರ್ಕಾರದ ಪರಿಶೀಲನೆಯಲ್ಲಿದೆ.

• ಲೇಖಕ ತಿ.ತಾ. ಶರ್ಮ ನಿಧನ

ಬೆಂಗಳೂರು, ಅ. 20– ಧೈರ್ಯ, ಶೌರ್ಯದ ಶೈಲಿಯಲ್ಲಿ ಆಧುನಿಕ ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ದಿಗಂತ ಸೃಷ್ಟಿಸಿದ ನಿರ್ಭೀತ ಸಂಪಾದಕ ತಿರುಮಲೆ ತಾತಾಚಾರ್ಯ ಶರ್ಮ ಅವರು ಇಂದು ರಾತ್ರಿ ನಿಧನರಾದರು.

ತಮ್ಮ ಆಪ್ತಮಿತ್ರ ಸಿದ್ದವನಹಳ್ಳಿ ಕೃಷ್ಣಶರ್ಮ ಅವರು ಇತ್ತೀಚೆಗೆ ಕೊನೆಯುಸಿರೆಳೆದ ದುಃಖದಿಂದ ಅವರು ತೀವ್ರ ಅಸ್ವಸ್ಥರಾಗಿದ್ದರು.

ಕಾರ್ಮಿಕ ಮಾರುಕಟ್ಟೆಯಲ್ಲಿ ಮಹಿಳೆಯ ಸ್ಥಿತಿ: ನೊಬೆಲ್ ಪ್ರಶಸ್ತಿ ವಿಜೇತೆ ಕಣ್ಣಲ್ಲಿ...

ವೇತನ ತಾರತಮ್ಯ ಇನ್ನೂ ಯಾಕಿದೆ?

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

'ಕೆಲಸಕ್ಕೆ ಹೋಗದೆ ಮನೆಯಲ್ಲಿ ಮಕ್ಕಳನ್ನು ನೋಡಿಕೊಂಡು ಇರುವ ಮಹಿಳೆ ಮಾತ್ರ ಅಲ್ಲ, ಮಗು ಇಡುವ ಮೊದಲ ಹೆಜ್ಜೆಯನ್ನು ಸಂಭ್ರಮಿಸಲಾಗದೆ ಹೊರಗೆ ಮೆರೆಯುವ ಗಂಡಸು ಕೂಡ ಏನೋ ಕಳೆದುಕೊಳ್ಳುತ್ತಿರುತ್ತಾನೆ'.

ಇದು, ಈ ವರ್ಷ ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಕ್ಲಾಡಿಯಾ ಗೋಲ್ಡಿನ್ ಮಾತು.

ಗೋಲ್ಡಿನ್ ಮೂಲತಃ ಕಾರ್ಮಿಕ ಅರ್ಥಶಾಸ್ತ್ರಜ್ಞೆ. ಜೊತೆಗೆ ಅರ್ಥಶಾಸ್ತ್ರದ ಇತಿಹಾಸತಜ್ಞೆ. ಈಕೆ, ಕಳೆದ 200 ವರ್ಷಗಳಲ್ಲಿ ಕಾರ್ಮಿಕ ಮಾರುಕಟ್ಟೆಯಲ್ಲಿ ಮಹಿಳೆಯರ ಸ್ಥಿತಿಯಲ್ಲಿ ಆಗಿರುವ ಬದಲಾವಣೆಯನ್ನು ಅಧ್ಯಯನ ಮಾಡಿದ್ದಾರೆ. ಅದೊಂದು ಸವಾಲಿನ ಕೆಲಸ. ಇನ್ನೂರು ವರ್ಷಗಳ ಹಿಂದಿನ ಅಂಕಿಅಂಶಗಳು ಸಿಗುವುದು ಸುಲಭವಲ್ಲ. ಪತ್ತೇದಾರಿಣಿಯಂತೆ ಎಲ್ಲಾ ಮೂಲಗಳನ್ನು ಜರಡಿಯಾಡಿ, ಮಾಹಿತಿ ಕಲೆ ಹಾಕಿದ್ದಾರೆ.

ಹಿಂದೆಲ್ಲಾ ಮಹಿಳೆಯ ವೃತ್ತಿಯನ್ನು 'ಪತ್ನಿ' ಎಂದಷ್ಟೇ ದಾಖಲಿಸಲಾಗುತ್ತಿತ್ತು. ಅವರಲ್ಲಿ ಹಲವರು ಹೊಲದಲ್ಲೋ ಗಂಡಂದಿರ ಸಣ್ಣಪುಟ್ಟ ಉದ್ದಿಮೆಗಳಲ್ಲೋ ದುಡಿಯುತ್ತಿದ್ದರು. ದಾಖಲೆಗಳು ಹೇಳುವುದಕ್ಕಿಂತ ಐದುಪಟ್ಟು ಹೆಚ್ಚು ಮಹಿಳೆಯರು ಮನೆಯಾಚೆ ಕೆಲಸ ಮಾಡುತ್ತಿದ್ದರು ಅನ್ನುತ್ತಾರೆ ಗೋಲ್ಡಿನ್. ಆದರೆ ಹಾಗೆ ದುಡಿಯುತ್ತಿದ್ದ ಮಹಿಳೆಯರ ಸಂಖ್ಯೆ ಪುರುಷರಿಗಿಂತ ಕಡಿಮೆ ಇತ್ತು. ವೇತನವೂ ಪುರುಷರಿಗಿಂತ ಕಡಿಮೆಯೇ. ಯಾಕೆ ಹೀಗೆ? ಈ ಪ್ರಶ್ನೆಯ ಬೆನ್ನುಹತ್ತಿ ಹೊರಟಿದ್ದಕ್ಕೇ ಗೋಲ್ಡಿನ್ ಅವರಿಗೆ ನೊಬೆಲ್ ಪ್ರಶಸ್ತಿ ದಕ್ಕಿದ್ದು.

ಈ ಪ್ರಶ್ನೆ ಸಮಾನತೆಯ ಕಾರಣಕ್ಕಷ್ಟೇ ಮುಖ್ಯವಲ್ಲ. ಆರ್ಥಿಕತೆ ಬೆಳೆಯುವುದಕ್ಕೂ ತನ್ನ ಜನರಲ್ಲಿರುವ ನೈಪುಣ್ಯವನ್ನು ಬಳಸಿಕೊಳ್ಳುವುದು ಒಳ್ಳೆಯದು. ಮಹಿಳೆಯರ ಪ್ರತಿಭೆಯನ್ನು ಬಳಸಿಕೊಳ್ಳುವುದು ಜಗತ್ತಿನ ಅಭಿವೃದ್ಧಿಯ ದೃಷ್ಟಿಯಿಂದಲೂ ಮುಖ್ಯ. ಆರ್ಥಿಕತೆ ಬೆಳೆದರೆ ಮಹಿಳೆಯರ ಸ್ಥಿತಿ ಸುಧಾರಿಸುತ್ತದೆ. ಕೆಲಸಕ್ಕೆ ಹೆಚ್ಚೆಚ್ಚು ಸಂಖ್ಯೆಯಲ್ಲಿ ಬರುತ್ತಾರೆ. ಅವರ ವರಮಾನ ಹೆಚ್ಚುತ್ತದೆ ಎಂದೆಲ್ಲಾ ಭಾವಿಸಿಕೊಂಡಿದ್ದೇವೆ. ಗೋಲ್ಡಿನ್ ಇದೊಂದು ಮಿಥ್ಯೆ ಅನ್ನುತ್ತಾರೆ. ಪುರಾವೆಯಾಗಿ ಅಮೆರಿಕದ ಎರಡು ಶತಮಾನಗಳ ಅಂಕಿಅಂಶಗಳನ್ನು ನಮ್ಮ ಮುಂದಿಟ್ಟು ಇಡೀ ಚರಿತ್ರೆಯನ್ನೇ ಕಟ್ಟಿಕೊಡುತ್ತಾರೆ.

200 ವರ್ಷಗಳ ಹಿಂದೆ ಅಮೆರಿಕದ ಆರ್ಥಿಕತೆ ಬಹುತೇಕ ಕೃಷಿಯನ್ನೇ ಆಧರಿಸಿತ್ತು. ಹೆಚ್ಚಿನ ಮಹಿಳೆಯರು ಹೊಲಗದ್ದೆಗಳಲ್ಲಿ ದುಡಿಯುತ್ತಿದ್ದರು. 19ನೇ ಶತಮಾನದ ಪ್ರಾರಂಭದಲ್ಲಿ ಕೈಗಾರಿಕಾ ಕ್ರಾಂತಿ ಪ್ರಾರಂಭವಾಯಿತು. ಕೃಷಿಗೆ ಹೋಲಿಸಿದರೆ ಕಾರ್ಖಾನೆಗಳಲ್ಲಿ ಹೆಚ್ಚಿನ ವೇತನ ಸಿಗುತ್ತಿತ್ತು. ಸುಮಾರಾಗಿ ಗಂಡಸರಿಗೆ ಸಿಗುವಷ್ಟೇ ಸಿಗುತ್ತಿತ್ತು. ಆದರೆ ವಿವಾಹಿತ ಮಹಿಳೆಯರಿಗೆ ಈ ಸೌಲಭ್ಯ ಬಳಸಿಕೊಳ್ಳಲು ಆಗುತ್ತಿರಲಿಲ್ಲ. ಹಾಗೆ ಕೆಲಸಕ್ಕೆ ಹೋಗುವ ಮಹಿಳೆಯರನ್ನು ಆಗ ತಿರಸ್ಕಾರ ಭಾವದಿಂದ ನೋಡಲಾಗುತ್ತಿತ್ತು. ಜೊತೆಗೆ ಹೊರಗೆ ಕೆಲಸಕ್ಕೆ ಹೋದರೆ ಮಕ್ಕಳನ್ನು ನೋಡಿಕೊಳ್ಳುವವರ್‍ಯಾರು ಅನ್ನುವ ಸಮಸ್ಯೆಯೂ ಇತ್ತು. ಹೆಚ್ಚಿನ ವಿವಾಹಿತ ಮಹಿಳೆಯರು ಮನೆಯಲ್ಲೇ ಉಳಿದುಕೊಂಡರು. ಅವಿವಾಹಿತ ಮಹಿಳೆಯರಿಗಷ್ಟೇ ಕೆಲಸಕ್ಕೆ ಹೋಗುವುದಕ್ಕೆ ಸಾಧ್ಯವಾಯಿತು.

ಆಗ ಅವಿವಾಹಿತ ಮಹಿಳೆಯರು ಅಷ್ಟಾಗಿ ಓದಿರಲಿಲ್ಲ. ಅವರೆಲ್ಲಾ ಬಟ್ಟೆ ಹೊಲೆಯುವುದು, ಹಣ್ಣು, ತರಕಾರಿಗಳನ್ನು ಪ್ಯಾಕ್ ಮಾಡುವಂತಹ ಕೆಲಸಗಳನ್ನು ಮಾಡಿಕೊಂಡಿದ್ದರು. ಆದರೆ ಆಗ ಬದಲಾವಣೆ ಆಗುವುದಕ್ಕೆ ಪ್ರಾರಂಭವಾಯಿತು. ಸೇವಾ ಕ್ಷೇತ್ರ ತೆರೆದುಕೊಂಡಿತು. ಕಚೇರಿಗಳಲ್ಲಿ ಟೈಪ್‌ರೈಟರ್ ನಂತಹ ತಂತ್ರಜ್ಞಾನದ ಪ್ರವೇಶದಿಂದ ಕೆಲಸದ ಸ್ವರೂಪವೇ ಬದಲಾಯಿತು. ಉದ್ದಿಮೆಯ ಗಾತ್ರವೂ ಬೆಳೆಯಿತು. ಆಡಳಿತಕ್ಕೆ ಹೆಚ್ಚೆಚ್ಚು ಸಿಬ್ಬಂದಿ ಬೇಕಾದರು. ಹೆಚ್ಚೆಚ್ಚು ಹೆಣ್ಣುಮಕ್ಕಳು ಓದುವುದಕ್ಕೆ ಪ್ರಾರಂಭಿಸಿದರು. ಕಚೇರಿಗಳಲ್ಲಿ ದುಡಿಯುವ ವಾತಾವರಣ ಉತ್ತಮವಾಗಿತ್ತು. ಆದರೆ ಆಗಲೂ ವಿವಾಹಿತ ಮಹಿಳೆಯರಿಗೆ ಅವಕಾಶವನ್ನು ಬಳಸಿಕೊಳ್ಳುವುದಕ್ಕೆ ಆಗಲಿಲ್ಲ. ಆಗಿದ್ದ ಸಾಮಾಜಿಕ ರೂಢಿಗಳು ಮತ್ತು ಕಾನೂನುಗಳು ಅವರಿಗೆ ಅಡ್ಡಿಯಾಗಿದ್ದವು. ಬಹುತೇಕ ಉದ್ದಿಮೆಗಳು ವಿವಾಹಿತ ಮಹಿಳೆಯರನ್ನು ಕೆಲಸಕ್ಕೇ ತೆಗೆದುಕೊಳ್ಳುತ್ತಿರಲಿಲ್ಲ. ಉದ್ಯೋಗಾವಕಾಶಗಳು ಹೆಚ್ಚಿದ್ದರೂ ಮಹಿಳೆಯರಿಗೆ ಅದನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಸರ್ಕಾರವು ಪುರುಷರನ್ನು ಸೈನ್ಯಕ್ಕೆ ನೇಮಿಸಿಕೊಳ್ಳತೊಡಗಿತ್ತು. ಕೆಲಸಕ್ಕೆ ಜನರ ಕೊರತೆಯಿತ್ತು. ಮಹಿಳಾ ಕಾರ್ಮಿಕರಿಗೆ ಬೇಡಿಕೆ ಹೆಚ್ಚಾಗಿತ್ತು. ವಯಸ್ಸಾದ, ವಿವಾಹಿತ ಮಹಿಳೆಯರು ಗಣನೀಯ ಸಂಖ್ಯೆಯಲ್ಲಿದ್ದರು. ಅವರಿಗೆ ಕಚೇರಿಯಲ್ಲಿ ಕೆಲಸ ಮಾಡಿದ ಅನುಭವವೂ ಇತ್ತು. ವಾಷಿಂಗ್ ಮಷೀನ್, ರೆಫ್ರಿಜಿರೇಟರ್‌ನಂತಹ ತಂತ್ರಜ್ಞಾನದಿಂದ ಮನೆಯ ಕೆಲಸದ ಹೊರೆ ಸ್ವಲ್ಪಮಟ್ಟಿಗೆ ಕಡಿಮೆಯಾಗಿತ್ತು. ಮಕ್ಕಳು ಬೆಳೆದು ದೊಡ್ಡವರಾಗಿದ್ದರು. ವಿವಾಹಿತ ಮಹಿಳೆಯರನ್ನು ನೇಮಿಸಿಕೊಳ್ಳಬಾರದು ಎನ್ನುವ ನಿಯಮ ರದ್ದಾಯಿತು. ಸಮಾಜವು ವಿವಾಹಿತ ಮಹಿಳೆ ದುಡಿಯುವುದನ್ನು ಒಪ್ಪಿಕೊಳ್ಳತೊಡಗಿತು. ಉದ್ದಿಮೆಗಳೂ ಸೂಕ್ತ ಮಾರ್ಪಾಡು ಮಾಡಿಕೊಳ್ಳಲು ಪ್ರಾರಂಭಿಸಿದವು. ಅರೆಕಾಲಿಕ ಹುದ್ದೆಗಳು ಸೃಷ್ಟಿಯಾದವು. ಮಹಿಳೆಯರಿಗೆ ಹೊರಗಿನ ಹಾಗೂ ಮನೆಯೊಳಗಿನ ಕೆಲಸವನ್ನು ಹೊಂದಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು. 1970ರ ನಂತರ ಪರಿಸ್ಥಿತಿ ಇನ್ನಷ್ಟು ಬದಲಾಯಿತು.

ಮಹಿಳೆಯರು ಹೆಚ್ಚೆಚ್ಚು ಓದುವುದಕ್ಕೆ ಪ್ರಾರಂಭಿಸಿದರು. ಕೆಲಸಕ್ಕೆ ಬರುವವರ ಸಂಖ್ಯೆ ಹೆಚ್ಚತೊಡಗಿತು. ಈ ಬದಲಾವಣೆಗೆ ಗೋಲ್ಡಿನ್ ಪ್ರಕಾರ ಎರಡು ಕಾರಣಗಳಿವೆ. ಒಂದು, ಹೆಣ್ಣುಮಕ್ಕಳ ನಿರೀಕ್ಷೆಯಲ್ಲಿ ಬದಲಾವಣೆಯಾಗಿದ್ದು. ಎರಡನೆಯದು, ಗರ್ಭ ನಿರೋಧಕ ಗುಳಿಗೆಯ ಅನ್ವೇಷಣೆ.

ಹಿಂದಿನ ತಲೆಮಾರಿನ ಹೆಣ್ಣುಮಕ್ಕಳಿಗೆ ಭವಿಷ್ಯದಲ್ಲಿ ತಾವು ಕೆಲಸಕ್ಕೆ ಹೋಗುತ್ತೇವೆ ಅನ್ನುವ ನಿರೀಕ್ಷೆ ಅಷ್ಟಾಗಿ ಇರಲಿಲ್ಲ. ಆದರೆ ಈ ಮಕ್ಕಳಲ್ಲಿ ಹೆಚ್ಚಿನವರು ಕೆಲಸಕ್ಕೆ ಹೋದರು. ಅದು ಮುಂದಿನ ತಲೆಮಾರಿನವರಲ್ಲಿ ಉದ್ಯೋಗದ ನಿರೀಕ್ಷೆಯನ್ನು ಹೆಚ್ಚಿಸಿತು. ಉದ್ಯೋಗದ ನಿರೀಕ್ಷೆಗಳು ಹೆಚ್ಚಾದಂತೆ ಹೆಚ್ಚೆಚ್ಚು ಓದುವುದಕ್ಕೆ ಪ್ರಾರಂಭಿಸಿದರು. ಗಂಡುಮಕ್ಕಳನ್ನು ಮೀರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಪದವೀಧರರಾದರು. ವಿಭಿನ್ನ ಬಗೆಯ ವೃತ್ತಿ-ಶಿಕ್ಷಣಗಳನ್ನು, ವೃತ್ತಿಗಳನ್ನು ಆಯ್ಕೆ ಮಾಡಿಕೊಳ್ಳತೊಡಗಿದರು. ಇದು ಗೋಲ್ಡಿನ್ ಹೇಳುವ 'ಸದ್ದಿಲ್ಲದ ಕ್ರಾಂತಿ'.

ಹಾಗೆಯೇ ಮಹಿಳೆಯರ ಬದುಕನ್ನು ಬದಲಿಸಿದ ಇನ್ನೊಂದು ಬೆಳವಣಿಗೆ, ಗರ್ಭನಿರೋಧಕ ಮಾತ್ರೆಗಳ ಅನ್ವೇಷಣೆ. ಅದರಿಂದ ಮಹಿಳೆಯರಿಗೆ ಮದುವೆಯನ್ನು ಮುಂದೂಡುವುದಕ್ಕೆ, ಹೆಚ್ಚೆಚ್ಚು ಓದುವುದಕ್ಕೆ ಸಾಧ್ಯವಾಯಿತು. ತಮ್ಮ ದೇಹದ ಮೇಲೆ ಸ್ವಾತಂತ್ರ್ಯವನ್ನು ತಂದುಕೊಟ್ಟಿತು. ಆದರೆ ಲಿಂಗ ಆಧಾರಿತ ಆದಾಯದ ಅಂತರ ಹೆಚ್ಚೇ ಇತ್ತು. ಗೋಲ್ಡಿನ್ ಇದನ್ನು ಬೇರೆಯವರಿಗಿಂತ ಭಿನ್ನವಾಗಿ ಗ್ರಹಿಸಿಕೊಳ್ಳುತ್ತಾರೆ. ಕೆಲಸಕ್ಕೆ ಸೇರಿದ ಪ್ರಾರಂಭದ ದಿನಗಳಲ್ಲಿ ಇಬ್ಬರ ವರಮಾನದಲ್ಲಿ ಅಂತಹ ಅಂತರ ಇರುವುದಿಲ್ಲ. ಕಾಲಕ್ರಮೇಣ ಅಂತರ ಪ್ರಾರಂಭವಾಗುತ್ತದೆ. ಉನ್ನತ ಹುದ್ದೆಗಳಿಗೆ ಹೋದಂತೆ ವೇತನ ಹೆಚ್ಚುತ್ತದೆ. ಆದರೆ ಉನ್ನತ ಹುದ್ದೆಗೆ ಹೋದಂತೆ ಕೆಲಸದ ಅವಧಿ ಹೆಚ್ಚುತ್ತದೆ. ರಾತ್ರಿ ಹೊತ್ತು ಮೀಟಿಂಗ್‌ಗಳು ಇರುತ್ತವೆ. ಹೆಚ್ಚು ಪ್ರಯಾಣಿಸಬೇಕಾಗುತ್ತದೆ. ಅದನ್ನು ಗೋಲ್ಡಿನ್ ಅವರು ದುರಾಸೆಯ ಕೆಲಸಗಳು ಅನ್ನುತ್ತಾರೆ.

ಇಬ್ಬರಿರುವ ಕುಟುಂಬಗಳಲ್ಲಿ ಒಬ್ಬರಿಗಷ್ಟೇ ಅಂತಹ ಕೆಲಸಗಳಿಗೆ ಹೋಗುವುದಕ್ಕೆ ಸಾಧ್ಯ. ಸಾಮಾನ್ಯವಾಗಿ 'ಅಮ್ಮನ ಕೆಲಸ' ಮಹಿಳೆಗೇ ಮೀಸಲು. ಕೆಲಸದ ಮಧ್ಯೆ ಹಲವು ಬಾರಿ 'ಅಮ್ಮನ ಕೆಲಸ'ಕ್ಕೆ ಮರಳಬೇಕಾಗುತ್ತದೆ. ಆ ಸಂದರ್ಭದಲ್ಲಿ ಕೆಲಸಕ್ಕೆ ತಪ್ಪಿಸಿಕೊಳ್ಳುವುದು ಅನಿವಾರ್ಯ. ಆದರೆ ಪುರುಷರಿಗೆ ಈ ಒತ್ತಾಯವಿರುವುದಿಲ್ಲ. ಕಚೇರಿಯ ಕರೆಗೆ ತಕ್ಷಣ ಸ್ಪಂದಿಸುವುದಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ ಬಡ್ತಿ, ಹೆಚ್ಚಿನ ವೇತನ ಇವೆಲ್ಲಾ ಪುರುಷರಿಗೇ ಹೋಗುತ್ತವೆ. ಆದಾಯದಲ್ಲಿ ಅಂತರ ಹೆಚ್ಚುತ್ತದೆ. ಇದು ಸ್ಥೂಲವಾಗಿ ಗೋಲ್ಡಿನ್ ಅವರ ಚಿಂತನೆಯ ಕ್ರಮ.

ನಿಜ, ಅವರ ಅಧ್ಯಯನ ಬಹುತೇಕ ಅಮೆರಿಕಕ್ಕೆ ಸೀಮಿತವಾಗಿದೆ. ಹಿಂದುಳಿದ ದೇಶಗಳಲ್ಲಿ ವಾಸ್ತವ ಬೇರೆಯೇ ಇರಬಹುದು. ಜೊತೆಗೆ ಗೋಲ್ಡಿನ್ ಯಾವುದೇ ನೀತಿಗಳನ್ನು ಸೂಚಿಸುವುದಿಲ್ಲ. ಮುಂದಿನ ದಿನಗಳಲ್ಲಿ ಮಹಿಳೆಯರಿಗೆ ಸೌಲಭ್ಯಗಳು ಹೆಚ್ಚಬಹುದು ಅನ್ನುವ ನಿರೀಕ್ಷೆಯೂ ಹುಸಿಯಾಗಬಹುದು. ಜಾಗತಿಕ ಬೆಳವಣಿಗೆ ನೋಡಿದರೆ, ಇರುವ ಸೌಲಭ್ಯಗಳೂ ತಪ್ಪಿಹೋಗಬಹುದು. ಹೀಗೆ ಹಲವು ಅನುಮಾನಗಳು ಈ ಕುರಿತು ಸಾಧ್ಯ. ಆದರೆ ಗೋಲ್ಡಿನ್ ಅಂಥವರು ಅರ್ಥಶಾಸ್ತ್ರದ ಅಧ್ಯಯನದಲ್ಲಿ ಸ್ತ್ರೀವಾದಿ ಚಿಂತನೆಯನ್ನು ಮುನ್ನೆಲೆಗೆ ತರಲು ಮಾಡುತ್ತಿರುವ ಪ್ರಯತ್ನ ಶ್ಲಾಘನೀಯ.

ಚುರುಮುರಿ

ಕ್ರಿಕೆಟ್– ಪ್ರೀತಿ– ಪಾಠ!

• ಎಸ್.ಬಿ.ರಂಗನಾಥ್

'ಕ್ರಿಕೆಟಲ್ಲಿ ಡಕ್‌ಔಟ್ ಆಗೋದು ಅಂದ್ರೆ ಏನ್ರೀ?' ಶ್ರೀಮತಿಯ ಪ್ರಶ್ನೆ. ಮನೆಯಲ್ಲಿ ಸಾಂಕ್ರಾಮಿಕವಾಗಿ ಹಬ್ಬುತ್ತಿದ್ದ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಜ್ವರ ಆಕೆಗೂ ಅಂಟಿಕೊಳ್ಳುತ್ತಿದ್ದುದರ ಸ್ಪಷ್ಟ ಸೂಚನೆ!

ನಾನೆಂದೆ 'ಅದನ್ನ ಶೂನ್ಯ ಸಂಪಾದನೆ, ಸೊನ್ನೆ ಸುತ್ತೋದು ಅಂತಾನೂ ಕರೀತಾರೆ. ಬ್ಯಾಟರ್ ಒಂದು ರನ್ನೂ ಗಳಿಸದೆ ಪೆವಿಲಿಯನ್ ಸೇರೋದು... ಆಸ್ಟ್ರೇಲಿಯಾ ವಿರುದ್ಧ ನಮ್ಮ ಆರಂಭಿಕ ಜೋಡಿಯೂ ಸೇರಿದಂತೆ ಮೂವರು ದೊಡ್ಡ ಆಟಗಾರರು ಮಾಡಿದರಲ್ಲಾ ಆ ಸಾಧನೆ'.

'ಹಿಟ್ ವಿಕೆಟ್ ಅಂದ್ರೆ?'

'ಇದೊಂದು ರೀತಿಯ ಆತ್ಮಹತ್ಯೆ. ಬ್ಯಾಟ್ಸ್‌ಮನ್ ತನ್ನ ವಿಕೆಟನ್ನು ತಾನೇ ಕೆಡವಿಕೊಳ್ಳೋದು... ಅತ್ತೆಯ ಮಗಳು ಚಂಡಿ ಅಂತ ಗೊತ್ತಿದ್ದೂ ಮದುವೆಯಾದ್ನಲ್ಲಾ ಅದು!'

'ನನ್ನನ್ನು ಹಂಗಿಸದಿದ್ರೆ ನಿಮ್ಗೆ ಉಂಡ ಅನ್ನ ಜೀರ್ಣವಾಗೋದಿಲ್ಲ ಅಲ್ವೇ? ಎಲ್‌ಬಿಡಬ್ಲ್ಯು ಬಲೆಗೆ ಬೀಳಿಸೋದು ಅಂದ್ರೆ ಏನ್ರೀ?'

'ಬ್ಯಾಟರ್ ಕಾಲನ್ನು ವಿಕೆಟ್‌ಗೆ ಅಡ್ಡ ಇಡುವ ತಪ್ಪನ್ನು ಮಾಡಿಸೋದು. ಚೆನ್ನೈ ಪಂದ್ಯದಲ್ಲಿ ನಮ್ಮ ಕ್ಯಾಪ್ಟನ್ ರೋಹಿತ್ ಶರ್ಮಾರನ್ನು ಆಸ್ಟ್ರೇಲಿಯಾದ ಹ್ಯಾಜಲ್ ವುಡ್ ಔಟ್ ಮಾಡಿದ್ದು ಅದೇ ರೀತಿ. ಮದುವೆಗೆ ಮೊದಲು ನಿನ್ನ ಮೋಹಜಾಲದಲ್ಲಿ ನನ್ನನ್ನು ಬೀಳಿಸಿ ಕೊಂಡೆಯಲ್ಲಾ, ಅದೂ ಎಲ್‌ಬಿಡಬ್ಲ್ಯುನೇ- ಲವ್ ಬಿಫೋರ್ ವೆಡಿಂಗ್!'

'ಈ ಲವ್, ಪ್ರೀತಿ ಬಗ್ಗೆ ಫಿನ್ಲೆಂಡ್ ವಿ.ವಿ. ಸಂಶೋಧನೆ ಮಾಡಿದೆಯಂತಲ್ರೀ!'

'ಹೌದು, ಪ್ರೀತಿಯಲ್ಲಿ 27 ವಿಧಗಳಿವೆಯಂತೆ!'

'ಹೌದಾ?! ನಂಗೆ ಗೊತ್ತಿರೋವು ಎರಡೇ- ಅಮ್ಮನ ಪ್ರೀತಿ ಮತ್ತು ಮಕ್ಕಳ ಪ್ರೀತಿ'.

'ಗಂಡನ ಪ್ರೀತಿಯಂತೂ ನಾಪತ್ತೆ'.

'ನಿಮ್ಗೆ ಹೆಂಡ್ತಿ ಪ್ರೀತಿ ಗೊತ್ತಿದ್ರೆ ತಾನೇ? ಮತ್ತೆ ಯಾವ ಪ್ರೀತಿಗಳಿವೆ?'

'ದೈಹಿಕ ಮತ್ತು ಮಾನಸಿಕ. ಮೊದಲನೇದು ಎಲ್‌ಬಿಡಬ್ಲ್ಯು- ಆಕರ್ಷಕ. ಈಗಿನದು ಲವ್ ಆಫ್ಟರ್ ವೆಡಿಂಗ್- ನೀರಸ! ಎರಡೂ ನಮ್ಮ ಅನುಭವಗಳೇ ಅಲ್ವೇ?'

ಗರಂ ಆಗಿ, ಧೊಪ್ಪನೆ ಹೆಜ್ಜೆ ಹಾಕುತ್ತಾ ಶ್ರೀಮತಿಯವರ ನಿರ್ಗಮನವಾಯಿತು!

ಸಂಗತ

ಬೇಕು ವಿದ್ಯುತ್ ಉಳಿತಾಯದ ಸೂತ್ರ

ಅಗತ್ಯವಿಲ್ಲದೆ ವಿದ್ಯುತ್ ಬಳಕೆ ಮಾಡುವುದಿಲ್ಲ ಎಂಬುದು ಇಂದು ಪ್ರತಿಯೊಬ್ಬರೂ ಪಾಲಿಸಲೇಬೇಕಾದ ಬೀಜಮಂತ್ರವಾಗಬೇಕು

• ಪ.ರಾಮಕೃಷ್ಣ ಶಾಸ್ತ್ರಿ

ಇನ್ನೂ ಬೇಸಿಗೆ ಕಾಲ ಬಂದಿಲ್ಲ. ಅದಕ್ಕಿಂತ ಮೊದಲೇ ಅನಿಯಮಿತ ವಿದ್ಯುತ್ ಕಡಿತದ ಶಿಕ್ಷೆ ಆರಂಭವಾಗಿದೆ. ಅದು ಕೂಡ ಸಾಮಾನ್ಯ ಜನರಿಗೆ ಹೆಚ್ಚು ಅಗತ್ಯವಿರುವ ಮುಸ್ಸಂಜೆಯ ಹೊತ್ತನ್ನೇ ಆರಿಸಿಕೊಂಡು ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಉಚಿತ ವಿದ್ಯುತ್ ಕೊಡುವುದರಿಂದ ವಿದ್ಯುತ್ ಕೊರತೆ ಉಂಟಾಗಿದೆ ಎಂಬ ವಿರೋಧ ಪಕ್ಷಗಳ ಟೀಕೆಯನ್ನು ಬದಿಗೊತ್ತಬೇಕು. ವಿದ್ಯುತ್ ಮಿತ ಬಳಕೆಯ ಸೂತ್ರವೊಂದನ್ನು ರೂಪಿಸುವ ಮೂಲಕ, ಲಭ್ಯವಿರುವ ವಿದ್ಯುತ್ತನ್ನು ಹೆಚ್ಚು ಬಳಸುವ ನೀತಿ ಸೂತ್ರವೊಂದು ಇಂದು ಅಗತ್ಯವಿದೆ ಎನಿಸುತ್ತದೆ.

ಜಲ ವಿದ್ಯುತ್ತನ್ನೇ ನಂಬಿದರೆ ಈ ವರ್ಷ ಮಳೆಯ ಕೊರತೆಯಿಂದ ಅದು ಲಭ್ಯವಾಗಲಾರದು. ಕೃಷಿಗೆ ಉಚಿತವಾಗಿ ವಿದ್ಯುತ್ ಪೂರೈಸಲಾಗುತ್ತಿದೆ. ಅನೇಕ ತೋಟಗಳಲ್ಲಿ ಅನಗತ್ಯವಾಗಿ ಹಗಲು, ರಾತ್ರಿ ಬಿಡದೆ ಪಂಪುಗಳು ಕೊಳವೆಬಾವಿಯ ನೀರನ್ನು ಉಗುಳುತ್ತಲೇ ಇರುತ್ತವೆ. ತೋಟದಲ್ಲಿ ತುಂಬಿದ ನೀರು ಮತ್ತೆ ಕೆರೆಗೋ ಚರಂಡಿಗೋ ಹರಿದುಹೋದರೂ ಪಂಪುಗಳು ಸ್ತಬ್ಧವಾಗುವುದಿಲ್ಲ. ಕೃಷಿಗೆ ಬಳಸುವ ವಿದ್ಯುತ್ತಿಗೆ ಕಾಲ ಮಿತಿಯನ್ನು ಹೇರುವ ಮೂಲಕ ರೈತರು ಜವಾಬ್ದಾರಿಯುತವಾಗಿ ಅದರ ಸದುಪಯೋಗ ಮಾಡಲು ಸಲಹೆ ನೀಡುವುದು ಉಚಿತ ಎನಿಸುತ್ತದೆ.

ಪಟ್ಟಣಗಳಲ್ಲಿ ಹಲವಾರು ಮಳಿಗೆಗಳು ರಾತ್ರಿ ತಮ್ಮ ನಾಮಫಲಕ ಎದ್ದು ಕಾಣಬೇಕೆಂದು ಬಣ್ಣಬಣ್ಣದ ಬಲ್ಬುಗಳನ್ನು, ಮಿನಿಯೇಚರ್‌ಗಳನ್ನು ಬಳಸಿ ಝಗಮಗಿಸುವಂತೆ ಮಾಡುತ್ತವೆ. ವ್ಯಾಪಾರ ಮುಗಿಸಿ ಅಂಗಡಿ ಬಾಗಿಲು ಹಾಕಿದ ಮೇಲೂ ಅಷ್ಟೊಂದು ದೀಪಗಳು ಬೆಳಗುತ್ತಲೇ ಇರುವುದು ಅನಿವಾರ್ಯವೇ? ಅದಕ್ಕೊಂದು ಮಿತಿ ಹೇರಿದರೆ ವಿದ್ಯುತ್ ಉಳಿಸಬಹುದಲ್ಲವೇ? ಗ್ರಾಮೀಣ ಪ್ರದೇಶದ ರಸ್ತೆಗಳಿಗೆ ಗ್ರಾಮ ಪಂಚಾಯಿತಿ ವತಿಯಿಂದ ಬೀದಿ ದೀಪಗಳನ್ನು ಅಳವಡಿಸಿ, ಬೆಳಗಾಗುವವರೆಗೂ ಉರಿಸಲಾಗುತ್ತದೆ. ಇಲ್ಲಿ ಜನಸಂಚಾರ ರಾತ್ರಿಯಿಡೀ ಇರುವುದಿಲ್ಲ. ಜನರಿಗೆ ಅವಶ್ಯವಿರುವಷ್ಟು ಸಮಯ ಮಾತ್ರ ಇಂತಹ ದೀಪಗಳನ್ನು ಉರಿಸಬಹುದಲ್ಲವೇ?

ವರ್ಷಗಳ ಹಿಂದೆ ಇಂಧನ ಇಲಾಖೆ ಮಿತ ಬೆಲೆಯ ಎಲ್‌ಇಡಿ ಬಲ್ಬುಗಳನ್ನು ಗ್ರಾಹಕರಿಗೆ ನೀಡುವ ಪದ್ಧತಿ ಇತ್ತು. ಈಗ ಅದನ್ನು ಕೈಬಿಟ್ಟಿದೆ. ವಿದ್ಯುತ್ ಉಳಿತಾಯಕ್ಕೆ ಇಂತಹ ಬಲ್ಬುಗಳು ಸಹಾಯಕ. ಸಾಮಾನ್ಯ ಬಲ್ಬುಗಳಿಗೆ ಬೆಲೆ ಕಮ್ಮಿಯಾದರೂ ವಿದ್ಯುತ್ ದುರ್ವ್ಯಯವಾಗುತ್ತದೆ. ಮತ್ತೆ ಇಂಧನ ಇಲಾಖೆ ಎಲ್‌ಇಡಿ ಬಲ್ಬುಗಳನ್ನು ಮನೆಮನೆಗಳಿಗೂ ಒದಗಿಸಿ ಬಹಳಷ್ಟು ಪ್ರಮಾಣದಲ್ಲಿ ವಿದ್ಯುತ್ ಉಳಿಸಲು ಪ್ರಯತ್ನಿಸಬಹುದು.

ಮನೆಗಳಲ್ಲಿ ಸೌರಶಕ್ತಿಯ ಬಿಸಿನೀರಿನ ಘಟಕ ಸ್ಥಾಪಿಸಿದವರಿಗೆ ವಿದ್ಯುತ್ ಬಿಲ್‌ನಲ್ಲಿ ಗರಿಷ್ಠ ಐವತ್ತು ರೂಪಾಯಿಗಳಷ್ಟು ರಿಯಾಯಿತಿ ನೀಡಲಾಗುತ್ತದೆ. ವಾಸ್ತವವಾಗಿ ಮನೆಗಳಲ್ಲಿ ಸೌರವಿದ್ಯುತ್ ಹೆಚ್ಚು ಬಳಸುವವರಿಗೆ ಇಂತಹ ಪ್ರೋತ್ಸಾಹಧನ ಸಿಕ್ಕಿದರೆ ಅನುಕೂಲವಾಗುತ್ತಿತ್ತು. ಉಚಿತವಾಗಿ ವಿದ್ಯುತ್ ನೀಡುವುದಕ್ಕಿಂತಲೂ ಬಳಕೆದಾರರಿಗೆ ಸೌರಶಕ್ತಿ ಉತ್ಪಾದನೆಗೆ ಸಂಪೂರ್ಣ ನೆರವು ನೀಡಿದ್ದರೆ ಶಾಶ್ವತವಾಗಿ ಮನೆ ಬೆಳಗುವಷ್ಟು ವಿದ್ಯುತ್ ಯಾವುದೇ ಶ್ರಮವಿಲ್ಲದೆ ಪ್ರಾಪ್ತವಾಗುತ್ತಿತ್ತು. ಸೌರಶಕ್ತಿ ಫಲಕಗಳ ಬೆಲೆ ದುಬಾರಿಯಾಗಿರುವುದರಿಂದ ಸರ್ಕಾರ ಇತ್ತ ಗಮನಹರಿಸಬಹುದು.

ಮಲೆನಾಡಿನ ಅನೇಕ ಕಡೆ ಎತ್ತರದಿಂದ ಹರಿದುಬರುವ ನೀರಿನಿಂದ ಸುಲಭವಾಗಿ ವಿದ್ಯುತ್ ಉತ್ಪಾದಿಸುವ ಸಾಧ್ಯತೆಯಿದ್ದರೂ ಹಣಕಾಸಿನ ಕೊರತೆ ಹಾಗೂ ಮಾರ್ಗದರ್ಶನ ಲಭಿಸದಿರುವ ಕಾರಣ ಹಲವರು ಅದರ ಲಾಭ ಪಡೆಯಲು ಸಾಧ್ಯವಾಗದೇ ಹೋಗಿದೆ. ಗ್ರಾಮೀಣ ಜನರು ಇಂತಹ ಅಯಾಚಿತ ವಿದ್ಯುತ್ ಉತ್ಪಾದಿಸಲು ಸರ್ಕಾರ ಬೆಂಬಲ ನೀಡಬೇಕು. ಇದರಿಂದ, ಭವಿಷ್ಯದ ವಿದ್ಯುತ್ ಸ್ವಾವಲಂಬನೆಗೆ ಸಹಾಯವಾಗುತ್ತದೆ.



ಅಗತ್ಯವಿಲ್ಲದೆ ವಿದ್ಯುತ್ ಬಳಕೆ ಮಾಡುವುದಿಲ್ಲ ಎಂಬುದು ಇಂದು ಪ್ರತಿಯೊಬ್ಬರೂ ಪಾಲಿಸಲೇಬೇಕಾದ ಬೀಜಮಂತ್ರವಾಗಬೇಕು. ಕಚೇರಿಗಳಲ್ಲಿ ಪಂಖಗಳು ತಿರುಗುತ್ತಲೇ ಇರುತ್ತವೆ, ಕೊಠಡಿಯೊಳಗೆ ಯಾರೂ ಇಲ್ಲದಿದ್ದಾಗಲೂ. ಮಧ್ಯಾಹ್ನ ಊಟದ ಬಿಡುವಿನಲ್ಲಿ ನೌಕರರು ಹೊರಗೆ ಹೋಗಿದ್ದರೂ ಗಾಳಿ ಪಂಖ ಮೌನವಾಗುವುದಿಲ್ಲ. ಇಂತಹ ಕಚೇರಿಗಳಲ್ಲಿ ಬಳಸುವ ವಿದ್ಯುತ್ತಿಗೂ ಪರಿಮಿತಿ ಹೇರಬಹುದು. ಮಠ ಮಂದಿರಗಳು ಕೂಡ ಜನ ಬರುವ ಸಮಯ ಕಳೆದ ಮೇಲೂ ದೀಪಾಲಂಕಾರಗಳನ್ನು ಹಾಗೆಯೇ ಉಳಿಸುವ ಔಚಿತ್ಯವಾದರೂ ಏನಿದೆ?

ವಿದ್ಯುತ್ ಲಭ್ಯವಿರುವಾಗ ಉಳ್ಳವರು ಬ್ಯಾಟರಿಗಳ ಮೂಲಕ ಸಂಗ್ರಹ ಮಾಡಿಕೊಳ್ಳುತ್ತಾರೆ. ಆದರೆ ಅಂತಹ ಅನುಕೂಲವಿಲ್ಲದ ದುಡಿಯುವ ಮಂದಿಗೆ ತುಂಬ ತೊಂದರೆಯಾಗುತ್ತದೆ. ಹಳ್ಳಿಗಳಲ್ಲಿ ಸರ್ಕಾರ ಭಾಗ್ಯಜ್ಯೋತಿಯ ಹೆಸರಿನಲ್ಲಿ ನೀಡುತ್ತಿದ್ದ ಉಚಿತ ವಿದ್ಯುತ್ ಸೌಲಭ್ಯವೂ ದುರುಪಯೋಗವಾಗುತ್ತಿತ್ತು. ಇಂಧನ ಇಲಾಖೆಯ ಅಧಿಕಾರಿಗಳು ಜಾಗೃತರಾದರೆ ವಿದ್ಯುತ್ ಕಳ್ಳತನವನ್ನು ತಡೆಯಬಹುದು.

ಮನೆಯ ಚಾವಣಿಗಳಲ್ಲಿ ವಿದ್ಯುತ್ ಉತ್ಪಾದನೆ ಮಾಡುವವರಿಗೆ ಸಹಾಯಧನ ನೀಡುವುದರ ಜೊತೆಗೆ ಉತ್ಪಾದಿಸಿದ ವಿದ್ಯುತ್ತನ್ನು ಯೋಗ್ಯ ಬೆಲೆಗೆ ಖರೀದಿ ಮಾಡುವ ಯೋಜನೆ ನಮ್ಮಲ್ಲಿ ಕಾರ್ಯರೂಪಕ್ಕೆ ಬಂದಿತ್ತು. ಆದರೆ ವರ್ಷಗಳು ಕಳೆಯುತ್ತಿದ್ದಂತೆ ಈ ಖರೀದಿಯ ದರವನ್ನು ಇಳಿಸಲಾಗಿದೆ. ಬ್ಯಾಂಕುಗಳಿಂದ ಸಾಲ ಪಡೆದು ವಿದ್ಯುತ್ ಉತ್ಪಾದಕ ಘಟಕ ಸ್ಥಾಪಿಸಿದವರಿಗೆ ಈಗ ಬರುವ ಹಣ ಬ್ಯಾಂಕಿನ ಕಂತು ತುಂಬಲೂ ಸಾಕಾಗುತ್ತಿಲ್ಲ ಎಂದು ಹೇಳಲಾಗುತ್ತಿದೆ. ಪರಿಸರಕ್ಕೆ ಹಾನಿ ತರದ ಸೌರ ವಿದ್ಯುತ್ ಉತ್ಪಾದನೆಯ ಹಲವಾರು ಘಟಕಗಳನ್ನು ಗ್ರಾಮಗಳಲ್ಲಿ ಸ್ಥಾಪಿಸುವುದರ ಮೂಲಕ ವಿದ್ಯುತ್ ಕೊರತೆಗೆ ಉತ್ತರ ಕಂಡುಕೊಳ್ಳಬಹುದು. ಇದರಿಂದ ವಿದ್ಯುತ್ ಸಾಗಣೆ ಸಮಯದಲ್ಲಿ ಸಂಭವಿಸುವ ಸೋರಿಕೆಯೂ ತಗ್ಗುತ್ತದೆ.

ವಾಚಕರ ವಾಣಿ

ಸಾಕುಪ್ರಾಣಿಗಳ ಶೌಚಕ್ರಿಯೆ: ನಿಯಮ ಅಗತ್ಯ

ರಾಜಧಾನಿ ಬೆಂಗಳೂರಿನಲ್ಲಿ ಸಾಕುಪ್ರಾಣಿಗಳು ಹಾಗೂ ಬೀದಿನಾಯಿಗಳ ಶೌಚಕ್ರಿಯೆ ರಸ್ತೆಗಳಲ್ಲೇ ನಡೆಯುತ್ತದೆ. ಇದು ರಸ್ತೆಗಳಲ್ಲಿ ಓಡಾಡುವ ಜನರಿಗೆ ತಲೆನೋವಾಗಿದೆ. ಬೆಳಗಾಗೆದ್ದು ವಾಕಿಂಗ್ ಹೋಗುವವರಂತೂ ತಲೆ ತಗ್ಗಿಸಿ ಎಚ್ಚರಿಕೆಯಿಂದಲೇ ನಡೆಯಬೇಕಾದಂತಹ ಸ್ಥಿತಿ ಇದೆ.

ತಮ್ಮ ಸಾಕುಪ್ರಾಣಿಗಳ ಶೌಚವನ್ನು ತಾವೇ ತೆಗೆದು ಹಾಕುವ ರೀತಿಯಲ್ಲಿ ರಸ್ತೆಯಲ್ಲಿ ಅಲ್ಲಲ್ಲಿ ಡಬ್ಬಿಗಳನ್ನು ಇಡುವ ವ್ಯವಸ್ಥೆ ಮಾಡಬೇಕು. ಕಡ್ಡಾಯವಾಗಿ ಅದರಲ್ಲೇ ಹಾಕುವಂತೆ ತಿಳಿಸಬೇಕು. ಬೀದಿನಾಯಿಗಳ ಶೌಚವನ್ನು ತೆಗೆಸಲೂ ಸರ್ಕಾರ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ಇದರಿಂದ ಎಷ್ಟೋ ಜನ ನೆಮ್ಮದಿಯ ನಿಟ್ಟುಸಿರು ಬಿಡಬಹುದು.

ಶ್ಯಾಮಲಾ ಸತ್ಯ, ಬೆಂಗಳೂರು

ದಂಧೆಗೆ ಕಡಿವಾಣ: ಸ್ವಾಗತಾರ್ಹ ಕ್ರಮ

ಸರ್ಕಾರಿ ಆಸ್ಪತ್ರೆಗಳ ಆಸುಪಾಸಿನಲ್ಲಿ ಸುಮಾರು 200 ಮೀಟರ್ ಅಂತರದಲ್ಲಿ ಖಾಸಗಿ ವೈದ್ಯಕೀಯ ಪ್ರಯೋಗಾಲಯಗಳನ್ನು ತೆರೆಯಬಾರದು ಎಂದು ಸರ್ಕಾರ ಆದೇಶ ಹೊರಡಿಸಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸ್ವಾಗತಾರ್ಹ ಕ್ರಮ. ಏಕೆಂದರೆ, ಕೆಲವು ಸರ್ಕಾರಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳ ಅಕ್ಕಪಕ್ಕದಲ್ಲಿ ಅಥವಾ ಎದುರುಗಡೆಯೇ ಲ್ಯಾಬ್‌ಗಳು ಮತ್ತು ಎಕ್ಸ್‌ರೇ ಪ್ರಯೋಗಾಲಯಗಳು ಬಹಳಷ್ಟು ವರ್ಷಗಳಿಂದಲೂ ನಡೆಯುತ್ತಿವೆ. ಇವು, ಸರ್ಕಾರಿ ಆಸ್ಪತ್ರೆಗೆ ಬರುವ ಬಡ ರೋಗಿಗಳಿಂದ ಹಣ ದೋಚುವ ಕೆಲಸ ಮಾಡುತ್ತಿವೆ.

ಸರ್ಕಾರಿ ಆಸ್ಪತ್ರೆಗಳ ಕೆಲವು ವೈದ್ಯರು ಅವಶ್ಯಕತೆ ಇರಲಿ ಅಥವಾ ಇಲ್ಲದಿರಲಿ, ಪಕ್ಕದ ಪ್ರಯೋಗಾಲಯದಲ್ಲೇ ಕೆಲವು ಮಾದರಿ ರಕ್ತಪರೀಕ್ಷೆಗಳನ್ನು ಮಾಡಿಸಿಕೊಂಡು ಬರುವಂತೆ ಸೂಚಿಸಿ ಚೀಟಿ ಬರೆದುಕೊಡುತ್ತಾರೆ. ಕೆಲವು ಕಡೆ ಈ ಪ್ರಯೋಗಾಲಯಗಳು ಆ ಸರ್ಕಾರಿ ವೈದ್ಯರ ಸಂಬಂಧಿಕರದ್ದೇ ಆಗಿರುತ್ತವೆ. ಅದನ್ನು ಪ್ರಶ್ನೆ ಮಾಡುವ ಧೈರ್ಯ ಯಾರಿಗೂ ಇರುವುದಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ರಕ್ತಪರೀಕ್ಷೆ ಮಾಡುವ ಅವಶ್ಯ ಉಪಕರಣಗಳು ಇದ್ದರೂ ಬೇರೆಡೆ ಮಾಡಿಸಿಕೊಂಡು ಬರುವಂತೆ ಚೀಟಿ ಬರೆದುಕೊಡಲಾಗುತ್ತದೆ. ಸರ್ಕಾರದ ಸದ್ಯದ ಸುತ್ತೋಲೆಯಿಂದ ಈ ದಂಧೆ ಸ್ವಲ್ಪಮಟ್ಟಿಗಾದರೂ ಸುಧಾರಿಸಬಹುದು.

ಬೂಕನಕೆರೆ ವಿಜೇಂದ್ರ, ಮೈಸೂರು

ಪಂಚಾಯಿತಿಗಳಲ್ಲಿ ಅಕ್ರಮ: ತನಿಖಾ ಸಮಿತಿ ನೇಮಿಸಿ

ಸರ್ಕಾರಗಳು ಗ್ರಾಮ ಪಂಚಾಯಿತಿಗಳಿಗೆ ವಿವಿಧ ಯೋಜನೆಗಳಡಿ ಕೋಟ್ಯಂತರ ರೂಪಾಯಿ ಬಿಡುಗಡೆ ಮಾಡುತ್ತವೆ. ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಯ ಉದ್ದೇಶದಿಂದ ಬಿಡುಗಡೆಯಾಗುವ ಈ ಹಣವನ್ನು ಬಹುತೇಕ ಗ್ರಾಮ ಪಂಚಾಯಿತಿ ಸದಸ್ಯರು, ಅಧ್ಯಕ್ಷರು, ಅಧಿಕಾರಿಗಳು ಸರ್ಕಾರಕ್ಕೆ ಸುಳ್ಳು ಲೆಕ್ಕ ನೀಡಿ ದುರುಪಯೋಗಪಡಿಸಿಕೊಳ್ಳುತ್ತಿರುವುದು ನಿರ್ಭೀತಿಯಿಂದ ಸಾಗುತ್ತಿದೆ. ಗ್ರಾಮಸ್ಥರು ಈ ಬಗೆಗಿನ ಮಾಹಿತಿ ಕೊರತೆಯಿಂದ ಸುಮ್ಮನಿದ್ದರೆ, ವಿದ್ಯಾವಂತ ಸಮುದಾಯವು ಈ ಅವ್ಯವಹಾರಗಳನ್ನು ಪ್ರಶ್ನಿಸುವ ಗೋಜಿಗೇ ಹೋಗುವುದಿಲ್ಲ. ಹೀಗಾಗಿ, ಸರ್ಕಾರಗಳು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ನಡೆಸುವ ಪ್ರಗತಿ ಪರಿಶೀಲನಾ ಸಭೆಗಳ ಜೊತೆಗೆ, ಪಂಚಾಯಿತಿಗಳ ವ್ಯವಹಾರ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಖುದ್ದು ಪರಿಶೀಲಿಸಲು ಅನುವಾಗುವಂತೆ ದಕ್ಷ, ಪ್ರಾಮಾಣಿಕ ಐಎಎಸ್, ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾವಾರು ಆಂತರಿಕ ತನಿಖಾ ಸಮಿತಿಗಳನ್ನು ನೇಮಿಸುವ ಅನಿವಾರ್ಯ ಇದೆ. ಭ್ರಷ್ಟಾಚಾರದಲ್ಲಿ ತೊಡಗಿರುವ ಪಂಚಾಯಿತಿ ಸದಸ್ಯರು ಮತ್ತು ಅಧಿಕಾರಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ರೀತಿಯಲ್ಲಿ ಈ ತನಿಖಾ ಸಮಿತಿಗಳು ಕಾರ್ಯನಿರ್ವಹಿಸಬೇಕು. ಹೀಗಾಗದೇ ಹೋದಲ್ಲಿ ಗ್ರಾಮಗಳ ಅಭಿವೃದ್ಧಿ ಎಂಬುದು ಬರೀ ಸರ್ಕಾರದ ದಾಖಲೆಗಳಿಗೆ ಸೀಮಿತವಾಗುತ್ತದೆ.

ಕೆ.ಜೆ.ಕೊಟ್ರಗೌಡ, ತೂಲಹಳ್ಳಿ

ವೈದ್ಯರಿಗೆ ನಿಯಮ ಸಡಿಲಿಕೆ ತರವಲ್ಲ

ಎಂಬಿಬಿಎಸ್ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳಿಗಿದ್ದ ನಿಯಮವನ್ನು ಸಡಿಲಿಸಿ, ಗ್ರಾಮೀಣ ಸೇವೆಯನ್ನು ಕಡ್ಡಾಯಗೊಳಿಸದೇ ಇರಲು ಸಚಿವ ಸಂಪುಟ ಸಭೆ ತೀರ್ಮಾನಿಸಿರುವುದು (ಪ್ರ.ವಾ., ಅ. 20) ಒಳ್ಳೆಯ ನಡೆಯಲ್ಲ. ಸ್ನಾತಕೋತ್ತರ ವೈದ್ಯರು ಗ್ರಾಮೀಣ ಸೇವೆಗೆ ಅರ್ಹರಲ್ಲವೋ ಅಥವಾ ಸರ್ಕಾರವೇ ಅವರ ಸೇವೆಯ ಅಗತ್ಯವಿಲ್ಲವೆಂದು ಬಿಟ್ಟಿದೆಯೋ ಅರ್ಥವಾಗುವುದಿಲ್ಲ. ಜ್ವರದಂತಹ ಸಣ್ಣಪುಟ್ಟ ತೊಂದರೆಗಳಿಗೆ ಸಾಮಾನ್ಯ ವೈದ್ಯರು ಚಿಕಿತ್ಸೆ ಕೊಡಬಹುದು. ಆದರೆ ಹಲವು ಸಂದರ್ಭಗಳಲ್ಲಿ ಸ್ನಾತಕೋತ್ತರ ಪದವೀಧರ ವೈದ್ಯರಂಥವರ ಪರಿಣತಿ ಬೇಕಾಗುತ್ತದೆ. ಹೀಗಾಗಿ, ಕನಿಷ್ಠ ಒಂದು ವರ್ಷವಾದರೂ ಈ ಅಭ್ಯರ್ಥಿಗಳನ್ನು ಗ್ರಾಮೀಣ ಸೇವೆಗೆ ಹಚ್ಚಿದಲ್ಲಿ ಗ್ರಾಮಸ್ಥರಿಗೆ ಸಮಯ ಹಾಗೂ ಹಣ ಎರಡೂ ಉಳಿತಾಯವಾಗುತ್ತದೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಅಲಿಖಿತ ಸಂದೇಶಕ್ಕೆ ಸಡ್ಡು, ಸೌಹಾರ್ದಕ್ಕೆ ನಾಂದಿ

ಮಂಗಳೂರಿನ ಮಂಗಳಾದೇವಿ ದೇವಸ್ಥಾನದ ನವರಾತ್ರಿ ಉತ್ಸವದ ಸಂದರ್ಭದಲ್ಲಿ, ಗ್ರಾಹಕರು ಧರ್ಮಾತೀತವಾಗಿ ವ್ಯಾಪಾರದಲ್ಲಿ ತೊಡಗಿದ್ದು ವರದಿಯಾಗಿದೆ (ಪ್ರ.ವಾ., ಅ. 20). ಸದಾ ಕೋಮುವಿದ್ವೇಷದ ಪ್ರಯೋಗಶಾಲೆಯಾಗಿಯೇ ಗುರುತಿಸಿಕೊಳ್ಳುತ್ತಿರುವ ಮಂಗಳೂರಿನಿಂದ ಬಂದ ಈ ಸುದ್ದಿಯನ್ನು ಓದಿ ಮನಸ್ಸು ಅರಳಿತು. ಇತ್ತೀಚಿನ ದಿನಗಳಲ್ಲಿ ಸಂತೆಯ ವ್ಯಾಪಾರದ ಮಟ್ಟಕ್ಕೂ ಇಳಿದಿರುವ ಕೋಮುದ್ವೇಷವನ್ನು ಮೆಟ್ಟಿನಿಂತ ಮಂಗಳೂರಿನ ಉಭಯ ಕೋಮಿನ ಜನರು ನಿಜಕ್ಕೂ ಅಭಿನಂದನಾರ್ಹರು. ಹಿಂದೂ ವರ್ತಕರ ಅಂಗಡಿಗೆ ಬಂದು ವ್ಯಾಪಾರ ಮಾಡಿದ ಮುಸ್ಲಿಮರು ಮತ್ತು ಮುಸ್ಲಿಮರ ಅಂಗಡಿಗೆ ಬಂದು ಖರೀದಿಸಿದ ಹಿಂದೂ ಗ್ರಾಹಕರು ಒಳ್ಳೆಯ ಸಂದೇಶವನ್ನೇ ಸಾರಿದ್ದಾರೆ. ಅಂಗಡಿಯ ಮುಂದೆ ಭಗವಾಧ್ವಜ ಕಟ್ಟಿ, ಹಿಂದೂ ಗ್ರಾಹಕರು ಅದೇ ಅಂಗಡಿಯಲ್ಲೇ ಕೊಳ್ಳಬೇಕೆಂಬ ಕೆಲವರ ಅಲಿಖಿತ ಸಂದೇಶವನ್ನು ತಿರಸ್ಕರಿಸಿರುವ ಜನರ ಮನೋಭಾವವನ್ನು ಮೆಚ್ಚಲೇಬೇಕು. ಇದು ರಾಜ್ಯದ ಎಲ್ಲ ಜನರಿಗೂ ಮೇಲ್ಪಂಕ್ತಿಯಾಗಬೇಕಿದೆ. ಧರ್ಮದ ನಶೆಯಿಂದ ಜನಸಾಮಾನ್ಯರ ಹೃದಯಗಳಲ್ಲಿ ಕೋಮುದ್ವೇಷದ ಅಫೀಮಿನ ಗಿಡಗಳನ್ನು ನೆಟ್ಟು ಪೋಷಿಸುತ್ತಿರುವ ಎಲ್ಲ ಕೋಮುವಾದಿಗಳಿಗೂ ಈ ಸುದ್ದಿ ಪಾಠವಾಗಬೇಕಿದೆ. ಮುರಿದುಹೋಗಿರುವ ಮನಸ್ಸುಗಳ ನಡುವೆ ಗೋಡೆ ಕಟ್ಟದೆ ಸೇತುವೆ ಕಟ್ಟುವ ಕೆಲಸ ಅತ್ಯಂತ ತುರ್ತಾಗಿ ಆಗಬೇಕಾಗಿದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

‘ಕಾಲ ದೇಶಗಳ ಎಲ್ಲೆ ಮೀರಿದ ಸಲಿಂಗ ಸಂಬಂಧ’

ಕ್ವಿಯರ್‌ನೆಸ್...

ಹೆಣ್ಣು ಮತ್ತು ಗಂಡು ಎಂಬ ಸ್ಪಷ್ಟ ಲೈಂಗಿಕ ಅಸ್ಮಿತೆ ಇಲ್ಲದ ವ್ಯಕ್ತಿಗಳನ್ನು ಕಾನೂನಿನ ಭಾಷೆಯಲ್ಲಿ ಲಿಂಗಪರಿವರ್ತಿತರು, ಲೈಂಗಿಕ ಅಲ್ಪಸಂಖ್ಯಾತರು, ತೃತೀಯ ಲಿಂಗಿಗಳು ಎಂದು ಕರೆಯಲಾಗುತ್ತದೆ. ಆದರೆ ಈ ಪದಗಳು ಸೀಮಿತ ಅರ್ಥವ್ಯಾಪ್ತಿಯದ್ದಾಗಿವೆ. ಈ ಸಮುದಾಯದವರನ್ನು ಗುರುತಿಸಲು ಎಲ್‌ಜಿಬಿಟಿಕ್ಯು + ಎಂಬ ಹೊಸ ಪರಿಭಾಷೆ ಈಗ ಬಳಕೆಗೆ ಬಂದಿದೆ. ಈ ಪರಿಭಾಷೆಯು ಈ ಸಮುದಾಯದ ಲೈಂಗಿಕ ಅಸ್ಮಿತೆಯನ್ನು ಅತ್ಯಂತ ನಿಖರವಾಗಿ ಪ್ರತಿನಿಧಿಸುತ್ತದೆ.

ಲೆಸ್ಬಿಯನ್ (ಎಲ್) : ಮಹಿಳಾ ಸಲಿಂಗಿಗಳು

ಗೇ (ಜಿ): ಪುರುಷ ಸಲಿಂಗಿಗಳು

ಬೈಸೆಕ್ಸುಯಲ್ (ಬಿ): ಒಬ್ಬ ಪುರುಷ, ಮಹಿಳೆಯೊಂದಿಗೆ ಮತ್ತು ಬೇರೊಬ್ಬ ಪುರುಷನೊಂದಿಗೆ ಸಂಬಂಧದಲ್ಲಿರುವ ಸ್ಥಿತಿ. ಅದೇ ರೀತಿ ಒಬ್ಬ ಮಹಿಳೆ, ಪುರುಷನೊಟ್ಟಿಗೆ ಮತ್ತು ಬೇರೊಬ್ಬ ಮಹಿಳೆಯೊಂದಿಗೆ ಸಂಬಂಧದಲ್ಲಿ ಇರುವ ಸ್ಥಿತಿ

ಟ್ರಾನ್ಸ್‌ಜೆಂಡರ್ (ಟಿ): ಮಹಿಳೆಯೊಬ್ಬರು ದೈಹಿಕವಾಗಿ ಮಹಿಳೆಯೇ ಆಗಿದ್ದರೂ, ಮಾನಸಿಕವಾಗಿ ಪುರುಷನಾಗಿರುವುದು. ಅದೇ ರೀತಿ ಪುರುಷನೊಬ್ಬ ದೈಹಿಕವಾಗಿ ಪುರುಷನೇ ಆಗಿದ್ದರೂ, ಮಾನಸಿಕವಾಗಿ ಮಹಿಳೆಯಾಗಿರುವ ಸ್ಥಿತಿ

ಕ್ವಿಯರ್ (ಕ್ಯು): ಮೇಲಿನ ಎಲ್ಲಾ ಸ್ಥಿತಿಗಳಲ್ಲಿ ಇರುವ ವ್ಯಕ್ತಿಗಳನ್ನು ಕ್ವಿಯರ್ ಎಂದು ಕರೆಯಲಾಗುತ್ತದೆ

ಕ್ವಿಯರ್ ಎಂಬುದು ವಿಶಾಲ ಅರ್ಥವ್ಯಾಪ್ತಿಯ ಪದವಾಗಿರುವ ಕಾರಣ, ಆ ಸ್ಥಿತಿಯನ್ನು ಕ್ವಿಯರ್‌ನೆಸ್ ಎಂದು ಕರೆಯಲಾಗುತ್ತಿದೆ. ಈ ಅರ್ಜಿಗಳ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಸಹ ‘ಕ್ವಿಯರ್, ಕ್ವಿಯರ್‌ನೆಸ್, ಕ್ವಿಯರ್ ಪರ್ಸನ್, ಕ್ವಿಯರ್ ಕಪಲ್’ ಎಂಬ ಪದಗಳನ್ನು ಬಳಸಿದೆ.

● ಜಯಸಿಂಹ ಆರ್., ಸುಕೃತ ಎಸ್.

ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಬೇಕು ಎಂದು ಕೋರಿದ್ದ ಅರ್ಜಿಗಳ ಸಂಬಂಧ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ನೀಡಿದ 3:2ರ ಬಹುಮತದ ತೀರ್ಪಿನ ಆಯ್ದಭಾಗ ಇಲ್ಲಿದೆ

ಸಲಿಂಗ ಸಂಬಂಧ ಮತ್ತು ಸಲಿಂಗ ವಿವಾಹ ಎಂಬುದು ಭಾರತೀಯತೆ ಅಲ್ಲ, ಭಾರತೀಯ ಸಂಸ್ಕೃತಿಯೂ ಅಲ್ಲ ನೈಸರ್ಗಿಕವೂ ಅಲ್ಲ. ಇದು ಪಾಶ್ಚಾತ್ಯ ದೇಶಗಳಿಂದ ಬಂದ ಸಂಸ್ಕೃತಿ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಪ್ರತಿಪಾದಿಸಿತ್ತು. ಇದು ಭಾರತೀಯ ಸಂಸ್ಕೃತಿ ಅಲ್ಲದೇ ಇರುವ ಕಾರಣಕ್ಕೇ ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಬಾರದು ಎಂದು ಸರ್ಕಾರವು ವಾದಿಸಿತ್ತು. ಕೆಲವು ಧಾರ್ಮಿಕ ಸಂಘಟನೆಗಳೂ ಇದೇ ವಿಚಾರವನ್ನು ಪ್ರತಿಪಾದಿಸಿದ್ದವು. ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಬೇಕು ಎಂದು ಕೋರಿದ್ದ ಹಲವು ಅರ್ಜಿದಾರರು, ಸಲಿಂಗ ಸಂಬಂಧ ಎಂಬುದು ಭಾರತೀಯ ಸಂಸ್ಕೃತಿಯಲ್ಲಿ ಮೊದಲಿನಿಂದಲೂ ಇದೆ ಎಂದು ವಾದಿಸಿದ್ದರು.

ಎರಡೂ ಸ್ವರೂಪದ ವಾದಗಳನ್ನು ಪರಿಶೀಲಿಸಲು ಪೀಠವು ಧಾರ್ಮಿಕ ಗ್ರಂಥಗಳು, ಪುರಾತನ ಸಾಹಿತ್ಯ ಕೃತಿಗಳು, ಸಂಶೋಧನಾ ಪ್ರಬಂಧಗಳು ಮತ್ತು ಜನಪದ ಸಾಹಿತ್ಯವನ್ನು ಪರಿಶೀಲಿಸಿದೆ. ಸಲಿಂಗ ಸಂಬಂಧ ಎಂಬುದು ಭಾರತೀಯ ಸಂಸ್ಕೃತಿಯಲ್ಲಿ ಇತ್ತು ಎಂದು ಮೂವರು ನ್ಯಾಯಮೂರ್ತಿಗಳು ತಮ್ಮ ತೀರ್ಪುಗಳಲ್ಲಿ ವಿವರಿಸಿದ್ದಾರೆ. ಇನ್ನಿಬ್ಬರು ನ್ಯಾಯಮೂರ್ತಿಗಳು ಈ ಬಗ್ಗೆ ಯಾವುದೇ ಅಸಮ್ಮತಿ ವ್ಯಕ್ತಪಡಿಸಿಲ್ಲ. ಈ ಬಗ್ಗೆ ಹೆಚ್ಚು ವಿಸ್ತೃತವಾದ ತೀರ್ಪು ನೀಡಿರುವುದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್.

ಚಂದ್ರಚೂಡ್ ತಮ್ಮ ತೀರ್ಪಿನಲ್ಲಿ, ‘ಸಲಿಂಗ ಸಂಬಂಧ ಎಂಬುದು ಅತ್ಯಂತ ನೈಸರ್ಗಿಕವಾದುದು ಮತ್ತು ಇದು ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಇದೆ’ ಎಂದೇ ಅವರು ಈ ಭಾಗದ ತೀರ್ಪನ್ನು ಆರಂಭಿಸಿದ್ದಾರೆ. ‘ಸಲಿಂಗ ಲೈಂಗಿಕತೆ, ಕ್ವಿಯರ್‌ನೆಸ್ ಎಂಬುದು ಜನ್ಮಜಾತವಾದುದು ಮತ್ತು ಅತ್ಯಂತ ಸಹಜವಾದುದು ಎಂದು ನವತೇಜ್ ಸಿಂಗ್ ಜೋಹರ್ ಪ್ರಕರಣದಲ್ಲಿ ಇದೇ ನ್ಯಾಯಾಲಯ ತೀರ್ಪು ನೀಡಿದೆ. ಪ್ರಾಚೀನ ಭಾರತದಿಂದಲೂ ಸಲಿಂಗ ಲೈಂಗಿಕತೆ, ಸಲಿಂಗ ಪ್ರೇಮ ಎಂಬುದು ಆಚರಣೆಯಲ್ಲಿದೆ. ಹೀಗಾಗಿ ಸಲಿಂಗ ಲೈಂಗಿಕತೆ ಮತ್ತು ಸಲಿಂಗ ಸಂಬಂಧವು ಸಲ್ಲದು ಎನ್ನುವ ಕೇಂದ್ರ ಸರ್ಕಾರದ ವಾದವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ’ ಎಂದು ವಿವರಿಸಿದ್ದಾರೆ.

‘ಸಲಿಂಗ ಲೈಂಗಿಕತೆ, ಸಲಿಂಗ ಸಂಬಂಧ ಭಾರತದ್ದು ಅಲ್ಲವೇ ಅಲ್ಲ ಎಂಬುದು ಸರ್ಕಾರದ ವಾದ. ಆದರೆ ಈ ವಾದದಲ್ಲಿ ಯಾವುದೇ ಹುರುಳಿಲ್ಲ. ಹೆಣ್ಣು ಮತ್ತು ಗಂಡು ಎಂದು ಸ್ಪಷ್ಟವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗದ ವ್ಯಕ್ತಿಗಳನ್ನು ಹಿಜ್ರಾ, ಕೋತಿ, ಅರವಾನಿ, ಜೋಗಪ್ಪ, ತಿರುನಂಬಿ, ನುಪಿ ಮಾಂಬಾ, ನುಪಿ ಮಾಂಬಿ ಎಂದೆಲ್ಲಾ ಕರೆಯುವ ಪದ್ಧತಿ ಭಾರತದಲ್ಲಿ ರೂಢಿಯಲ್ಲಿದೆ. ಟ್ರಾನ್ಸ್‌ಜೆಂಡರ್ (ಲಿಂಗ ಪರಿವರ್ತಿತರು) ಮತ್ತು ಥರ್ಡ್ ಜೆಂಡರ್ (ತೃತೀಯ ಲಿಂಗಿಗಳು) ಎಂಬ ಇಂಗ್ಲಿಷ್ ಪದವು ಈ ಜನರ ಲೈಂಗಿಕ ಅಸ್ಮಿತೆಯ ವೈವಿಧ್ಯವನ್ನು ಕರಾರುವಾಕ್ಕಾಗಿ ಪ್ರತಿನಿಧಿಸುವುದಿಲ್ಲ. ಜತೆಗೆ ಭಾರತದಲ್ಲಿ ಈ ಜನರ ಸಾಮಾಜಿಕ ವ್ಯವಸ್ಥೆಯು ಇಲ್ಲಿಗೇ ಅತ್ಯಂತ ವಿಶಿಷ್ಟವಾದುದು ಮತ್ತು ಅದು ಪಾಶ್ಚಾತ್ಯ ದೇಶಗಳಲ್ಲಿನ ಸಾಮಾಜಿಕ ವ್ಯವಸ್ಥೆಗಿಂತ ಸಂಪೂರ್ಣ ಭಿನ್ನವಾಗಿದೆ. ಇದು ಭಾರತದ್ದೇ ಆಗಿದೆ. ಲಿಂಗ ಪರಿವರ್ತಿತರ ಅಸ್ಮಿತೆ ಮತ್ತು ಇತರೆ ಸ್ವರೂಪದ ಕ್ವಿಯರ್ ಲೈಂಗಿಕ ಅಸ್ಮಿತೆಯು ಭಾರತದ ಜನಪದ ಸಾಹಿತ್ಯದಲ್ಲೂ ಇದೆ ಎಂಬುದನ್ನು ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ಪ್ರಕರಣದಲ್ಲಿ ಇದೇ ನ್ಯಾಯಾಲಯ ಹೇಳಿದೆ’ ಎಂದು ಅವರು ಹೇಳಿದ್ದಾರೆ.

‘ದಕ್ಷಿಣ ಭಾರತದಲ್ಲಿ ಹಿಜ್ರಾ ಅಸ್ಮಿತೆಯ ಸಂಸ್ಕೃತಿ ಇರುವುದನ್ನು ಗಾಯತ್ರಿ ರೆಡ್ಡಿ ಅವರು ತಮ್ಮ ‘ವಿತ್ ರೆಸ್ಪೆಕ್ಟ್ ಟು ಸೆಕ್ಸ್: ನೆಗೋಷಿಯೇಟಿಂಗ್ ಹಿಜ್ರಾ ಐಡೆಂಟಿಟಿ ಇನ್ ಸೌತ್ ಇಂಡಿಯಾ’ ಎಂಬ ಸಂಶೋಧನಾ ಗ್ರಂಥದಲ್ಲಿ ದಾಖಲಿಸಿದ್ದಾರೆ. ಹಿಜ್ರಾಗಳಲ್ಲಿ ಗುರು–ಶಿಷ್ಯ ಪರಂಪರೆ, ತಾಯಿ–ಮಗಳು ಪರಂಪರೆ, ಜೋಡಿ ಎಂಬ ಪರಂಪರೆಗಳಿವೆ ಎಂಬುದನ್ನು ಅವರು ಗುರುತಿಸಿದ್ದಾರೆ. ಈ ಜನರ ಲೈಂಗಿಕ ಅಸ್ಮಿತೆಯನ್ನು ಗುರುತಿಸಲು ಕೆಲವು ಇಂಗ್ಲಿಷ್ ಪದಗಳನ್ನು ಭಾರತದಲ್ಲಿ ಬಳಸುತ್ತಿರಬಹುದು. ಆದರೆ, ಇಂತಹ ಲೈಂಗಿಕ ಅಸ್ಮಿತೆ ಸಹಜವಾದುದು ಮತ್ತು ಐತಿಹಾಸಿಕವಾಗಿಯೂ ಭಾರತದಲ್ಲಿ ಇವು ಇದ್ದವು. ಈ ಸಂಸ್ಕೃತಿಯನ್ನು ಪಾಶ್ಚಾತ್ಯ ದೇಶಗಳಿಂದ ‘ಆಮದು’ ಮಾಡಿಕೊಂಡಿಲ್ಲ. ಜತೆಗೆ ಇದು ನೈಸರ್ಗಿಕವಾದುದು ಎಂದಾದ ಮೇಲೆ, ಬೇರೆ ದೇಶ ಅಥವಾ ಬೇರೆ ಸಂಸ್ಕೃತಿಯಿಂದ ಇದನ್ನು ಎರವಲು ಪಡೆಯಲಾಗಿದೆ ಎಂಬುದರಲ್ಲಿ ಅರ್ಥವೇ ಇಲ್ಲ’ ಎಂದು ಅವರು ವಿವರಿಸಿದ್ದಾರೆ.

ಇದನ್ನು ಒಪ್ಪಿಕೊಂಡೇ ನ್ಯಾಯಮೂರ್ತಿ ರವೀಂದ್ರ ಭಟ್ ಮತ್ತು ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರು ತೀರ್ಪು ನೀಡಿದ್ದಾರೆ. ‘ಪುರಾಣಗಳಲ್ಲಿ, ಪುರಾತನ ಸಾಹಿತ್ಯಗಳಲ್ಲಿ ಸಲಿಂಗ ಸಂಬಂಧದ ಉಲ್ಲೇಖಗಳಿವೆ. ಆದರೆ ಸಂವಿಧಾನದ ಚೌಕಟ್ಟಿನಲ್ಲಿ ಅವಕಾಶವಿಲ್ಲದ ಕಾರಣಕ್ಕೆ ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಲಾಗುವುದಿಲ್ಲ’ ಎಂದು ಅವರು ತೀರ್ಪಿನಲ್ಲಿ ಹೇಳಿದ್ದಾರೆ.

ತಿದ್ದುಪಡಿ

ಸಂವಿಧಾನದ 21ನೇ ವಿಧಿಯು ಖಾಸಗಿತನದ ಹಕ್ಕನ್ನು ನೀಡುತ್ತದೆ. ಶುಕ್ರವಾರದ ಸಂಚಿಕೆಯ ಆಳ-ಅಗಲದಲ್ಲಿ ಈ ಮಾಹಿತಿ ತಪ್ಪಾಗಿತ್ತು.

‘ಪುರಾಣಗಳಲ್ಲೂ ಉಲ್ಲೇಖ’

ಸಲಿಂಗ ಸಂಬಂಧ ಎಂಬುದು ಧರ್ಮಕ್ಕೆ ವಿರುದ್ಧವಾದುದು. ಹೀಗಾಗಿ ಅದಕ್ಕೆ ಮಾನ್ಯತೆ ನೀಡಬಾರದು ಎಂದು ಹಿಂದೂ ಮತ್ತು ಮುಸ್ಲಿಂ ಸಮುದಾಯದ ಕೆಲವು ಸಂಘಟನೆಗಳು ಸಲ್ಲಿಸಿದ್ದ ಅರ್ಜಿಗಳೂ ಈ ಪೀಠದ ಎದುರು ಇದ್ದವು. ಈ ವಾದವನ್ನು ಪರಿಶೀಲಿಸಲು ನ್ಯಾಯಮೂರ್ತಿಗಳು ಪುರಾಣ, ಧಾರ್ಮಿಕ ಗ್ರಂಥಗಳು ಮತ್ತು ಪುರಾತನ ಸಾಹಿತ್ಯದ ಮೊರೆ ಹೋಗಿದ್ದಾರೆ.

ಈ ಬಗ್ಗೆ ನ್ಯಾಯಮೂರ್ತಿ ಎಸ್‌.ಕೆ.ಕೌಲ್ ಅವರು ತಮ್ಮ ತೀರ್ಪಿನಲ್ಲಿ ವಿವರವಾಗಿ ಬರೆದಿದ್ದಾರೆ. ‘ಸಲಿಂಗ ಸಂಬಂಧ ಎಂಬುದು ಪುರಾತನ ಭಾರತೀಯ ನಾಗರಿಕತೆಯ ಭಾಗವಾಗಿತ್ತು ಎಂಬುದಕ್ಕೆ ಧಾರ್ಮಿಕ ಮತ್ತು ಐತಿಹಾಸಿಕ ಪಠ್ಯ ಮತ್ತು ಕಲಾಕೃತಿಗಳಲ್ಲಿ ಸಾಕ್ಷ್ಯ ಸಿಗುತ್ತವೆ. ಋಗ್ವೇದದಲ್ಲಿ ಅಗ್ನಿದೇವನನ್ನು ಹಲವು ಬಾರಿ ‘ದ್ವಿಮಾತ್ರಿ’ (ಇಬ್ಬರು ತಾಯಂದಿರ ಮಗ) ಎಂದು ಉಲ್ಲೇಖಿಸಲಾಗಿದೆ. ಕ್ರಿಸ್ತ ಶಕ 11ನೇ ಶತಮಾನದಲ್ಲಿ ಸೋಮದತ್ತ ಭಟ್ಟ ರಚಿಸಿದ ಕಥಾಸರಿತ್ಸಾಗರ ಕಾವ್ಯದಲ್ಲಿ ಸೋಮಪ್ರಭಾಳು ಕಳಿಂಗಸೇನನನ್ನು ಹಿಂದಿನ ಜನ್ಮದಿಂದಲೂ (ಪುರುಷನಾಗಿದ್ದಾಗ) ಪ್ರೀತಿಸುತ್ತಿದ್ದೆ ಎಂದು ಹೇಳುತ್ತಾಳೆ. ಹಿಂದೂ ಪುರಾಣಗಳಲ್ಲಿ ಇಂತಹ ಹಲವು ಉಲ್ಲೇಖಗಳು ಇವೆ. ಸೂಫಿ ಪರಂಪರೆಯಲ್ಲೂ ಇಂತಹ ಉಲ್ಲೇಖಗಳಿವೆ’ ಎಂದು ಅವರು ವಿವರಿಸಿದ್ದಾರೆ.

ಸೂಫಿ ಪಂಥದಲ್ಲೂ ಗಂಡು ತನ್ನನ್ನು ತಾನು ಹೆಣ್ಣು ಎಂದು ಪರಿಭಾವಿಸುವ ಪರಿಕಲ್ಪನೆ ಇದೆ ಎಂದು ಕೌಲ್ ಅವರು ತಮ್ಮ ತೀರ್ಪಿನಲ್ಲಿ ವಿವರಿಸಿದ್ದಾರೆ. ‘ಸೂಫಿ ಕವಿಗಳು ಗಂಡಾಗಿದ್ದರೂ ತಮ್ಮನ್ನು ತಾವು ಹೆಣ್ಣು ಎಂದು ಪರಿಭಾವಿಸಿಕೊಂಡು ದೈವವನ್ನು ಆರಾಧಿಸುವ ಉಲ್ಲೇಖಗಳು ಇವೆ. ಮದುವೆ ಎಂಬುದು ಇತಿಹಾಸದುದ್ದಕ್ಕೂ ಬದಲಾಗುತ್ತಲೇ ಬಂದಿದೆ. ಆದರೆ ಈಚಿನ ಶತಮಾನಗಳಲ್ಲಿ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡುವಾಗ ವಿರುದ್ಧ ಲಿಂಗಿಗಳ ಮದುವೆಗಷ್ಟೇ ಮಾನ್ಯತೆ ದೊರೆತಿದೆ. ಹೀಗಾಗಿ ಪುರಾತನ ಭಾರತದಲ್ಲಿ ಸಲಿಂಗ ಸಂಬಂಧ ಇರಲಿಲ್ಲ ಮತ್ತು ಅದು ಆಧುನಿಕ ಕಾಲದ ಸಂಗತಿ ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ’ ಎಂದು ಅವರು ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ.

ಆಧಾರ: ಸುಪ್ರೀಂ ಕೋರ್ಟ್ ತೀರ್ಪು

‘ನಗರಕ್ಕಷ್ಟೇ ಸೀಮಿತವೆಂದರೆ ಅಸ್ತಿತ್ವ ನಿರಾಕರಣೆ’

ಸಲಿಂಗ ಲೈಂಗಿಕತೆ, ಕ್ವಿಯರ್ ಲೈಂಗಿಕ ಅಸ್ಮಿತೆ ಅಥವಾ ಲಿಂಗಪರಿವರ್ತನೆ ಆಗುವುದು– ಇವೆಲ್ಲವೂ ನಗರ ಪ್ರದೇಶಗಳಲ್ಲಿ ಮಾತ್ರವೇ ಕಾಣಸಿಗುತ್ತವೆ. ಲೈಂಗಿಕ ಅಸ್ಮಿತೆಗಳು ಎಂಬಂಥ ಯಾವುದೇ ವಿಚಾರ ಗ್ರಾಮೀಣ ಭಾಗದ ಜನರಿಗೆ ತಿಳಿಯದು. ಇಂಥವೆಲ್ಲ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವುದೂ ಇಲ್ಲ ಎನ್ನುವುದು ಭಾರತ ಸರ್ಕಾರವೂ ಸೇರಿದಂತೆ ಪ್ರತಿವಾದಿಗಳ ವಾದ. ಆದರೆ, ಸತ್ಯ ಈ ಎಲ್ಲದಕ್ಕಿಂತ ಬೇರೆಯದೇ ಇದೆ. ಇಂಗ್ಲಿಷ್‌ನ ‘ಹೋಮೊಸೆಕ್ಸುಯಾಲಿಟಿ’, ‘ಕ್ವಿಯರ್’ ಎಂಬೆಲ್ಲಾ ಪದಗಳು ಗ್ರಾಮೀಣರಿಗೆ, ಕಾರ್ಮಿಕ ವರ್ಗದವರಿಗೆ ಗೊತ್ತಿಲ್ಲದೇ ಇರಬಹುದು. ಆದರೆ, ಗ್ರಾಮೀಣ ಭಾಗದಲ್ಲೂ ಕ್ವಿಯರ್ ಸಮುದಾಯಕ್ಕೆ ಸೇರಿದವರು ಮದುವೆ ಆಗುತ್ತಾರೆ.

ಕ್ವಿಯರ್ ಲೈಂಗಿಕ ಅಸ್ಮಿತೆ ಇರುವುದು ನಗರ ಪ್ರದೇಶಗಳಲ್ಲಿ ಎಂಬ ವಾದದಲ್ಲಿ ಹುರುಳಿಲ್ಲ ಎಂಬುದನ್ನು ಈ ಪ್ರಕರಣದ ಅರ್ಜಿದಾರರ ಪಟ್ಟಿಯನ್ನು ನೋಡಿದರೆ ತಿಳಿದು ಬಿಡುತ್ತದೆ.

ಒಬ್ಬ ಅರ್ಜಿದಾರರು ಪಶ್ಚಿಮ ಬಂಗಾಳದ ದುರ್ಗಾಪುರದವರು. ಇನ್ನೊಬ್ಬರು ಉತ್ತರ ಪ್ರದೇಶದ ವಾರಾಣಸಿಯವರು. ಮತ್ತೊಬ್ಬರು ಪಂಜಾಬ್‌ನ ಮುಕ್ತಸರ್‌ನ ಇತರೆ ಹಿಂದುಳಿದ ವರ್ಗಕ್ಕೆ ಸೇರಿದವರು. ಕಾರ್ಮಿಕ ವರ್ಗದ ಹಿನ್ನೆಲೆಯಿರುವ ದಲಿತ ಸಮುದಾಯದವರೊಬ್ಬರು ಅರ್ಜಿ ಸಲ್ಲಿಸಿದ್ದಾರೆ.

ಇಂಗ್ಲಿಷ್ ಮಾತನಾಡದ, ಕಾರ್ಮಿಕ ವರ್ಗದ ಹಿನ್ನೆಲೆ ಇರುವ ಅಕ್ಕೈ ಪದ್ಮಶಾಲಿ ಅವರೂ ಅರ್ಜಿ ಸಲ್ಲಿಸಿದ್ದಾರೆ. ಸೆರಾಮಿಕ್ಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ನಂತರ ಪರಿಸ್ಥಿತಿಯ ಕಾರಣಕ್ಕೆ ಲೈಂಗಿಕ ಕಾರ್ಯಕರ್ತೆಯಾದರು. ಈಗ ಅವರು ಸಾಮಾಜಿಕ ಕಾರ್ಯಕರ್ತೆ ಆಗಿದ್ದಾರೆ. ಇದಕ್ಕಾಗಿ ಅವರಿಗೆ ಕರ್ನಾಟಕದ ಎರಡನೇ ಅತ್ಯುನ್ನತವಾದ ರಾಜ್ಯೋತ್ಸವ ಪ್ರಶಸ್ತಿಯನ್ನೂ ನೀಡಲಾಗಿದೆ. ತೆಂಗಿನಕಾಯಿ ಹಾಗೂ ವೀಳ್ಯದೆಲೆ ಬೆಳೆಗಾರರ ಮಗಳು ನಂತರ ಲಿಂಗ ಪರಿವರ್ತನೆ ಮಾಡಿಕೊಳ್ಳುತ್ತಾರೆ. ಇವರೂ ಅರ್ಜಿದಾರರು. ಗುಜರಾತ್‌ನ ವಡೋದರಾದ ಒಬ್ಬರು ಅರ್ಜಿ ಹಾಕಿದ್ದಾರೆ.

ಭಾರತದಲ್ಲಿ ಕ್ವಿಯರ್ ಮದುವೆಗಳ ಇತಿಹಾಸದ ಕುರಿತು ರುತ್ ವನಿತಾ ಎಂಬವರು ‘ಲವ್ಸ್ ರೈಟ್: ಸೇಮ್ ಸೆಕ್ಸ್ ಮ್ಯಾರೇಜ್ ಇನ್ ಇಂಡಿಯಾ ಆ್ಯಂಡ್ ದಿ ವೆಸ್ಟ್’ ಎಂಬ ಪುಸ್ತಕ ಬರೆದಿದ್ದಾರೆ. ಸ್ವತಃ ಇವರೂ 2000ರಲ್ಲಿ ಯಹೂದಿ ಮಹಿಳೆಯೊಬ್ಬರನ್ನು ಮದುವೆ ಆಗಿದ್ದಾರೆ. ತಮ್ಮ ಪುಸ್ತಕದಲ್ಲಿ ಅವರು ಉಲ್ಲೇಖಿಸಿದ ಕೆಲವು ಉದಾಹರಣೆಗಳು ಇಲ್ಲಿವೆ:

ಇಬ್ಬರು ಪುರುಷರು, ಇವರಲ್ಲಿ ಒಬ್ಬರು ಅಮೆರಿಕ ಪ್ರಜೆ ಇನ್ನೊಬ್ಬರು ಭಾರತದ ಪ್ರಜೆ. ಈ ಇಬ್ಬರೂ ಹಿಂದೂ ಸಂಪ್ರದಾಯದಂತೆ 1993ರಲ್ಲಿ ಮದುವೆ ಆಗಿದ್ದಾರೆ. 2004ರಲ್ಲಿ 24 ವರ್ಷದ ದಲಿತ ಮಹಿಳೆಯೊಬ್ಬರು ಹಾಗೂ 22 ವರ್ಷದ ಜಾಟ್ ಮಹಿಳೆ ದೆಹಲಿಗೆ ಬಂದು ದೇವಸ್ಥಾನದಲ್ಲಿ ಮದುವೆಯಾಗಿದ್ದಾರೆ. ಭೋಪಾಲ್‌ನ ಕೊಳೆಗೇರಿಯಲ್ಲಿ ವಾಸಿಸುವ ಕುಟುಂಬದ ಯುವತಿಯರು 2004ರಲ್ಲಿ ಮದುವೆ ಆಗಿದ್ದಾರೆ. ದಕ್ಷಿಣ ಭಾರತದ ರಾಜ್ಯವೊಂದರ 21 ವರ್ಷದ ಕ್ರೈಸ್ತ ಹಾಗೂ 23 ವರ್ಷದ ಹಿಂದೂ ಮಹಿಳೆ 2004ರಲ್ಲಿ ಮದುವೆ ಆಗಿದ್ದಾರೆ. ಇಬ್ಬರು ಮುಸ್ಲಿಂ ಪುರುಷರು ಉತ್ತರ ಪ್ರದೇಶದಲ್ಲಿ ಮದುವೆ ಆಗಿದ್ದಾರೆ. ಒಡಿಶಾದ ಇಬ್ಬರು ಆದಿವಾಸಿ ಮಹಿಳೆಯರು ತಮ್ಮ ಬುಡಕಟ್ಟು ಸಮುದಾಯದ ಸಂಪ್ರದಾಯದಂತೆಯೇ ಮದುವೆ ಆಗಿದ್ದಾರೆ.

ಸಮಾಜದಲ್ಲಿ ಮೂಲೆಗುಂಪಾದ ವರ್ಗದ ಕ್ವಿಯರ್ ಜನರ ಅಭಿವ್ಯಕ್ತಿ, ಅವರ ಧ್ವನಿಯನ್ನು ಕೇಳಿಸಿಕೊಳ್ಳುವಂಥ ವಾತಾವರಣವನ್ನೇ ಸೃಷ್ಟಿಮಾಡಲಾಗಿಲ್ಲ ಎನ್ನುತ್ತಾರೆ ಮಾಯಾ ಶರ್ಮಾ. ತಮ್ಮ ‘ಲವಿಂಗ್ ವುಮೆನ್: ಬೀಯಿಂಗ್ ಲೆಸ್ಬಿಯನ್ ಇನ್ ಅನ್‌ಪ್ರಿವಿಲೆಜ್ಡ್ ಇಂಡಿಯಾ’ ಎನ್ನುವ ಪುಸ್ತಕದಲ್ಲಿ ಅವರು ಈ ಮಾತುಗಳನ್ನು ಆಡಿದ್ದಾರೆ. ಮನೆಗೆಲಸ ಮಾಡುವವರು, ಕಾರ್ಖಾನೆಗಳಲ್ಲಿ ದುಡಿಯುವವರು, ಕಟ್ಟಡ ಕಾರ್ಮಿಕರು, ಮನೆಗಳಲ್ಲಿ ಕಾವಲು ಕೆಲಸ ಮಾಡುವ ಕುಟುಂಬಗಳಲ್ಲೂ ಕ್ವಿಯರ್ ಮಹಿಳೆಯರು ಇರುತ್ತಾರೆ ಎನ್ನುತ್ತದೆ ಪುಸ್ತಕ.

ಈ ಎಲ್ಲಾ ಉದಾಹರಣೆಗಳು ಭಾರತದಲ್ಲಿ ಕ್ವಿಯರ್ ಸಮುದಾಯದವರ ಇತಿಹಾಸವನ್ನು ಹೇಳುತ್ತದೆ. ಕ್ವಿಯರ್ ಸಮುದಾಯವು ನಗರಕ್ಕೆ ಸೀಮಿತವಾದುದು ಎಂಬ ವಾದವನ್ನು ಇಷ್ಟು ಉಲ್ಲೇಖಗಳೇ ತೊಡೆದು ಹಾಕುತ್ತವೆ. ಜೊತೆಗೆ ಇಂಥ ವಾದಗಳು ಗ್ರಾಮೀಣ ಭಾಗದಲ್ಲಿ ಇರುವ ಕ್ವಿಯರ್ ಸಮುದಾಯದ ಜನರ ಅಸ್ತಿತ್ವವನ್ನು ಮರೆಮಾಚುತ್ತವೆ. ಇಷ್ಟೇ ಅಲ್ಲ, ನಗರ ಪ್ರದೇಶಗಳಲ್ಲೇ ವಾಸಿಸುವ ಮೂಲೆಗುಂಪಾದ ವರ್ಗದ, ಬಡವರ ಅಸ್ತಿತ್ವವನ್ನೂ ಅಲ್ಲಗಳೆಯುತ್ತವೆ.

ಕೊನೆಯದಾಗಿ...

ಹಲವು ಕಾರಣಗಳಿಗಾಗಿ ನಗರಪ್ರದೇಶಗಳಲ್ಲಿ ವಾಸಿಸುವ ಕ್ವಿಯರ್ ಸಮುದಾಯದ ಜನರ ಧ್ವನಿಗಳು, ಅಭಿವ್ಯಕ್ತಿ ಹೊರಜಗತ್ತಿಗೆ ತೋರುತ್ತವೆ. ನಗರ ಪ್ರದೇಶವು ಈ ಸಮುದಾಯದವರಿಗೆ ಹೆಚ್ಚು ಸ್ವಾತಂತ್ರ್ಯ ನೀಡಬಹುದು. ಅದಕ್ಕಾಗಿ ಅವರು ತಮ್ಮ ಅಸ್ಮಿತೆಯನ್ನು ಭಯವಿಲ್ಲದೇ ಹೇಳಿಕೊಳ್ಳುತ್ತಾರೆ. ಆದರೆ, ಇಂಥ ಪರಿಸ್ಥಿತಿ ಸಣ್ಣ ಸಣ್ಣ ಊರುಗಳಲ್ಲಿ ಇಲ್ಲ. ಸಣ್ಣ ಊರುಗಳಲ್ಲಿ ಈ ಸಮುದಾಯದವರನ್ನು ಜನರು ಒಪ್ಪಿಕೊಳ್ಳುವುದಿಲ್ಲ, ಅವರ ಸ್ಥಿತಿಯು ಚಿಂತಾಜನಕವಾಗಿರುತ್ತದೆ.

ನಗರ ಪ್ರದೇಶದ ಕ್ವಿಯರ್ ಜನರ ಅಭಿವ್ಯಕ್ತಿಯು ಜಗತ್ತಿಗೆ ತಿಳಿಯುವುದಕ್ಕೆ ಅವರಿಗೆ ಲಭ್ಯ ಇರುವ ಬೇರೆ ಬೇರೆ ಸಂಪನ್ಮೂಲಗಳೂ ಕಾರಣವಾಗಿವೆ. ಅವರ ಅಭಿವ್ಯಕ್ತಿಯನ್ನು ಹೊರಜಗತ್ತಿಗೆ ಕೇಳಿಸಬಲ್ಲ ಹಲವು ವಿಧಾನಗಳಿವೆ. ಮೂಲೆಗುಂಪಾದ ವರ್ಗದ ಜನರ ಅಭಿವ್ಯಕ್ತಿಯನ್ನು ಜಗತ್ತಿಗೆ ತಿಳಿಸುವ ಕಾರ್ಯವಾಗಬೇಕು ಎನ್ನುವುದನ್ನು ಇದು ಸೂಚಿಸುತ್ತದೆ. ಹಾಗೆಯೇ, ಅವರ ಮಾತು ಕೇಳಿಸುತ್ತಿಲ್ಲವಷ್ಟೇ, ಆದರೆ, ಅವರು ಬದುಕಿದ್ದಾರೆ; ಅವರ ಅಸ್ತಿತ್ವ ಇದೆ.

ನಗರ ಪ್ರದೇಶಗಳಲ್ಲೂ ಕ್ವಿಯರ್ ಸಮುದಾಯದ ಜನರ ಮೇಲೆ ಹಿಂಸೆ, ದೌರ್ಜನ್ಯಗಳು ನಡೆಯುತ್ತಿವೆ. ಆದರೆ, ಅವರ ಮೇಲಾದ ಹಿಂಸೆ, ದೌರ್ಜನ್ಯಗಳನ್ನು ಜಗತ್ತಿಗೆ ತಿಳಿಸುವ ಮೂಲಗಳು ನಗರ ಪ್ರದೇಶಗಳಲ್ಲಿ ಮಾತ್ರ ಇವೆ. ಆದ್ದರಿಂದ, ಕ್ವಿಯರ್ ಸಮುದಾಯದ ಜನರು ನಗರಪ್ರದೇಶಗಳಲ್ಲಿ ಮಾತ್ರ ಇರುವುದಲ್ಲ, ಯಾವುದೇ ವರ್ಗ, ದೇಶ, ಪ್ರದೇಶದವರೂ ಕ್ವಿಯರ್ ಆಗಿರಬಹುದು.

ಡಿ.ವೈ. ಚಂದ್ರಚೂಡ್, ಮುಖ್ಯ ನ್ಯಾಯಮೂರ್ತಿ

ನಾವು ನೋಡಿದ ಸಿನಿಮಾ

ಅರ್ಧ ಬಿಗಿ ಕಟ್ಟು, ಇನ್ನರ್ಧ ಸಡಿಲ ಪಟ್ಟು

ಲಿಯೊ (ತಮಿಳು)

- ನಿರ್ಮಾಣ: ಎಸ್‌.ಎಸ್‌. ಲಲಿತ್‌ಕುಮಾರ್, ಜಗದೀಶ್ ಪಳನಿಸ್ವಾಮಿ
- ನಿರ್ದೇಶನ: ಲೋಕೇಶ್ ಕನಕರಾಜ್
- ತಾರಾಗಣ: ವಿಜಯ್, ತ್ರಿಶಾ, ಗೌತಮ್ ವಾಸುದೇವ್ ಮೆನನ್, ಸಂಜಯ್ ದತ್, ಅರ್ಜುನ್ ಸರ್ಜಾ

ಕೆನಡಿಯನ್ ನಿರ್ದೇಶಕ ಡೇವಿಡ್ ಕ್ರೊನೆನ್‌ಬರ್ಗ್ 2005ರಲ್ಲಿ ‘ಎ ಹಿಸ್ಟರಿ ಆಫ್ ವಯಲೆನ್ಸ್’ ಎಂಬ ಹಿಂಸಾವಸ್ತುವಿನ ಸಿನಿಮಾ ನಿರ್ದೇಶಿಸಿದ್ದರು. ಅದನ್ನು ಲೋಕೇಶ್ ಕನಕರಾಜ್ ತಮಿಳಿನ ತಮ್ಮತನದ ಟೆಂಪ್ಲೇಟ್ ಮೇಲೆ ತಂದಿಟ್ಟುಕೊಂಡು, ‘ಲಿಯೊ’ ತಮಿಳು ಚಿತ್ರ ರೂಪಿಸಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ಕಾಫಿ ಕೆಫೆ ನಡೆಸುವ ನಾಯಕ ಪಾರ್ಥಿಬನ್. ಅವನ ಹೆಂಡತಿ ಸತ್ಯ. ಇಬ್ಬರಿಗೂ ಸಿದ್ದು ಎಂಬ ಹರೆಯದ ಮಗ ಹಾಗೂ ಚಿಂಟು ಎಂಬ ಪುಟಾಣಿ ಹೆಣ್ಣುಮಗಳು ಇದ್ದಾರೆ. ಪ್ರಾಣಿ ಸಂರಕ್ಷಣೆ ಮಾಡುವುದನ್ನು ಹವ್ಯಾಸ ಮಾಡಿಕೊಂಡಿರುವ ಪಾರ್ಥಿಬನ್ ಸಿನಿಮಾ ಶುರುವಾದ ಕೆಲವೇ ನಿಮಿಷಗಳಲ್ಲಿ ಹೈನಾವೊಂದರಿಂದ ಅನೇಕ ಜೀವಗಳನ್ನು ಉಳಿಸುತ್ತಾನೆ. ಈ ದೃಶ್ಯದ ಹೆಣಿಗೆಯಲ್ಲಿಯೇ ನಿರ್ದೇಶಕರ ಹಿಂಸಾ ಸಾವಧಾನ ಅರ್ಥವಾಗುತ್ತದೆ. ನಾಯಕ ವಿಜಯ್ ಅವರನ್ನು ತಮ್ಮ ಎಂದಿನ ತಳಿರು–ತೋರಣಗಳ ಚೌಕಟ್ಟಿನಿಂದ ಆಚೆ ತಂದು ಅವರು ಸ್ಟೈಲಿಶ್ ಆಗಿ ಪ್ರೇಕ್ಷಕರ ಮುಂದಿಡುತ್ತಾರೆ. ‘ಬ್ಲಡಿ ಸ್ವೀಟ್’ ಎಂಬ ಹಾಡು ಮುಂದಿನ ಹಿಂಸಾಕಥಾನಕದ ಮುನ್ನುಡಿಯೇ ಹೌದು.

ಪಾರ್ಥಿಬನ್ ಇಪ್ಪತ್ತು ವರ್ಷಗಳಿಂದ ನೆಮ್ಮದಿಯಾಗಿ ಬದುಕಿರುವ ಊರಿನಲ್ಲಿ ಸರಣಿ ದರೋಡೆ–ಕೊಲೆ ಪ್ರಕರಣಗಳು ನಡೆಯತೊಡಗುತ್ತವೆ. ಆ ಕೊಲೆಗಡುಕರು ನಾಯಕನ ಕಾಫಿ ಕೆಫೆಗೂ ಬರುತ್ತಾರೆ. ಅಲ್ಲಿಂದ ಕಥೆಗೆ ತಿರುವು. ತನ್ನ ಪುಟಾಣಿ ಮಗಳ ಎದುರಿಗೇ ಕೊಲೆಗಡುಕರು ಹಾಗೆ ಬಂದಾಗ ನಾಯಕ ಏನು ಮಾಡುತ್ತಾನೆ ಎನ್ನುವುದರಿಂದ ಕುತೂಹಲ ಕಾವೇರುತ್ತದೆ. ಅಲ್ಲಿಂದಾಚೆಗೆ ನಾಯಕನ ಹಿನ್ನೆಲೆ ಏನು ಎನ್ನುವ ಪ್ರಶ್ನೆಯನ್ನು ಪ್ರೇಕ್ಷಕರ ಮುಂದಿಟ್ಟು, ಲೋಕೇಶ್ ಕನಕರಾಜ್ ಆಟವನ್ನು ಇನ್ನೂ ರೋಚಕಗೊಳಿಸಲು ಹೊರಡುತ್ತಾರೆ.

ತಣ್ಣಗಿನ ದೃಶ್ಯಗಳ ಜೊತೆಗೆ ಕಾವೇರಿದ ಆ್ಯಕ್ಷನ್ ಸನ್ನಿವೇಶಗಳಿಂದ ಇಡುಕಿರಿದ ಸಿನಿಮಾದ ಮೊದಲರ್ಧದ ಲಯ ಸಶಕ್ತ ಚಿತ್ರಕಥಾ ಬರವಣಿಗೆಗೆ ಹಿಡಿದ ಕನ್ನಡಿ. ಆದರೆ, ಮಧ್ಯಂತರದ ನಂತರ ನಾಯಕನ ಫ್ಲ್ಯಾಷ್‌ಬ್ಯಾಕ್ ಕಥನಕ್ಕೆ ನಿರೀಕ್ಷಿತ ಮಟ್ಟದ ರಕ್ತ–ಮಾಂಸ ತುಂಬಲಿಕ್ಕೆ ನಿರ್ದೇಶಕರಿಗೆ ಸಾಧ್ಯವಾಗಿಲ್ಲ. ತೀರಾ ಪೇಲವವೂ ಬಾಲಿಶವೂ ಎನ್ನಿಸುವಂತಹ ಕಥಾ ವಿಸ್ತರಣೆ ಆ ಭಾಗದಲ್ಲಿ ಎದ್ದುಕಾಣುತ್ತದೆ.

‘ಲಿಯೊ’ ಚಿತ್ರದಲ್ಲಿ ವಿಜಯ್

ಲೋಕೇಶ್ ತಮ್ಮದೇ ‘ಸಿನಿಮ್ಯಾಟಿಕ್ ಯೂನಿವರ್ಸ್’ ಅನ್ನು ತೇಲಿಬಿಟ್ಟು ವರ್ಷಗಳೇ ಆಗಿವೆ. ‘ಖೈದಿ’, ‘ವಿಕ್ರಂ’, ‘ಮಾಸ್ಟರ್’ ಇವುಗಳೆಲ್ಲದರಲ್ಲೂ ಅವರು ಹಿಂಸಾವಸ್ತುವನ್ನಿರಿಸಿ, ಭಾವುಕ ಕಥನದ ಮೂಲಕ ಪೋಣಿಸುವ ಪ್ರಯತ್ನ ಮಾಡಿದ್ದಾರೆ. ಅದಕ್ಕೆ ‘ಲಿಯೊ’ ಹೊಸ ಸೇರ್ಪಡೆ. ‘ಖೈದಿ’ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಜಾರ್ಜ್ ಮಾರ್ಯನ್ ಈ ಸಿನಿಮಾದಲ್ಲಿ ನೆಪೋಲಿಯನ್ ಎಂಬ ಪೊಲೀಸ್ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಅವರ ಸಣ್ಣ ಪಾತ್ರದ ಬರವಣಿಗೆ ಕೂಡ ಈ ಯೂನಿವರ್ಸ್‌ಗೆ ಒಗ್ಗಿಸುವ ರೀತಿಯಲ್ಲಿ ಇದೆ. ತ್ರಿಶಾ ಹಾಗೂ ಪುಟಾಣಿ ಚಿಂಟು ಪಾತ್ರಗಳ ಗ್ರಾಫ್ ಚಿತ್ರದುದ್ದಕ್ಕೂ ಮುಂದುವರಿಯುವ ಬಗೆ ಆಸಕ್ತಿಕರ. ವಿಜಯ್ ಮಗನ ಪಾತ್ರವನ್ನೂ ತಮ್ಮ ಯೂನಿವರ್ಸ್‌ನ ತೆಕ್ಕೆಗೆ ತಂದುಕೊಳ್ಳುವ ಬಗೆಯಲ್ಲೇ ಲೋಕೇಶ್ ಸೃಷ್ಟಿಸಿರುವುದಕ್ಕೂ ಅಡಿಗಡಿಗೆ ಸಾಕ್ಷ್ಯಗಳಿವೆ.

ಸಾಕಷ್ಟು ಏರಿಳಿತ ಇರುವ ಪಾತ್ರವನ್ನು ವಿಜಯ್ ಜೀವಿಸಿದ್ದಾರೆ. ತ್ರಿಶಾ ನಿಯಂತ್ರಿತ ಅಭಿನಯ ಚೆನ್ನಾಗಿದೆ. ಸಂಜಯ್ ದತ್ ಹಾಗೂ ಅರ್ಜುನ್ ಸರ್ಜಾ ಪಾತ್ರಗಳು ತುಂಬಾ ‘ಬ್ಲ್ಯಾಕ್ ಆ್ಯಂಡ್ ವೈಟ್’. ಗೌತಮ್ ಮೆನನ್ ಪಾತ್ರ ಕಾಡುತ್ತದೆ. ಎಲ್ಲರಿಗಿಂತ ಹೆಚ್ಚು ಅಂಕಗಳು ಸಲ್ಲಬೇಕಾದದ್ದು ಸಂಗೀತ ನಿರ್ದೇಶಕ ಅನಿರುದ್ಧ್ ರವಿಚಂದರ್ ಹಾಗೂ ಸಿನಿಮಾಟೋಗ್ರಾಫರ್ ಮನೋಜ್ ಪರಮಹಂಸ ಅವರಿಗೆ. ಹಾಡುಗಳನ್ನು ತಲೆಗೆ ತಂದುಕೊಳ್ಳದಂತೆ ಚಿತ್ರಕಥೆ ಬರೆಯುವುದು ಲೋಕೇಶ್ ಜಾಯಮಾನ. ಹೀಗಾಗಿ ಅನಿರುದ್ಧ್ ಮೆಟಲ್ ಬ್ಯಾಂಡ್‌ಗಳನ್ನು ಬಳಸಿ ಮೂಡಿಸಿರುವ ಹಿನ್ನೆಲೆಯ ಸಮಕಾಲೀನ ಸಂಗೀತದ ವರಸೆ ಯುವ ರಸಿಕರನ್ನು ಹಿಡಿದಿಡಬಲ್ಲದು. ಮನೋಜ್ ಪರಮಹಂಸ ಅವರಂತೂ ಸಣ್ಣ–ಪುಟ್ಟ ಚಲನೆ, ಪಾತ್ರದ ಕದಲಿಕೆಗಳನ್ನು ತಮ್ಮ ಕ್ಯಾಮೆರಾ ಕಣ್ಣಿನ ಕುಶಲತೆಯಿಂದ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಇಷ್ಟೆಲ್ಲ ಬಿಡಿಸಿ ನೋಡಿದ ನಂತರವೂ ಅನಿಸುವುದು: ಲೋಕೇಶ್ ಈ ಸಿನಿಮಾ ಬರವಣಿಗೆಯಲ್ಲಿ ಅಲ್ಲಲ್ಲಿ ದಿಕ್ಕೆಟ್ಟಂತೆ ಆಗಿದ್ದಾರೆ.

-ವಿಶಾಖ ಎನ್.

ಪದಬಂಧ 5477

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.1.ಬರದಲ್ಲಿ ಹೊರದೂಡುವಿಕೆ! (4)
3.ಸುವಾಸನೆಯಿದು (4)
5.ಸರದ ದರ ನೀಡಿ ತೋರಿದ ಸಲಿಗೆ! (3)
7.ಪದರದೊಳಗೆ ಮೋಕ್ಷ ಕಾಣುತ್ತಿದೆಯೇ? (2)
9.ವಿದ್ಯೆಯನ್ನು ಕಲಿಸುವವನು (2)
12.ಮಧುರ ಫಲಗಳನ್ನು ನೀಡುವ ವೃಕ್ಷ (2)
13.ಕವಿತೆ ಬರೆಯುವವನು (2)
15.ಆನೆಯ ಮೇಲಿರುವ ಭದ್ರಾಸನ (3)
17.ಹೊಗಳಿಕೆಯ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ (4)
18.ಸದಾ ಒಳ್ಳೆಯ ಆಶಯ (4)

ಮೇಲಿಂದ ಕೆಳಕ್ಕೆ

1.ಸ್ಲೇಟಿನ ಬರೆಯುವ ಸಾಧನ (3)
2.ರಸನದಲ್ಲಿರುವ ದ್ರವ (2)
3.ನಗರದಲ್ಲಿರುವ ಮನುಷ್ಯ (2)
4.ಪುರದ ತುಂಬಾ ಹಬ್ಬಿದ ಸುಳ್ಳು ಸುದ್ದಿ! (3)
6.ಮಧ್ಯವರ್ತಿ ಇಲ್ಲಿದ್ದಾನೆ (3)
8.ನೆತ್ತರು ಹರಿಯುವಿಕೆ (5)
9.ವ್ಯಾಕರಣದಲ್ಲಿ ಗುಣವನ್ನು ಸೂಚಿಸುವ ಶಬ್ದ (5)
11.ಬಾಲ ಬೆಳೆದ ಹುಡುಗನಿಲ್ಲಿ ಉಲ್ಟಾ ನಿಂತಿದ್ದಾನಲ್ಲಾ? (3)
12.ಮತ್ತೆ ಮತ್ತೆ ತೋರಿದ ಪ್ರೀತಿ (3)
14.ನಯವಾಗಿ ಬಂದಿರುವ ನಮ್ರತೆ (3)
15.ಹತೋಟಿಯೂ ಆಗುವ ಸಂಖ್ಯೆ (2)
16.ಸದರಿಯಲ್ಲಿ ಸೂಕ್ತವಾದುದು ತಿರುವುಮುರುವಾಗಿದೆ (2)



5476ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
11.ಮಹಾದ್ವಾರ 3.ಅಜಗರ
5.ನವದಂಪತಿ 7.ನಗು
9.ಕಾಮನೆ 11.ಇಹ
13.ಮರಣಕಾಲ
15.ಹಗೆತನ
16.ಕಸರತ್ತು

ಮೇಲಿಂದ ಕೆಳಕ್ಕೆ:
11.ಮತದಾನ 2.ರಸನ
4.ಗರತಿ 6.ದಂಡನೆ
8.ಗುರಿ
9.ಕಾರಣ10.ಲಿಇ
12.ಹಕೀಕತ್ತು
13.ಮಲ್ಲಿಗೆ
14.ಲಮ

ಸುಡೊಕು 5863

				5		2		8
5		4	1		8			
	8	3		7			5	
	6		9	3		1		2
2		5						
	3			8	2	5		6
			5		6		2	
3		2						
	5			2		4		1

5862 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಅಕ್ಟೋಬರ್ 21, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಸಪ್ತಮಿ ಗಂ. 21-54 **ನಕ್ಷತ್ರ:** ಪೂರ್ವಾಷಾಢ ಗಂ. 19-54 **ಯೋಗ:** ಸುಕರ್ಮ ಗಂ 24-36 **ಕರಣ:** ಗರ ಗಂ. 10-43, ತುಲಾ ಮಾಸದ 04 ನೇ ದಿನ, **ಮಳೆನಕ್ಷತ್ರ:** ಚಿತ್ರ 4.
ರಾಹುಕಾಲ : ಬೆಳಿಗ್ಗೆ 09-00 - 10-30 **ಸೂರ್ಯೋದಯ :** 06-25 **ಸೂರ್ಯಾಸ್ತ :** 06-05
ಮುಸ್ಲಿಂ ದಿನಾಂಕ : 05 ರಬಿಯುಸ್ಸಾನಿ
ದಿನ ವಿಶೇಷ : ನವರಾತ್ರಿ 7ನೇ ದಿನ, ದುರ್ಗಾ ಪೂಜಾ ಪ್ರಾರಂಭ
ಅದೃಷ್ಟ ಸಂಖ್ಯೆ : 7, 12

ಮೇಷ: ಹಿಂದೆ ನಡೆದಿರುವ ವಿಚಾರದ ಬಗೆಗಿನ ಯೋಚನೆಗಿಂತ ಲಭ್ಯವಿರುವ ಅವಕಾಶ ಬಗ್ಗೆ ಯೋಚಿಸುವುದು ಉತ್ತಮ. ಕಚೇರಿಯ ಹಣದ ವಿಚಾರದಲ್ಲಿ ಖರ್ಚು-ವೆಚ್ಚಗಳ ವಿಷಯದಲ್ಲಿ ಜಾಗ್ರತೆ ಇರಲಿ.

ವೃಷಭ: ನಿಮಗೆ ಅಗತ್ಯವಿಲ್ಲದ ವಿಚಾರಗಳ ಬಗ್ಗೆ ಮಾತನಾಡುವುದಾಗಲೀ ಅಥವಾ ಸಲಹೆ ನೀಡುವುದಾಗಲೀ ಸರಿಯಲ್ಲ. ಪ್ರೀತಿಯ ವಿಚಾರದಲ್ಲಿ ಗುಣಾತ್ಮಕ ಬೆಳವಣಿಗೆ ಅನುಭವಕ್ಕೆ ಬಂದಿತು. ಚಿಂತೆಗಳಿಗೆ ನೀವೇ ಆಶ್ರಯತಾಣರಾಗಬೇಡಿ.

ಮಿಥುನ: ಯಾವ ಉದ್ದೇಶದಲ್ಲಿಯೂ ಯಾರಿಗೂ ಸಾಲ ನೀಡಬೇಡಿ. ಉದ್ಯೋಗ ವ್ಯವಹಾರದಲ್ಲಿನ ತಲ್ಲೀನತೆಯು ಧನಾರ್ಜನೆಗೆ ಕಾರಣವಾಗುವುದು. ಮನೆಯಲ್ಲಿ ವಿವಾಹದ ವಿಷಯಗಳು ಚರ್ಚೆಯಾಗುವುದು.

ಕರ್ಕಾಟಕ: ದೇವತಾನುಗ್ರಹ ನಿಮ್ಮ ಪಾಲಿಗೆ ಸಂಪೂರ್ಣವಿದ್ದು, ತೊಂದರೆ ನಿವಾರಿಸಿ ವೃತ್ತಿರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಲು ಪೂರಕನಾಗಿರುತ್ತಾನೆ. ಸಿದ್ಧ ಉಡುಪುಗಳ ರಫ್ತು ವ್ಯಾಪಾರದಿಂದ ಹೇರಳ ಲಾಭ.

ಸಿಂಹ: ಅವಿವಾಹಿತರಿಗೆ ವೈವಾಹಿಕ ಸಂಬಂಧದ ಕಂಕಣಬಲಕ್ಕೆ ಪೂರಕ ವಾತಾವರಣ ಸೃಷ್ಟಿಸಲಿದೆ. ಪಾಲುದಾರಿಕೆಯಲ್ಲಿ ಮೋಸ ಹೋಗುವ ಲಕ್ಷಣ ಇದೆ. ಹೆಚ್ಚಿನ ಗಮನವಿರಲಿ. ವ್ಯಾಪಾರದಲ್ಲಿ ಸಾಧಾರಣ ಲಾಭ ಸಿಗುತ್ತದೆ.

ಕನ್ಯಾ: ಮಾನಸಿಕ ಒತ್ತಡ ಹೆಚ್ಚಿಸುವಂತಹ ಕೆಲಸ ಮಾಡುವವರಿಗೆ ಸಹಾಯಕನ ಅವಶ್ಯಕತೆ, ಅನಿವಾರ್ಯತೆ ಹೆಚ್ಚಾಗುವುದು. ವಾದವಿವಾದಕ್ಕೆ ತೆರೆ ಎಳೆಯುವ ಪ್ರಯತ್ನ ಮಾಡಿ. ಉದ್ಯಮದಲ್ಲಿ ಬಂಡವಾಳ ಹೂಡಲು ಈ ದಿನ ಸರಿಯಲ್ಲ.

ತುಲಾ: ಅತಿ ಬುದ್ಧಿವಂತಿಕೆ ಜನರಲ್ಲಿ ವ್ಯವಹಾರ ನಡೆಸಬೇಕಾದರೆ ಜಾಗ್ರತೆ ಇರಲಿ. ಲೆಕ್ಕ ಪತ್ರಗಳಿಲ್ಲದೇ ಕೇವಲ ನಂಬಿಕೆಯಲ್ಲಿ ಯಾವ ವ್ಯವಹಾರವನ್ನು ಮಾಡುವುದು ಸರಿಯಲ್ಲ. ಚಿನ್ನಾಭರಣ ವ್ಯಾಪಾರಿಗಳಿಗೆ ಲಾಭವಿರಲಿದೆ.

ವೃಶ್ಚಿಕ: ಈ ದಿನ ನಿಮಗೆ ಕಾಡುವ ಸಮಸ್ಯೆ ಮತ್ತು ಅಸಹಾಯಕ ಸ್ಥಿತಿಯಿಂದಾಗಿ ಯಾರಲ್ಲೂ ನಂಬಿಕೆ ಇಡದಂತಹ ಪರಿಸ್ಥಿತಿ ತೋರಬಹುದು. ರೈತರಿಗೆ ತರಕಾರಿ ಬೆಳೆಯಲ್ಲಿದ್ದ ನಿರೀಕ್ಷೆಯು ಪೂರ್ಣವಾಗಿ ಸಂತೋಷಕ್ಕೆ ಕಾರಣವಾಗುವುದು.

ಧನು: ನಿಮಗೆ ಗೊತ್ತಿಲ್ಲದ ವಿಷಯ ಗುರುಹಿರಿಯರ ಬಳಿಯಲ್ಲಿ ಕೇಳಿ ತಿಳಿಯುವುದು ಅಗೌರವವೆಂದು ಭಾವಿಸಬೇಡಿ. ವಿದೇಶಿ ವಸ್ತುಗಳ ಮೇಲೆ ಹೆಚ್ಚಿನ ಹಣ ವ್ಯಯ ಆಗುತ್ತದೆ. ದೇಹದಲ್ಲಿ ಜೀರ್ಣಾಂಗ ಸಮಸ್ಯೆ ಕಾಡಬಹುದು.

ಮಕರ: ನಿಮ್ಮ ಕಾರ್ಯಕ್ಷೇತ್ರದಲ್ಲಿ ದೂರ ಸಂಚಾರ ಹೆಚ್ಚಾಗಿದ್ದರೂ ಎಣಿಕೆಗೆ ಮೀರಿ ಧನಾಗಮವಿದ್ದು ಎಲ್ಲಾ ಕೆಲಸ ಕಾರ್ಯಗಳು ಸಿದ್ಧಿಸಲಿವೆ. ಗೆಳೆಯರ ಅಪರೂಪದ ಬೇಟಿ ಜೊತೆ ಮಾತುಕತೆ, ಊಟ ನಡೆಯುವುದು.

ಕುಂಭ: ನೀವು ಕೈಗೊಂಡ ಸಂಸ್ಥೆಯ ಅಥವಾ ವೈಯಕ್ತಿಕ ಅಭಿವೃದ್ಧಿಯ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆಯಲಿದೆ. ಇಷ್ಟ ವಸ್ತುಗಳ ಖರೀದಿಯಿಂದ ಹಣ ವ್ಯಯ. ಯಾವ ಕೆಲಸದಲ್ಲೂ ಅಡೆ ತಡೆಗಳು ಇರದು.

ಮೀನ: ಎಲ್ಲಾ ರೀತಿಯ ಧವಸ ಧಾನ್ಯ ಹಾಗೂ ಮಸಾಲೆ ಪದಾರ್ಥಗಳ ಸಗಟು ಹಾಗೂ ರಫ್ತು ವ್ಯಾಪಾರಿಗಳಿಗೆ ಅಧಿಕ ಮಟ್ಟದ ವ್ಯಾಪಾರ ಇರಲಿದೆ. ನಿಮ್ಮ ಅತಿಯಾದ ಸರಳತೆ ನಿಮ್ಮ ಸಹಚರರು ದುರುಪಯೋಗ ಪಡಿಸಿಕೊಳ್ಳುವರು.

ಆದೀಶ್ವರ್ ಎಲೆಕ್ಟ್ರೋ ವರ್ಲ್ಡ್

gadget for every budget!

INSTANT CASH BACK UPTO ₹25,000/- ON CREDIT CARD & DEBIT CARD EMI

GET CASH VOUCHER UPTO ₹12,500/-* ON BAJAJ FINSERV FINANCE PURCHASE

NAVARATHRI BIGGEST CELEBRATION OFFERS

SIDE BY SIDE REFRIGERATORS

- LG 655 Ltr. GET INSTANT CASH BACK UPTO ₹12,000/- ON CC & DC — EMI ₹3,990/-
- Haier 628 Ltr. GET INSTANT CASH BACK UPTO ₹9,000/- ON CC & DC — EMI ₹2,994/-
- SAMSUNG 653 Ltr. GET INSTANT CASH BACK UPTO ₹15,000/- ON CC & DC — EMI ₹4,990/-

PREMIUM FROST FREE REFRIGERATORS

- LG 417 Ltr. GET INSTANT CASH BACK UPTO ₹8,000/- ON CC & DC — EMI ₹2,790/-
- Whirlpool 340 Ltr. GET INSTANT CASH BACK UPTO ₹3,500/- ON CC & DC — FESTIVAL PRICE ₹32,990/-
- SAMSUNG 363 Ltr. GET INSTANT CASH BACK UPTO ₹10,000/- ON CC & DC — EMI ₹2,990/-

FROST FREE REFRIGERATORS

- LG 260 Ltr. GET INSTANT CASH BACK UPTO ₹3,000/- ON CC & DC — EMI ₹1,873/-
- Haier 328 Ltr. GET INSTANT CASH BACK UPTO ₹3,000/- ON CC & DC — FESTIVAL PRICE ₹34,990/-
- SAMSUNG 231 Ltr. GET INSTANT CASH BACK UPTO ₹1,500/- ON CC & DC — EMI ₹1,990/-

BOTTOM MOUNTED REFRIGERATORS

- Haier 237 Ltr. GET INSTANT CASH BACK UPTO ₹2,000/- ON CC & DC — FESTIVAL PRICE ₹26,990/-

DIRECT COOL REFRIGERATORS

- Whirlpool 184 Ltr. — FESTIVAL PRICE ₹14,490/-
- Haier 190 Ltr. — FESTIVAL PRICE ₹15,490/-

LOWEST EMI | DEBIT & CREDIT CARD EMI | LOWEST DOWNPAYMENT | LONG TENURE EMI

FRONT LOAD WASHING MACHINES

- LG 8 Kg. FREE ARIEL MATIC LIQUID. GET INSTANT CASH BACK UPTO ₹4,500/- ON CC & DC — FESTIVAL PRICE ₹35,990/-
- Haier 9 Kg. GET INSTANT CASH BACK UPTO ₹4,500/- ON CC & DC — SPECIAL PRICE ₹36,990/-
- Whirlpool 7 Kg. FREE VIP SALSA STROLLY WORTH ₹8,990/-. GET INSTANT CASH BACK UPTO ₹2,000/- ON CC & DC — SPECIAL PRICE ₹30,990/-
- SAMSUNG 8 Kg. GET INSTANT CASH BACK UPTO ₹5,000/- ON CC & DC — EMI ₹1,490/-

TOP LOAD WASHING MACHINES

- LG 7.5 Kg. GET INSTANT CASH BACK UPTO ₹1,500/- ON CC & DC — EMI ₹1,799/-
- Haier 7.0 Kg. GET INSTANT CASH BACK UPTO ₹1,500/- ON CC & DC — EMI ₹1,599/-

NAVARATHRI FESTIVAL BIGGEST SAVING COMBO OFFERS

- **MIXER GRINDER COMBO** — Pigeon. Mixer Grinder (Glory) MRP ₹3,325, Cooker (Favourite) 3Ltr MRP ₹1,395. 50% DISCOUNT. TOTAL MRP ₹4,720/- COMBO PRICE ₹2,395/-
- **GAS STOVE COMBO** — 62% DISCOUNT. Pigeon Glass Cooktop two Burner MRP ₹4,399, Non Stick Favorite Duo Pack Tawa MRP ₹1,895. TOTAL MRP ₹6,294/- COMBO PRICE ₹2,395/-
- **THE WHISTLE COMBO** — Deluxe Aluminium Pressure Cooker 5L, Deluxe Aluminium Pressure Cooker 3L, Flat Tawa 280 4mm. 46% DISCOUNT. COMBO MRP ₹5,035/- Offer Price ₹2299/-
- **THE FIZZY COMBO** — Vibrant 5 in 1 IB Set - Hard Anodized Pressure Cooker 2.5L + Flat Tawa 250 + Fry Pan 240 + Kadai 240 with glass lid. 54% DISCOUNT. COMBO MRP ₹4,995/- Offer Price ₹2299/-
- **WET GRINDER COMBO** — Pigeon Wet Grinder (Dyna) MRP ₹5,755, Cooker (Favorite) 3Ltr MRP ₹1,395. 36% DISCOUNT. TOTAL MRP ₹7,150/- COMBO PRICE ₹4,590/-
- **CHIMNEY COMBO** — Pigeon. Chimney Nebula MRP ₹14,590, 4 Burner Glass Cooktop MRP ₹7,199. 54% DISCOUNT. TOTAL MRP ₹21,789/- COMBO PRICE ₹9,990/-

- EUREKA FORBES, AO Smith, HAVELLS, LG, pureit, BRITA — **RO - WATER PURIFIER** 1 EMI OFF, ZERO DOWN PAYMENT, 10% CASH BACK. FESTIVAL PRICE ₹14,490/- ONWARDS
- Haier, AO Smith, HAVELLS, V-GUARD — **WATER HEATER** FREE PIPE & INSTALLATION. 3 Liters ₹3,490/-, 15 Liters ₹7,790/-, 25 Liters ₹8,790/-
- *A Healthier Way To Cook* — Pigeon. Digital Display with Touch, 8 Preset Menu with Defrost Option, 360° High Speed Air Circulation Technology. 56% DISCOUNT. MRP ₹7,995/- FESTIVAL PRICE ₹3,495/-
- Butterfly **FOOD PROCESSOR** — FREE + INDUCTION COOKTOP + KETTLE WORTH ₹5,048/-. FESTIVAL PRICE ₹11,490/-
- PHILIPS, HAVELLS, Butterfly, USHA — DRY IRON FESTIVAL PRICE ₹590/- ONWARDS; STEAM IRON FESTIVAL PRICE ₹990/- ONWARDS; PHILIPS HAND MIXER FESTIVAL PRICE ₹2,299/-
- **GLASS TOP GAS STOVE** — Butterfly, FABER, Preethi, Pigeon. 2 BURNER ₹1,790/-, 3 BURNER ₹3,890/-, 4 BURNER ₹4,290/-

ಬೆಂಗಳೂರು

- ನೂತನ **ಬಾಗಲೂರು** ಬಾಗಲೂರು ಮುಖ್ಯರಸ್ತೆ, ಬೃಂದಾವನ್ ಕಾಲೇಜ್ ಹತ್ತಿರ Ph : 080-35712968 /35712969 9731306702
- **ಅಕ್ಷಯನಗರ** ಡಿಎಲ್‌ಎಫ್ ನ್ಯೂ ಟೌನ್ ಯೂನಿಯನ್ ಬ್ಯಾಂಕ್ ಎದುರು ಯಲೇನಹಳ್ಳಿ ಮುಖ್ಯ ರಸ್ತೆ Ph :9731307230
- **ನೆಲಮಂಗಲ** ಶ್ರೀ ಮಾರುತಿ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ಜೆಸಿಎಸ್ ಐಟಿಐ ಕಾಲೇಜ್ ಎದುರು Ph 9731306692 / 9686680755
- **ಬಿಡದಿ** ಕೆಂಚನಗುಪ್ಪೆ ಗೇಟ್, HDFC ಬ್ಯಾಂಕ್ ಎದುರು, ಬೆಂಗಳೂರು–ಮೈಸೂರು ಹೆದ್ದಾರಿ 7702203254
- **ಕೋಣನಕುಂಟೆ** ಸೌಧಾಮಣಿ ಚೌಲ್ಟ್ರಿ ಹತ್ತಿರ ಪೋಲೀಸ್ ಸ್ಟೇಷನ್ ಪಕ್ಕ Ph :9731306531
- **ಬೇಗೂರು** ನಂ. 80, ಹೊಂಗಸಂದ್ರ, ಬೇಗೂರು ರಸ್ತೆ 080-41499467/9731306604
- **ಆರ್.ಟಿ. ನಗರ** ಪೊಲೀಸ್ ಸ್ಟೇಷನ್ ಎದುರು 9731307264 080-23559977
- **ಹೊಸಕೋಟೆ** ಸರ್ಕಾರಿ ಮಹಿಳಾ ಕಾಲೇಜು ಹತ್ತಿರ. 9731306767
- **ಹೆಣ್ಣೂರು ಮುಖ್ಯ ರಸ್ತೆ**, ಡಿಮಾರ್ಟ್ ಎದುರು 080-48651500/48505043 9731306596
- **ಮಹದೇವಪುರ** ವೈಟ್‌ಫೀಲ್ಡ್ ಮೈನ್ ರೋಡ್ ಬ್ರಾಂಡ್ ಫ್ಯಾಕ್ಟರಿ ಹತ್ತಿರ 080-48148975, 9148151731
- **ಉತ್ತರಹಳ್ಳಿ** ಮುಖ್ಯ ರಸ್ತೆ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಹತ್ತಿರ. 9731306547 49587474, 49537575
- **ವೈಟ್ ಫೀಲ್ಡ್** ಉಡುಪಿ ಡೆಲಿಕೆಸಿ ಹೋಟೇಲ್ ಸಮೀಪ ರಾಮಗೊಂಡನಹಳ್ಳಿ. 080–40984677 9513499851
- **ಯಲಹಂಕ** ಎಸ್.ಬಿ.ಐ. ಬ್ಯಾಂಕ್ ಸಮೀಪ, ಯಲಹಂಕ ನ್ಯೂ ಟೌನ್ 9731306702
- **ಹೆಬ್ಬಗೋಡಿ** ಅತ್ತಿಬೆಲೆ ಹೋಬಳಿ, ಚರ್ಚ್ ಸಮೀಪ ಬಯೋಕಾನ್ ಎದುರು. 9731307257 080–27849941
- **ರಾಜಾಜಿನಗರ ಪ್ರೀಮಿಯಮ್ ಸ್ಟೋರ್** ಕೇಕ್ ಪ್ಯಾಲೆಸ್ ಹತ್ತಿರ 41610910, 9731306537
- **ತನಿಸಂದ್ರ** ಕಿಂಗ್ ಸ್ಪೇಸ್ ಮಿಡೋಸ್ ಅಪಾರ್ಟ್‌ಮೆಂಟ್ಸ್, ರೈಲ್ವೆ ಟ್ರಾಕ್ ಅಂಡರ್ ಪಾಸ್ ಸಮೀಪ. 9731306763/32521747
- **ವಿಜಯನಗರ** ಕಾರ್ಡ್ ರಸ್ತೆ, ಎಮ್.ಸಿ. ಲೇಔಟ್, ಮೆಟ್ರೋ ಸ್ಟೇಷನ್ ಹತ್ತಿರ 9731306631
- **ಪೀಣ್ಯ ಟಿ–ದಾಸರಹಳ್ಳಿ** ಸಂತೋಷ್ ಎನ್‌ಕ್ಲೇವ್, ಓಲ್ಡ್ ರಿಲೈನ್ಸ್ ಬಿಲ್ಡಿಂಗ್. 9731306684 28393199/4199
- **ಮತ್ತಿಕೆರೆ** ಬಾಂಬೆ ಡೈಯಿಂಗ್ ರಸ್ತೆ. 080–40974968 Ph :9731306641
- **ಹೆಚ್.ಎಸ್.ಆರ್. ಲೇಔಟ್** 1ನೇ ಸೆಕ್ಟರ್, ಐ.ಸಿ.ಐ.ಸಿ.ಐ. ಬ್ಯಾಂಕ್ ಎದುರು. Ph :9731306550
- **ಬನಶಂಕರಿ** ಬಿಗ್ ಬಜಾರ್ ಎದುರು Ph :9731306572 080–26691262/63
- **ಜಯನಗರ** 40ನೇ ಅಡ್ಡ ರಸ್ತೆ, 9ನೇ ಮುಖ್ಯ ರಸ್ತೆ 26541050/51 9731306606
- **ಚಂದ್ರ ಲೇಔಟ್** ವಾಟರ್ ಟ್ಯಾಂಕ್ ಹತ್ತಿರ 9731306558, 080 41503359
- **ನಾಗರಭಾವಿ** ಬಿ.ಡಿ.ಎ. ಕಾಂಪ್ಲೆಕ್ಸ್ ಎದುರು. 6ನೇ ಬಡಾವಣೆ, 2ನೇ ಹಂತ, 9731306616
- **ಮಾರತಹಳ್ಳಿ** ಪಾರ್ಕ್ ಪ್ಲಾಜಾ ಎದುರು 080-42200050 9731306703
- **ಕೆಂಗೇರಿ**, 80 ಅಡಿ ರಸ್ತೆ, ಶಿರ್ಕೆ ಅಪಾರ್ಟ್‌ಮೆಂಟ್ಸ್ ಹತ್ತಿರ 9731306634
- **ಚನ್ನಸಂದ್ರ** ಉತ್ತರಹಳ್ಳಿ ಮುಖ್ಯ ರಸ್ತೆ, ಆರ್.ಎನ್.ಎಸ್.ಐ.ಟಿ. ಸಮೀಪ 28613065/9731306766
- **ಸುಂಕದಕಟ್ಟೆ** ಜನಪ್ರಿಯ ಕಮರ್ಷಿಯಲ್ ಕಾಂಪ್ಲೆಕ್ಸ್, ಮಾಗಡಿ ರಸ್ತೆ, 9686680764 23288940/942
- **ರಾಜಾಜಿನಗರ** ಡಯಾಕಾನ್ ಹಾಸ್ಪಿಟಲ್ ಎದುರು. Ph :9686446886 080–23134692
- **ವಿದ್ಯಾರಣ್ಯಪುರ** ಬಿಡಬ್ಲ್ಯೂಎಸ್‌ಎಸ್‌ಬಿ ಎದುರು. 41721897/1861 9731306614
- **ಹೆಗ್ಗನಹಳ್ಳಿ** ಹೆಗ್ಗನಹಳ್ಳಿ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ ವಿಶ್ವನೀಡಂ ಅಂಚೆ, 9591997257 080–28366565/66
- **ಹೆಚ್.ಆರ್.ಬಿ.ಆರ್. ಲೇಔಟ್** ಸೂರ್ಯ ಪ್ಲಾಜಾ, ಜಾಯಲುಕ್ಕಾಸ್ ಎದುರು ಕಮ್ಮನಹಳ್ಳಿ ಮುಖ್ಯ ರಸ್ತೆ 41687449, 9731306571 25450871
- **ರಾಮಮೂರ್ತಿನಗರ** ಮೋರ್ ಎದುರು 41638612/13 8861007307
- **ಪುಟ್ಟೇನಹಳ್ಳಿ** ಬ್ರಿಗೇಡ್ ಮಿಲೇನಿಯಮ್ ಎದುರು. 9591997265 080–40954615/16
- **ಹುಳಿಮಾವು** ಶಿವ ಸಾಗರ ಹೊಟೇಲ್ ಸಮೀಪ. 080–26483425 9591997254
- LG SHOPPE **ಮಾರತಳ್ಳಿ** 42197907/08 8861002259
- LG SHOPPE **ರಾಜಾಜಿನಗರ** Ph : 9731306671
- LG SHOPPE **ರಾಜರಾಜೇಶ್ವರಿನಗರ** 9591997261

Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681

• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &

ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
BUMPER PRIZE
1 Kg GOLD
Worth ₹ 51 Lakhs
1 WINNER
10 CARS
MARUTHI ESPRESSO CAR
Worth ₹ 4.25 Lakhs
1st PRIZE
ವಿಜಯೋತ್ಸವ ಸೇಲ್
100 BIKES
HONDA BIKE
Worth ₹ 75,000
2nd PRIZE
1,000 LED TV's
40" LED TV
Worth ₹ 29,990
3rd PRIZE
10,000 Gifts
SURPRIZE Gifts
Worth ₹ 999
4th PRIZE
ON EVERY PURCHASE OF ₹ 3,500/- GET LUCKY DRAW COUPON & CHANCE TO WIN 5.68 CRORES WORTH PRIZES
BRING HOME THE GAME with BIGGER SCREEN
LG | OLED TV
EMI
77 OLED ₹7,700/-
65 OLED ₹4,999/-
55 OLED ₹3,999/-
SONY | OLED TV
EMI
77 OLED ₹7,700/-
65 OLED ₹6,500/-
55 OLED ₹5,500/-
Haier | UHD 4K
EMI
75 UHD 4K ₹4,994/-
65 UHD 4K ₹2,994/-
55 UHD 4K ₹1,994/-
LG | UHD 4K
EMI
75 UHD 4K ₹4,999/-
65 UHD 4K ₹3,999/-
55 UHD 4K ₹2,999/-
NAVARATHRI HOTTEST OFFERS
43 UHD 4K
SPECIAL PRICE ₹28,490/-
43 Smart TV
SPECIAL PRICE ₹19,990/-
40 Smart TV
SPECIAL PRICE ₹15,990/-
32 Smart TV
SPECIAL PRICE ₹10,490/-
32 HD LED TV
SPECIAL PRICE ₹8,990/-
WIRELESS BLUETOOTH @ 69/-
Sona Chandi Offer -This Dasara & Deepavali with Smart Phone
SMART WATCHES @ 799/-
iPhone 15/15plus
Get 10 GRAM Silver Coin*
Get MAGSAFE POWER BANK Worth ₹ 2999/- At 1499/-
vivo V29E
Get 5 GRAM Silver Coin*
Get TWS AT ₹ 699/- With Smart Phone
OPPO F23-5G
Get 5 GRAM Silver Coin*
Get Calling Smart Watch AT ₹ 999/- With Smart Phone
SAMSUNG A34
Get 5 GRAM Silver Coin*
Get Sound Bar Worth ₹4999/- At ₹999/- With Smart Phone
Redmi 12C
Get 3 GRAM Silver Coin*
Get Bluetooth AT ₹199/- With Smart Phone
ONEPLUS 11R
Get 5 GRAM Silver Coin
Get Bluetooth AT ₹ 199/- With Smart Phone
SAMSUNG vivo oppo mi realme TECNO ONEPLUS ProCare boAt ZEBRONICS pebble
ಮೈಸೂರು 5 ಸ್ಟೋರ್ಸ್
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com

25 ವರ್ಷಗಳಲ್ಲಿ ಯಾವುದೇ ಪಕ್ಷ ನಿರಂತರವಾಗಿ ಗೆದ್ದ ಉದಾಹರಣೆ ಇಲ್ಲ ● ಅಧಿಕಾರ ಉಳಿಸಿಕೊಳ್ಳಲು ಅವರು ಹೊಸದೊಂದು ಜಾದೂ ಮಾಡಬೇಕಿದೆ

ಆಂತರಿಕ–ಬಾಹ್ಯ ಶತ್ರುಗಳ 'ಚಕ್ರವ್ಯೂಹ'ದಲ್ಲಿ ಗೆಹಲೋತ್

● ಮಂಜುನಾಥ ಹೆಬ್ಬಾರ್

ಸುದ್ದಿ ವಿಶ್ಲೇಷಣೆ



ನವದೆಹಲಿ: 'ಕೈ' ಪಾಳಯದಲ್ಲಿ ಚತುರ ರಾಜಕಾರಣಿಯೆಂದೇ ಗುರುತಿಸಿಕೊಂಡಿರುವ ಅಶೋಕ್ ಗೆಹಲೋತ್ ಅವರು ಮರುಭೂಮಿಯ ಕಣದಲ್ಲಿ ಗೆಲುವಿನ ನಗೆ ಬೀರಲು ಈ ಸಲ ಹೆಚ್ಚು ಬೆವರು ಹರಿಸಬೇಕಿದೆ. ಒಳಗಿನ ಮತ್ತು ಹೊರಗಿನ ಶತ್ರುಗಳ ದೊಡ್ಡ ಪಡೆಯೇ ಅವರ ಎದುರಿಗೆ ಇದೆ. ಅವರ ಸ್ಥಿತಿ ಚಕ್ರವ್ಯೂಹದಲ್ಲಿ ಸಿಲುಕಿದ ಅಭಿಮನ್ಯುವಿನಂತೆ ಆಗಿದೆ. 2018ರಲ್ಲಿ ಗೆಹಲೋತ್ ಜತೆಗೆ ಜೋಡೆತ್ತಿನಂತೆ ದುಡಿದಿದ್ದ ಸಚಿನ್ ಪೈಲಟ್ ಅವರು 'ಪರೀಕ್ಷೆ'ಯ ನೆಪವೊಡ್ಡಿ ರಾಜಸ್ಥಾನದ ಅಖಾಡದಿಂದ ಅಂತರ ಕಾಯ್ದುಕೊಂಡಿದ್ದಾರೆ.

ಅಶೋಕ್ ಗೆಹಲೋತ್ ತಂದೆ ಲಕ್ಷ್ಮಣ ಸಿಂಗ್ ಗೆಹಲೋತ್ ಅವರು ಜಾದೂಗಾರರು. ಗೆಹಲೋತ್ ಅವರು ಮಾಲಿ ಸಮುದಾಯದವರು. ರಾಜಸ್ಥಾನದ ಜನಸಂಖ್ಯೆಯಲ್ಲಿ ಈ ಸಮುದಾಯದ ಪಾಲು ಶೇ 4ರಷ್ಟು. ರಾಜ್ಯದಲ್ಲಿ ಈ ಸಮುದಾಯ ಪ್ರಭಾವಿ ಸಮುದಾಯವೇನಲ್ಲ. ರಾಜ್ಯದ ಪ್ರಭಾವಿ ರಾಜಕಾರಣಿಗಳು ಒಡ್ಡಿದ ಸವಾಲುಗಳನ್ನು ಮೆಟ್ಟಿ ನಿಂತ ಜಾದೂಗಾರನ ಪುತ್ರ ಗೆಹಲೋತ್ ಅವರು ಮೂರು ಸಲ ರಾಜ್ಯದ ಚುಕ್ಕಾಣಿ ಹಿಡಿದರು. ಈ ಸಲ ಅಧಿಕಾರ ಉಳಿಸಿಕೊಳ್ಳಲು ಅವರು ಹೊಸದೊಂದು ಜಾದೂ ಮಾಡಬೇಕಿದೆ. ಕಳೆದ 25 ವರ್ಷಗಳಲ್ಲಿ ಯಾವುದೇ ಪಕ್ಷ ನಿರಂತರವಾಗಿ ಗೆದ್ದ ಉದಾಹರಣೆ ಇಲ್ಲ. ಈ 'ಪರಂಪರೆ' ಮುರಿಯಲು ತಮ್ಮ ಕಲ್ಯಾಣ ಯೋಜನೆಗಳೇ ಶ್ರೀರಕ್ಷೆಯಾಗಲಿವೆ ಎಂದು ಗೆಹಲೋತ್ ನಂಬಿದ್ದಾರೆ. ಬಿಜೆಪಿ ಹೈಕಮಾಂಡ್ ಜತೆಗೆ ಮುನಿಸಿಕೊಂಡಿರುವ 'ಮಹಾರಾಣಿ' ವಸುಂಧರಾ ರಾಜೆ ಸಿಂಧಿಯಾ ಅವರೂ ನೆರವಿಗೆ ಬರಬಹುದು ಎಂಬ ಮಹದಾಸೆಯಲ್ಲಿ ಇದ್ದಾರೆ.

ಗೆಹಲೋತ್ ಅವರು ಮೊದಲಿನಿಂದಲೂ ಗಾಂಧಿ ಕುಟುಂಬದ ಆಪ್ತ ವಲಯದಲ್ಲಿ ಗುರುತಿಸಿಕೊಂಡವರು. ಗಾಂಧಿ ಕುಟುಂಬಕ್ಕೆ ಸೇರಿರದ ನಾಯಕರನ್ನು ಎಐಸಿಸಿ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ನಾಯಕ ರಾಹುಲ್ ಗಾಂಧಿ ಕಳೆದ ವರ್ಷ ತೀರ್ಮಾನಿಸಿದ್ದರು. ಆಗ ಅವರ ಮನಸ್ಸಿಗೆ ಬಂದ ಮೊದಲ ಹೆಸರೇ ಅಶೋಕ್ ಗೆಹಲೋತ್. ಹಿರಿಯ ನಾಯಕನಿಗೆ ಕೇಂದ್ರದಲ್ಲಿ ಉನ್ನತ ಸ್ಥಾನಮಾನ ಮಾಡಿ ಸಚಿನ್ ಪೈಲಟ್ ಅವರನ್ನು ರಾಜಸ್ಥಾನದ ಮುಖ್ಯಮಂತ್ರಿಯಾಗಿ ಪಟ್ಟಾಭಿಷೇಕ ಮಾಡಬೇಕು ಎಂಬುದು ಹೈಕಮಾಂಡ್‌ನ ಅಭಿಲಾಷೆಯಾಗಿತ್ತು. ಈ ಪ್ರಸ್ತಾವಕ್ಕೆ ಗೆಹಲೋತ್ ಅವರೂ ಆರಂಭದಲ್ಲಿ ಒಪ್ಪಿದ್ದರು. 2020ರಲ್ಲಿ ತಮ್ಮ ಸರ್ಕಾರದ ವಿರುದ್ಧ ಬಂಡಾಯ ಸಾರಿ ಬಿಜೆಪಿ ಜತೆಗೆ ಕೈಜೋಡಿಸಿದ್ದ ಪೈಲಟ್ ಅವರಿಗೆ ಮುಖ್ಯ ಮಂತ್ರಿ ಸ್ಥಾನ ಬಿಟ್ಟುಕೊಡಲು ಗೆಹಲೋತ್‌ಗೆ ಸುತಾರಾಂ ಇಷ್ಟವಿರಲಿಲ್ಲ.

ಆರಂಭದಲ್ಲಿ ಯಾವುದೇ ಷರತ್ತು ಇಲ್ಲದೆ ಅಧ್ಯಕ್ಷ ಸ್ಥಾನ ಅಲಂಕರಿಸಲು ಒಪ್ಪಿದ್ದ ಅವರು ಮತ್ತೆ ಷರತ್ತುಗಳನ್ನು ಹಾಕಿದರು. ಮುಖ್ಯಮಂತ್ರಿಯಾಗಿದ್ದುಕೊಂಡೇ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುತ್ತೇನೆ ಎಂಬುದು ಷರತ್ತು ಆಗಿತ್ತು. ಇಲ್ಲದಿದ್ದರೆ ತಾವು ಸೂಚಿಸಿದವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂಬುದು ಅವರ ಬೇಡಿಕೆಯಾಗಿತ್ತು. ಅದರ ಬೆನ್ನಲ್ಲೇ, ಅವರ ಬಣದ ಶಾಸಕರು ಹೈಕಮಾಂಡ್ ವಿರುದ್ಧ ಬಂಡಾಯ ಎದ್ದರು. ಹೀಗಾಗಿ, ಹೈಕಮಾಂಡ್ ಅನಿವಾರ್ಯವಾಗಿ ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಕರ್ನಾಟಕದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಯ್ಕೆ ಮಾಡಿತು. ಹೈಕಮಾಂಡ್‌ನ 'ಲಕ್ಷ್ಮಣ ರೇಖೆ' ದಾಟಿದ ಗೆಹಲೋತ್ ಅವರನ್ನು ಗಾಂಧಿ ಕುಟುಂಬ ನಿಧಾನವಾಗಿ ದೂರ ಇಟ್ಟಿತು. ಕಳೆದ ಕೆಲವು ತಿಂಗಳಲ್ಲಿ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮಧ್ಯಪ್ರದೇಶದಲ್ಲಿ ಹಲವು ಬಾರಿ ಬಿರುಸಿನ ಪ್ರಚಾರ ಮಾಡಿದ್ದಾರೆ. ಆದರೆ ರಾಜಸ್ಥಾನಕ್ಕೆ ಭೇಟಿ ನೀಡಿದ್ದು ಕಡಿಮೆ ಎನ್ನಬಹುದು. ಪಕ್ಷವನ್ನು ಗೆಲ್ಲಿಸುವ ಹೊಣೆಯನ್ನು ಗೆಹಲೋತ್ ಅವರಿಗೆ ಬಿಟ್ಟುಬಿಟ್ಟಿದ್ದಾರೆ. ಮುಖ್ಯಮಂತ್ರಿ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಶಾಸಕರಿಗೆ ಟಿಕೆಟ್ ನಿರಾಕರಿಸುವ ಕೆಲಸಕ್ಕೂ ಹೈಕಮಾಂಡ್ ಕೈ ಹಾಕಿದೆ. ಇನ್ನೊಂದೆಡೆ, ರಾಜಸ್ಥಾನ ಸರ್ಕಾರದ ಇತ್ತೀಚಿನ ಜಾಹೀರಾತುಗಳಲ್ಲಿ ಕಾಣಿಸಿಕೊಂಡಿದ್ದು ಗೆಹಲೋತ್ ಒಬ್ಬರೇ. ಚುನಾವಣಾ ಪ್ರಚಾರದ ಪೋಸ್ಟರ್‌ಗಳಲ್ಲಿ ಹೈಕಮಾಂಡ್ ನಾಯಕರು ಕಾಣಿಸಿಕೊಂಡಿದ್ದು ಕಡಿಮೆ.

ಹೈಕಮಾಂಡ್ ನಡೆಸಿದ ಸಂಧಾನದ ಬಳಿಕ ಬಂಡಾಯ ಕೈಬಿಟ್ಟ 46ರ ಹರೆಯದ ಸಚಿನ್ ಪೈಲಟ್ ಅವರು ರಾಜ್ಯದ ವಿಷಯದಲ್ಲಿ ಮೌನಿಯಾಗಿದ್ದಾರೆ. ಈ ವಾರವಷ್ಟೇ ಪ್ರಾಂತೀಯ ಸೈನ್ಯದ (ಟೆರಿಟೋರಿಯಲ್ ಆರ್ಮಿ) ಮೇಜರ್ ಹುದ್ದೆಗೆ ಪರೀಕ್ಷೆ ಬರೆದು ಮುಗಿಸಿದ್ದಾರೆ. ಮುಖ್ಯಮಂತ್ರಿ ಸ್ಥಾನಕ್ಕಾಗಿ ಇನ್ನೈದು ವರ್ಷ ಕಾಯಲು ಸಿದ್ಧರಾಗಿದ್ದಂತಿದೆ ಅವರ ನಡೆ.

ಮುಖ್ಯಮಂತ್ರಿಯಾಗಿದ್ದ ಗೆಹಲೋತ್ ಅವರು 2011ರಲ್ಲಿ ಉಚಿತ ಔಷಧ ಯೋಜನೆ ಪ್ರಕಟಿಸಿದ್ದರು. ಆದರೆ, 2013ರ ಚುನಾವಣೆಯಲ್ಲಿ ಪಕ್ಷ ಸೋತಿತ್ತು. ಪ್ರಚಾರ ಕೊರತೆಯಿಂದಾಗಿ 2013ರಲ್ಲಿ ಪಕ್ಷಕ್ಕೆ ಸೋಲಾಯಿತು ಎಂದು ಭಾವಿಸಿರುವ ಅವರು ಈ ಸಲ ಎಚ್ಚರಿಕೆಯ ಹೆಜ್ಜೆ ಇಟ್ಟಿದ್ದಾರೆ. ಸರ್ಕಾರದ ಹಾಗೂ ತಮ್ಮ ವರ್ಚಸ್ಸು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ 'ಡಿಸೈನ್ ಬಾಕ್ಸ್ಡ್' ಸಂಸ್ಥೆಯ ನೆರವು ಪಡೆದಿದ್ದಾರೆ. 'ಕಲ್ಯಾಣವಾದ'ಕ್ಕೆ ಹೆಸರುವಾಸಿಯಾಗಿರುವ ಅವರು, ಮಹಿಳೆಯರಿಗಾಗಿ ಆರೋಗ್ಯದಿಂದ ಹಿಡಿದು ಸ್ಮಾರ್ಟ್‌ಫೋನ್‌ಗಳವರೆಗೆ ಹಲವು ಕಲ್ಯಾಣ ಯೋಜನೆಗಳನ್ನು ಅನುಷ್ಠಾನ ಮಾಡಿದ್ದಾರೆ. ಈ ಕಲ್ಯಾಣ ಯೋಜನೆಗಳು 'ಮೋದಿ ಮೋಡಿ'ಯನ್ನು ಮೀರಿ ತಮ್ಮ ಕೈ ಹಿಡಿಯಲಿವೆ ಎಂಬ ವಿಶ್ವಾಸದಲ್ಲಿದ್ದಾರೆ. ಗೆಹಲೋತ್ ಅವರನ್ನು ಹಣಿಯಲು ಬಿಜೆಪಿ ಸಹ ಚುನಾವಣಾ ರಣತಂತ್ರ ಬದಲಿಸಿದೆ. ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸುವ ಸಾಹಸಕ್ಕೆ ಕೈ ಹಾಕಿಲ್ಲ. ಏಳು ಸಂಸದರನ್ನು ಕಣಕ್ಕೆ ಇಳಿಸಿ ಪ್ರಯೋಗ ನಡೆಸಿದೆ.

'ನಮೋ ಭಾರತ್' ರೈಲು ಸಂಚಾರಕ್ಕೆ ಹಸಿರು ನಿಶಾನೆ

'ಮುಂದಿನ ವರ್ಷವೂ ಜನ ಸೇವೆ'

ಸಾಹಿಬಾಬಾದ್ (ಉತ್ತರ ಪ್ರದೇಶ)(ಪಿಟಿಐ): 'ದೇಶದ ಮೊದಲ 'ರೀಜನಲ್ ರ್‍ಯಾಪಿಡ್ ಟ್ರಾನ್ಸಿಟ್ ಸಿಸ್ಟಮ್' (ಆರ್‌ಆರ್‌ಟಿಎಸ್) ಯೋಜನೆಯು ಮುಂದಿನ ಒಂದೂವರೆ ವರ್ಷದೊಳಗೆ ಪೂರ್ಣಗೊಳ್ಳುವುದು. ಆ ಸಂದರ್ಭದಲ್ಲಿಯೂ ಜನರ ಸೇವೆ ಮುಂದುವರಿಸಲು ನಾನು ಇರುತ್ತೇನೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

'ನಮೋ ಭಾರತ್' ರೈಲು ಎಂದು ಹೆಸರಿಸಲಾಗಿರುವ ಆರ್‌ಆರ್‌ಟಿಎಸ್‌ನ ಮೊದಲ ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರಿಸಿದ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, 'ನಾವು ಆರಂಭಿಸಿದ ಯೋಜನೆಗಳನ್ನು ನಾವೇ ಉದ್ಘಾಟಿಸುತ್ತೇವೆ ಎಂಬುದಾಗಿ ಈ ಹಿಂದೆ ಹಲವು ಬಾರಿ ಹೇಳಿದ್ದೆ. ಈ ದಿನವೂ ಅದೇ ಮಾತು ಹೇಳುತ್ತೇನೆ' ಎಂದರು.

'ನಾಲ್ಕು ವರ್ಷಗಳ ಹಿಂದೆ ದೆಹಲಿ–ಗಾಜಿಯಾಬಾದ್–ಮೀರತ್ ಪ್ರಾದೇಶಿಕ ಕಾರಿಡಾರ್‌ಗೆ ನಾನು ಶಿಲಾನ್ಯಾಸ ನೆರವೇರಿಸಿದ್ದೆ. ಈ ಯೋಜನೆಯ ಮೊದಲ ಹಂತದ ಮಾರ್ಗದಲ್ಲಿ ರೈಲು ಸಂಚಾರಕ್ಕೆ ಇಂದು ಚಾಲನೆ ನೀಡಿರುವೆ' ಎಂದರು.

'ಆರ್‌ಆರ್‌ಟಿಎಸ್ ಯೋಜನೆಯು ದೆಹಲಿ, ಉತ್ತರ ಪ್ರದೇಶ, ಹರಿಯಾಣ ಹಾಗೂ ರಾಜಸ್ಥಾನದ ಹಲವು ಸ್ಥಳಗಳಿಗೆ ಸಂಪರ್ಕ ಕಲ್ಪಿಸುತ್ತದೆ' ಎಂದರು.

ದೆಹಲಿ–ಮೀರತ್ ನಡುವಿನ 82 ಕಿ.ಮೀ. ಉದ್ದದ ಈ ಮಾರ್ಗದ ಪೈಕಿ ಮೊದಲ ಹಂತದಲ್ಲಿ ಸಾಹಿಬಾಬಾದ್–ದುಹಾಯಿ ನಡುವಿನ 17 ಕಿ.ಮೀ. ಮಾರ್ಗದಲ್ಲಿ 'ನಮೋ ಭಾರತ್' ರೈಲು ಸಂಚರಿಸಲಿದೆ.

ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದಿಬೆನ್ ಪಟೇಲ್, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಇದ್ದರು.

ಕೆನಡಾದ 41 ರಾಜತಾಂತ್ರಿಕರು ವಾಪಸ್

ಒಂದನೇ ಪುಟದಿಂದ

ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಹರ್‌ದೀಪ್ ಸಿಂಗ್ ನಿಜ್ಜರ್ ಅವರನ್ನು ಜೂನ್ 18ರಂದು ಕೆನಡಾದಲ್ಲಿ ಹತ್ಯೆ ಮಾಡಲಾಗಿತ್ತು. ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡ ಇದೆ ಎಂದು ಆರೋಪಿಸಿದ್ದ ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ, ತನಿಖೆ ನಡೆಸುವುದಾಗಿ ಘೋಷಿಸಿದ್ದರು.

ಇದರ ಬೆನ್ನಲ್ಲೇ, ಉಭಯ ದೇಶಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಕಾಣಿಸಿಕೊಂಡಿತ್ತು. ಕೆನಡಾ ವಿರುದ್ಧ ಕಠಿಣ ನಿಲುವು ತಳೆದಿರುವ ಭಾರತ, ಎರಡೂ ದೇಶಗಳಲ್ಲಿರುವ ರಾಜತಾಂತ್ರಿಕರ ಸಂಖ್ಯೆ ಸಮಾನವಾಗಿರಬೇಕು ಎಂದು ಹೇಳಿತ್ತು. ಅದರಂತೆ, ಭಾರತದಲ್ಲಿರುವ ರಾಜತಾಂತ್ರಿಕರ ಪೈಕಿ 41 ಮಂದಿಯನ್ನು ಅ.20ರೊಳಗೆ ಹಿಂದಕ್ಕೆ ಕರೆಸಿಕೊಳ್ಳುವಂತೆ ಗಡುವು ನೀಡಿತ್ತು. ಈ ಗಡುವಿನ ಒಳಗೆ ಕೆನಡಾ ಕ್ರಮ ಕೈಗೊಂಡಿದೆ.

'ಭಾರತದಿಂದ ವಲಸೆ ಬರುವವರ ಅರ್ಜಿಗಳನ್ನು ಸ್ವೀಕಾರ ಹಾಗೂ ಪರಿಶೀಲನೆ ಕಾರ್ಯವನ್ನು ಕೆನಡಾ ಮುಂದುವರಿಸಲಿದೆ. ಕೆಲ ನಿರ್ದಿಷ್ಟ ಅರ್ಜಿಗಳ ಪರಿಶೀಲನೆ ಕಾರ್ಯ ಸ್ಥಳೀಯವಾಗಿ ಇಲ್ಲವೇ ಸುರಕ್ಷತೆ ಇರುವ ಸ್ಥಳದಲ್ಲಿಯೇ ನಡೆಯಬೇಕಾಗುತ್ತದೆ' ಎಂದು ಕೆನಡಾದ ವಿದೇಶಾಂಗ ಸಚಿವೆ ಮೆಲಾನಿ ಜೋಲಿ, ವಲಸೆ ಸಚಿವ ಮಾರ್ಕ್ ಮಿಲ್ಲರ್ ಹೇಳಿದ್ದಾರೆ.

'ತನ್ನ ಅಧಿಕಾರಿಗಳು ಹೊಂದಿದ್ದ ರಾಜತಾಂತ್ರಿಕ ರಕ್ಷಣೆ ಹಾಗೂ ಸೌಲಭ್ಯಗಳನ್ನು ಏಕಪಕ್ಷೀಯವಾಗಿ ತೆಗೆದುಹಾಕಿದ ಭಾರತದ ಕ್ರಮವು ರಾಜತಾಂತ್ರಿಕ ಸಂಬಂಧಗಳ ಕುರಿತ ವಿಯೆನ್ನಾ ಒಪ್ಪಂದದ ಉಲ್ಲಂಘನೆಯಾಗುತ್ತಿದ್ದರು, ಕೆನಡಾದ ರಾಜತಾಂತ್ರಿಕ ಸಿಬ್ಬಂದಿ ಸುರಕ್ಷಿತವಾಗಿ ಭಾರತ ತೊರೆಯುವಂತೆ ಕ್ರಮ ಕೈಗೊಳ್ಳಲಾಗಿದೆ' ಎಂದೂ ಹೇಳಿದ್ದಾರೆ.

ಶ್ರೀನಿವಾಸ್‌ಗೆ ನಿರೀಕ್ಷಣಾ ಜಾಮೀನು

ನವದೆಹಲಿ (ಪಿಟಿಐ): ಕಿರುಕುಳ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಭಾರತೀಯ ಯುವ ಕಾಂಗ್ರೆಸ್ (ಐವೈಸಿ) ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಶ್ರೀನಿವಾಸ್ ಅವರು ತನಿಖೆಗೆ ಸಹಕರಿಸುತ್ತಿದ್ದಾರೆ ಎಂದು ಹೇಳಿದ ತ್ರಿಸದಸ್ಯ ನ್ಯಾಯಪೀಠವು ಮೇ 17ರಂದು ತಾನು ನೀಡಿದ್ದ ಆದೇಶ ಅಬಾಧಿತ ಎಂದು ತಿಳಿಸಿತು. ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಅರವಿಂದ ಕುಮಾರ್ ಮತ್ತು ಪಿ.ಕೆ. ಮಿಶ್ರಾ ಪೀಠದಲ್ಲಿದ್ದರು.

ಸುಪ್ರೀಂ ಕೋರ್ಟ್ ಶ್ರೀನಿವಾಸ್ ಅವರಿಗೆ ಮೇ 17ರಂದು ಬಂಧನದಿಂದ ರಕ್ಷಣೆ ಒದಗಿಸಿತ್ತು. ಶ್ರೀನಿವಾಸ್ ವಿರುದ್ಧ ದೂರು ದಾಖಲಿಸಿದ್ದ ಮಹಿಳೆಯು, 'ಅಶ್ಲೀಲ ಮಾತುಗಳ ಮೂಲಕ ಶ್ರೀನಿವಾಸ್ ಕಳೆದ ಆರು ತಿಂಗಳುಗಳಿಂದ ಕಿರುಕುಳ ನೀಡುತ್ತಿದ್ದಾರೆ' ಎಂದು ಹೇಳಿದ್ದರು. ಪಕ್ಷದ ಹಿರಿಯ ನಾಯಕರಿಗೆ ತಮ್ಮ ವಿರುದ್ಧ ದೂರು ಸಲ್ಲಿಸುತ್ತಿದ್ದರೆ ಪರಿಣಾಮ ಕೆಟ್ಟದ್ದಾಗಿರುತ್ತದೆ ಎಂಬುದಾಗಿ ಬೆದರಿಸುತ್ತಿದ್ದರು ಎಂದೂ ದೂರಿನಲ್ಲಿ ಹೇಳಿದ್ದರು.

'ಗಾರ್ಬಾ' ಸಂಭ್ರಮ...

ನವರಾತ್ರಿ ಅಂಗವಾಗಿ ಜೈಪುರದಲ್ಲಿ ಗುರುವಾರ ರಾತ್ರಿ ನಡೆದ 'ಗಾರ್ಬಾ' ನೃತ್ಯದಲ್ಲಿ ಸಾವಿರಾರು ಜನರು ಪಾಲ್ಗೊಂಡು ಸಂಭ್ರಮಿಸಿದರು –ಪಿಟಿಐ ಚಿತ್ರ

ದೇವಿ ಉಪಾಸನೆಯ ಫೆಸ್ಟಿವ್ ವೈಬ್ಸ್ 1

CENTUARY DEAL - WALI DIWALI

Centuary® MATTRESSES

INDIA KA SLEEP SPECIALIST

35 YEARS OF QUALITY

10 YEARS WARRANTY

POWERED BY COPPER GEL TECHNOLOGY

ANTIMICROBIAL CENTUARY PROTECT

RECOMMENDED BY NATIONAL HEALTH ACADEMY

2 YEARS EXTENDED WARRANTY (Scan the QR code) + ADDITIONAL 10% DISCOUNT COUPON

SCAN & PLAY BE THE LUCKY WINNER

(ASK FOR 10% DISCOUNT COUPON ON SECOND PURCHASE FROM SHOP)

+

FREE GIFT

ASSURED WITH EVERY MATTRESS PURCHASE

COMFORTER | BED SHEET | PILLOW SET

Conditions Apply*

MARATHALLI: Milan furniture Store- 42170126/9900044550, Quba Furniture& Interior: 9972092569, RAJAJINAGAR: Gayathri Furnishing World LLP-23326593/9880715814, HSR LAYOUT: Milan Furniture & Furnishing-9731312283, 9901775672. SARJAPUR ROAD: Milan Furniture & Interiors-9686574751, Home Décor furniture & furnishing- 9902480762, BANASHANKARI: Creative Life Style Furniture-7892076808 /9341258880, JAYANAGAR: Linkers-41505510/ 9845545384, Prakash Interio-9844334692, BASAVANAGUDI: S V Marketing-26579066, 9886504606, Progressive Marketing: 9845926926, 9845600899, LAL BAGH/ MINERVE CIRCLE: Prakash Foam & Accessories-9449117790/9110445381. Royal Foam & Furnishings-26578784, 9341264330, MYSORE ROAD: M.R. Steel & Furnitures-9886661666, 7353661666, HESARAGATTA MAIN ROAD/ DASARAHALLI-PEENYA: Sai Furniture & Furnishing-7204440999, 9845211899, BTM Layout: New Drapes & Décor-9886706000, NAGARBHAVI: Sri Shubhan Furnishings-9845697369, SHIVAJINAGAR: Geoson Agencies- 9164103800, 6361158256. Esteem Agencies-41646944/9686682487, HANUMANTHNAGAR: Asha Enterprises-988082830, Haryana Handloom: 9900110005, R R NAGAR: Rekha Agencies- 9686508206, 9945516078, SANJAY NAGAR: Handloom Furnishings-25929702, 9886536925, MALLESHWARAM: Bharath Furnishings-23361919/ 9986018789, Sai Handloom-9738557677, BELLANDUR CIRCLE: Curtains 4U/Inside Furnishing-9845013345/9901354731, WHITEFIELD: Kailash Handloom & Furniture-8951330036, KUNDLAHALLI GATE: Maa Vaishno Devi Collection-8553889999/ 8050863010, BANNERGHATTA ROAD: Desire Decore-41606366/9886706000, KORAMANGALA: Geo Groups- 25635418/9844057462, HEBBAL: Astha Interiors-9538116762, 9463542155, PANTHUR: Punjab Handloom & Furnishing-9886182945 , 9999124120, HORAMAVU-AGARA: Home Store: 8892071681, KR PURAM: Home Collection-6361433071/ 6001248083, Balaji Furniture 9740224111, ELECTRONIC CITY: Sajawat furnishing Studio-41999211/ 9880081722, HUSKUR GATE: The Home Bureau: 9148585180, BANASWADI: Sri Ram Furniture-9901117495, MOODALAPALYA: Yours Choice Furniture-9071215467, RAMAMURTHY NAGAR: Shivansh Handloom-9743533408, JC ROAD: Cargo Taurpaulin-22224326/ 9448041547, YESHWANTHPUR: Haryana Handloom-9448515924, MATHIKERE: Eshwar Handloom-9448788296/ 9036742159, VIJAYANAGAR: Louver's Furniture: 23151820/9886327712, Namratha Handloom: 9538666917, MAHALAXMIPURAM: Hindustan Bedding Center-9731833664, KENGERI: Punjab Handloom-9742303149, VARTHUR: Sri Balaji Home Decor- 9986867516, J P NAGAR: Nilambur Teakwood-9845054092, Luxury Homes: 9535570694. MARASANDRA-SJS Furniture & Interior-9242348545, ANNAPOORNESHWARI NAGAR: S G Furnishings-9066574352, BALEPETE: Hindustan Bedding House-9844000067, DODDA BANASWADI: Zenith Furniture-9738517707, HOSA ROAD: AKS Banu Entps.,-7676666643/7411929385, CHINTAMANI: Ramus furniture Paradise- 9845527729, HOSAKOTE: Max Furniture: 7200919183, KOLAR: HMS Bedding House: 9448310350, CHIKBALAPUR: Ramu Furniture Paradise 9986097157, DEVANAHALLI: Sri Raghavendra Furniture: 9845510864, 9900440969 S.L.R.S. Furniture: 9740182502, KUNIGAL: Krishna Electro World: 9379114251.

Authorized Distributors: BANGALORE: PMG Distribution Pvt Ltd., 080-26572476/26570860/8073651060

Trade & Bulk Enquiry: Cell: 98494 98325, 9845673108

ಮಗುವಿನ ಬೆಳವಣಿಗೆಗೆ ಪೌಷ್ಟಿಕ ಆಹಾರ ಅಗತ್ಯ

ಮಗುವಿನ ಬೆಳವಣಿಗೆ ಯಾಕೋ ಕುಂಠಿತವಾಗುತ್ತಿದೆ ಎಂದಾಗ ಪೋಷಕರಿಗೆ ಅದೊಂದು ಸವಾಲಾಗಬಹುದು. ತಮ್ಮ ಮಗುವಿನ ತೂಕ ಮತ್ತು ಎತ್ತರ ಹೆಚ್ಚಬೇಕೆಂದು ಅವರು ಬಯಸುವುದು ಸಹಜ. ಇಂತಹ ಪರಿಸ್ಥಿತಿ ನಿಮಗೂ ಎದುರಾದರೆ ಭರವಸೆ ಕಳೆದುಕೊಳ್ಳಬೇಡಿ. ನಿಮ್ಮ ಮಗು ಮತ್ತೆ ಆರೋಗ್ಯವಂತವಾಗಿ ಬೆಳೆಯಲು ಸಾಧ್ಯವಿದೆ.

ಅಬಾಟ್‌ನ ಪೌಷ್ಟಿಕ ಆಹಾರತಜ್ಞ ಡಾ. ಗಣೇಶ್ ಕಾಧೆ, ಮಕ್ಕಳು ಉತ್ತಮ ಪೋಷಕಾಂಶ ಹೊಂದಿರುವ ಆಹಾರವನ್ನು ಸೇವಿಸುವುದು ಬಹಳ ಮುಖ್ಯ. ಅಪೌಷ್ಟಿಕತೆ ಎದುರಾದರೆ ಮಗುವಿನ ಸಮಗ್ರ ಬೆಳವಣಿಗೆಗೆ ತೊಂದರೆಯಾಗುತ್ತದೆ. ವಿಶ್ವದಾದ್ಯಂತ ಗಮನಿಸುವುದಾದರೆ ಮೂವರು ಮಕ್ಕಳಲ್ಲಿ ಒಬ್ಬರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಎನ್ನುತ್ತಾರೆ ಅವರು.

ಪೌಷ್ಟಿಕ ಆಹಾರವೇ ಎಲ್ಲಕ್ಕೂ ಮೂಲ. ಸರಿಯಾದ ಆಹಾರ ಮಕ್ಕಳು ಬೆಳೆಯಲು, ಕಲಿಯಲು, ಅಭಿವೃದ್ಧಿ ಹೊಂದಲು ಮತ್ತು ಉತ್ತಮ ಸಾಧನೆ ಮಾಡಲು ಸಹಕರಿಸುತ್ತದೆ. ಅಸಮರ್ಪಕ ಆಹಾರ ಸೇವನೆ, ಪೋಷಕಾಂಶಗಳನ್ನು ಪೂರ್ತಿಯಾಗಿ ಜೀರ್ಣಿಸಿಕೊಳ್ಳಲು ಸಾಧ್ಯವಾಗದಿರುವುದು, ಮತ್ತು/ಅಥವಾ ಕಳಪೆ ಪೋಷಕಾಂಶಗಳ ಸೇವನೆಗಳಿಂದ ಅಪೌಷ್ಟಿಕತೆ ಉಂಟಾಗುತ್ತದೆ.

ಇದರಿಂದ ರೋಗ ನಿರೋಧಕ ಶಕ್ತಿ, ಅರಿವಿನ ಶಕ್ತಿ ಕಡಿಮೆಯಾಗುವುದು, ನಡವಳಿಕೆ ಸಮಸ್ಯೆ, ಮೂಳೆ ಆರೋಗ್ಯವಾಗಿ ಇಲ್ಲದೇ ಇರುವುದು. ಹೀಗಾಗಿ ಪೋಷಕಾಂಶಗಳ ಕೊರತೆ ನೀಗಿಸಿದರೆ ಮಕ್ಕಳು ಸರಿಯಾಗಿ ಬೆಳೆಯುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಪರಿಹಾರ ಸರಳವಾದಾರೂ ಅದರಿಂದ ಮಕ್ಕಳ ಬೆಳವಣಿಗೆಗೆ ಆಗುವ ಸಹಾಯ ಮಾತ್ರ ಬಹಳ ದೊಡ್ಡದು.

ಮಾಡಬೇಕಿದ್ದಿಷ್ಟು: ಮಗುವಿನ ಬೆಳವಣಿಗೆಯನ್ನು ನಿರಂತರವಾಗಿ ಮೌಲ್ಯಮಾಪನ ಮಾಡಬೇಕು. ಅನುಮಾನಗಳಿದ್ದರೆ ಆರೋಗ್ಯತಜ್ಞರೊಂದಿಗೆ ಸಂವಹನ ನಡೆಸಿ. ಪೌಷ್ಟಿಕಾಂಶ ಪೂರಕ ಪಾನೀಯಗಳು ಪೌಷ್ಟಿಕಾಂಶಗಳ ಕೊರತೆಯನ್ನು ಕಡಿಮೆ ಮಾಡಲು ಮತ್ತು ಆಹಾರದಿಂದ ಅಗತ್ಯ ಜೀವಸತ್ವಗಳು ಮತ್ತು ಖನಿಜಗಳನ್ನು ಹೀರಿಕೊಳ್ಳಲು ಸಹಾಯ ಮಾಡುತ್ತದೆ.

ಬೆಳವಣಿಗೆಗೆ ಅಗತ್ಯವಿರುವ ಪೌಷ್ಟಿಕಾಂಶಗಳು'

- **ಕ್ಯಾಲ್ಸಿಯಂ:** ಮೂಳೆ ಮತ್ತು ಹಲ್ಲಿನ ಆರೋಗ್ಯಕ್ಕೆ ಮುಖ್ಯ. ಸ್ನಾಯು ಸಂಕೋಚನ, ರಕ್ತ ಪರಿಚಲನೆ ಮತ್ತು ನರಗಳ ಸಂವಹನಗಳಿಗೂ ಅಗತ್ಯ. ಕ್ಯಾಲ್ಸಿಯಂ ಅಧಿಕವಾಗಿರುವ ಆಹಾರಗಳಲ್ಲಿ ಡೈರಿ ಉತ್ಪನ್ನಗಳಾದ ಹಾಲು, ಮೊಸರು ಮತ್ತು ಚೀಸ್ ಕೂಡ ಸೇರಿವೆ. ಬಲವರ್ಧಿತ ಸಸ್ಯಾಧಾರಿತ ಹಾಲಿನಂತಹ (ಸೋಯಾ ಹಾಲು, ಬಾದಾಮಿ ಹಾಲು) ಪರ್ಯಾಯಗಳನ್ನು ಪ್ರಯತ್ನಿಸಬಹುದು. ಹಸಿರು ಎಲೆ ಸೊಪ್ಪುಗಳಾದ ಪಾಲಕ್ ಮತ್ತು ಮೆಂತ್ಯ ಸೊಪ್ಪು ಉಪಯೋಗಕಾರಿ. ಮೂಳೆಗಳು ಕ್ಯಾಲ್ಸಿಯಂ ಹೀರಿಕೊಳ್ಳಲು ಮತ್ತು ಬಳಸಿಕೊಳ್ಳಲು ವಿಟಮಿನ್ ಕೆ 2 ಸಹಾಯಮಾಡುತ್ತದೆ.
- **ವಿಟಮಿನ್ ಡಿ:** ಸಾಮಾನ್ಯವಾಗಿ 'ಬಿಸಿಲಿನ ವಿಟಮಿನ್' ಎಂದೇ ಹೇಳಲಾಗುತ್ತದೆ. ಸೂರ್ಯನ ಬೆಳಕಿಗೆ ಒಡ್ಡಿಕೊಂಡಾಗ ನಮ್ಮ ದೇಹದಲ್ಲಿ ಸಂಶ್ಲೇಷಿಸಲ್ಪಡುತ್ತದೆ. ಕ್ಯಾಲ್ಸಿಯಂ ಹೀರಿಕೊಳ್ಳಲು ವಿಟಮಿನ್ ಡಿ ಅವಶ್ಯಕ. ಕ್ಯಾಲ್ಸಿಯಂನೊಂದಿಗೆ ಸೇರಿಕೊಂಡು ಮೂಳೆಗಳನ್ನು ಬಲಪಡಿಸುವುದಲ್ಲದೆ ವಿಟಮಿನ್ ಡಿ ಮಕ್ಕಳ ಪ್ರತಿರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಲೂ ನೆರವಾಗುತ್ತದೆ. ವಿಟಮಿನ್ ಡಿ ಆಹಾರ ಮೂಲಗಳ ಉದಾಹರಣೆಗಳು: ಸಾಲ್ಮನ್, ಮ್ಯಾಕೆರೆಲ್ ಮತ್ತು ಸಾರ್ಡೀನ್‌ಗಳಂತಹ ಕೊಬ್ಬಿನ ಮೀನುಗಳು; ಹಾಲು ಮತ್ತು ಧಾನ್ಯಗಳಂತಹ ಬಲವರ್ಧಿತ ಡೈರಿ ಉತ್ಪನ್ನಗಳು.
- **ಸತು (Zinc):** ಪ್ರತಿರಕ್ಷಣಾ ಕೋಶಗಳಿಗೆ ಶಕ್ತಿ ನೀಡುತ್ತದೆ ಮತ್ತು ಸರಿಯಾದ ಬೆಳವಣಿಗೆಗೆ ನೆರವಾಗುತ್ತದೆ. ವಿಶೇಷವಾಗಿ ಬಾಲ್ಯದಲ್ಲಿ. ಸತು ಸಮೃದ್ಧವಾಗಿರುವ ಆಹಾರಗಳನ್ನು ತಿನ್ನಬೇಕು-- ಮಸೂರ ಮತ್ತು ಕಡಲೆ, ಬೀಜಗಳು (ವಿಶೇಷವಾಗಿ ಗೋಡಂಬಿ ಮತ್ತು ಬಾದಾಮಿ), ಗೋಧಿ ಮತ್ತು ಅಕ್ಕಿಯಂತಹ ಧಾನ್ಯಗಳು ಮತ್ತು ಡೈರಿ ಉತ್ಪನ್ನಗಳು.
- **ವಿಟಮಿನ್ ಎ:** ಚರ್ಮ, ಬಾಯಿ ಮತ್ತು ಶ್ವಾಸಕೋಶಗಳ ಆರೋಗ್ಯಕ್ಕೆ, ಸೋಂಕುಗಳ ವಿರುದ್ಧ ಹೋರಾಡಲು ಮತ್ತು ದೃಷ್ಟಿಯನ್ನು ಕಾಪಾಡಿಕೊಳ್ಳಲು ಅತ್ಯಗತ್ಯ. ವಿಟಮಿನ್ ಎ ಅಧಿಕವಾಗಿರುವ ಆಹಾರಗಳ ಉದಾಹರಣೆಗಳು: ಕಿತ್ತಳೆ ಮತ್ತು ಹಳದಿ ಹಣ್ಣುಗಳು ಮತ್ತು ತರಕಾರಿಗಳಾದ ಕ್ಯಾರೆಟ್, ಸಿಹಿ ಆಲೂಗಡ್ಡೆ ಮತ್ತು ಮಾವಿನ ಹಣ್ಣುಗಳು.
- **ಪ್ರೊಟೀನ್:** ಜೀವಕೋಶಗಳು, ಸ್ನಾಯುಗಳು ಮತ್ತು ಹಾರ್ಮೋನುಗಳ ಬಿಲ್ಡಿಂಗ್ ಬ್ಲಾಕ್ಸ್; ಸ್ನಾಯುವಿನ ಬೆಳವಣಿಗೆ ಮತ್ತು ತೃಪ್ತಿಗೆ ಸಹಾಯ ಮಾಡುತ್ತದೆ. ಉತ್ತಮ ಪ್ರೊಟೀನ್ ಮೂಲಗಳ ಉದಾಹರಣೆಗಳು: ಮಸೂರ, ಬೀನ್ಸ್, ಕಡಲೆ, ತೋಫು, ಪನೀರ್ (ಭಾರತೀಯ ಕಾಟೇಜ್ ಚೀಸ್), ಕೋಳಿಮಾಂಸದಂತಹ ನೇರ ಮಾಂಸಗಳು ಮತ್ತು ಡೈರಿ ಉತ್ಪನ್ನಗಳು.
- **ದ್ರವಗಳು ಮತ್ತು ಇಲೆಕ್ಟ್ರೊಲೈಟ್ಸ್:** ಕೀಲುಗಳನ್ನು ನಯಗೊಳಿಸಲು, ತ್ಯಾಜ್ಯವನ್ನು ತೆಗೆದುಹಾಕಲು ಮತ್ತು ತಾಪಮಾನ ನಿಯಂತ್ರಣಕ್ಕೆ ಬಹಳ ಅಗತ್ಯ. ನೀರು, ಎಳ ನೀರು, ಇಲೆಕ್ಟ್ರೊಲೈಟ್‌ಗಳ ನೈಸರ್ಗಿಕ ಮೂಲಗಳು. ಸಾಂಪ್ರದಾಯಿಕ ಭಾರತೀಯ ಪಾನೀಯಗಳಾದ ಮಜ್ಜಿಗೆ (ಚಾಸ್) ಮತ್ತು ನಿಂಬೆ ಪಾನಕಗಳನ್ನು ಸೇವಿಸಬಹುದು. ❖

ಮಾಸ್ಕ್ ತೆಗೆದ ಕುಂದ್ರಾ

ಮುಂಬೈ: ಉದ್ಯಮಿ ಹಾಗೂ ಶಿಲ್ಪಾ ಶೆಟ್ಟಿ ಪತಿ ರಾಜ್ ಕುಂದ್ರಾ ಅವರು ಮುಖಕ್ಕೆ ಧರಿಸಿದ್ದ ಮಾಸ್ಕ್‌ಅನ್ನು ಸುಮಾರು ಎರಡು ವರ್ಷಗಳ ಬಳಿಕ ತೆಗೆದು ಮಾಧ್ಯಮಗಳ ಮುಂದೆ ಕಾಣಿಸಿಕೊಂಡಿದ್ದಾರೆ.

ಕುಂದ್ರಾ ತಮ್ಮದೇ ಜೀವನಚರಿತ್ರೆಯ ಕುರಿತು ತಯಾರಾದ 'UT 69' ಎನ್ನುವ ಚಿತ್ರದ ಟ್ರೈಲರ್ ಅನ್ನು ಅನಾವರಣಗೊಳಿಸಿದ್ದಾರೆ. ಈ ವೇಳೆ ತಾವು ಧರಿಸಿದ್ದ ಕಪ್ಪು ಬಣ್ಣದ ಮಾಸ್ಕ್ ತೆಗೆದಿದ್ದಾರೆ.

ಅಶ್ಲೀಲ ಚಿತ್ರ ನಿರ್ಮಾಣದ ಕುರಿತು ಆರೋಪ ಹೊತ್ತು ಕುಂದ್ರಾ ಹೇಗೆ ಜೈಲು ಸೇರುತ್ತಾರೆ ಎನ್ನುವ ಕಥಾಹಂದರ ಹೊಂದಿರುವ ಚಿತ್ರ ಇದಾಗಿದ್ದು, ಶಾನವಾಜ್ ಅಲಿ ನಿರ್ದೇಶನದಲ್ಲಿ ಚಿತ್ರ ಮೂಡಿಬರುತ್ತಿದೆ. ಅಶ್ಲೀಲ ಚಿತ್ರಗಳ ನಿರ್ಮಾಣ ಮತ್ತು ವಿತರಣೆ ಕುರಿತಾದ ಪ್ರಕರಣದಲ್ಲಿ ರಾಜ್ ಕುಂದ್ರಾ ಅವರನ್ನು ಮುಂಬೈ ಪೊಲೀಸರು 2021 ರಲ್ಲಿ ಬಂಧಿಸಿದ್ದರು. ಸುಮಾರು ಎರಡು ತಿಂಗಳ ಕಾಲ ಜೈಲಿನಲ್ಲಿ ಅವರು ಕಳೆದಿದ್ದರು. ಬಳಿಕ ಜಾಮೀನಿನ ಮೇಲೆ ಬಿಡುಗಡೆಯಾದಾಗಿನಿಂದ, ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸಿ ಓಡಾಡುತ್ತಿದ್ದರು.

ಮಾಧ್ಯಮಗಳ ಎದುರು ಮಾಸ್ಕ್ ಇಲ್ಲದೆ ಬಂದು ಮಾತನಾಡಿದ ಕುಂದ್ರಾ, 'ನಾನು ನೋವಿನಿಂದ ಮುಖವಾಡವನ್ನು ಧರಿಸಿದ್ದೇನೆ. ಕಾನೂನು ವಿಚಾರಣೆಗಿಂತ, ಮಾಧ್ಯಮದ ವಿಚಾರಣೆ ಹೆಚ್ಚು ನೋವು ನೀಡಿದೆ. ನೀವು ನಿಮ್ಮ ಕೆಲಸವನ್ನು ಮಾಡುತ್ತಿದ್ದೀರಿ, ನಿಮ್ಮನ್ನು ದೂಷಿಸುವುದಿಲ್ಲ. ನನ್ನನ್ನು ಯಾರೂ ಗುರುತಿಸದಿರಲಿ ಎಂದು ಬಯಸುತ್ತೇನೆ' ಎಂದು ಹೇಳಿದ್ದಾರೆ.



ಆಧ್ಯಾತ್ಮ ರಾಮಾಯಣ ನೃತ್ಯರೂಪಕ 28ಕ್ಕೆ

'ಕೂಚಿಪುಡಿ ಪರಂಪರ ಫೌಂಡೇಷನ್ ಟ್ರಸ್ಟ್'ನಿಂದ 28ರ ಶನಿವಾರ ಸಂಜೆ 6 ಗಂಟೆಗೆ ಸಂಜಯನಗರದ ರಮಣ ಮಹರ್ಷಿ ಹೆರಿಟೇಜ್ ಸಭಾಂಗಣದಲ್ಲಿ ನಾಟ್ಯ ಪರಂಪರ ದಶಮಾನೋತ್ಸವ ನಡೆಯಲಿದೆ.ಹಿರಿಯ ಗುರು ಭಗವತುಲ ಮೋಹನ ರಾವ್ ಅವರ ಕಲಾಸೇವೆಯನ್ನು ಇದೇ ಸಂದರ್ಭದಲ್ಲಿ ಗುರುತಿಸಲಾಗುವುದು. ಕಥಕ್ ನೃತ್ಯ ದಂಪತಿ ಹರಿ ಮತ್ತು ಚೇತನ ಅವರನ್ನು ಸನ್ಮಾನಿಸಲಾಗುವುದು.

17 ನೇ ಶತಮಾನದ ಕವಿ ಮುನೆಪಲ್ಲಿ ಸುಬ್ರಮಣ್ಯ ವಿರಚಿತ 'ಭವ ನುತ' - ಸಂಪೂರ್ಣ ಆಧ್ಯಾತ್ಮ ರಾಮಾಯಣದ ಕಥೆಯ ಸುತ್ತ ಹೆಣೆಯಲಾದ ಕುಚಿಪುಡಿ ನೃತ್ಯರೂಪಕದ ಪ್ರದರ್ಶನ ನಡೆಯಲಿದೆ. ಈ ನೃತ್ಯರೂಪಕದ ಸಂಯೋಜನೆ ದೀಪಾ ನಾರಾಯಣನ್ ಸಶೀಂದ್ರನ್ ಅವರದ್ದು. ಸಂಗೀತ ಸಂಯೋಜನೆ- ಗುರುಮೂರ್ತಿ. ಪ್ರಸ್ತುತಪಡಿಸುವವರು `ಕೂಚಿಪುಡಿ ಪರಂಪರಾ ಫೌಂಡೇಶನ್ ' ಸಂಸ್ಥೆಯ ನೃತ್ಯ ವಿದ್ಯಾರ್ಥಿಗಳು.

'ಸಪ್ತ ಸಾಗರದಾಚೆ ಎಲ್ಲೋ Side B' ತೆರೆಗೆ

ಪರಂವಃ ಪಿಕ್ಚರ್ಸ್ ನಿರ್ಮಾಣದ, ರಕ್ಷಿತ್ ಶೆಟ್ಟಿ - ರುಕ್ಮಿಣಿ ವಸಂತ್ - ಚೈತ್ರಾ ಆಚಾರ್ ಅಭಿನಯದ, ಹೇಮಂತ್ ಎಂ ರಾವ್ ನಿರ್ದೇಶನದ 'ಸಪ್ತ ಸಾಗರದಾಚೆ ಎಲ್ಲೋ - Side B' ಚಿತ್ರ ಇದೇ ನವೆಂಬರ್ 17ಕ್ಕೆ ಕನ್ನಡ ಸೇರಿದಂತೆ ತೆಲುಗು, ತಮಿಳು ಹಾಗೂ ಮಲಯಾಳಂ ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗಲಿದೆ.

ಸದ್ಯ 'ಸಪ್ತ ಸಗರದಾಚೆ ಎಲ್ಲೋ - Side A" Amazon Prime Video ನಲ್ಲಿ 5 ಭಾಷೆಗಳಲ್ಲಿ ಲಭ್ಯವಿದ್ದು ಎಲ್ಲೆಡೆಯಿಂದ ಅತ್ಯುತ್ತಮ ಪ್ರತಿಕ್ರಿಯೆ ಪಡೆದುಕೊಳ್ಳುತ್ತಿದೆ. Side A ಕನ್ನಡದಲ್ಲಿ ಸೆಪ್ಟೆಂಬರ್ 1ಕ್ಕೆ ಹಾಗೂ ತೆಲುಗು ಭಾಷೆಯಲ್ಲಿ ಸೆಪ್ಟೆಂಬರ್ 22ಕ್ಕೆ ತೆರೆಕಂಡಿತ್ತು!

ನಾಯಕತ್ವ ಮುಗಿಸಿದ ಸ್ನೇಹಿತ್

ಇನ್ನೇನು ಬಿಗ್ ಬಾಸ್ ಆರಂಭವಾಗಿ ಎರಡನೇ ವಾರ ಕಳೆಯುತ್ತಿದೆ. ಈ ನಡುವೆ ಸ್ನೇಹಿತ್ ನಾಯಕತ್ವ ಮುಗಿದಿದೆ.10ನೇ ಸೀಸನ್‌ನ ಮೊದಲ ನಾಯಕನಾಗಿ ಆಯ್ಕೆಯಾಗಿದ್ದ ಸ್ನೇಹಿತ್ ಆರಂಭದಲ್ಲಿ ಮುಗ್ಗರಿಸಿದಾದರೂ ನಂತರದ ದಿನಗಳಲ್ಲಿ ಟಾಸ್ಕ್, ಮನೆ ನಿರ್ವಹಣೆ ವಿಚಾರದಲ್ಲಿ ಒಂದು ಹಂತಕ್ಕೆ ಉತ್ತಮ ನಿರ್ಧಾರವನ್ನೇ ತೆಗೆದುಕೊಂಡರು. ಆದರೂ ಇತರ ಸ್ಪರ್ಧಿಗಳು ಅವರ ನಾಯಕತ್ವದ ಬಗ್ಗೆ ಅಸಮಧಾನ ವ್ಯಕ್ತಪಡಿಸಿ ಶಿಕ್ಷೆ ನೀಡಿದ್ದಾರೆ.

ನಾಯಕನಾದ ಮೇಲೆ ಸ್ನೇಹಿತ್ ವರ್ತನೆಯೇ ಬದಲಾಗಿದೆ ಎಂದು ಆರಂಭದಲ್ಲಿ ಉಳಿದ ಸ್ಪರ್ಧಿಗಳು ಮಾತಾಡಿಕೊಂಡಿದ್ದರು. ನಂತರ ಅವರು ತಮ್ಮ ವರ್ತನೆಯನ್ನು ತಿದ್ದಿಕೊಂಡಿದ್ದಾರೆ ಎಂಬ ಮೆಚ್ಚುಗೆಯೂ ವ್ಯಕ್ತವಾಗಿತ್ತು. ಆದರೆ ವಾರವಿಡೀ ಹಲವು ಸಂದರ್ಭಗಳಲ್ಲಿ ಅವರು ಕ್ಯಾಪ್ಟನ್ ಪಾತ್ರವನ್ನು ನಿರ್ವಹಿಸಿದ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ವ್ಯಕ್ತವಾಗಿದ್ದವು.

ಈಗ ಮನೆಮಂದಿಯೆಲ್ಲ ಸೇರಿ ಸ್ನೇಹಿತ್ ನಾಯಕತ್ವಕ್ಕೆ ಅಂಕಗಳನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಸಕಾರಣ ನೀಡಿ ಅವರನ್ನು ಬಿಗ್‌ಬಾಸ್ ಮನೆಯ ಈಜುಕೊಳದಲ್ಲಿ ನೂಕಿದ್ದಾರೆ. ಪ್ರತಿಯೊಬ್ಬರು ನೂಕಿದಾಗಲೂ ನೀರೊಳಗೆ ಬಿದ್ದ ಸ್ನೇಹಿತ್, ಮತ್ತೆ ಎದ್ದು ಬಂದು ನಡುಗುತ್ತ ನಿಂತಿದ್ದರು.

ಸಂಗೀತಾ-ಕಾರ್ತಿಕ್ ಫೈಟ್!

JioCinemaದಲ್ಲಿ ಉಚಿತವಾಗಿ 24 ಗಂಟೆ ನೇರಪ್ರಸಾರವಾಗುವ ಬಿಗ್‌ಬಾಸ್ ಕನ್ನಡ ಕಾರ್ಯಕ್ರಮದಲ್ಲಿ ವಿನಯ್ ಮತ್ತು ಸಂಗೀತಾ ನಡುವಿನ ಫೈಟ್ ಈ ಸಲದ ಬಿಗ್‌ಬಾಸ್ ಮನೆಯಲ್ಲಿ ಸಾಕಷ್ಟು ಏರುಪೇರುಗಳನ್ನು ಸೃಷ್ಟಿಸುತ್ತಿದೆ. ಪ್ರತಿಯೊಂದು ಹಂತದಲ್ಲಿಯೂ ಒಬ್ಬರು ಇನ್ನೊಬ್ಬರನ್ನು ಕೆಣಕುವುದು, ಮಾತಿನ ಚಕಮಕಿ ಮೊದಲಿನಿಂದಲೂ ನಡೆದೇ ಇತ್ತು. ಆಗೆಲ್ಲ ಸಂಗಿತಾಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಬೆಂಬಲಕ್ಕೆ ನಿಂತವರು ಕಾರ್ತಿಕ್. ಆದರೆ ಈಗ ವಿನಯ್ ಮತ್ತು ಸಂಗೀತಾ ರಾಜಿಯಾಗಿದ್ದಾರೆ.

ಸಂಗೀತಾ ತಾವು ಆಡಿದ 'ಥ್ರೆಟನಿಂಗ್' ಎಂಬ ಪದವನ್ನು ಹಿಂಪಡೆದು ಕ್ಷಮೆ ಕೇಳಿದ್ದಾರೆ. ಹಾಗೆಯೇ ವಿನಯ್ ಕೂಡ, ತಮಗೆ ನಿಮ್ಮನ್ನು ಹರ್ಟ್ ಮಾಡುವ ಉದ್ದೇಶ ಇಲ್ಲ. ನಿಮ್ಮ ಬಗ್ಗೆ ಇನ್ನು ಎಂದಿಗೂ ಕೆಟ್ಟದಾಗಿ ಮಾತಾಡಲ್ಲ. ಹರ್ಟ್ ಮಾಡಲ್ಲ ಎಂದು ಹೇಳಿ ಕ್ಷಮೆ ಕೋರಿದ್ದಾರೆ. ಅಲ್ಲಿಗೆ ಅವರಿಬ್ಬರೂ ಹಗ್ ಮಾಡಿಕೊಳ್ಳುವುದರ ಮೂಲಕ, ಬಿಗ್‌ಬಾಸ್ ಮನೆಯೊಳಗಿನ ಬಹುದೊಡ್ಡ ಜಗಳವೊಂದು ಸುಖಾಂತ್ಯ ಕಂಡಿದೆ.

ದಸರಾ ಸಂಭ್ರಮಕೆ ಮೇಕಪ್ ಆರ್ಟ್

ಒಂಬತ್ತು ದಿನಗಳ ಸಂಭ್ರಮದ ದಸರಾ, ಕಡೆಯಲ್ಲಿ ಬರುವ ವಿಜಯದಶಮಿಯ ಸಡಗರ... ಸರಿಯಾದ ಅಲಂಕಾರವಿಲ್ಲದೇ ಹೆಣ್ಣುಮಕ್ಕಳ ಹಬ್ಬ ಅಪೂರ್ಣವಲ್ಲವೆ? ಹಬ್ಬದ ಸಂಜೆಯ ಸೊಬಗಿಗೆ ಅಲಂಕೃತಗೊಳ್ಳುವ ಬಗೆ ಹೇಗಿದ್ದರೆ ಚೆನ್ನ? ಮೇಕಪ್ ಆರ್ಟಿಸ್ಟ್ ದೀಪಾ ಹೊಳಿಮಠ ಬರಹ ಇಲ್ಲಿದೆ...

ದ ಸ ರಾ -

ವಿಜಯದಶಮಿ ಭಾರತೀಯ ಮಹಿಳೆಯರು ಸಡಗರದಿಂದ ಪಾಲ್ಗೊಳ್ಳುವ ಹಬ್ಬ. ಆಡಂಬರಕ್ಕಿಂತ ಸಂಭ್ರಮವೇ ಪ್ರಧಾನ. ಹೆಣ್ಣುಮಕ್ಕಳ ಸಂಭ್ರಮ ಎಂದರೆ ಮೊದಲು ವ್ಯಕ್ತವಾಗುವುದೇ ಅವರ ಉಡುಗೆ-ತೊಡುಗೆ ಮತ್ತು ಅಲಂಕಾರದಲ್ಲಿ. ನಿಮಗೆ ಸಹಾಯಕವಾಗಬಲ್ಲ ಕೆಲವು ಸರಳ ದಸರಾ ಮೇಕಪ್ ಸಲಹೆಗಳು ಇಲ್ಲಿವೆ:

ಮೊದಲ ಹೆಜ್ಜೆಯಾಗಿ ಮುಖಾರವಿಂದವನ್ನು ಸ್ವಚ್ಛಗೊಳಿಸಿ, ಮಾಯಿಶ್ಚರೈಸರ್ ಮತ್ತು ಪ್ರೈಮರ್‌ನಿಂದ ಮುಖವನ್ನು ಟೋನಿಂಗ್ ಮಾಡಿ ವಿಮೇಕಪ್‌ಗೆ ಅಣಿಗೊಳಿಸಿ. ಇದು ಮೇಕ್‌ಅಪ್ ಹೊಂದಿಕೊಳ್ಳಲು ಮತ್ತು ದಿನವಿಡೀ ಉಳಿಯಲು ಸಹಾಯ ಮಾಡುತ್ತದೆ.

ಎರಡನೇ ಹೆಜ್ಜೆಯಾಗಿ ಮುಖದ ಕಾಂತಿಯನ್ನು ಹೆಚ್ಚಿಸುವ ಫೌಂಡೇಶನ್ ಆಯ್ಕೆ. ಅದು ನಿಮ್ಮ ಮೈಬಣ್ಣಕ್ಕೆ ಹೊಂದುವಂತಿರಬೇಕು. ನಿಮಗೆ ಆಯ್ಕೆ ಕಷ್ಟವೆನಿಸಿದಲ್ಲಿ ಮೇಕಪ್ ಆರ್ಟಿಸ್ಟ್ ಸಹಾಯ ಪಡೆಯಬಹುದು. ಆನ್‌ಲೈನ್‌ನಲ್ಲಿಯೂ, ಸ್ಟೋರ್‌ಗಳಲ್ಲಿಯೂ ನಿಮಗೆ ಫೌಂಡೇಶನ್ ಆಯ್ಕೆ ಮಾಡಿಕೊಡುವ ಸೌಲಭ್ಯಗಳಿರುತ್ತವೆ. ಫೌಂಡೇಶನ್ ಅನ್ನು ಬಿಬಿ ಕ್ರೀಮ್ ಅಥವಾ ಮಾಯಿಶ್ಚರೈಸರ್ ಜೊತೆಗೆ ಚೆನ್ನಾಗಿ ಮಿಕ್ಸ್ ಮಾಡಿ ಒಂದೇ ಪ್ರಮಾಣದಲ್ಲಿ ಹಚ್ಚಿಕೊಳ್ಳಿ.

ಮೇಕಪ್‌ನ ಜಾದೂ ಅಡಗಿರುವುದೇ ಲಿಪ್‌ಸ್ಟಿಕ್‌ನಲ್ಲಿ. ನಿಮ್ಮ ಇಡೀ ವ್ಯಕ್ತಿತ್ವವನ್ನು ವ್ಯಾಖ್ಯಾನಿಸುವ ಗಮ್ಮತ್ತು ಲಿಪ್‌ಸ್ಟಿಕ್‌ನಲ್ಲಿದೆ. ನಿಮ್ಮ ಆಸಕ್ತಿ, ಅಭಿರುಚಿ, ದಿರಿಸು ಮತ್ತು ವೈಯಕ್ತಿಕ ಶೈಲಿಯನ್ನು ಅವಲಂಬಿಸಿ ಲಿಪ್‌ಸ್ಟಿಕ್ ಆಯ್ದುಕೊಳ್ಳಿ. ಗಾಢ ಕೆಂಪು ಬಣ್ಣದ ಲಿಪ್‌ಸ್ಟಿಕ್ ಕಾಲಾತೀತವಾಗಿದ್ದು, ಆತ್ಮವಿಶ್ವಾಸವನ್ನು ಸಂಕೇತಿಸುತ್ತದೆ. ಇದು ಸಾಂಪ್ರದಾಯಿಕ ಭಾರತೀಯ ಉಡುಗೆಯೊಂದಿಗೆ ಅದ್ಭುತ ಸಾತ್ ನೀಡುತ್ತದೆ. ತೆಲುಗುಲಾಬಿ ಲಿಪ್‌ಸ್ಟಿಕ್ ಎಲ್ಲಾ ತರದ ದಿರಿಸಿಗೂ, ಎಲ್ಲಾ ವರ್ಣದ ಮಹಿಳೆಯರಿಗೂ ಹೊಂದುತ್ತದೆ. ಲಿಪ್‌ಸ್ಟಿಕ್ ಆಯ್ಕೆಯ ಗೊಂದಲವಿರುವವರು ತೆಲುಗುಲಾಬಿ ಲಿಪ್‌ಸ್ಟಿಕ್ ಆಯ್ದುಕೊಳ್ಳಬಹುದು. ಕಿತ್ತಳೆ ಬಣ್ಣದ ಲಿಪ್‌ಸ್ಟಿಕ್ ಲವಲವಿಕೆಯ ಸಂಕೇತವಾಗಿದ್ದು, ತಿಳಿ ಬಣ್ಣದ ತೊಡುಗೆಗಳ ಜೊತೆಗೂ ಹೊಂದಿಕೊಳ್ಳುತ್ತದೆ. ಹಬ್ಬದ ಉತ್ಸಾಹವನ್ನು ಸಂಕೇತಿಸಲು ಗಾಢ ಕೆಂಪು, ಗಾಢ ಕಂದು, ರಾಯಲ್ ಬ್ಲೂ ಮತ್ತು ಗೋಲ್ಡ್ ಬಣ್ಣಗಳನ್ನು ಬಳಸಬಹುದು. ಡಾರ್ಕ್‌ಶೇಡ್‌ನ ಲಿಪ್‌ಸ್ಟಿಕ್ ಆದರೆ ಕಂದು ಬಣ್ಣದ ಲಿಪ್ ಲೈನರ್ ಸೂಕ್ತ.

ಸಂಜೆ ಅಥವಾ ರಾತ್ರಿಯ ಪೂಜಾ ಕಾರ್ಯಕ್ರಮವಾಗಿರಲಿ ಅಥವಾ ದಾಂಡಿಯಾ ತರದ ಮನರಂಜನಾ ಕಾರ್ಯಕ್ರಮವೇ ಆಗಿರಲಿ. ಹೆಚ್ಚು ಹೆಂಗಳೆಯರು ಸ್ಮೋಕಿ ಐಸ್ ಮೇಕಪ್ ಇಷ್ಟಪಡುತ್ತಾರೆ. ಇದು ಸಾಂಪ್ರದಾಯಿಕ ಅಥವಾ ಮಾಡರ್ನ್ ಎರಡೂ ಉಡುಗೆಗಳಿಗೂ ಮೆರುಗು ನೀಡುವುದು. ಸ್ಮೋಕಿ ಐಸ್ ಅಲಂಕಾರ ಆಯ್ದುಕೊಳ್ಳುವಿರಾದರೆ ಲಿಪ್‌ಸ್ಟಿಕ್ ತಿಳಿ ಬಣ್ಣದ್ದಾಗಿರಲಿ.

ಸಾಂಪ್ರದಾಯಿಕ ಉಡುಗೆಗೆ ಐಲೈನರ್ ತುಸು ದಪ್ಪವಾಗಿರಲಿ. ರೆಪ್ಪೆಗಳಿಗೆ ಮಸ್ಕರಾದ ಎರಡು ಕೋಟ್ ಕೊಡುವುದನ್ನು ಮರೆಯದಿರಿ. ಇಷ್ಟವಿದ್ದರೆ ಕೃತಕ ಐಲ್ಯಾಶ್‌ಗಳನ್ನೂ ಬಳಸಬಹುದು.

ಇದೆಲ್ಲದರ ಜೊತೆಗೆ ಹುಬ್ಬಿನ ಬಗ್ಗೆ ಗಮನವಿರಲಿ. ಪೆನ್ಸಿಲ್ ಸಹಾಯದಿಂದ ನಿಮ್ಮ ಮುಖಕ್ಕೆ ಹೊಂದುವಷ್ಟು ದಪ್ಪ ಹಾಗೂ ಆಕಾರದ ಹುಬ್ಬುಗಳನ್ನು ತೀಡಿಕೊಳ್ಳಿ.

ದಸರಾ ಮೇಕಪ್ ಪೂರ್ಣವೆನಿಸುವುದು ಹೈಲೈಟರ್‌ನಿಂದ. ರಾತ್ರಿಯ ಕಾರ್ಯಕ್ರಮಗಳಿಗೆ ಮುಖದ ಕಾಂತಿಯನ್ನು ಪ್ರಜ್ವಲಿಸುವಂತೆ ಮಾಡಲು ಹೈಲೈಟರ್ ಸಹಾಯ ಮಾಡುತ್ತದೆ.

ರಾತ್ರಿ ತುಂಬಾ ಹೊತ್ತಿನತನಕ ಮೇಕಪ್ ಅದೇ ತಾಜಾತನವನ್ನು ಹೊಂದಿರಬೇಕು ಎನ್ನುವಂತಿದ್ದರೆ ಮೇಕಪ್ ಸ್ಪ್ರೇ ಬಳಸುವುದನ್ನು ಮರೆಯಬೇಡಿ. ಇದು ಮೇಕಪ್ ಅನ್ನು ಲಾಕ್ ಮಾಡುವ ಜೊತೆಗೆ ಹಬ್ಬದ ಸದ್ದುಗದ್ದಲದ ನಡುವೆಯೂ ಮಂಕಾಗದಂತೆ ನೋಡಿಕೊಳ್ಳುತ್ತದೆ. ಊಟ, ಹಾಡು, ಹರಟೆ, ನೃತ್ಯದ ನಂತರ ಮತ್ತೆ ಮತ್ತೆ ತಾಜಾತನವನ್ನು ಪಡೆಯಲು ಆಗಾಗ ಮೇಕಪ್ ಸ್ಪ್ರೇ ಬಳಸಬಹುದು. ಮುತುವರ್ಜಿಯಿಂದ ಮೇಕಪ್ ಮಾಡಿಕೊಂಡರೆ ಮುಗಿಯಿತು ಎನ್ನುವ ಹಾಗಿಲ್ಲ. ಇದೆಲ್ಲ ಮುಗಿದ ಮೇಲೆ ಕೊನೆಯದಾಗಿ ಮುಖದ ಮೇಲೆ ಆತ್ಮವಿಶ್ವಾಸದ ಟಚಪ್ ಕೊಡುವುದನ್ನು ಮರೆಯದಿರಿ.

ಸಾಕುಪ್ರಾಣಿಗಳಲ್ಲಿ ಗ್ಲಾಕೋಮಾ? 2

ಶರನ್ನವರಾತ್ರಿಯ ಸಂಭ್ರಮಕ್ಕೆ ಬೂದುಗುಂಬಳದ ರಾಶಿ ಮಾರುಕಟ್ಟೆಗೆ ಬಂದಿದೆ. ಆಯುಧ ಪೂಜೆಯ ಸಂದರ್ಭದಲ್ಲಿ ಇಡುಗಾಯಿಯಾಗುವ ಈ ಬೂದುಗುಂಬಳಕ್ಕೆ ಈಗ ಎಲ್ಲಿಲ್ಲದ ಬೇಡಿಕೆ. ಧರ್ಮಪುರಿಯಿಂದ ಕೆ.ಆರ್. ಮಾರುಕಟ್ಟೆಗೆ ಬಂದಿರುವ ಈ ಕುಂಬಳಗಳಿಲ್ಲದೇ ಪೂಜೆ ಸಂಪನ್ನವಾಗದು

ಎಂ.ಎಸ್.ಮಂಜುನಾಥ್

ಹಬ್ಬದ ಸಂಭ್ರಮ

ಭಾರತಿ.ಎ.ಕೊಪ್ಪ

ಹಬ್ಬದ ಸಮಯದಲ್ಲಿ ಸಾಂಪ್ರದಾಯಿಕ ಉಡುಗೆ ತೊಡುವುದೆಂದರೆ ಮಹಿಳೆಯರಿಗೆ ಎಲ್ಲಿಲ್ಲದ ಸಂತೋಷ. ವರ್ಷವೀಡಿ ಆಫೀಸು, ಮನೆಯ ಜಂಜಾಟದಲ್ಲಿರುವ ಮಹಿಳೆಯರು ಹಬ್ಬ ಸಮೀಪಿಸುತ್ತಿದ್ದಂತೆ 'ಫೆಸ್ಟಿವ್ ವೈಬ್ಸ್'ಗೆ ಮಾರುಹೋಗುವ ಸುಖವೇ ಚಂದ.

ಕಾಲ ಬದಲಾದಂತೆ ಭಕ್ತಿ ಭಾವಗಳು, ಆಚರಣೆಯ ವಿಧಾನಗಳು ಅಲ್ಲಲ್ಲಿ ಅಲ್ಪಸ್ವಲ್ಪ ಬದಲಾವಣೆಗೊಂಡಿವೆ. ದಸರಾ ಹಬ್ಬವಂತೂ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಲ್ಲಿ ವಿಭಿನ್ನವಾಗಿ ಆಚರಣೆಯಾಗುತ್ತದೆ. ಮೈಸೂರು ಭಾಗದಲ್ಲಿ ಗೊಂಬೆಗಳನ್ನು ಕೂರಿಸುವುದಲ್ಲಿ ವಿಶೇಷತೆ ಇದ್ದರೆ, ಕರಾವಳಿ ಭಾಗಗಳಲ್ಲಿ ದೇಗುಲಗಳಲ್ಲಿ ಶಕ್ತಿ ದೇವಿ ಆರಾಧನೆ ನಡೆಯುತ್ತದೆ.

ದಶಕಗಳ ಹಿಂದೆ ಬಹಳಷ್ಟು ಮನೆಗಳಲ್ಲಿ ನವರಾತ್ರಿಯ ಒಂಬತ್ತು ದಿನಗಳೂ ವಿಶೇಷ ಪೂಜೆ, ದುರ್ಗಾ ಪಾರಾಯಣಗಳು ನಡೆಯುತ್ತಿದ್ದವು. ಆ ಸಂದರ್ಭದಲ್ಲಿ ಮಹಿಳೆಯರು, ಹೆಣ್ಣು ಮಕ್ಕಳು ಮನೆಯಲ್ಲಿ ತರಹೇವಾರಿ ಹೂಗಳನ್ನು ಕೊಯ್ದು ಮಾಲೆ ಮಾಡುವುದು, ಹತ್ತಿಯನ್ನು ಹೊಸೆದು ಬತ್ತಿ ತಯಾರಿಸುವುದು, ರಂಗೋಲಿ ಇಡುವುದರಲ್ಲಿ ತೊಡಗಿಕೊಳ್ಳುತ್ತಿದ್ದರು. ಕಾಲ ಬದಲಾಗಿದ್ದು, ಈ ಆಚರಣೆಗಳು ದೂರವಾಗಿ ಸರಳವಾಗಿ ಒಂದು ಎರಡು ದಿನಗಳ ದುರ್ಗಾ ಪಾರಾಯಣದಂತಹ ಪೂಜೆಗಳಿಗೆ ಸೀಮಿತವಾಗುತ್ತಿದೆ.

ಅಲ್ಲಲ್ಲಿ ಮಹಿಳೆಯರ ಭಜನಾ ಮಂಡಳಿಗಳು, ಸ್ತೋತ್ರ ಪಠಣಾ ತಂಡಗಳು ರೂಪುಗೊಂಡಿವೆ. ಈ ತಂಡಗಳು ಒಂದಿಷ್ಟು ಹಳೆಬೇರು ಹೊಸ ಚಿಗುರು ಎಂಬಂತೆ ಹಬ್ಬಗಳ ಕಳೆಗೆ ಹೊಸ ಚೈತನ್ಯ ನೀಡುತ್ತಿವೆ. ಅದಲ್ಲದೇ ಹತ್ತಾರು ಕೆಲಸಗಳ ಒತ್ತಡದಲ್ಲಿದ್ದರೂ ಒಂದೆರಡು ದಿನ ರಜೆ ತೆಗೆದುಕೊಂಡು ಸಾಂಪ್ರದಾಯಿಕ ಉಡುಗೆ ತೊಟ್ಟು ದೇವಾಲಯಗಳಿಗೆ ಹೋಗಿ ಬರುವುದೂ ಕೂಡ ಫೆಸ್ಟಿವ್ ವೈಬ್ಸ್‌ಗೆ ಒಂದಿಷ್ಟು ಖುಷಿ ಮತ್ತು ನೆಮ್ಮದಿ ನೀಡುತ್ತದೆ.

ದಸರಾ ರಜೆ ಎಂಬುದು ತಾಯಿಯಂದಿರು ಮಕ್ಕಳೊಂದಿಗೆ ಸಮಯ ಕಳೆಯಲು ಸಿಗುವ ಅವಕಾಶ ಎಂದೇ ಹೇಳಬಹುದು. ಮಕ್ಕಳಿಗೆ ನಮ್ಮ ಆಚರಣೆ, ಸಂಸ್ಕೃತಿ - ಸಂಪ್ರದಾಯಗಳ ಪರಿಚಯ ಮಾಡಲು ಈ ದಸರ ರಜೆ ಅತ್ಯಂತ ಉಪಯುಕ್ತವಾದುದು. ದೇವಾಲಯಗಳಿಗೆ ಕುಟುಂಬದ ಸದಸ್ಯರೆಲ್ಲರೂ ಒಟ್ಟಾಗಿ ಪ್ರವಾಸ ಹೋಗುವುದು, ಮೈಸೂರಿನ ನಾಡಹಬ್ಬದ ವೈಭವವನ್ನು ಕಣ್ತುಂಬಿಕೊಳ್ಳಲು ಮೈಸೂರು ಪ್ರವಾಸ ಕೈಗೊಳ್ಳುವುದು ಆ ಮೂಲಕ ಮನೆ ಮಂದಿಯೆಲ್ಲ ಒಟ್ಟಾಗಿರುವುದರಲ್ಲಿ ಸಿಗುವ ಸಂತೋಷವೇ ಬೇರೆ.

ನವರಾತ್ರಿಯ ಒಂಭತ್ತು ದಿನಗಳೂ ದಿನಕ್ಕೊಂದು ಬಣ್ಣ ದೇವಿಗೆ ಶ್ರೇಷ್ಠ ಎಂಬ ಪ್ರತೀತಿ ಇದೆ. ಹಾಗೆಯೇ ಒಂದೊಂದು ದಿನ ದೇವಿಗೆ ಒಂದೊಂದು ಹೂವು ಶ್ರೇಷ್ಠ ಎಂಬ ನಂಬಿಕೆ ಇದೆ. ಆಯಾ ಬಣ್ಣದ ಬಟ್ಟೆ, ಹೂಗಳನ್ನು ತೊಟ್ಟು ಸಂಭ್ರಮಿಸುವುದರಲ್ಲಿ ಹಬ್ಬದ ಕಳೆ ಮತ್ತಷ್ಟು ಹೆಚ್ಚುತ್ತದೆ.ಸೆಲ್ಫಿ ಕ್ಲಿಕ್ಕಿಸಿ ಸಂಭ್ರಮಿಸುವ ಆಧುನಿಕ ಮಹಿಳೆಯರಿಗೆ ದಿನಕ್ಕೊಂದು ಬಣ್ಣದ ಬಟ್ಟೆ ನಾವೀನ್ಯ ತಂದು ಕೊಡುತ್ತದೆ.

ಕರ್ನಾಟಕದ ಕರಾವಳಿ ಭಾಗದಲ್ಲಿ ನವರಾತ್ರಿಯ ಸಡಗರಕ್ಕೆ ಇನ್ನಷ್ಟು ಪುಷ್ಟಿ ನೀಡುವ ಆಚರಣೆ ಹೊಸ್ತು ಎಂಬ ಪೂಜೆ. ನವರಾತ್ರಿಯ ಒಂದು ದಿನ ಭತ್ತದ ಗದ್ದೆಯ ತೆನೆಯನ್ನು ಪೂಜಿಸಿ ,ತೆನೆ ಕೊಯ್ದು ಪತಿ ಹೊತ್ತು ಮನೆಗೆ ತಂದಾಗ ಪತಿಯ ಕಾಲಿಗೆ ತಂಬಿಗೆಯಿಂದ ನೀರು ಹಾಕಿ ತೊಳೆಯುವ ಮೂಲಕ 'ಹೊಸ್ತು' ಆಚರಿಸುವ ಮಹಿಳೆಯರ ಸಂಭ್ರಮ ಹೇಳತೀರದು.ಕದಿರು ಕಟ್ಟುವುದು ಎಂಬುದು ಮಹಿಳೆಯರ ಪಾಲಿಗೆ ವಿಶೇಷ ಹಬ್ಬವಾಗಿದೆ. ಹೊಸ ಭತ್ತದ 9 ಕಾಳುಗಳನ್ನು ಸುಲಿದು ಹೊಸ ಅಕ್ಕಿಯ ಗಂಜಿಯ ನೈವೇದ್ಯ ಮಾಡುವುದು ಸರಳ ಸುಂದರ 'ಹೊಸ್ತು' ಆಚರಣೆಯಾಗಿದೆ.

ಕಾಲ ಎಷ್ಟೇ ಬದಲಾಗಲಿ ಕೆಲವೊಂದು ಆಚರಣೆಗಳು ಮನದ ಆನಂದವನ್ನು ಇಮ್ಮಡಿಗೊಳಿಸುತ್ತವೆ. ಆರ್ಥಿಕ ಸ್ವಾವಲಂಬನೆಗೆ ಔದ್ಯೋಗಿಕ ನೆಲೆಯಲ್ಲಿ ದಿನವೂ ಕೆಲಸದ ಜಂಜಾಟದಲ್ಲಿ ತೊಡಗಿರುವ ಹೆಂಗಳೆಯರಿಗೆ ದಸಾರದಂತ ಹಬ್ಬಗಳು ಹೊಸ ಹುರುಪು ತರುವುದಂತೂ ಸತ್ಯ.

ಒಂದೇ ಕ್ಲಿಕ್‌ನಲ್ಲಿ ಜ್ಯೋತಿಷ್ಯ

ವೇಗದ ಜಗತ್ತಿನಲ್ಲಿ ಜನರು ಗ್ರಹಗಳ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಜ್ಯೋತಿಷ್ಯ ಒಂದು ಸಾಧನವಾಗಿದೆ. ಹೀಗಿದ್ದು, ಜ್ಯೋತಿಷಿಯನ್ನು ಖುದ್ದಾಗಿ ಭೇಟಿಯಾಗಲು ಸಮಯ ಸಿಗದೇ ಹೋಗಬಹುದು. ಬೇರೆ ರಾಜ್ಯ, ವಿದೇಶಗಳಲ್ಲಿ ವಾಸಿಸುವರಿಗೆ ಒಂದೇ ಸೂರಿನಡಿ ತ್ವರಿತ ಸೌಲಭ್ಯಗಳನ್ನು ಒದಗಿಸಲು, ಜ್ಯೋತಿಷ್ಯ ಡಿಜಿಟಲ್ ವೇದಿಕೆ PujaNPujari ರೂಪುಗೊಂಡಿದೆ.

ಒಂದು ಬಟನ್‌ನ ಕ್ಲಿಕ್‌ನಲ್ಲಿ ಜ್ಯೋತಿಷ್ಯ ಸೌಲಭ್ಯ ಪಡೆಯಬಹುದು.

ಜ್ಯೋತಿಷ್ಯ ಸೇವೆಗಳಲ್ಲಿ ಸಂಖ್ಯಾಶಾಸ್ತ್ರ, ಟ್ಯಾರೋ ಕಾರ್ಡ್ ಓದುವಿಕೆ, ಜಾತಕ, ಹೊಂದಾಣಿಕೆ ಸೇರಿವೆ. ಆನ್‌ಲೈನ್ ಆಸ್ಟ್ರೋ ಮತ್ತು ಪೂಜಾ ಸೇವೆಗಳನ್ನು ನೀಡುವುದರೊಂದಿಗೆ, ಬಹು ಸೇವೆಗಳನ್ನು ಬಯಸುವ ಜನರಿಗೆ ಇದೊಂದು ಸೂಕ್ತ ವೇದಿಕೆ. ಈ ಸೌಲಭ್ಯಗಳು ಅಮೆರಿಕ, ಇಂಗ್ಲೆಂಡ್, ಆಸ್ಟ್ರೇಲಿಯಾ, ಕೆನಡಾ, ಸಿಂಗಾಪುರ. ಮಲೇಷ್ಯಾ, ನ್ಯೂಜಿಲೆಂಡ್‌ನಲ್ಲಿ ವಾಸಿಸುವ ಭಾರತೀಯರಿಗೆ ಲಭ್ಯವಿದೆ.

ಮದುವೆ, ಆರೋಗ್ಯ, ಪ್ರೇಮಜೀವನ, ವೃತ್ತಿ ಸೇರಿದ ಜೀವನದ ಮಹತ್ವದ ವಿಚಾರಗಳ ಕುರಿತು ಮಾರ್ಗದರ್ಶನ ಮತ್ತು ಸಮಾಲೋಚನೆಗಾಗಿ ಜ್ಯೋತಿಷಿಗಳ ಪರಿಣಿತರ ಗುಂಪೊಂದನ್ನು ವೆಬ್‌ಸೈಟ್‌ನಲ್ಲಿ ಪಟ್ಟಿ ಮಾಡಲಾಗಿದೆ. ಅವರಿಗೆ ಫೋನ್ ಮೂಲಕ ಪ್ರಶ್ನೆ ಕೇಳಬಹುದು.

ಈ ಸೌಲಭ್ಯ ಇಂಗ್ಲಿಷ್, ಹಿಂದಿ ಮತ್ತು ಇತರೆ ಭಾರತೀಯ ಭಾಷೆಗಳಲ್ಲಿ ಲಭ್ಯವಿದೆ.

ಸೌಲಭ್ಯಗಳನ್ನು ಹೇಗೆ ಪಡೆದುಕೊಳ್ಳುವುದು?: ವೆಬ್‌ಸೈಟ್‌ಗೆಹೋಗಿ ಆನ್‌ಲೈನ್‌ನಲ್ಲಿ ಜ್ಯೋತಿಷಿಗಳನ್ನು ಬುಕ್ ಮಾಡಿ. ಜ್ಯೋತಿಷಿಗಳನ್ನು ಸಂಪರ್ಕಿಸಲು, ಜನ್ಮ ಕುಂಡಲಿ ಅಥವಾ ಜನ್ಮ ಚಾರ್ಟ್ ಅನ್ನು ಹೊಂದಿರಬೇಕು.

ಅದಿಲ್ಲದೆ ಹೋದರೆ ನಿಖರವಾದ ಜನ್ಮ ಸಮಯ ಮತ್ತು ಜನ್ಮ ಸ್ಥಳವನ್ನು ನೀಡಬೇಕು. ಇದರಿಂದ ಜ್ಯೋತಿಷಿಗಳು ಚಾರ್ಟ್ ಅನ್ನು ರಚಿಸುತ್ತಾರೆ ಮತ್ತು ಸಂಪೂರ್ಣ ಜ್ಯೋತಿಷ್ಯ ವರದಿಯನ್ನು ನೀಡುತ್ತಾರೆ.

ಯಾವುದೇ ಪ್ರಶ್ನೆಗಳಿಗೆ, https://www.pujanpujari.com/contact/ ಗೆ ಭೇಟಿ ನೀಡಿ.

ಮಹಿಳೆಯರನ್ನು ಗುರ್ತಿಸುವ ಮಾರ್ಥಾ ಫಾರೆಲ್ ಪ್ರಶಸ್ತಿ

ಸಬಲೀಕರಣ, ಲಿಂಗ ಸಮಾನತೆ ಪ್ರಸ್ತುತಪಡಿಸುವ ಪುರಸ್ಕಾರ

ಮಾರ್ಥಾ ಫಾರೆಲ್ ಪ್ರಶಸ್ತಿ ಪುರಸ್ಕೃತರು

ಮಹಿಳಾ ಸಬಲೀಕರಣ ಮತ್ತು ಲಿಂಗ ಸಮಾನತೆ ಮಾಡಿರುವ ಅತ್ಯುತ್ತಮ ಸಾಧನೆ ಮತ್ತು ಕೊಡುಗೆಗಳನ್ನು ಗುರುತಿಸಿ ಇಬ್ಬರು ವ್ಯಕ್ತಿಗಳಿಗೆ ಹಾಗೂ ಎರಡು ಸಂಸ್ಥೆಗಳಿಗೆ ಮಾರ್ಥಾ ಫಾರೆಲ್ ಪ್ರಶಸ್ತಿ ನೀಡಲಾಗಿದೆ.

ಮಾರ್ಥಾ ಫಾರೆಲ್ ಪ್ರಶಸ್ತಿ ಮಹಿಳಾ ಸಬಲೀಕರಣ ಮತ್ತು ಲಿಂಗ ಸಮಾನತೆಗೆ ಸಂಬಂಧಿಸಿ ಕ್ಷೇತ್ರಗಳಲ್ಲಿ ಗುರುತರ ಕೊಡುಗೆ ನೀಡಿದ ಮಧ್ಯಮ ವೃತ್ತಿಜೀವನದ ವ್ಯಕ್ತಿಗಳು ಹಾಗೂ ಸಾಮಾಜಿಕ ಬದ್ಧತೆ ಹೊಂದಿರುವ ಸಂಸ್ಥೆಗಳನ್ನು ಅನ್ವೇಷಿಸಲು, ಗುರುತಿಸಿ ಗೌರವಿಸಲು ನೀಡುವ ಒಂದು ಉಪಕ್ರಮವಾಗಿದೆ. ಲಿಂಗ ನ್ಯಾಯ ಮತ್ತು ಆಜೀವ ಕಲಿಕೆ ಉತ್ತೇಜಿಸಲು ಬದ್ಧವಾಗಿರುವ ಸಂಸ್ಥೆಗಳಿಗೆ, ಮಹಿಳೆಯರಿಗೆ ಮಾರ್ಥಾ ಫಾರೆಲ್ ಫೌಂಡೇಶನ್ ಈ ಮೂಲಕ ಸನ್ಮಾನಿಸುತ್ತದೆ.

ಅಗಾ ಖಾನ್ ಫೌಂಡೇಶನ್‌ನೊಂದಿಗೆ ಸೇರಿ ಲಿಂಗ ತರಬೇತಿ ಕಾರ್ಯಾಗಾರ ನಡೆಸುತ್ತಿರುವ ಸಂದರ್ಭದಲ್ಲಿ ಅಫ್ಘಾನಿಸ್ತಾನದ ಕಾಬೂಲ್‌ನ ಅತಿಥಿ ಗೃಹದ ಮೇಲೆ ಭಯೋತ್ಪಾದ ದಾಳಿ ನಡೆಯಿತು. ಈ ದಾಳಿಯಲ್ಲಿ ಹುತಾತ್ಮರಾದ ನಾಗರಿಕ ಸಮಾಜದ ನಾಯಕಿ ಡಾ ಮಾರ್ಥಾ ಫಾರೆಲ್ (1959-2015) ಅವರ ಗೌರವಾರ್ಥವಾಗಿ 'ಮಾರ್ಥಾ ಫಾರೆಲ್ ಪ್ರಶಸ್ತಿ' ಸ್ಥಾಪಿಸಲಾಗಿದೆ. ಅಕ್ಟೋಬರ್ 16, 2023 ರಂದು ಬೆಂಗಳೂರಿನ ಕ್ರೈಸ್ಟ್ ಯೂನಿವರ್ಸಿಟಿಯಲ್ಲಿ ನಡೆದ 7 ನೇ ವಾರ್ಷಿಕ ಮಾರ್ಥಾ ಫಾರೆಲ್ ಪ್ರಶಸ್ತಿಗಳಿಗೆ 166 ನಾಮನಿರ್ದೇಶಿತರಲ್ಲಿ ಇಬ್ಬರು ವ್ಯಕ್ತಿಗಳು ಮತ್ತು ಎರಡು ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ.

ಅತ್ಯಂತ ಭರವಸೆ ವ್ಯಕ್ತಿ ಪ್ರಶಸ್ತಿ: ಮೋಹಿನಿ ದೇವಿ

ಅತ್ಯಂತ ಭರವಸೆಯ ವ್ಯಕ್ತಿ ಪ್ರಶಸ್ತಿ ಸ್ವೀಕರಿಸಿದ ಹರಿಯಾಣದ ಕರ್ನಾಲ್‌ನ ಮಹಿಳಾ ಮತ್ತು ದಲಿತ ಹಕ್ಕುಗಳ ಹೋರಾಟಗಾರ್ತಿ ಮೋಹಿನಿ ದೇವಿ ಅವರು ಒಬ್ಬ ನ್ಯಾಯವಾದಿ. ಅವರು ಲೈಂಗಿಕ ಕಿರುಕುಳ, ಲೈಂಗಿಕ ದೌರ್ಜನ್ಯ ಮತ್ತು ಶೋಷಣೆ ತಡೆಗಟ್ಟುವ ಬಗ್ಗೆ ಸಂಶೋಧನೆ ಹಾಗೂ ಅದಕ್ಕಾಗಿ ದುಡಿದಿದ್ದಾರೆ.

'ನನ್ನ ಬೆಳವಣಿಗೆಯ ದಿನಗಳಲ್ಲಿ ನಾನು ಕಠಿಣ ಪರಿಶ್ರಮ ಮತ್ತು ನಿರ್ಣಯದ ಮೌಲ್ಯವನ್ನು ಅರ್ಥ ಮಾಡಿಕೊಂಡಿದ್ದೇನೆ. ನನ್ನ ಜೀವನದ ಆರಂಭದಲ್ಲಿ, ನಾನು ಬದುಕುವ ಹಕ್ಕು ಮತ್ತು ನ್ಯಾಯಕ್ಕಾಗಿ ನನ್ನ ಜೀವನವನ್ನು ಮುಡಿಪಾಗಿಡುತ್ತೇನೆ ಎಂಬುದನ್ನು ತಿಳಿದಿದ್ದೆ' ಎಂದು ಅವರು ಹೇಳಿದ್ದಾರೆ.

ಲಿಂಗ ಸಮಾನತೆಯ ಅತ್ಯುತ್ತಮ ಸಂಸ್ಥೆ ಪ್ರಶಸ್ತಿ: ನಾರಿ-ಒ-ಶಿಶು ಕಲ್ಯಾಣ ಕೇಂದ್ರ

ಲಿಂಗ ಸಮಾನತೆಯ ಅತ್ಯುತ್ತಮ ಸಂಸ್ಥೆ ಪ್ರಶಸ್ತಿಗೆ ನಾರಿ-ಒ-ಶಿಶು ಕಲ್ಯಾಣ ಕೇಂದ್ರ ಭಾಜನವಾಗಿದೆ. ಈ ಸಂಸ್ಥೆಯನ್ನು 1979 ರಲ್ಲಿ ಪಶ್ಚಿಮ ಬಂಗಾಳದ ಹೌರಾದಲ್ಲಿ ಸ್ಥಾಪಿಸಲಾಯಿತು. ಇದು ಮಹಿಳಾ ನೇತೃತ್ವದ ಸಂಸ್ಥೆಯಾಗಿದ್ದು, ಲಿಂಗ ಆಧಾರಿತ ಹಿಂಸಾಚಾರ ಮತ್ತು ತಾರತಮ್ಯವನ್ನು ತಡೆಗಟ್ಟಲು ಕೆಲಸ ಮಾಡುತ್ತದೆ. ಇದಲ್ಲದೇ, ಪಶ್ಚಿಮ ಬಂಗಾಳ ಮತ್ತು ಜಾರ್ಖಂಡ್‌ನಲ್ಲಿನಲ್ಲಿನ ದುರ್ಬಲ ಗುಂಪುಗಳ ಸಾಮಾಜಿಕ, ಆರ್ಥಿಕ ಸಬಲೀಕರಣ ಮತ್ತು ಕಲ್ಯಾಣವನ್ನು ಸುಗಮಗೊಳಿಸಲು ಕಾರ್ಯವನ್ನು ಮಾಡುತ್ತದೆ. "ನಾರಿ-ಒ-ಶಿಶು ಕಲ್ಯಾಣ ಕೇಂದ್ರದ ಆಶಯವು ಸಹಕಾರ, ನ್ಯಾಯ ಮತ್ತು ಗೌರವದ ಮಾನವೀಯ ಮೌಲ್ಯಗಳ ಆಧಾರದ ಮೇಲೆ ಸ್ವಾವಲಂಬಿ ಸಮಾಜ ನಿರ್ಮಾಣ ಮಾಡುವುದಾಗಿದೆ" ಎಂದು ಅಧ್ಯಕ್ಷೆ ಸಲೇಮಾ ಜಹಾನ್ ಮತ್ತು ನಾರಿ-ಒ-ಶಿಶು ಕಲ್ಯಾಣ ಕೇಂದ್ರದ ಕಾರ್ಯದರ್ಶಿ ರಹೀಮಾ ಖಾತುನ್ ಹೇಳುತ್ತಾರೆ.

ಅತ್ಯಂತ ಭರವಸೆಯ ವ್ಯಕ್ತಿ - ವಿಶೇಷ ತೀರ್ಪುಗಾರರ ಪ್ರಶಸ್ತಿ: ದೀಪಿಕಾ ಠಾಕೂರ್

ಮೋಸ್ಟ್ ಪ್ರಾಮಿಸಿಂಗ್ ಇಂಡಿವಿಜುವಲ್ - ವಿಶೇಷ ತೀರ್ಪುಗಾರರ ಪ್ರಶಸ್ತಿಯನ್ನು ದೀಪಿಕಾ ಠಾಕೂರ್ ಅವರು ಪಡೆದರು. ದೀಪಿಕಾ ಅವರು ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ಕಾರ್ಯಕರ್ತೆ ಮತ್ತು ಇಂಡಿಯಾ ಎಚ್‌ಐವಿ/ಏಡ್ಸ್ ಅಲೈಯನ್ಸ್‌ನಲ್ಲಿ ರಾಷ್ಟ್ರೀಯ ಕಾರ್ಯಕ್ರಮ ಅಧಿಕಾರಿಯಾಗಿದ್ದಾರೆ. ಟ್ರಾನ್ಸ್‌ಜೆಂಡರ್ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ಹಕ್ಕು-ಆಧಾರಿತ, ಕಳಂಕ-ಮುಕ್ತ ಮತ್ತು ಅಂತರ್ಗತ ಸಮಾಜವನ್ನು ರಚಿಸುವ ಗುರಿಯನ್ನು ಅವರು ಹೊಂದಿದ್ದಾರೆ.

"ನಾನು ಭಾರತದಾದ್ಯಂತ ಎಲ್‌ಜಿಬಿಟಿಕ್ಯೂ+ ಸಮುದಾಯದ ಸಬಲೀಕರಣಕ್ಕಾಗಿ ಕೆಲಸ ಮಾಡುತ್ತೇನೆ. ನನ್ನ ವೈಯಕ್ತಿಕ ಹಾಗೂ ನನ್ನ ಅನುಭವಗಳು ತಾರತಮ್ಯದ ಸಾಮಾಜಿಕ ರೂಢಿಗಳಿಂದಾಗಿ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು, ಕಡೆಗಣಿಕೆಯನ್ನು ಅದರ ಸ್ವರೂಪಗಳನ್ನು ಅರ್ಥ ಮಾಡಿಕೊಳ್ಳಲು ನನಗೆ ದಾರಿ ಮಾಡಿಕೊಟ್ಟಿದೆ" ಎಂದು ದೀಪಿಕಾ ಠಾಕೂರ್ ತಿಳಿಸುತ್ತಾರೆ.

ಲಿಂಗ ಸಮಾನತೆಗಾಗಿ ಅತ್ಯುತ್ತಮ ಸಂಸ್ಥೆ - ವಿಶೇಷ ತೀರ್ಪುಗಾರರ ಪ್ರಶಸ್ತಿ: ರಾಜಸ್ಥಾನ ಮಹಿಳಾ ಕಲ್ಯಾಣ ಮಂಡಲ್

ರಾಜಸ್ಥಾನದ ಮಹಿಳಾ ಕಲ್ಯಾಣ್ ಮಂಡಲ್, ಅತ್ಯುತ್ತಮ ಲಿಂಗ ಸಮಾನತೆಗಾಗಿ ವಿಶೇಷ ತೀರ್ಪುಗಾರರ ಪುರಸ್ಕಾರಕ್ಕೆ ಭಾಜನವಾಗಿದೆ. 1975 ರಲ್ಲಿ ರಚಿಸಲಾದ ರಾಜಸ್ಥಾನ ಮಹಿಳಾ ಕಲ್ಯಾಣ ಮಂಡಲ್ ಲಿಂಗ ಸಮಾನತೆಗಾಗಿ ಅತ್ಯುತ್ತಮ ಸಂಸ್ಥೆ - ವಿಶೇಷ ತೀರ್ಪುಗಾರರ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಶಿಕ್ಷಣ, ಜಾಗೃತಿ ನಿರ್ಮಾಣ, ನೈಸರ್ಗಿಕ ಸಂಪನ್ಮೂಲ ನಿರ್ವಹಣೆ, ಆರೋಗ್ಯ ಶಿಕ್ಷಣ, ಸಾಮರ್ಥ್ಯ ವೃದ್ಧಿ, ಸ್ವ-ಸಹಾಯ ಗುಂಪುಗಳ (SHGs) ರಚನೆ ಮತ್ತು ಕಿರುಸಾಲದ ಮೂಲಕ ಸಾಮಾಜಿಕವಾಗಿ ವಂಚಿತ ಸಮುದಾಯಗಳನ್ನು, ವಿಶೇಷವಾಗಿ ಮಹಿಳೆಯರು ಮತ್ತು ವಿಕಲಾಂಗ ವ್ಯಕ್ತಿಗಳನ್ನು ಸಬಲೀಕರಣಗೊಳಿಸಲು ಸ್ಥಾಪಿಸಲಾಯಿತು.

ಮಹಿಳೆಯರು ರೋಮಾಂಚಕ ಮತ್ತು ಅಭಿವೃದ್ಧಿ ಹೊಂದುತ್ತಿರುವ ಸಮುದಾಯಗಳ ಮೂಲಾಧಾರ ಎಂದು ನಾವು ನಂಬುತ್ತೇವೆ. ಅವರಿಗೆ ಆರ್ಥಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸಮಾನತೆ ಸಾಧಿಸಲು ಅಗತ್ಯವಾದ ಸಂಪನ್ಮೂಲಗಳು ಮತ್ತು ಅವಕಾಶಗಳನ್ನು ಒದಗಿಸಲು ಆರ್‌ಎಂಕೆಎಂ ಬದ್ಧವಾಗಿದೆ ಎಂದು ಆರ್‌ಎಂಕೆಎಂ ಕಾರ್ಯದರ್ಶಿ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕ್ಷಮಾ ಆರ್ ಕೌಶಿಕ್ ಹೇಳುತ್ತಾರೆ.

ಇಸಿಮ್ ಅಥವಾ ಐಸಿಮ್: ಸ್ಮಾರ್ಟ್‌ಫೋನ್‌ಗೆ ಯಾವುದು ಉತ್ತಮ?

ಸುಧೀಂದ್ರ ಪ್ರಸಾದ್



ಭೌತಿಕ ಸಿಮ್ ಬದಲು ಇಸಿಮ್ ಹೆಚ್ಚು ಬಳಕೆಗೆ ಬರುತ್ತಿದ್ದಂತೆ ಐಸಿಮ್ ತಂತ್ರಜ್ಞಾನ ಈಗ ಸದ್ದು ಮಾಡುತ್ತಿದೆ. ಸ್ಮಾರ್ಟ್‌ಫೋನ್‌ಗಳಿಗೆ ಮದರ್‌ಬೋರ್ಡ್ ಸಿದ್ಧಪಡಿಸುವ ಕ್ವಾಲ್ಕಮ್ ಕಂಪನಿಯು ಇತ್ತೀಚೆಗೆ ಐಸಿಮ್ ಆಧಾರಿತ ಸ್ಮಾರ್ಟ್‌ಫೋನ್ ಚಿಪ್ ಅನ್ನು ಭವಿಷ್ಯದಲ್ಲಿ ಪರಿಚಯಿಸುವುದಾಗಿ ಹೇಳಿರುವುದು ಈಗ ಚರ್ಚೆಯಾಗುತ್ತಿದೆ. ಸ್ನಾಪ್‌ಡ್ರ್ಯಾಗನ್ 8ನೇ ತಲೆಮಾರಿನ 2 ಎಸ್‌ಒಸಿ ನಲ್ಲಿ ಇದನ್ನು ಅಳವಡಿಸುವ ಕುರಿತು ಕಂಪನಿ ಹೇಳಿರುವುದಾಗಿ ವರದಿಯಾಗಿದೆ.

ಇದು ಜಾರಿಗೆ ಬಂದಿದ್ದೇ ಆದಲ್ಲಿ, ಮುಂಬರುವ ಸ್ಮಾರ್ಟ್‌ಫೋನ್‌ಗಳಲ್ಲಿ ಸಿಮ್‌ಗಾಗಿ ಪ್ರತ್ಯೇಕ ಕೋಣೆ ಇರದು. ಹಾಗಿದ್ದರೆ ಸದ್ಯ ಇರುವ ಇಸಿಮ್‌ಗೂ ಮತ್ತು ಐಸಿಮ್‌ಗೂ ಇರುವ ವ್ಯತ್ಯಾಸವೇನು?

ಫೋನ್ ಹಾರ್ಡ್‌ವೇರ್ ಒಳಗೆ ಇಸಿಮ್ ಅನ್ನು ನೇರವಾಗಿ ಎಂಬೆಡ್ ಮಾಡಲಾಗುವುದರಿಂದ ಅದು ಪ್ರತ್ಯೇಕ ಚಿಪ್‌ನಲ್ಲಿರುತ್ತದೆ. ಒಂದು ಅರ್ಥದಲ್ಲಿ ಇದು ಭೌತಿಕ ಸಿಮ್ ಕಾರ್ಡ್‌ನಂತೆಯೇ ಇರುತ್ತದೆ ಆದರೆ ಅದಕ್ಕಾಗಿಯೇ ಈಗಿರುವ ಫೋನ್‌ನಂತೆ ಒಳಗೆ ಪ್ರತ್ಯೇಕ ಜಾಗ ನಿಗದಿಯಾಗಿರುವುದಿಲ್ಲ. ಇದರಿಂದಾಗಿ ಫೋನ್ ಅನ್ನು ಇನ್ನಷ್ಟು ತೆಳುವಾಗಿ ಹಾಗೂ ಫೋನ್ ತೂಕವನ್ನು ಇನ್ನಷ್ಟು ತಗ್ಗಿಸಲು ಸಾಧ್ಯ.

ಇಸಿಮ್ ಪಡೆಯುವುದು ಒಂದು ನೆಟ್‌ವರ್ಕ್‌ನಿಂದ ಮತ್ತೊಂದು ನೆಟ್‌ವರ್ಕ್‌ಗೆ ಭಿನ್ನವಾದರೂ, ಇದನ್ನು ಪಡೆಯಲು ಆಪರೇಟರ್ ಬಳಿಯೇ ಹೋಗಬೇಕೆಂದೇನೂ ಇಲ್ಲ. ಆಪರೇಟರ್‌ಗಳ ಆ್ಯಪ್ ಬಳಸಿಯೂ ಇಸಿಮ್ ಸೌಲಭ್ಯಕ್ಕೆ ಅಪ್‌ಗ್ರೇಡ್ ಆಗಬಹುದು.

ಇಸಿಮ್ ಸೌಲಭ್ಯವು ಸದ್ಯ ಐಫೋನ್‌ನ ಎಕ್ಸ್‌ಆರ್, ಎಕ್ಸ್‌ಎಸ್, ಎಕ್ಸ್‌ಎಸ್ ಮ್ಯಾಕ್ಸ್, ಐಫೋನ್ 11, ಎಸ್‌ಇ, 12, 13, 14 ಹಾಗೂ 15 ಮಾದರಿಯ ಎಲ್ಲಾ ಫೋನ್‌ಗಳಲ್ಲೂ ಲಭ್ಯ.

ಇಸಿಮ್‌ಗೆ ಅವಕಾಶವಿರುವ ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಮ್ ಹೊಂದಿರುವ ಫೋನುಗಳ ಸಂಖ್ಯೆ ಕಡಿಮೆ. ಸ್ಯಾಮ್ಸಂಗ್ ಗ್ಯಾಲಕ್ಸಿ ಝಡ್ ಫ್ಲಿಪ್, ಗ್ಯಾಲಕ್ಸಿ ಫೋಲ್ಡ್, ನೋಟ್ 20 ಅಲ್ಟ್ರಾ, ನೋಟ್ 20, ಝಡ್ ಫೋಲ್ಡ್ 2, ಎಸ್21 ಸಿರೀಸ್, ಎಸ್20, ಝಡ್ ಫೋಲ್ಡ್ 3, ಝಡ್ ಫ್ಲಿಪ್ 3, ಎಸ್22, ಎಸ್23, ಗ್ಯಾಲಾಕ್ಸಿ ಝಡ್ ಫೋಲ್ಡ್ 4, ಫ್ಲಿಪ್ 4 ಫೋನುಗಳಲ್ಲಿವೆ.

ಜತೆಗೆ ಮೊಟೊರೊಲಾ ರೇಝರ್, ನೆಕ್ಸ್ಟ್ ರೇಝರ್, ಎಡ್ಜ್ 40, 40 ಸಿರೀಸ್, ನೋಕಿಯಾ ಜಿ60, ವಿವೊ ಎಕ್ಸ್90 ಪ್ರೊ ಸ್ಮಾರ್ಟ್‌ಫೋನ್‌ಗಳಲ್ಲಿ ಈ ಸೌಲಭ್ಯ ಲಭ್ಯ. ಆದರೆ ಫೋನ್ ಅನ್ನು ಅಪ್‌ಗ್ರೇಡ್ ಮಾಡಿರಬೇಕು.

ಸದ್ಯ ಇಸಿಮ್ ಲಭ್ಯವಿರುವ ಫೋನ್‌ಗಳಲ್ಲಿ ಭೌತಿಕ ಸಿಮ್ ಕಾರ್ಡ್ ಕೂಡಾ ಇದೆ. ವಿದೇಶಗಳಿಗೆ ಪ್ರಯಾಣಿಸುವವರು ಅಲ್ಲಿನ ಸಿಮ್ ಬಳಸುವುದಾದರೆ ಇಸಿಮ್ ಜತೆ, ಭೌತಿಕ್ ಸಿಮ್ ಬಳಸಲು ಸಾಧ್ಯ. ಜತೆಗೆ ಇಸಿಮ್ ಭದ್ರತೆಯ ದೃಷ್ಟಿಯಿಂದಲೂ ಹೆಚ್ಚು ಸದೃಢ. ಆದರೆ ಫೋನ್ ಬದಲಿಸಿದರೆ ಇಸಿಮ್ ಆ್ಯಕ್ಟಿವೇಷನ್ ತುಸು ಹೆಚ್ಚು ಶ್ರಮ ಬೇಡುತ್ತದೆ.

ಹಾಗಿದ್ದರೆ ಐಸಿಮ್ ಬಳಕೆ ಹೇಗೆ?

ಐಸಿಮ್ ಕೂಡಾ ಇಸಿಮ್‌ನಂತೆಯೇ... ಆದರೆ ಇದು ಚಿಪ್‌ಸೆಟ್ ಒಳಗೇ ಸೇರಿಸಲಾಗಿರುತ್ತದೆ. ಹೀಗಾಗಿ ಇದಕ್ಕಾಗಿಯೇ ಮತ್ತೊಂದು ಚಿಪ್ ಅನ್ನು ಅಳವಡಿಸುವ ಅಗತ್ಯವಿಲ್ಲ. ಕ್ವಾಲ್ಕಮ್ ಕಂಪನಿಯ ಪ್ರಕಾರ ಐಸಿಮ್ ನ್ಯಾನೊ ಸಿಮ್‌ಕಾರ್ಡ್‌ಗಿಂತ ನೂರು ಪಟ್ಟು ಸಣ್ಣದಂತೆ.

ಐಸಿಮ್ ಬಳಕೆಯಿಂದ ಬ್ಯಾಟರಿ ಬಳಕೆ ಪ್ರಮಾಣ ತಗ್ಗಲಿದೆ. ಇದರಿಂದ ಬ್ಯಾಟರಿ ಬಾಳಿಕೆ ಹೆಚ್ಚಲಿದೆ ಎಂದೆನ್ನಲಾಗುತ್ತಿದೆ. ಜತೆಗೆ ದೂಳು ಮತ್ತು ನೀರಿನಿಂದ ಫೋನ್ ಅನ್ನು ರಕ್ಷಿಸಬಹುದಾಗಿದೆ. ಇದರಿಂದ ಸ್ಮಾರ್ಟ್‌ಫೋನ್‌ಗಳ ಬಾಳಿಕೆ ಹೆಚ್ಚಲಿದೆ. ಉಳಿದಂತೆ ಇಸಿಮ್‌ನಂತೆಯೇ ಇದು ಕಾರ್ಯ ನಿರ್ವಹಿಸಲಿದೆ. ಇಸಿಮ್ ಹಾಗೂ ಐಸಿಮ್ ಬಳಕೆಯಿಂದ ಇನ್ನಷ್ಟು ಬೇರೆ ಸೌಲಭ್ಯದ ಉಪಕರಣ ಸೇರಿಸಲು ಮೊಬೈಲ್ ತಯಾರಿಕಾ ಕಂಪನಿಗಳಿಗೆ ಸಾಧ್ಯವಾಗಲಿದೆ ಎನ್ನುವುದು ತಂತ್ರಜ್ಞರ ಲೆಕ್ಕಾಚಾರ. ನೆಟ್‌ವರ್ಕ್ ಕಂಪನಿ ಬದಲಿಸಿದರೆ ಅದರ ಸಿಮ್ ಖರೀದಿಯ ಗೋಜು ಗ್ರಾಹಕರಿಗೆ ಇರದು. ಸಿಮ್ ತಯಾರಿಕೆ ಹಾಗೂ ಪೂರೈಕೆಯ ಸಮಸ್ಯೆಯೂ ತಗ್ಗಲಿದೆ. ಹೀಗಾಗಿ ಇಸಿಮ್ ಅಥವಾ ಐಸಿಮ್ ಬಳಕೆ ಭವಿಷ್ಯದ ತಂತ್ರಜ್ಞಾನ ಎಂದೇ ವಿಶ್ಲೇಷಿಸಲಾಗುತ್ತಿದೆ. 2030ರ ಹೊತ್ತಿಗೆ ಐಸಿಮ್ ಬಳಕೆಗೆ ಸಿಗುವ ಸಾಧ್ಯತೆ ಇದೆ ಎಂದು ತಂತ್ರಜ್ಞರು ಹೇಳಿದ್ದಾರೆ.

ಸಲ್ಲಾನ್, ಅರ್ಜಿತ್ ಮುನಿಸು ಕೊನೆ

ಶ್ವೇತಕುಮಾರಿ

ಒಂಬತ್ತು ವರ್ಷಗಳ ಬಳಿಕ ಬಾಲಿವುಡ್ ನಟ ಸಲ್ಮಾನ್ ಖಾನ್ ಮತ್ತು ಜನಪ್ರಿಯ ಗಾಯಕ ಅರ್ಜಿತ್ ಸಿಂಗ್ ನಡುವಿನ ಮುನಿಸು ಕೊನೆಗೊಂಡಿದೆ. ಸಲ್ಮಾನ್ ಖಾನ್ ಅವರ ಮುಂದಿನ ಚಿತ್ರ 'ಟೈಗರ್–3'ಗೆ ಹಾಡೊಂದನ್ನು ಹಾಡುವ ಮೂಲಕ ಇಬ್ಬರ ನಡುವಿನ ಸ್ನೇಹ ಮತ್ತೆ ಚಿಗುರಿದೆ.

ಹೌದು.... 2014ರಿಂದ ಅರ್ಜಿತ್ ಸಿಂಗ್ ಅವರಿಗೆ ಸಲ್ಮಾನ್ ಖಾನ್ ಚಿತ್ರಗಳಿಗೆ ಅಘೋಷಿತ ಬಹಿಷ್ಕಾರ ಹಾಕಲಾಗಿತ್ತು. ಗಾಯಕ ಅರ್ಜಿತ್ ಸಿಂಗ್ ತಮ್ಮ ಚಿತ್ರಗಳಿಗೆ ಹಾಡು ಹಾಡುವುದಿಲ್ಲ ಎಂದು ಸಲ್ಮಾನ್ ಬಹಿರಂಗವಾಗಿ ಹೇಳಿಕೊಂಡಿದ್ದರು. ಈ ವಿಚಾರವಾಗಿ ಅರ್ಜಿತ್ ಸಿಂಗ್ ಸಲ್ಮಾನ್ ಬಳಿ ಸಾರ್ವಜನಿಕವಾಗಿ ಕ್ಷಮೆಯಾಚಿಸಿದ್ದರು. ಅದಾದ ಬಳಿಕವೂ ಮುನಿಸು ಕೊನೆಗೊಂಡಿರಲಿಲ್ಲ. ತಾವಿಬ್ಬರು ಒಂದಾಗಿರುವ ಬಗ್ಗೆ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್‌ವೊಂದನ್ನು ಹಂಚಿಕೊಂಡಿರುವ ಸಲ್ಮಾನ್, 'ಟೈಗರ್–3 ಚಿತ್ರದ ಮೊದಲ ಹಾಡಿನ ಮೊದಲ ಝಲಕ್ ಇದು. ನನ್ನ ಚಿತ್ರಕ್ಕೆ ಅರ್ಜಿತ್ ಸಿಂಗ್ ಹಾಡಿದ ಮೊದಲ ಹಾಡು ಇದು. ನವೆಂಬರ್ 12ಕ್ಕೆ ಚಿತ್ರ ತೆರೆ ಮೇಲೆ ಬರಲಿದೆ' ಎಂದು ಮಾಹಿತಿ ನೀಡಿದ್ದಾರೆ. ಅಕ್ಟೋಬರ್ 4ರಂದು ಗಾಯಕ ಅರ್ಜಿತ್ ಸಿಂಗ್ ಸಲ್ಮಾನ್ ಖಾನ್ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿದ್ದರು. ಈ ಬಗ್ಗೆ ನೆಟ್ಟಿಗರೊಬ್ಬರು ವಿಡಿಯೊ ಹಂಚಿಕೊಂಡಿದ್ದು, ಇಬ್ಬರು ಒಂದಾಗಿದ್ದಾರೆ ಎಂಬ ಸುದ್ದಿ ಹರದಾಡಿತ್ತು. ಇದಾದ ಸ್ವಲ್ಪ ದಿನಗಳಲ್ಲೇ ಅರ್ಜಿತ್ ಸಲ್ಮಾನ್ ಖಾನ್ ಸಿನಿಮಾಕ್ಕೆ ಹಾಡು ಹಾಡಿದ್ದಾರೆ.

ಏನಿದು ಜಗಳ? : 2014ರಲ್ಲಿ ನಡೆದ ಖಾಸಗಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅರ್ಜಿತ್ ಸಿಂಗ್ ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಸ್ವತಃ ಸಲ್ಮಾನ್ ಖಾನ್ ಅವರೇ ಆಯೋಜಿಸಿದ್ದರು. ಈ ವೇಳೆ ವೇದಿಕೆ ಮೇಲೆ ನಡೆದ ಜಗಳವು ಇಬ್ಬರ ನಡುವಿನ ಸಂಬಂಧವು ಹದಗೆಡುವಂತೆ ಮಾಡಿತ್ತು. ಸಾಧಾರಣ ಬಟ್ಟೆ, ಫ್ಲಿಪ್ ಪಾಪ್ ಧರಿಸಿ ವೇದಿಕೆ ಮೇಲೆ ಬಂದ ಅರ್ಜಿತ್ ಸಿಂಗ್ ಅವರನ್ನು ಸಲ್ಮಾನ್ ಕಾಲೆಳೆದಿದ್ದರು. ಏನು ನಿದ್ದೆ ಮಾಡಿದ್ದೀರಾ? ಎಂದು ಸಲ್ಮಾನ್ ಕಿಚಾಯಿಸಿದ್ದು, ನೀವೆಲ್ಲ ನಿದ್ದೆ ಹೋಗುವಂತೆ ಮಾಡಿದ್ದೀರಾ ಎಂದು ಅರ್ಜಿತ್ ಖಾರವಾಗಿಯೇ ಉತ್ತರಿಸಿದ್ದರು. ಈ ಘಟನೆ ಬೆನ್ನಲ್ಲೇ 'ಸುಲ್ತಾನ್' ಮತ್ತು 'ಬಜರಂಗಿ ಭಾಯಿಜಾನ್' ಸೇರಿದಂತೆ ಸಲ್ಮಾನ್ ಅವರ ಚಿತ್ರಗಳಿಂದ ಅಜಿತ್ ಸಿಂಗ್ ಅವರ ಹಾಡುಗಳನ್ನು ತೆಗೆದುಹಾಕಲಾಯಿತು.

2016ರಲ್ಲಿ ಹಾಡುಗಳನ್ನು ಪುನಃ ಹಾಕುವಂತೆ ಅರ್ಜಿತ್ ಸಿಂಗ್ ಕ್ಷಮೆಯಾಚಿಸಿದ್ದರು.



ಸಾಕುಪ್ರಾಣಿಗಳಲ್ಲಿ ಗ್ಲಾಕೋಮಾ?

ಗ್ಲಾಕೋಮಾ ಎಂದರೆ ಕಣ್ಣಿನೊಳಗಿನ ಒತ್ತಡದ ಹೆಚ್ಚಳ. ಇರಿಡೋ ಕಾರ್ನಿಯಲ್ ಕೋನದಲ್ಲಿನ ಬದಲಾವಣೆಗಳು ಅಥವಾ ಟ್ರಾಬೆಕ್ಯುಲರ್ ಮೆಶ್‌ವರ್ಕ್‌ಗೆ ಯಾವುದೇ ಹಾನಿಯಾಗುವುದರಿಂದ ಜಲೀಯ ಹಾಸ್ಯ (ಕಣ್ಣಿನಲ್ಲಿ ದ್ರವ) ಕಣ್ಣಿನಿಂದ ಬರಿದಾಗುವುದಿಲ್ಲ ಎಂಬ ಕಾರಣದಿಂದಾಗಿ ಇದು ಉಂಟಾಗುತ್ತದೆ. ದ್ರವದ ಈ ಧಾರಣವು ಕಣ್ಣಿನಲ್ಲಿ ಹೆಚ್ಚಿನ ಒತ್ತಡವನ್ನು ಉಂಟುಮಾಡುತ್ತದೆ

ಗುರಿ: ಕಣ್ಣಿನ ಒತ್ತಡವನ್ನು ಕಡಿಮೆ ಮಾಡಲು ಮತ್ತು ದೃಷ್ಟಿ ಕಳೆದುಕೊಳ್ಳುವುದನ್ನು ತಡೆಯಲು. ಒತ್ತಡವು ತುಂಬಾ ಹೆಚ್ಚಾದರೆ, 12 ಗಂಟೆಗಳ ಒಳಗೆ ದೃಷ್ಟಿ ಕಳೆದುಕೊಳ್ಳಬಹುದು.

ರೀತಿ: ಪ್ರಾಥಮಿಕ ಮತ್ತು ಮಾಧ್ಯಮಿಕ ಎರಡು ರೀತಿಯ ಗ್ಲುಕೋಮಾ.

ಪ್ರಾಥಮಿಕ ಗ್ಲುಕೋಮಾ ಜನ್ಮಜಾತ ಮತ್ತು ಆನುವಂಶಿಕವಾಗಿದೆ.

ಸೆಕೆಂಡರಿ ಗ್ಲಾಕೋಮಾ- ಆಘಾತ, ಕಣ್ಣಿನ ಪೊರೆ, ಲೆನ್ಸ್ ಲುಕ್ಸೇಶನ್, ಸೋಂಕು ಅಥವಾ ಕಣ್ಣುಗಳಿಗೆ ಉರಿಯೂತ ಮತ್ತು ಇತರ ಕಾರಣಗಳಿಂದ ಗ್ಲಾಕೋಮಾ ಸಂಭವಿಸಿದಾಗ - ಇದನ್ನು ಸೆಕೆಂಡರಿ ಗ್ಲಾಕೋಮಾ ಎಂದು ಕರೆಯಲಾಗುತ್ತದೆ.

ಆದ್ದರಿಂದ ಕಣ್ಣಿನ ಸೋಂಕು / ಉರಿಯೂತ / ಕಣ್ಣಿನ ಪೊರೆ ಹೊಂದಿರುವ ಸಾಕುಪ್ರಾಣಿಗಳನ್ನು ಗ್ಲುಕೋಮಾದ ಲಕ್ಷಣಗಳಿಗಾಗಿ ವೀಕ್ಷಿಸಬೇಕು / ಗಮನಿಸಬೇಕು.

ಗ್ಲಾಕೋಮಾ ಲಕ್ಷಣಗಳು:

ಪ್ರಾಣಿಯು ಸಾಕಷ್ಟು ಕಣ್ಣೀರಿನ ಉತ್ಪಾದನೆಯನ್ನು ಹೊಂದಿರುತ್ತವೆ. ಕಿರಿಕಿರಿಯಿಂದಾಗಿ ಪ್ರಾಣಿಗಳು ತಮ್ಮ ಕಣ್ಣುಗಳನ್ನು ನಿರಂತರವಾಗಿ ಉಜ್ಜಿಕೊಳ್ಳುತ್ತವೆ ಇದರಿಂದ ಕಣ್ಣಿನ ಗುಡ್ಡೆ ನೀಲಿ ಬಣ್ಣಕ್ಕೆ ತಿರುಗುತ್ತದೆ ಮತ್ತು ಸ್ಕ್ಲೆರಾ (ಕಣ್ಣಿನ ಚೆಂಡಿನ ಸುತ್ತಲಿನ ಬಿಳಿ ಭಾಗ) ಕೆಂಪು ಬಣ್ಣಕ್ಕೆ ತಿರುಗುತ್ತದೆ.

ಅಂತಿಮವಾಗಿ, ಕಣ್ಣು ಉಬ್ಬಲು ಪ್ರಾರಂಭಿಸುತ್ತದೆ. ಇದಕ್ಕೆ ತಕ್ಷಣದ ಗಮನಬೇಕು ಮತ್ತು ಪಶುವೈದ್ಯಕೀಯ ಕಣ್ಣಿನ ತಜ್ಞರನ್ನು ಭೇಟಿ ಮಾಡುವುದು ಸೂಕ್ತ.

ಗ್ಲಾಕೋಮಾವನ್ನು ನಿರ್ದಿಷ್ಟ ಪಶುವೈದ್ಯಕೀಯ ಕಣ್ಣಿನ ಉಪಕರಣಗಳನ್ನು ಬಳಸಿಕೊಂಡು ರೋಗನಿರ್ಣಯ ಮಾಡಲಾಗುತ್ತದೆ.

ರೋಗನಿರ್ಣಯ ಮಾಡಿದ ನಂತರ, ಕಣ್ಣಿನ ಹನಿಗಳನ್ನು ನೀಡುವ ಮೂಲಕ ಒತ್ತಡವನ್ನು ಕಡಿಮೆ ಮಾಡುವುದು ಗುರಿಯಾಗಿದೆ. ವೈದ್ಯಕೀಯ ನಿರ್ವಹಣೆ ವಿಫಲವಾದರೆ, ನಾವು ಶಸ್ತ್ರಚಿಕಿತ್ಸೆಗೆ ಮುಂದುವರಿಯುತ್ತೇವೆ. ಶಸ್ತ್ರಚಿಕಿತ್ಸೆಯು ದ್ರವವನ್ನು ಹರಿಸುವುದಕ್ಕೆ ಸಹಾಯ ಮಾಡುತ್ತದೆ, ಅದು ಒತ್ತಡವನ್ನು ಕಡಿಮೆ ಮಾಡುತ್ತದೆ. ಮಾನವರಲ್ಲಿ ಅಥವಾ ಸಾಕುಪ್ರಾಣಿಗಳಲ್ಲಿ, ಇದು ಬದಲಾಯಿಸಲಾಗದ ಸ್ಥಿತಿಯಾಗಿದ್ದು, ಹನಿಗಳೊಂದಿಗೆ ಜೀವಿತಾವಧಿಯ ನಿರ್ವಹಣೆಯ ಅಗತ್ಯವಿರುತ್ತದೆ.

ಕೆಟ್ಟ ಪ್ರಕರಣ ಯಾವುದು?

ಕೊನೆಯ ಹಂತದ ಗ್ಲಾಕೋಮಾ - ಈ ಸಂದರ್ಭದಲ್ಲಿ ದೃಷ್ಟಿ ಕಳೆದುಹೋಗುತ್ತದೆ. ದೀರ್ಘಕಾಲದ ಗ್ಲುಕೋಮಾ ನಿರಂತರ ತಲೆನೋವು ಮತ್ತು ನೋವನ್ನು ಉಂಟುಮಾಡುತ್ತದೆ ಎಂಬ ಕಾರಣದಿಂದ ನಾವು ಮಾಲೀಕರಿಗೆ ಇ-ನ್ಯೂಕ್ಲಿಯೇಶನ್ ಮತ್ತು ಪ್ರೋಸ್ಥೆಸಿಸ್ ಅನ್ನು ಅನ್ವಯಿಸಲು ಸಲಹೆ ನೀಡುತ್ತೇವೆ